4887
C No-4887
3716

ಪ್ರಬುದ್ಧ

# ಕರ್ನಾಟಕ

ವೃಷ ಸಂವತ್ಸರ] —೮೮— [ದೀಪಾವಳಿಯ ಸಂಚಿಕೆ

O33m N44
H1.23.2

ಮೈಸೂರು :
ಮೈಸೂರು ವಿಶ್ವವಿದ್ಯಾನಿಲಯ
೧೯೪೧

ಸಂಪುಟ ೨೩] [ಸಂಚಿಕೆ ೨

*All Rights Reserved*

CC-0. Jangamwadi Math Collection, Varanasi. An eGangotri Initiative

# ವಿಷಯ ಸೂಚಿಕೆ


೧. ವಾನರರ ಬೆನ್ನೆ—ಶ್ರೀಮಾನ್ ಕೆ. ವಿ. ಪುಟ್ಟಪ್ಪ, ಎಂ.ಎ. .... .... ೧

೨. ಹದಿನೈದನೆಯ ಶತಮಾನದ ಕನ್ನಡ ಸಾಹಿತ್ಯ—ಶ್ರೀಮಾನ್ ಎಸ್. ಎಸ್. ಮಾಳವಾಡ, ಎಂ.ಎ. .... .... .... .... [illegible]

೩. ನಮ್ಮ ಭೂಮಿ—ಶ್ರೀಮಾನ್ ಟಿ. ಪಿ. ಕೃಷ್ಣಾಚಾರ್, ಎಂ.ಎಸ್‌ಸಿ. .... [illegible]

೪. ಉದಯನ ಚರಿತ್ರ ಸಂಗ್ರಹ—ಶ್ರೀಮಾನ್ ಎಲ್. ಗುಂಡಪ್ಪ, ಎಂ.ಎ. .... ೩೩

೫. ಬೆಂಗಳೂರಿಗೆ ನೀರಿನ ಸರಬರಾಯಿ—ಶ್ರೀಮಾನ್ ಎಚ್. ಸಿ. ಕಪಿನೀಪತಿ ಭಟ್ಟ, ಬಿ.ಎ., ಬಿ.ಇ., ಎ.ಎಂ.ಐ.ಇ. .... .... .... ೬೫

೬. ಹೊಲ ಕಾಯುವ ಚದುರೆ—ಶ್ರೀಮಾನ್ ತೀ. ನಂ. ಶ್ರೀಕಂಠಯ್ಯ, ಎಂ.ಎ. ೮೨

೭. ನ್ಯಾಯವಾದ ಸಂಪಾದನೆ—ಶ್ರೀಮತಿ ಜಯಲಕ್ಷ್ಮಮ್ಮ .... ೮೩

೮. ಪ್ತೊಲೆಮಿಯ 'ಹಿಪ್ಪೊಕೂರ' (ತಿದ್ದುಪಡಿ)— ಶ್ರೀಮಾನ್ ಎಂ. ಗೋವಿಂದ ಪೈ .... .... .... ೮೯

೯. ವರ ಪರೀಕ್ಷೆ—ಶ್ರೀಮಾನ್ ನಾ. ಕಸ್ತೂರಿ, ಎಂ.ಎ., ಬಿ.ಎಲ್. .... ೯೩

... ಸ್ವಾಮಿ, ಬಿ.ಎಸ್‌ಸಿ. (ಆನರ್ಸ್) .... ೧೩೧

... .... .... .... ೧೩೯

... .... .... .... ೧೪೮

... .... .... .... ೧೪೯

... .... .... .... ೧೬೧

... ಪರ ಸ್ಮಾರಕನಿಧಿ .... .... ೧೬೪

... ರಾಗ್ಯಶತಕದ ಪದ್ಯಾನುವಾದ— ... ಬಿ.ಎ. .... .... ೧–೨೪



053 N44 4887
H1.23.2
Prabuddha karnataka


CC-0. Jangamwadi Math Collection, Varanasi. An eGangotri Initiative

033 N44
23.2
4887

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

| | | |
|---|---|---|
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |

CC-0. Jangamwadi Math Collection, Varanasi. An eGangotri Initiative

033ವ N44
H1.23.2



ಕದಂಬ ವೃಕ್ಷದ ಭಾಗಗಳು

(ಇವುಗಳ ವಿವರಣೆಯನ್ನು ೧೩೮ನೆಯ ಪುಟದಲ್ಲಿ ಕೊಟ್ಟಿದೆ)

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. ......4687......

CC-0. Jangamwadi Math Collection, Varanasi. An eGangotri Initiative

ಪ್ರಬುದ್ಧ ಕರ್ಣಾಟಕ

ವೃಷ ಸಂವತ್ಸರ — ೮೮ — ದೀಪಾವಳಿಯ ಸಂಚಿಕೆ

# ವಾನರನ ಬೆನ್ಗೆ!

. . . . ಸಿಂಹದೋಲಾರ್ಭಟಿಸಿ, ಪುಲಿಯವೋಲ್
ಚಿಮ್ಮಿದನು ಪಳುಗಬ್ಬದಿಂ! ಚಿಮ್ಮಿ, ತಮ್ಮನಂ,
ರಣವೇಷಿ ಸುಗ್ರೀವನಂ, ನೋಡಿದನು ವಾಲಿ!
ಕೆಂಪಾದುವಾಲಿ; ರೌದ್ರತೆವೆತ್ತುದಾನನಂ;
ಕೊಂಕುದುಟಿಮೇಲೆ ಕುಣಿದುವು ಮೀಸೆ. ಮತ್ತೊಮ್ಮೆ
ಮಲೆ ನಡುಗುವೋಲಬ್ಬರಿಸಿ ನುಗ್ಗಿದನು ಚಿಮ್ಮಿ
ಸುಗ್ರೀವನೆಡೆಗೆ! ತನುಕಾಂತಿಯಿಂ, ವಸ್ತ್ರದಿಂ,
ವರ್ಣದಿಂ, ಮೇಣಲಂಕಾರದಿಂ ಸಮತೆವೆತ್ತಾ
ಸಮರ ಕಲಿಗಳೊಳ್, ಸುಗ್ರೀವನಾರ್ ವಾಲಿಯಾರ್
ತಿಳಿಯಲರಿಯದ ಬೆಮೆಯ ಬೆಳ್ಪಿಂದೆ, ಜಲ್ಲೊತ್ತ

CC-0. Jangamwadi Math Collection, Varanasi. An eGangotri Initiative

ದಾಶರಥಿ ಪಲ್ಗಚ್ಚಿ, ಭೀಷ್ಮ ಪ್ರತಿಜ್ಞೆಯಂ
ನೆನೆನೆನೆದು, ಸಿಗ್ಗಿನಿಂ, ಬದ್ಧಭ್ರುಕುಟಿಯಿಂದೆ
ನೋಡುತಿರ್ದನು ಬಿಲ್ಲುಬೆರಗಾಗಿ ; ಹೋರಾಡೆ
ಹೋರಿಗಳೆರಡು ಹೊಂಚುಹುಲಿ ದಿಟ್ಟಿಪೋಲಂತೆ!
ಸುಗ್ರಿಗ್ ಬರ್ಪತುಲಬಲಶಾಲಿಯಂ, ವಾಲಿಯಂ,
ಕಂಡು ತೆಕ್ಕನೆ ಕೆಲಕೆ ಸಿಡಿಯುತೆ ರುಮಾಪ್ರಿಯಂ
ಗುದ್ದಿದನು ನೆತ್ತಿಯಂ. ಕರ್ಗಲ್ಲು ಸುರ್ಗುಸುರಿ-
ವೋಗುವಾ ಘಾತಕ್ಕೆ ಬುದ್ಧಿಯೆ ಕದಡಿದಂತೆ
ತತ್ತರಿಸಿದಿಂದ್ರಜಂ ಮತ್ತೆ ಚೇತರಿಸುತ್ತೆ
ಹತ್ತಿರಿರ್ದೊಂದರೆಯನೆತ್ತಿ ಸಿಡಿರೋಷದಿಂ-
ದಿಟ್ಟನು, ಶತಘ್ನಿ ಗುಂಡಿಡುವಂತೆ. ಸತ್ತನೇ
ಸುಗ್ರೀವನೆಂಬನಿತರೊಳೆ, ಲಂಘಿಸೆ ಕೆಲಕ್ಕೆ,
ಗುರಿತಪ್ಪಿದಾ ಬಂಡೆ ಬಡಿದುದೊಂದವನಿಜದ
ಗೂನ್ಗಂಟೊರಟು ಬುಡಕೆ. ಬೇರುಗಳುಡಿಯೆ, ಕೊಂಬೆ
ಬರಲಾಗಲೆಲೆಯುದುರಿ, ಮರವೊರಗಿದುದು ಲರಿಲ್
ಲರಿಲ್ಲರಿಲ್ಲೆಂದು. ಆ ವೃಕ್ಷಮನೆ ಗದೆಗೈದು
ಸುಗ್ರೀವನಪ್ಪಳಿಸುತಿರೆ ವಾಲಿಯಂ, ಅದಂ
ಕಪಿಮುಷ್ಟಿಯಿಂ ಪಿಡಿದು ಜಗ್ಗಿ ಸೆಳೆಯುತೆ ವಾಲಿ :
“ ಎಲವೊ ಸುಗ್ರೀವ, ನೀಂ ತಮ್ಮನೆಂಬೊಲವರಕೆ,
ನಿನ್ನಾ ಪತಿವ್ರತಾ ಸತಿಯೈದೆತನಕಾಗಿ,
ದೇವಿ ತಾರೆಯ ವಚನಕಾಗಿ ಪುಸಿಗಾಳೆಗಂ
ಗೊಟ್ಟೊಡತಿ ಮಲೆತು ಕೊಬ್ಬಿದೆಯಲಾ! ಹಗೆತನಂ
ಬಾಡಿದೆನ್ನೆರ್ದೆಗೆ ನೇಹಂ ಮೂಡುತಿರ್ದಂದೆ,
ಕೂಡಿಕೊಂಡಾವನೋ ಬಣಗು ಬಡಗರಸನಂ,
ಕೆಣಕಿದಪೆ ಮತ್ತೆಯೆನ್ನಂ. ಮರುಳೆ, ಸಾಹಸದಿ
ವಾಲಿಯಂ ಗೆಲ್ದವರದಾರುಂಟೊ? ರಾವಣನೆ
ಹೆದರಿ, ಮೈತ್ರಿಯನಾಶ್ರಯಿಸಿ ಬರ್ದುಕುತಿರ್ಪನೆನೆ
ಕಾವರಾರ್ನೈ ನಿನ್ನನೆನ್ನ ಕೋಪಪ್ರಳಯ
ಫಣಿಗರಳದಿಂ?” ಎನುತೆ ತಮ್ಮನ ಕಯ್ಯ ಗದಾ

CC-0. Jangamwadi Math Collection, Varanasi. An eGangotri Initiative

ವೃಕ್ಷಮಂ ಕಸಿದು ಬಿಸುಟನ್ ; ನೆಗೆದು ಮೇಲ್ವಾಯ್ದು
ಬಿಗಿದಪ್ಪಿದನ್, ಭುಜದ ವಾಸುಕಿಯಿನವರಜನ
ಮೆಯ್ಯ ಮಂದರವಸುರ್ವರೆಗಿರ್ವರುರುಳ್ವಂತೆ !
ತಿರೆಗುರುಳಿ ಪೊದೆಯ ಮರೆಯಲಿ ಹೋರುತಿರ್ದರಂ
ಕಾಣಲಾರದೆ ಕಾತರಿಸುತಿರೆ ರಾಘವಂ,
ಕೇಳಿಸಿತು ದಿಷ್ಟುದಿಡ್ಡೆಂಬ ಕೈಗುದ್ದುಗಳ
ಸದ್ದುಗಳ ಏರಾರುತೇಳ್ವಾರ್ತನಾದಂ. ಒಡನೆ,
ಓಡುತಿರ್ದ್ದಾ ರಾಮಮಿತ್ರನಂ ಬೆಂಬತ್ತಿ
ಕಾಣಿಸಿದನಟ್ಟುತಿರ್ದ್ದಾ ವಾಲಿ. ಮಿತ್ರನಾರ್
ಶತ್ರುವಾರೆಂಬನಿತರೊಳೆ ದಟ್ಟ ಪಳುವದೊಳ್
ಮರೆವೋದರಿರ್ವರುಂ.
ರಾಮನಂಬಿನ ನೆರಂ
ಬಿಸಿಲ್ಗುದುರೆಯಾದುದಂ ಕಂಡು ಸುಗ್ರೀವಂಗೆ
ನೆಚ್ಚುಗೆಡೆ, ವಾಲಿ ಮುಷ್ಟಿಯ ವಜ್ರ ಘಾತಕ್ಕೆ
ಮೆಯ್ ಮುರಿಯೆ, ಕೆನ್ನೀರುಮೊಳ್ಕಲೊಳಸೋರುತ್ತೆ
ಪಿಮ್ಮೆಟ್ಟಿದನು ಮತಂಗಾರಣ್ಯರಕ್ಷಣೆಗೆ.
ಋಷಿಶಾಪಮಂ ನೆನೆದು, ಬದುಕು ನಡೆ ಹೋಗೆಂದು
ಮುಳಿಸಂ ನುಡಿದು, ವಾಲಿ ಪಿಂತಿರುಗಿದನು ತನ್ನ
ಕಿಷ್ಕಿಂಧೆಗೆ.
ಇತ್ತ ರಾಮಾದಿಗಳುಮರಸುತ್ತ
ಬಂದು ಕಂಡರು ವೈರಿಮುಷ್ಟಿಪ್ರಹಾರದಿಂ
ಜರ್ಜರೀಕೃತ ದೇಹನಂ, ರುಧಿರ ಸಿಕ್ತಾಂಗನಂ,
ಕ್ಲಾಂತ ಸುಗ್ರೀವನಂ. ಕಣ್ಬನಿವೆರಸಿ, ನಾಣ್ಚಿ,
ಬಾಗಿ, ನೆಲನಂ ನೋಡುತಾ ದೀನವಾನರಂ,
ಕೆಳೆಯನಿರ್ಕೆಯ ಕರುಣದುಸ್ಥಿತಿಗೆ ಮರುಗಿರ್ದ
ದಿನನಾಥ ಕುಲ ಸಂಭವಂಗೆ :
" ನೀನಿಂತೇಕೆ
ನಂಬಿಸೆನ್ನನ್ ಕೊಂದೆ, ಓ ಕರುಣಿ ! ವಾಲಿಗೇಂ
ಬೇಹುಗಾರನೊ ? ಕೊಲ್ಲಿಸಲ್ಕೆನ್ನನೆಂದಿಂತು

SRI JAGADGURU VISHWARADHYA
JNANA SIMHASAN ...
LIBRARY
CC-0. Jangamwadi Math Collection, Varanasi. An eGangotri Initiative
Jangamwadi Math ...
Acc. No 3716

ಪುಸಿವೇಳುತಾರ್ಯನೀತಿಯ ಮೆರೆದೆಯಲ್ತೆ? ನಾಂ
ಮುನ್ನ ಮೊರೆಯೆಸೆ ವಾಲಿ ದುಸ್ಸಾಧ್ಯನೆಂಬುದಂ
ನಿನಗೆ?"

"ಮನ್ನಿಸು, ವಾನರೇಂದ್ರ, ಮನ್ನಿಸೆನ್ನನ್.
ಕೋಳುವೋದೆನ್ ರೂಪಸಾದೃಶ್ಯದಿಂ, ಗೆತ್ತು
ನಿನ್ನಣ್ಣನಂ ನಿನಗೆ. ಮೋಸವೋಗೆನೊ ಮರಳಿ.
ಏಳು, ನಡೆವಂ ಮತ್ತೆ ಕಿಷ್ಕಿಂಧೆಯತ್ತಣ್ಗೆ.
ಬೇಂಟೆಯೊಳ್ ಸೋವಿನವರೆಂತು ಪಳುವಂ ನುಗ್ಗಿ
ಬಿಲ್ಲಿರ್ಪೆಡೆಗೆ ತರುಬುತೆಳ್ಬುವರೊ ಹಕ್ಕೆಯ
ಮಿಗಂಗಳಂ, ನೀನಂತೆವೋಲ್ ಕೆರೆದು ವಾಲಿಯಂ
ಪೊರಮಡಿಸವನ ಕೋಂಟೆಯಿಂ. ಕಾಣ್ಬೆ ನೀನೊಡನೆ
ಬಾಣದೇರಿಗೆ ನೆತ್ತರಂ ಕಾರ್ದು ಕೆಡೆದಳಿವ
ವೈರಿಯಂ! ಕುರುಪಿರ್ಕೆ ಈ ಪೂವಿಡಿದ ಬಳ್ಳಿ
ನಿನ್ನ ಕಂಠಕ್ಕೆ: ಜಯಮಾಲೆಯೆಂದು ತಿಳಿಯಯ್
ನೀನಿದನ್!"

ತುಡಿಸಲ್ಕೆ ದಾಶರಥಿ ಹೂವಿಡಿದ
ಕಾಡುಬಳ್ಳಿಯನವನ ಕೊರಳಿನಲಿ, ಹಾಲ್ಗರಿಯ
ಬೆಳ್ವಕ್ಕಿ ಸಾಲ್ಗೊಂಡು ಮಾಲೆಗಟ್ಟಿದ ಬಯ್ಗು-
ಮುಗಿಲಂತೆವೋಲೆಸೆದನಾ ವಾನರಂ! ಮೇಲೆ
ತೆರಳ್ದರವರಿನ್ನೊರ್ಮೆ ಕಿಷ್ಕಿಂಧೆಯತ್ತಣ್ಗೆ
ಸುಗ್ರೀವನಂ ಕೂಡಿದುನ್ಮೀಲಿತೋತ್ಸಾಹದಿಂ
ಪೆರ್ಚಿ.

ಅನ್ನೆಗಮತ್ತಲಾ ವಾಲಿ, ತಮ್ಮನಂ
ದ್ವಂದ್ವಯುದ್ಧದಿ ಗೆಲ್ದು ಎಳ್ಚಟ್ಟಿದುರ್ಕಿನಿಂ
ಸೊರ್ಕಿ, ಪೊಕ್ಕನು ತನ್ನ ಕಿಷ್ಕಿಂಧೆಯಂ. ತಾರೆ,
ಕೊಡಗಿನುಡುಗೆಯ ಸೀರೆ ಸಿಂಗರಿಸಿದಾ ನೀರೆ,
ಮದ್ದಿರ್ಕಿಕ್ಕುತೇರ್ಗಳ್ಗೆ, ಬಿಜ್ಜಣಿಕೆವೀಸುತ್ತೆ,
ಕೈಸೋಂಕಿನಮೃತದಿಂ ಬಳಲಿಕೆಯನಾರಿಸುತೆ
ಬೆಸಗೊಂಡಳೇರ್ವೆಸನದಾಗುವೋಗಂ. ಗೆಲ್ದು

CC-0. Jangamwadi Math Collection, Varanasi. An eGangotri Initiative

ಬಂದಿರ್ದೊಡಂ ವಾಲಿ ಖಿನ್ನಮುಖದಿಂ ಪ್ರಿಯೆಗೆ
ಸತಿಗೊರೆದನಿಂತು ಹದಿಬದೆಗೆ:
“ ನೀನೆಂದವೊಲೆ
ರುಮೆಯ್ಯೆದೆತನಕೆ ಕೇಡಸದೋಲಾತನಂ
ಬಡಿದಟ್ಟಿ ಬಂದೆ . . . . ಬಗೆಯೇಕೊ ಸಂತಪಿಸುತಿದೆ,
ಕಾರಣವನರಿಯೆ . . . . ಮೇಣರಿತ ಕತದಿಂದಿಂತು
ತಪಿಸುತಿರ್ಪುದೊ ? . . . . ಗುಹೆಯೊಳೆನ್ನಂ ಮುಚ್ಚಿ ತೊರೆದು
ಬಂದನೆಂಬಾಕ್ರೋಶದುಲ್ಬಣದೊಳಂದು ನಾಂ
ತಮ್ಮನ ವಿನಯಮಂ ಕಿವುಳ್ಗೇಳ್ದು, ಆತನಂ
ಪೆತ್ತಮ್ಮನೂರಿಂದೆ ಪೊರನೂಂಕಿದೆನ್, ಉರುವ
ಕೆಳೆಯರ್‌ವೆರಸಿ ; ಜೇಯಿಸಿದೆ ರುಮಾದೇವಿಯಂ
ಸಿರಿಮನೆ ಸೆರೆಯೊಳಿಟ್ಟು; ಕಡೆಗಣ್ಚಿದೆನ್ ನನ್ನ
ಪೆಸರ ಪಳಿಯಂ, ನಿನ್ನ ಹಿತವಾಕ್ಯಮಂ . . . . ಮನಂ,
ಓರೊರ್ಮೆ, ಗೆಯ್ದನ್ನೆಯದ ಕಜ್ಜಮಂ ತಿರ್ದಿ,
ತಮ್ಮನಂ ತಾಯ್ನೆಲಕೆ ತರಲೆಳಸಿತಾದೊಡಂ,
ತಡೆಯಾಯ್ತು ಪುಸಿಬೀರದೊಂದು ಪುಸಿಲಜ್ಜೆ. ಮೇಣ್
ಆತನುಂ ಮರುಕಮಂ ಕರುಣೆಯಂ ಮೂಡಿಸುವ
ಮಾರ್ಗಮನುಳಿದು, ಮುಯ್ಗೆ ಮುಯ್ಯಾಗಿ, ಕೋಪಮನೆ
ಕೆಣಕಿದನ್ ; ಕದಡಿದನೆದೆಯ ರೋಷ ಸಾಗರದಿ
ಬಡಬಾಗ್ನಿಯಂ . . . . ಈಗಳುಂ ರಾಮನೆಂಬೊನಂ
ಮರೆನೆರಂಬಡೆದು— ನಾನಾತನೆರ್ದೆಯಂ ಪತ್ತಿ
ಗುದ್ದಿರ್ಕ್ಕುವಾಗಳವನಂ ಕರೆದನಾದೊಡಂ
ತೋರ್ದನಿಲ್ಲಾ ಬೀರನಾವೆಡೆಯೊಳಂ . . . . ”
ಮಾತು
ಮುಗಿವನ್ನೆಗಂ, ಕೇಳ್ದುದೊಂದಾರ್ಭಟಂ, ನಡುಗೆ
ಕಿಷ್ಕಿಂಧೆ! “ ಸುಗ್ರೀವನದೊ ಮತ್ತೆ! ” ಎಂದೌಡು
ಕಚ್ಚಿ, ಕರಿಘೀಂಕೃತಿಯನಾಲಿಸುವ ಸುಪ್ತೋತ್ಥ
ಹರ್ಯಕ್ಷನೋಲಾದನಾ ವಾಲಿ, ಆಭೀಳ
ರಕ್ತೇಕ್ಷಣಂ. ಹುಬ್ಬುಗಂಟಿಕ್ಕಿ ನೆಗೆದೆದ್ದು,

CC-0. Jangamwadi Math Collection, Varanasi. An eGangotri Initiative

ತಡೆವ ತಾರೆಯ ಕಯ್ಯನೋಸರಿಸುತಿರೆ ಕೆಲಕೆ,
ದಿಂಡುರುಳಿದಳು ನೆಲಕೆ; ಕಾಲ್ವಿಡಿದಳಾಣ್ಮನಂ;
ಬೇಡಿದಳ್ ಕಣ್ಬನಿಯ ಜೇನಿಳಿವ ತಾವರೆಯ
ಚೆಲುವೆ: "ಮಾಣ್, ಮನದನ್ನ, ಮಾಣ್; ಮಾರದಿರು ಥಲಕೆ
ಜೀವನಶ್ರೀಯುಮಂ. ನೀನೀಗಳೆನ್ನೊಡನೆ
ನುಡಿಯುತಿರ್ದುದನೆ ಪಿಡಿ—ವೀರರೌದಾರ್ಯಮಂ.
ಪತಿವ್ರತಾರಮಣಿಯುಂ ಆ ರುಮಾದೇವಿಯುಂ
ನೆನೆ; ಪಡೆದ ತಾಯನಂತೆಯೆ ತಂದೆಯುಂ ನೆನೆ;
ಅಂತೆವೋಲ್ ನಿಮ್ಮಿರ್ವರೆಳೆತನದ ಲೀಲೆಯುಂ,
ತಾರುಣ್ಯದೋಲದುಯ್ಯಾಲೆಯುಂ ನೆನೆ; ಪಿಂತೆ
ನಿಮ್ಮೊಳಿರ್ದಕ್ಕರೆಯ ಸಗ್ಗಮಂ ನೆನೆ!"

ತಾರೆ

ನುಡಿದೋರೆ, ಮುಗ್ಧನಾದನೆ ವಚನಮಂತ್ರದಿಂ-
ದೆಂಬಂತೆ, ವಾಲಿಗೊದಗಿತು ಶಾನ್ತಿ: ತಮ್ಮನಂ,
ಅಣ್ಣ ಬಾ ಬಾರೆಂದು ಜೊಲ್ಲ ತೊದಳಿಂ ಚೀರ್ವ
ಸಣ್ಣ ಸುಗ್ರೀವನಂ, ನೋಳ್ಪರಾ ಕಣ್‌ಮಣಿಯ
ಚೆಣ್ಣನಂ, ಕಂದ ಸುಗ್ರೀವನಂ, ತನ್ನೊಲಿದ
ಮುದ್ದು ಸುಗ್ರೀವನಂ ಬೆನ್ನಿನೊಳ್ ಪೊತ್ತು, ತಾಯ್
ಕಂದ ಬಾರೆನ್ನುತಿರೆ, 'ಉಪ್ಪು ಬೇಕೇ ಉಪ್ಪು?'
ಎನುತೆ ತಾಂ ಪರಿದಾಡುತನಿಬರಂ ನಗಿಸಿದಾ
ಚಿಕ್ಕಂದಿನೊಂದು ಚಿತ್ರಂ ಸ್ಮೃತಿಗೆ ಮೈದೋರೆ,
ರೋಷಚ್ಯುತಂ ವಾಲಿ ಶಾಂತನಾದನ್. ಮೈತ್ರಿ
ಸಂಚರಿಸಿದುದು ಮನದಿ, ವೈರಮಂ ಕೆಲಕೊತ್ತಿ.
"ನೆರವುವೆನು, ತಾರೆ, ಸುಗ್ರೀವನಂ ತಂದಿಂದು
ರುಮೆಗೊಸಗೆಯುಂ. ಸಿಂಗರಿಸು ನಿನ್ನ ತಂಗಿಯುಂ,
ನಡೆ. ಅಂದು ನಾವಾಡಿದುಪ್ಪಾಟಮಂ ಇಂದು
ತೋರಿದಪೆನೆನ್ನ ತಮ್ಮಂಗೆ. ನೀನನ್ಯಮಂ
ಚಿಂತಿಸದಿರಾಂ ಪೋಗಿ, ಕಾಳೆಗದ ನೆವದಿಂದೆ,
ಪೊತ್ತು ತಹೆ ರವಿಸೂನುವಂ!"

CC-0. Jangamwadi Math Collection, Varanasi. An eGangotri Initiative

CC-0. Jangamwadi Math Collection, Varanasi. An eGangotri Initiative

ವಾನರನ ಬೆನ್ನೆ

CC-0. Jangamwadi Math Collection, Varanasi. An eGangotri Initiative

ನಿಲ್ಲದಲ್ಲಿಂದೆ
ಪ್ರೋಲ್ಲಾಸದಿಂ ಪರಿದನಾ ಬೃಹದ್ಬಲಶಾಲಿ
ವಾಲಿ. ಕಿಷ್ಕಿಂಧೆಯ ದಿವಾಕರಂ ನಡುವಗಲ
ಹೊಸ್ತಿಲಂ ದಾಂಟಿ, ಪೂರ್ವಾಚಲಕೆ ಯಾತ್ರೆಯಂ
ತೊಡಗಿರ್ದುದಾಗಳ್ ತರುಚ್ಛಾಯೆ. ಪಿಂದಿಕ್ಕಿ
ಕೋಂಟೆಪೆರ್ಬಾಗಿಲಂ, ಹೊರವಳಯದಡವಿಗೈ-
ತರುತಿಂದ್ರಜಂ ಕಂಡನಾ ವಿಪಿನಪುಷ್ಪಲತೆ
ಗ್ರೈವೇಯವಾಗಿರ್ದ ಸುಗ್ರೀವನಂ. ವೈರಂ
ವೈರಾಗ್ಯವೊಂದಿರ್ದೆರ್ದೆಗೆ ಕರುಣೆಯುಕ್ಕುತಿರೆ
ಮುನ್ನುಗ್ಗಿದನೊ ಅಣ್ಣನಪ್ಪಲಾ ತಮ್ಮನಂ!
ಅಗ್ರಜನ ಹೃದಯ ಪರಿವರ್ತನೆಯನರಿಯದಾ
ಸುಗ್ರೀವನಿಕ್ಕಿದರೆಬಂಡೆಗಳಸಂಗೈಯ
ದಾಂಡಿನಿಂ ಪೊಡೆಸಂಡನಾಡುತೆ ಕೆಲಕ್ಕಣೆದು,
ಮಿಂಚುಜವದಿಂ ಬಳಿಗೆ ಪರಿದು, ಕಪಿಮುಷ್ಟಿಯಿಂ
ತುಡುಕಿ, ಶಾರ್ದೂಲಮಂ ಭೇರುಂಡನೆತ್ತುವೋಲ್
ತಮ್ಮನಂಪೊತ್ತು ತಾಯೂರ್ಗೆ ಧಾವಿಸಿದನೈ
ದೇವಾಸುರರ ವಿರ್ದ ದೈತ್ಯಬಲಶಾಲಿ, ಆ
ವಾಲಿ!

ಸನ್ಮಿತ್ರನಂ ಪೊತ್ತೋಡುವಾತನಂ
ಕಂಡು 'ಹಾ ಕೈಮಿರ್ದುದಾ' ಎನುತೆ, ಮುಂಗೆಟ್ಟು,
ಬೇರೆಬಟ್ಟೆಯ ಕಾಣದಯ್ಯಯ್ಯೋ ರಘುಕುಲದ
ಶುಭ್ರಕೀರ್ತಿಯ ದಾಶರಥಿ ಕಣೆಯ ಬಿಟ್ಟಿಯನೆ
ಕೈಕೊಂಡನೆಚ್ಚನು ಕಠೋರ ಶರಮೃತ್ಯುವಂ
ವಾನರನ ಬೆನ್ಗೆ! ಬಿದ್ದನು ವಾಲಿ, ಬಿದ್ದುದೆನೆ
ಕಲ್ಪದ್ರುಮಂವೆರಸಿ ಸಗ್ಗದೈರಾವತಂ
ನೆಲಕೆ!—ದೀವದ ಕೋರಿಯಂ ಕಟ್ಟಿ, ಬೇಂಟೆಗಂ
ಮರಸು ಕುಳಿತಿರೆ ಮರದ ತುದಿ ಮಂಚಿಗೆಯಮೇಲೆ,
ಸೋವತವನರಸಿ ಬರ್ಪುದು ಪಸಿದ ಪುಲಿ. ಮುಂದೆ
ಕೊರ್ವಿದೆರೆಯಂ ಕಂಡದಂ ಕೊಳ್ವಲಂಪಿಂದೆ

CC-0. Jangamwadi Math Collection, Varanasi. An eGangotri Initiative

ಹೊಂಚಿ ಮುಂಬರಿಯುತಿರಲೀಡೇಳುವುದು ಕೋವಿ.
ಸೆರಕೆ ತಗುಲಿದ ಗುಂಡಿನೇರಿಂಗೊಡನೆ ಜೀವಿ
ಮೈಮರೆದುರುಳೆ, ಮರಸಿನಿಂದಿಳಿದು ಬಂದು, ಆ
ಬೇಂಟೆಗಾರಂ ತನ್ನ ಬೇಂಟೆಯನೊಸೆದು ನೋಡಿ
ಮೆಚ್ಚುವನ್, ತನ್ನ ಬೀರದ ಬೆನ್ಗೆ ತಾನೆ ಕೈ
ಚಪ್ಪರಿಸಿ !—ಓಡಿದರೊ ಬಿಳ್ದಿಂದ್ರಜನ ಬಳಿಗೆ
ರಾಮಾದಿಗಳುಮಂತೆ. ಸುಗ್ರೀವನಂ ತೆಗೆದು
ತಳ್ಕೈಸಿದರು ಉಘೇ ಎಂದು. ಸಂಭ್ರಮವಾರೆ
ನೋಡಿದರು ಪುರುಹೂತಜಾತನಂ, ಬಸವಳಿದು
ನೆತ್ತರ್ಗೆಸರೊಳಾಳ್ದು ತನ್ನಾಳ್ದಿಳೆಗುರುಳ್ದ
ಬಿಳ್ದಾತನಂ. ನೋಡೆ ನೋಡೆ ಖಿನ್ನತೆ ಮೂಡಿ-
ತನಿಬರಿಗೆ. ಹಿರಿದಾದುದಳಿಯೆ, ಹಗೆಯಾದರೇಂ,
ಹಿರಿತನಕೆ ನೋವಾಗದುಂಟೆ ? ತಾನಾವನಂ
ದೂರದಿಂ ಕೇಳ್ದಿರ್ದನಾ ಪೊಳ್ತಿನನ್ನೆಗಂ
ದೂರದಿಂದಲ್ಲದೆಯೆ ಕಂಡಿರ್ದನಿಲ್ಲ, ಆ
ವೀರನ ಶರೀರದೆಡೆ ನಿಂದು ಸೀತಾಸ್ವಾಮಿ,
ಸುಯ್ದು, ತನ್ನೊಳಗೆ ತಾಂ ಬಯ್ದುಕೊಂಡನೊ ತನ್ನ
ಬಿಲ್‌ಜಾಣ್ಮೆಯಂ ! . . .

ಕೆ. ವಿ. ಪುಟ್ಟಪ್ಪ.

CC-0. Jangamwadi Math Collection, Varanasi. An eGangotri Initiative

# ಹದಿನೈದನೆಯ ಶತಮಾನದ ಕನ್ನಡ ಸಾಹಿತ್ಯ

ಕನ್ನಡಸಾಹಿತ್ಯಚರಿತ್ರೆಯನ್ನು ಅಭ್ಯಾಸದ ಅನುಕೂಲತೆಗಾಗಿ ಶತಮಾನಗಳ ದೃಷ್ಟಿಯಿಂದ ವಿಭಾಗಮಾಡುವುದುಂಟು. ಅನೇಕ ಕನ್ನಡ ಕವಿಗಳ ಕಾಲನಿರ್ಣಯ ದಲ್ಲಿ ಭಿನ್ನಾಭಿಪ್ರಾಯಗಳು ಇರುವಾಗ ನಿರ್ದುಷ್ಟವಾಗಿ ಶತಮಾನದ ವಿಭಾಗ ಮಾಡುವುದು ಸಾಧ್ಯವಲ್ಲ. ಆದರೆ ಎಲ್ಲ ಕವಿಗಳ ಕಾಲನಿರ್ಣಯವಾದ ಮೇಲೆಯೇ ಸಾಹಿತ್ಯ ಚರಿತ್ರೆಯನ್ನು ಬರೆಯಲು ಆರಂಭಿಸಬೇಕೆಂದು ಯಾರಾದರೂ ಇಚ್ಛಿಸಿದರೆ ಆ ರೀತಿಯ ಸಾಹಿತ್ಯಚರಿತ್ರೆಯನ್ನು ಬರೆಯುವುದು ಸಾಧ್ಯವೇ ಆಗಲಾರದು. ಏಕೆಂದರೆ ಕವಿಗಳ ಕಾಲನಿರ್ಣಯದ ವಿಚಾರವಾಗಿ ಭಿನ್ನಾಭಿಪ್ರಾಯಗಳೆಲ್ಲವೂ ಇಲ್ಲ ದಂತಾಗುವುದು ಸುಲಭಸಾಧ್ಯವಾದ ಮಾತಲ್ಲ. ಆದುದರಿಂದ ಹೀಗೆ ಶತಮಾನಗಳ ದೃಷ್ಟಿಯಿಂದ ಸಾಹಿತ್ಯ ಚರಿತ್ರೆಯ ಅಭ್ಯಾಸವನ್ನು ಕೈಕೊಂಡಾಗ ಕವಿಚರಿತೆಕಾರರು ನಮ್ಮ ಕವಿಗಳಿಗೆ ಕೊಟ್ಟ ಕಾಲವನ್ನೇ ಮುಖ್ಯವಾಗಿ ಅನುಲಕ್ಷಿಸಿ ಅಲ್ಲಲ್ಲಿ ಭಿನ್ನಾಭಿ ಪ್ರಾಯಗಳನ್ನು ಸೂಚಿಸಿ ಸಾಹಿತ್ಯಚರಿತ್ರೆಯನ್ನು ಬರೆಯಲು ಆರಂಭಿಸಬೇಕೆಂದು ನನ್ನ ಅಭಿಪ್ರಾಯ. ಅದಕ್ಕನುಸರಿಸಿ ಈ ಲೇಖನದಲ್ಲಿ ಹದಿನೈದನೆಯ ಶತಮಾನದ ಕನ್ನಡಸಾಹಿತ್ಯ ಚರಿತ್ರೆಯನ್ನು ಕುರಿತು ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ವಿಜಯನಗರ ಸಾಮ್ರಾಜ್ಯವು ಹದಿನಾಲ್ಕನೆಯ ಶತಮಾನದ ಮಧ್ಯಭಾಗದಲ್ಲಿ ಸ್ಥಾಪಿತವಾಯಿತು. ಆದರೆ ರಾಜ್ಯಸ್ಥಾಪನೆಯ ಹೋರಾಟದ ಅನಂತರ ರಾಜ್ಯದಲ್ಲಿ ಶಾಂತತೆ ಸುವ್ಯವಸ್ಥೆಗಳು ನೆಲೆಗೊಳ್ಳಲು ಕೆಲವೊಂದು ಅವಧಿ ಬೇಕಾಗುತ್ತದೆ. ಕಲೆ ಸಾಹಿತ್ಯಗಳ ಪೋಷಣೆಗೆ ಶಾಂತತೆ ಸುವ್ಯವಸ್ಥೆಗಳು ಆವಶ್ಯಕವಷ್ಟೇ? ವಿಜಯನಗರ ಸಾಮ್ರಾಜ್ಯವು ಕಲೆ ಸಾಹಿತ್ಯಗಳಿಗೆ ಹೆಚ್ಚಾದ ಪೋಷಣೆಯನ್ನು ಇತ್ತಿದೆ. ವಿದ್ಯಾ ಪಕ್ಷಪಾತಿಗಳೂ ಕವಿಕಾವ್ಯಪಕ್ಷಪಾತಿಗಳೂ ಆದ ವಿಜಯನಗರದ ರಾಯರಿಂದ ಕನ್ನಡವು ಬೆಳವಣಿಗೆಯನ್ನು ಪಡೆಯಿತು. ಧರ್ಮವನ್ನು ರಕ್ಷಿಸುವುದು, ಸಾಹಿತ್ಯ ಸಂಸ್ಕೃತಿಗಳನ್ನು ಬೆಳೆಯಿಸುವುದು, ಇವೇ ಮೊದಲಾದ ಉದ್ದೇಶಗಳಿಗಾಗಿಯೇ ಸ್ಥಾಪಿತವಾದ ವಿಜಯನಗರದಲ್ಲಿ ಹದಿನೈದನೆಯ ಶತಮಾನದ ಆರಂಭದಿಂದಲೇ ಶಾಂತತೆ ಸುವ್ಯವಸ್ಥೆಗಳು ನೆಲೆಗೊಂಡವು. ಹಾಗೂ ಆವಾಗಿನಿಂದ ಸಾಹಿತ್ಯಕ್ಕೆ ಪೋ ಷಣೆ ದೊರೆಯಿತು. ಅರ್ಥಾತ್ ಹದಿನೈದನೆಯ ಶತಮಾನವನ್ನು ವಿಜಯನಗರ ರಾಜ್ಯದ ಸಾಹಿತ್ಯದ ಆರಂಭಕಾಲವೆಂದೂ ಕರೆಯಬಹುದು. ಮೊದಲಿನ ಅರಸರಾದ ಹುಕ್ಕ,

CC-0. Jangamwadi Math Collection, Varanasi. An eGangotri Initiative

ಬುಕ್ಕ, ಇಮ್ಮಡಿ ಹರಿಹರರಾಯ ಇವರ ಆಳಿಕೆಗಳು ೧೪೦೬ಕ್ಕೆ ಮುಗಿದವು. ೧೪೦೬ ನೆಯ ವರುಷದಿಂದ ದೇವರಾಯನ ಆಳಿಕೆಯು ಆರಂಭವಾಗುತ್ತಿದೆ. ಈ ಶತಮಾನದ ಸಾಹಿತ್ಯ ಚರಿತ್ರೆಯನ್ನು ನಾವು ದೇವರಾಜನ ಆಳಿಕೆಯಿಂದ ಆರಂಭಿಸಬೇಕಾಗುತ್ತದೆ. ಈ ದೇವರಾಯನು ಸಂಗಮ ವಂಶದವನು, ಹುಕ್ಕನಿಂದ ಆರಂಭವಾದ ಈ ವಂಶದ ಆಳಿಕೆಯು ಮುಮ್ಮಡಿ ವಿರೂಪಾಕ್ಷನ ವರೆಗೆ ಅಂದರೆ ೧೪೮೬ರ ವರೆಗೆ ನಡೆಯಿತು. ಸಂಗಮ ವಂಶದ ಅನಂತರ ವಿಜಯನಗರದ ಪಟ್ಟಕ್ಕೆ ಬಂದ ವಂಶವೆಂದರೆ ಸಾಳುವ ಅರಸರದು. ಸಾಳುವ ನರಸಿಂಹನು ೧೪೯೭ರ ವರೆಗೆ, ಇಮ್ಮಡಿ ನರಸಿಂಹನು ೧೪೯೭ರ ರಿಂದ ೧೫೦೬ ವರೆಗೆ ರಾಜ್ಯವಾಳಿದರು. ಅಂದರೆ ಹದಿನೈದನೆಯ ಶತಮಾನದಲ್ಲಿ ಮುಖ್ಯವಾಗಿ ಸಂಗಮ ವಂಶದವರು, ಕೊನೆಯ ಭಾಗದಲ್ಲಿ ಕೆಲಕಾಲದ ವರೆಗೆ ಸಾಳುವ ವಂಶದವರು ವಿಜಯನಗರ ರಾಜ್ಯವನ್ನು ಆಳಿದರು. ಅರ್ಥಾತ್ ಈ ಶತಮಾನದ ಸಾಹಿತ್ಯವೆಂದರೆ ಮುಖ್ಯವಾಗಿ ಸಂಗಮ ವಂಶದ ಹಾಗೂ ಕೆಲಮಟ್ಟಿಗೆ ಸಾಳುವ ವಂಶದ ಆಳಿಕೆಯಲ್ಲಿ ರಚಿತವಾದ ಸಾಹಿತ್ಯವಾಗಿದೆ. ಸಂಗಮ ವಂಶದವರು ಶೈವರು; ಸಾಳುವ ವಂಶದವರು ವೈಷ್ಣವರು. ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಸಂಗಮ ವಂಶವು ಮಹತ್ವದ ಸ್ಥಾನವನ್ನು ಪಡೆಯುತ್ತಿದೆ. ಆ ಆಳಿಕೆಯಲ್ಲಿ ಶೈವಮತದವರು ಹೆಚ್ಚಾಗಿ ಕಾವ್ಯಗಳನ್ನು ರಚಿಸಿದ್ದಾರೆ. ಸಂಗಮ ವಂಶದ ಮೊದಲಿನ ಅರಸರು ಹೆಚ್ಚಾಗಿ ಶೈವಪಕ್ಷಪಾತಿಗಳು. ಪ್ರೌಢದೇವರಾಯನಂತೂ ವೀರಶೈವ ದೀಕ್ಷೆಯನ್ನು ಸ್ವೀಕರಿಸಿದ್ದನೆಂಬ ಹೇಳಿಕೆಯೂ ಉಂಟು. ಈ ಕಾಲದ ಅಧಿಕಾರಿಗಳೂ ಕೂಡ ವೀರಶೈವರಾಗಿದ್ದರು. ಹನ್ನೆರಡನೆಯ ಶತಮಾನದ ಮಧ್ಯದಲ್ಲುಂಟಾದ ವೀರಶೈವ ಕ್ರಾಂತಿಯ ಪ್ರಭಾವ ಹದಿಮೂರು ಹದಿನಾಲ್ಕನೆಯ ಶತಮಾನಗಳಲ್ಲಿ ಅಷ್ಟೊಂದು ಹೆಚ್ಚಾಗಿ ಕಂಡು ಬರುವುದಿಲ್ಲ. ಆದರೆ ಹದಿನೈದನೆಯ ಶತಮಾನದಲ್ಲಿ ವೀರಶೈವ ಮತಗಳ ಪುನರ್ಘಟನೆ, ವಚನ ಸಾಹಿತ್ಯದ ಸುವ್ಯವಸ್ಥೆಯ ಕಾರ್ಯ ಇವುಗಳು ನಡೆದಿವೆ. ೧೦೧ ವಿರಕ್ತರು ಆಗ ಇದ್ದರೆಂದೂ ಅವರು ಮೇಲೆ ಸೂಚಿಸಿದ ಕಾರ್ಯಗಳನ್ನು ಆಸ್ಥೆಯಿಂದ ನಡೆಯಿಸಿದರೆಂದೂ ತಿಳಿದುಬರುತ್ತಿದೆ. ಅರಸರು, ಅಧಿಕಾರಿಗಳು, ಧಾರ್ಮಿಕರು ಇವರ ಬೆಂಬಲದಿಂದ ಈ ಶತಮಾನದ ವೀರಶೈವ ಸಾಹಿತ್ಯವು ಹೆಚ್ಚಾದ ಹೆಚ್ಚಳವನ್ನು ಪಡೆದಿದೆ. ಹನ್ನೆರಡನೆಯ ಶತಮಾನದಲ್ಲಿ ವಚನಸಾಹಿತ್ಯವು ಹೊರಹೊಮ್ಮಿದಾಗ ಆದರಲ್ಲಿ ಹೆಚ್ಚಾಗಿ ಧಾರ್ಮಿಕದೃಷ್ಟಿಯಿತ್ತು. ಆದರೆ ಅದಕ್ಕೆ ಸಾಹಿತ್ಯದ ರೂಪವನ್ನು ಕೊಡುವ ಕೆಲಸ ಆಗ ನಡೆದಿರಲಿಲ್ಲ. ಅದಕ್ಕೆ ಬೇಕಾಗುವ ಅವಕಾಶ ಆಗ ಇದ್ದಿರಲಿಲ್ಲ. ಈ ಶತಮಾನದಲ್ಲಿ ಮಾತ್ರ ಆ ಅನುಕೂಲತೆ ದೊರೆಯಿತು. ಈಗ

CC-0. Jangamwadi Math Collection, Varanasi. An eGangotri Initiative

ರಾಜಕೀಯ ಶಾಂತತೆ ತಲೆದೋರಿತ್ತು. ಅರಸರ ಸಹಾನುಭೂತಿಯು ದೊರೆತಿತ್ತು. ಧಾರ್ಮಿಕರಂಗದಲ್ಲಿ ಜಾಗೃತಿ, ಪುನರುಜ್ಜೀವನಗಳು ತಲೆದೋರಹತ್ತಿದ್ದವು. ಆದುದ ರಿಂದ ನಾವು ಈ ಶತಮಾನದ ಸಾಹಿತ್ಯವನ್ನು ಈ ರಾಜಕೀಯ ಹಾಗೂ ಧಾರ್ಮಿಕ ಹಿನ್ನೆಲವನ್ನು ಅನುಲಕ್ಷಿಸಿಯೇ ಚರ್ಚಿಸಬೇಕಾಗುತ್ತಿದೆ. ಇದಲ್ಲದೆ ಈಗಾಗಲೇ ಚಂಪೂಕಾವ್ಯಗಳ ಕಾಲವು ಸಿಂತುಹೋಗಿತ್ತು. ಸಂಸ್ಕೃತಕಾವ್ಯಗಳ ಪ್ರಭಾವ ಅಳಿದಿತ್ತು. ಆಂಡಯ್ಯನ ಅಚ್ಚಗನ್ನಡದ ಚಳವಳಿಯೂ ಈ ಮೊದಲೇ ಬಂದು ಹೋಗಿತ್ತು. ವೀರಶೈವ ಕ್ರಾಂತಿಯ ಮೂಲಕ ಧರ್ಮವು ಸಾರ್ವಜನಿಕವಾದಂತೆ ಸಾಹಿತ್ಯವೂ ಸಾರ್ವಜನಿಕವಾಯಿತು. ಹರಿಹರನ ರಗಳೆಗಳು ಕನ್ನಡದ ಜೀವಾಳವಾದ ಷಟ್ಪದಿಗೆ ಹಾದಿಮಾಡಿಕೊಟ್ಟಿದ್ದವು. ಕವಿ ರಾಘವಾಂಕನು ಷಟ್ಪದಿಯ ಹೊಸ ಹಾದಿಯನ್ನು ಹಾಕಿಕೊಟ್ಟಿದ್ದನು. ಭೀಮಕವಿಯು ಆ ಹಾದಿಯಲ್ಲಿ ಮುಂದುವರಿ ದಿದ್ದನು. ಹೀಗಾಗಿ ಈ ಶತಮಾನವು ಆರಂಭವಾಗುವುದರೊಳಗಾಗಿ ಷಟ್ಪದಿಯ ಹಾದಿಯು ನಿರಾತಂಕವಾಗಿ ಮುಂದೆ ಸಾಗಿತ್ತು. ಷಟ್ಪದಿಯ ಝೇಂಕಾರ ಕನ್ನಡಿಗರ ಕಿವಿಗಳನ್ನು ಆಕರ್ಷಿಸ ಹತ್ತಿತ್ತು. ಸಾಹಿತ್ಯವು ಸುಲಭವೂ ಸಾರ್ವಜನಿಕವೂ ಆಗಬೇಕೆನ್ನುವ ಪ್ರವೃತ್ತಿ ಎಲ್ಲ ಕಡೆಗೆ ತಲೆದೋರಿ, ಷಟ್ಪದಿಯ ಬೆಳವಣಿಗೆಗೆ ಅನುಕೂಲ ಸಂದರ್ಭವನ್ನು ಒದಗಿಸಿಕೊಟ್ಟಿತ್ತು. ಅರ್ಥಾತ್ ಸಾಹಿತ್ಯಕ್ಷೇತ್ರದಲ್ಲಿ ಈ ಮೊದಲೇ ಆರಂಭವಾದ ಹೊಸ ಹಾದಿಯ ಪ್ರಭಾವ, ಷಟ್ಪದಿಯ ಬೆಳವಣಿಗೆ ಇವುಗಳು ಈ ಶತಮಾನದ ಸಾಹಿತ್ಯದಲ್ಲಿ ಸ್ಫುಟವಾದ ಪರಿಣಾಮವನ್ನುಂಟುಮಾಡಿವೆ. ಇವುಗಳ ಬೆಳಕಿನಿಂದ ನಾವು ಈ ಶತಮಾನದ ಸಾಹಿತ್ಯವನ್ನು ಸರಿಯಾಗಿ ಅರಿತುಕೊಳ್ಳ ಬಹುದಾಗಿದೆ. ಒಂದುಕಡೆಗೆ ಹಂಪೆಯ ಪಂಪಾಪತಿ, ಇನ್ನೊಂದೆಡೆಗೆ ಪ್ರೌಢ ದೇವರಾಯ ಇವರ ಸ್ಫೂರ್ತಿಯಿಂದ ಕನ್ನಡ ಕಾವ್ಯಗಂಗೆ ಹರಿದುದನ್ನು ನಾವು ಈ ಶತಮಾನದಲ್ಲಿ ಕಾಣುತ್ತೇವೆ. ಈಗ ರಚಿತವಾದ ಅನೇಕ ಕಾವ್ಯಗಳಿಗೆ ಪಂಪಾಪತಿಯಿಂದ ಅಥವಾ ಪ್ರೌಢದೇವರಾಯನಿಂದ ದೊರೆತ ಸ್ಫೂರ್ತಿಯನ್ನು ಗಮನಕ್ಕೆ ತಂದುಕೊಂಡಾಗ ಈ ಕಾಲದ ಸಾಹಿತ್ಯರಚನೆಯ ವೈಶಿಷ್ಟ್ಯವೂ ತಿಳಿದುಬರುತ್ತದೆ. ಸ್ಫೂರ್ತಿದಾಯಕವಾದ ಪಂಪಾಕ್ಷೇತ್ರ, ಅಭಿಮಾನದಾಯಕವಾದ ವಿಜಯನಗರದ ರಾಜ್ಯ, ಕವಿಕಾವ್ಯಪಕ್ಷಪಾತಿಯಾದ ಪ್ರೌಢದೇವರಾಯ ದೊರೆ, ಶ್ರೇಷ್ಠರಾದ ಧರ್ಮಗುರುಗಳ ಸಹಾನುಭೂತಿ ಹಾಗೂ ಚಟುವಟಿಕೆ, ಇವುಗಳ ಫಲವಾಗಿ ನಮಗೆ ಕೆಲವು ಉದ್ದಾಮ ಕವಿಗಳ ಕಾವ್ಯಗಳು ದೊರೆತಿರುವುದಲ್ಲದೆ ಒಟ್ಟಾಗಿ ಸಾಹಿತ್ಯದ ಚಟುವಟಿಕೆ ಹೆಚ್ಚಾಗಿಯೇ ಇದ್ದುದು ಕಂಡುಬರುತ್ತಿದೆ. ಇಂತಿದು ಹದಿನೈದನೆಯ ಶತಮಾನದ ಸಾಹಿತ್ಯ ಚರಿತ್ರೆಯ ಹಿನ್ನೆಲ. ಈ ಹಿನ್ನೆಲವು

CC-0. Jangamwadi Math Collection, Varanasi. An eGangotri Initiative

ಸ್ಫೂರ್ತಿದಾಯಕವಾಗಿದೆಯೆಂಬ ಮಾತಿಗೆ ಭಿನ್ನಾಭಿಪ್ರಾಯಗಳು ಇರಲಾರವು. ಈ ಸ್ಫೂರ್ತಿದಾಯಕ ಹಿನ್ನೆಲದ ಪ್ರಭಾವವು ಸಾಹಿತ್ಯರಚನೆಯ ಮೇಲೆ ಯಾವ ಪರಿಣಾಮವನ್ನುಂಟುಮಾಡಿದೆಯೆಂಬುದನ್ನು ನಾವೀಗ ಅರಿತುಕೊಳ್ಳಬೇಕಾಗಿದೆ.

ಪಂಪಾಪತಿ, ವಿಜಯನಗರದ ಅರಸರು, ವೀರಶೈವ ಗುರುಗಳು ಇವರೇ ಈ ಶತಮಾನದ ಸಾಹಿತ್ಯರಚನೆಯ ಸ್ಫೂರ್ತಿಯ ಕಾರಣಗಳೆಂಬುದನ್ನು ಸೂಚಿಸಿದ್ದಾಯಿತು. ಈ ಶತಮಾನದಲ್ಲಿ ರಚಿತವಾದ ಕಾವ್ಯಗಳನ್ನು ಅವಲೋಕಿಸಿದಾಗ ಈ ಮಾತಿನ ಸತ್ಯತೆಯು ಒಡೆದು ತೋರುತ್ತಿದೆ. ಈ ಶತಮಾನದ ಮೊದಲನೆಯ ಕವಿಯಾದ ದೇಪರಾಜನೆಂಬವನು (೧೪೧೦) ವಿಜಯನಗರ ರಾಜವಂಶಕ್ಕೆ ಸೇರಿದ ಶೈವನಾಗಿದ್ದಾನೆ. ಅವನ 'ಸೊಬಗಿನ ಸೋನೆ' ಎಂಬ ಗ್ರಂಥವು ಪಂಪಾಪತಿಯ ಸ್ತುತಿಯೊಂದಿಗೆ ಆರಂಭವಾಗುತ್ತಿದೆ. ಅದು ಹರಭಕ್ತರ ಕಥೆಗಳನ್ನು ಒಳಗೊಂಡಿದೆ. ಈತನ ಇನ್ನೊಂದು ಗ್ರಂಥವು ಸಂಸ್ಕೃತ ಅಮರುಕಶತಕದ ಭಾಷಾಂತರವಾಗಿದ್ದರೂ ಷಟ್ಪದಿಯಲ್ಲಿ ಬರೆಯಲ್ಪಟ್ಟಿದೆ. ವಿಜಯನಗರದ ಅರಸುಮನೆತನದವನು ಕಾವ್ಯ ರಚಿಸಿರುವುದು, ಪಂಪಾಪತಿಯ ಸ್ತುತಿಯೊಂದಿಗೆ ಕಾವ್ಯಾರಂಭವಾಗುವುದು, ಸಂಸ್ಕೃತ ಗ್ರಂಥದ ಭಾಷಾಂತರ ಷಟ್ಪದಿಯಲ್ಲಿ ಆದುದು—ಈ ಮೂರು ಮಾತುಗಳಿಂದ ದೇಪರಾಜನ ಉದಾಹರಣೆಯು ಈ ಶತಮಾನದ ಮೂರು ವೈಶಿಷ್ಟ್ಯಗಳನ್ನು ಸೂಚಿಸುವಂತಿದೆ. ದೇಪರಾಜನ ನಂತರ ಬರುವ ಹೆಸರೆಂದರೆ ಮಲ್ಲಣ್ಣನೆಂಬ ವೀರಶೈವ ಕವಿಯದು. ಈತನು ರೇವಣಸಿದ್ಧೇಶ್ವರ ಕಾವ್ಯವನ್ನು ಷಟ್ಪದಿಯಲ್ಲಿ ಬರೆದಿದ್ದಾನೆ. ಸು. ೧೪೩೦ರಲ್ಲಿ ಮಹಾಲಿಂಗದೇವನೆಂಬ ವೀರಶೈವ ಕವಿಯು 'ಏಕೋತ್ತರ ಶತಸ್ಥಲ' ಮತ್ತು 'ಪ್ರಭುದೇವರ ಷಟ್ಸ್ಥಲ ಜ್ಞಾನಚಾರಿತ್ರದ ವಚನದ ಟೀಕೆ' ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಇದರಿಂದ ಈ ಶತಮಾನದ ನಾಲ್ಕನೆಯ ವೈಶಿಷ್ಟ್ಯ ಸೂಚಿತವಾಗುತ್ತದೆ. ಅದೇನೆಂದರೆ ವೀರಶೈವಕವಿಗಳ ಪ್ರಾಬಲ್ಯ ಹಾಗೂ ಅವರು ವಚನಗಳನ್ನು ಸುವ್ಯವಸ್ಥಿತವಾಗಿ ಸಂಗ್ರಹಿಸಿದುದು. ಮೇಲೆ ಸೂಚಿಸಿದ ಮಹಾಲಿಂಗದೇವನ ಎರಡು ಗ್ರಂಥಗಳು ಇದೇ ರೀತಿಯವಾಗಿವೆ. ಇದಲ್ಲದೆ ಮಹಾಲಿಂಗದೇವನು ತನ್ನ ಕಾವ್ಯಗಳನ್ನು ಜಕ್ಕಣನಿಗಾಗಿ ಬರೆದನು. ಜಕ್ಕಣನು ಪ್ರೌಢದೇವರಾಯನ ದಂಡಾಧಿಪನಾಗಿದ್ದನು. ಪ್ರೌಢದೇವರಾಯನ ಕಾಲ ಕನ್ನಡ ಸಾಹಿತ್ಯದ, ವಿಶೇಷವಾಗಿ ವೀರಶೈವ ಸಾಹಿತ್ಯದ, ವಸಂತಕಾಲವಾಗಿದೆ. ಲಕ್ಕಣ ಜಕ್ಕಣರೆಂಬ ವೀರಶೈವ ಅಧಿಕಾರಿಗಳು ತಾವು ಸ್ವತಃ ಕಾವ್ಯಗಳನ್ನು ಬರೆದುದಲ್ಲದೆ ಅನೇಕರಿಗೆ ಪೋಷಣೆಯನ್ನಿತ್ತು ಕಾವ್ಯರಚನೆಗೆ ಕಾರಣರಾಗಿದ್ದಾರೆ. ವೀರಶೈವ ವಚನಗಳ ಪುನರ್ಘಟನೆಯು ಈಗಲೇ ನಡೆದಿದೆ. ಈ ಹಾದಿಯಿಂದ ಮೊದಲು ಹೊರಟ

CC-0. Jangamwadi Math Collection, Varanasi. An eGangotri Initiative

ಮಹಾಲಿಂಗದೇವನು "ಅಸಂಖ್ಯಾತ ಮಹಾಗಣಗಳ ಪರಮವಾಕ್ಯಾಮೃತಮಪ್ಪ ವಚನಗಳಿಂದ ಭಕ್ತಿಭಾಂಡಾರಿ ಜಕ್ಕಣಾಚಾರ್ಯರಿಗೆ ಹೇಳಿದುದು" ಎಂಬುದಾಗಿ ತನ್ನ ಗ್ರಂಥದಲ್ಲಿ ಬರೆದಿದ್ದಾನೆ. ಸ್ವತಃ ಜಕ್ಕಣಾಚಾರ್ಯನು "ನೂರೊಂದು ಸ್ಥಲ" ವೆಂಬ ಗ್ರಂಥವನ್ನು ರಚಿಸಿದ್ದಾನೆ. ಮುಂದೆ ಕಲ್ಲಮಠದ ಪ್ರಭುದೇವ, ತೋಂಟದ ಸಿದ್ಧೇಶ್ವರ, ಗುಮ್ಮಳಾಪುರದ ಸಿದ್ಧಲಿಂಗೇಶ್ವರ ಇವರು ಇದೇ ಹಾದಿಯಿಂದ ಮುಂದುವರಿದು ವಚನಸಾಹಿತ್ಯವೆಂಬ ಸುಂದರವಾದ ಚಿತ್ರಕ್ಕೆ ಸುಂದರವಾದ ಚೌಕಟ್ಟನ್ನು ಕೊಟ್ಟಿದ್ದಾರೆ. ನೂರೊಂದು ವಿರಕ್ತರು ವಿಜಯನಗರ ರಾಜ್ಯದಲ್ಲಿ ಹರದಿ ವೀರಶೈವ ಮತದ ಪುನರ್ಘಟನೆಯನ್ನು ನಡೆಯಿಸಿದ್ದಾರೆ. ಲಕ್ಕಣ ಜಕ್ಕಣರಂತಹ ಅಧಿಕಾರಿಗಳು, ಪ್ರೌಢದೇವರಾಯ ದೊರೆ ಇವರಿಂದ ಅರಮನೆಯ ನೆರವೂ ನೂರೊಂದು ವಿರಕ್ತರೆಂಬ ಧರ್ಮಗುರುಗಳಿಂದ ಗುರುಮನೆಯ ನೆರವೂ ಕನ್ನಡ ಸಾಹಿತ್ಯಕ್ಕೆ ದೊರೆತ ಒಂದು ಸುಂದರ ಉದಾಹರಣೆ ಈ ಕಾಲದಲ್ಲಿ ದೊರೆಯುತ್ತಿದೆ. ಒಂದು ನೂತನ ಪ್ರವಾಹವೇ ಕನ್ನಡ ಸಾಹಿತ್ಯಕ್ಕೆ ಇಳಿದು ಬಂದಂತಿದೆ. ಇದರಿಂದ ಕನ್ನಡ ಸಾಹಿತ್ಯವು ಪರಿಶುದ್ಧವೂ ಗಂಭೀರವೂ ಆಗುತ್ತ ನಡೆದಿದೆ. ಇಲ್ಲಿ ಕಾವ್ಯ ಆತ್ಮೋನ್ನತಿಯ ಸಾಧನವಾಗಿದೆ; ಬೆಳಕಾಗಿದೆ. ಇದಲ್ಲವೇ ಸಾಹಿತ್ಯದ ಸಾಫಲ್ಯ? ಹದಿನೈದನೆಯ ಶತಮಾನದ ಈ ವೀರಶೈವ ಸಾಹಿತ್ಯ ಝರಿಯು ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ಒಂದು ಮಹತ್ವದ ವಿಭಾಗವಾಗಿದೆ. ಇದಕ್ಕಾಗಿ ನಾವು ವಿಜಯನಗರದ ದೊರೆಗಳಿಗೆ, ವಿರಕ್ತರಿಗೆ, ಋಣಿಯಾಗಿದ್ದೇವೆ. ಈ ಸಾಹಿತ್ಯದ ಝರಿಯಲ್ಲಿ ನಾವು ಎರಡು ಭಾಗಗಳನ್ನು ಕಾಣುತ್ತೇವೆ. ಒಂದು ಧಾರ್ಮಿಕ, ತಾತ್ತ್ವಿಕ ಪ್ರವಾಹ; ಮತ್ತೊಂದು ಷಟ್ಪದಿಯ ರೂಪದಲ್ಲಿರುವ ಚರಿತ್ರಾತ್ಮಕ ಪೌರಾಣಿಕ ಸಾಹಿತ್ಯ. ಒಮ್ಮೊಮ್ಮೆ ಇವೆರಡು ಪ್ರವಾಹಗಳು ಒಂದೇ ಗ್ರಂಥದಲ್ಲಿ ಕೂಡಿಕೊಂಡಿರಬಹುದು. ವಚನ, ಟೀಕೆ, ಭಾಷ್ಯ, ಶತಕ, ಸೂತ್ರಗಳ ಮೂಲಕ ಮೊದಲನೆಯ ಪ್ರವಾಹ ಹರಿದು ಬಂದಿದೆ. ಎರಡನೆಯದು ಮುಖ್ಯವಾಗಿ ಷಟ್ಪದಿಯ ರೂಪದಲ್ಲಿದೆ.

ಶರಣರ ವಚನಗಳಲ್ಲಿಯ ತತ್ತ್ವಕ್ಕೆ ಶಾಸ್ತ್ರೀಯ ರೂಪವನ್ನು ಕೊಡುವ ಪ್ರಯತ್ನ ಈ ಶತಮಾನದಲ್ಲಿ ನಡೆದಿದೆ. ಹಾಗೆ ಶಾಸ್ತ್ರೀಯ ರೂಪ ಕೊಡುವಾಗ ಈ ತತ್ತ್ವವು "ವೇದಾಗಮೋಪನಿಷತ್ಸಮ್ಮತಿಯಿಂ" ಹೇಳಲ್ಪಟ್ಟದೆಂದು ಈ ಕಾಲದ ಕವಿಗಳು ಹೇಳುತ್ತಾರೆ. ವೇದ ಶಾಸ್ತ್ರಗಳ ನಿರುಪಯುಕ್ತತೆಯನ್ನು ಕೆಲಮಟ್ಟಿಗೆ ವಿವೇಚಿಸಿದ ವಚನಗಳ ಮೂಲಭೂತ ತತ್ತ್ವಗಳಿಗೇ ವೇದಶಾಸ್ತ್ರಗಳ ತಳಹದಿಯನ್ನು ತೋರಿಸಿ ಒಂದು ರೀತಿಯ ಸಮನ್ವಯ ಮಾಡಿದಂತಹ ಕಾರ್ಯ ಈ ಶತಮಾನದಲ್ಲಿ ನಡೆದಿದೆ. ಸು. ೧೪೩೦ರಲ್ಲಿದ್ದ ಮಗ್ಗೆಯ ಮಾಯಿದೇವನ ಗ್ರಂಥಗಳಿಂದಲೂ ಈ ಮಾತಿಗೆ

CC-0. Jangamwadi Math Collection, Varanasi. An eGangotri Initiative

ನಿದರ್ಶನವನ್ನು ನಾವು ನೋಡಬಹುದಾಗಿದೆ. ಈ ಮಾಯಿದೇವನು ಪ್ರೌಢದೇವರಾಯನಿಂದ ಪೂಜೆಯನ್ನು ಕೈಕೊಂಡಂತೆ ತಿಳಿಯುತ್ತಿದೆ. ಈತನನ್ನು ವೀರಶೈವ ಕವಿಗಳು 'ಪ್ರಭು' ಎಂದು ಸ್ತುತಿಸಿದ್ದಾರೆ. ಈತನೊಬ್ಬ ಪ್ರಭಾವಶಾಲಿಯಾದ ವೀರಶೈವ ಗುರು. ಅಲ್ಲದೆ ಕೆಲವು ತಾತ್ತ್ವಿಕ ಗ್ರಂಥಗಳನ್ನು ರಚಿಸಿದ ಕವಿಯೂ ಆಗಿದ್ದಾನೆ. ವೀರಶೈವಸಿದ್ಧಾಂತ ಪ್ರತಿಪಾದನೆಯಲ್ಲಿ ಈತನ ಗ್ರಂಥಗಳು ಸಂದರ್ಭಗ್ರಂಥಗಳಾಗಿ ಉಳಿದಿವೆ. ಸು. ೧೪೭೦ರಲ್ಲಿ ಆಗಿಹೋದ ತೋಂಟದ ಸಿದ್ಧೇಶ್ವರನೆಂಬ ಕವಿಯು ವೀರಶೈವರಲ್ಲಿ ಹೆಸರು ಪಡೆದ ಗುರುವಾಗಿದ್ದನು. "ಪರಮ ಷಟ್ಸ್ಥಲವನುದ್ಧರಿಸಲೆಂದು . . . . ಭೂಮಿಗಿಳಿದು . . . ." ಬಂದವರಲ್ಲಿ ಈತನೊಬ್ಬನಾಗಿದ್ದಾನೆ. ಈತನು ವಿಜಯನಗರದ ರಾಜನಾದ ವಿರೂಪಾಕ್ಷನ ಆಳಿಕೆ (೧೪೬೭–೧೪೭೦)ಯಲ್ಲಿ ಇದ್ದಿರಬೇಕೆಂದು ತಿಳಿಯುತ್ತಿದೆ. ಮುಂದಿನ ಶತಮಾನಗಳಲ್ಲಿ ಈತನ ವಿಷಯವಾಗಿ ಕಾವ್ಯಗಳು ರಚಿತವಾಗಿವೆ. ಹೀಗೆ ಈ ಶತಮಾನದಲ್ಲಿ ಒಳ್ಳೆಯ ಪ್ರಭಾವಶಾಲಿಗಳಾದ ವೀರಶೈವ ಗುರುಗಳು ಆಗಿಹೋಗಿದ್ದಾರೆ. ಆದರೆ ಅವರು ಕೇವಲ ಗುರುಗಳಾಗಿ ಉಳಿಯದೆ ಕನ್ನಡದಲ್ಲಿ ಗ್ರಂಥರಚನೆ ಮಾಡಿ ಸಾಹಿತ್ಯಸಂಪತ್ತನ್ನು ಬೆಳಸಿದುದು ವಿಶೇಷ ಸಂಗತಿಯಾಗಿದೆ. ಆ ಗುರುಗಳಿಗೆ ಸರಿಯಾದ ಅವಕಾಶ ದೊರೆತುದು ವಿಜಯನಗರದ ಅರಸರ ಉದಾರ ಧೋರಣೆಯ ಮೂಲಕವೇ ಎಂಬ ಮಾತೂ ಸ್ಪಷ್ಟವಿದೆ. ತೋಂಟದ ಸಿದ್ಧಲಿಂಗ ಯತಿಯು "ಷಟ್ಸ್ಥಲ ಜ್ಞಾನಸಾರಾಮೃತ" ಎಂಬ ಗ್ರಂಥವನ್ನು ರಚಿಸಿದ್ದಾನೆ. ಅದರಲ್ಲಿ ಷಟ್ಸ್ಥಲ ತತ್ತ್ವದ ನಿರೂಪಣೆ ಇದೆ. ವಚನಕಾರರ ಅನುಭವ, ತತ್ತ್ವದರ್ಶಿಗಳ ತತ್ತ್ವಜ್ಞಾನದ ದೃಷ್ಟಿ, ಇವೆರಡರ ಸಮನ್ವಯ ಈ ಶತಮಾನದ ವೀರಶೈವ ಗ್ರಂಥಗಳಲ್ಲಿ ದೊರೆಯುತ್ತಿದೆ. ತೋಂಟದ ಸಿದ್ಧಲಿಂಗ ಯತಿಯ ಶಿಷ್ಯನಾಗಿದ್ದ ಗುಬ್ಬಿಯ ಮಲ್ಲಣ್ಣನು ಇದೇ ಮಾರ್ಗಕ್ಕೆ ಸೇರಿದ ಕವಿಯು. ಈತನ "ಗಣಭಾಷ್ಯರತ್ನಮಾಲೆ"ಯು ೧೦೧ ಸ್ಥಳಗಳಲ್ಲಿಯ ಆಚಾರಗಳಲ್ಲಿ ವೇದಾಗಮ ಗ್ರಂಥಗಳು, ಪುರಾತನರ ವಚನಗಳು ಇವುಗಳ ಆಧಾರದಿಂದ ಹೇಳಲ್ಪಟ್ಟಿದೆ. ಈತನು ತನ್ನ ಗ್ರಂಥದಲ್ಲಿ "ಅಸಂಖ್ಯಾತ ಮಹಾಗಣಂಗಳು ನೂಱೊಂದರಲ್ಲಿ ನಡೆದು ನುಡಿದ ವಚನಂಗಳು ಸ್ಥಲಭಿನ್ನವಾಗಿರ್ದೊಡೆ ಚಂದವಲ್ಲೆಂದು ಕಂಠಮಾಲೆಯ ಕೋದು ಹಣಿಗೆಯಱಿದು ಸೇರಿಸಿದೆನು" ಎಂಬುದಾಗಿ ಹೇಳುವ ಮಾತಿನಿಂದ ಈ ಕಾಲದ ವೀರಶೈವ ಕವಿಗಳ ಗ್ರಂಥರಚನೆಯ ವೈಶಿಷ್ಟ್ಯವನ್ನು ಅರಿಯಬಹುದಾಗಿದೆ. ಅನುಭಾವದ ವಚನಗಳು ಶಾಸ್ತ್ರವಾಗಿ, ತತ್ತ್ವವಾಗಿ ಪರಿಣಮಿಸಿದ ಯುಗವಿದು. ಸ್ವತಂತ್ರ ಸಿದ್ಧಲಿಂಗೇಶ್ವರ, ಗುಮ್ಮಳಾಪುರದ ಸಿದ್ಧಲಿಂಗೇಶ್ವರ ಇವರೂ ಇದೇ ಹಾದಿಯಲ್ಲಿ ನಡೆದವರು.

ಇನ್ನು ವೀರಶೈವ ಕಾವ್ಯಗಳಲ್ಲಿ ಎರಡನೆಯದಾದ ಷಟ್ಪದಿಯ ಪ್ರವಾಹದ

CC-0. Jangamwadi Math Collection, Varanasi. An eGangotri Initiative

ಗತಿಯನ್ನು ಅವಲೋಕಿಸಬಹುದು. ಈ ಶತಮಾನದಲ್ಲಿಯ ಒಟ್ಟು ಗ್ರಂಥಗಳ ಸಂಖ್ಯೆಯನ್ನು ನೋಡಿದಾಗ ಷಟ್ಪದಿಗಳೇ ಹೆಚ್ಚಾಗಿರುವುದು ಕಂಡುಬರುತ್ತಿದೆ. ಈ ಶತಮಾನವನ್ನು ಯಥಾರ್ಥವಾಗಿ ವೀರಶೈವರ ಪ್ರಾಬಲ್ಯದ ಹಾಗೂ ಷಟ್ಪದಿಗಳ ಯುಗವೆಂದು ಕರೆಯಬಹುದು. ತತ್ತ್ವಗ್ರಂಥಗಳೂ ಕೂಡ ಈಗ ಷಟ್ಪದಿಯಲ್ಲಿ ಬರಹತ್ತಿದವು. "ಶಿವತತ್ತ್ವ ಚಿಂತಾಮಣಿ" "ಪ್ರಭುಲಿಂಗಲೀಲೆ" ಯಂತಹ ಗ್ರಂಥಗಳು ತತ್ತ್ವವನ್ನು ಪುರಾಣವನ್ನು ಕೂಡಿಯೇ ಒಳಗೊಂಡ ಉತ್ತಮ ಷಟ್ಪದಿ ಕಾವ್ಯಗಳಾಗಿವೆ. ಲಕ್ಕಣ್ಣನು ಶಿವತತ್ತ್ವ ಚಿಂತಾಮಣಿಯನ್ನು 'ವೀರಶೈವ ಸಿದ್ಧಾಂತ ತಂತ್ರದ ಸೂತ್ರ' ವೆಂದೇ ಕರೆದಿದ್ದಾನೆ. ಪ್ರಭುಲಿಂಗಲೀಲೆಯು ಒಂದು ಉತ್ತಮ ಕಾವ್ಯವಾಗಿದ್ದರೂ ವೀರಶೈವ ತತ್ತ್ವವನ್ನು ಶಾಸ್ತ್ರೀಯವಾಗಿ ತಿಳಿಸುವ ತತ್ತ್ವ ಗ್ರಂಥವೂ ಅಹುದು. ಜ್ಞಾನಜ್ಯೋತಿಯಾದ ಅಲ್ಲಮನ ಜೀವನಚರಿತ್ರೆ, ಆತನು ಬೋಧಿಸಿದ ಆತ್ಮಜ್ಞಾನ, ವೀರಶೈವ ತತ್ತ್ವಗಳು ಇವುಗಳಿಂದ ಈ ಕಾವ್ಯಕ್ಕೆ ಕಳೆ ಯೇರಿದೆ. ಚತುರ ಕವಿಯಾದ ಚಾಮರಸನು ಅಲ್ಲಮಪ್ರಭುವಿನ ಅದ್ಭುತರಮ್ಯ ಜೀವನ ಚರಿತ್ರೆಯನ್ನು ರಮಣೀಯವಾದ ಕಾವ್ಯದಲ್ಲಿ ಹೆಣೆದಿದ್ದಾನೆ. ಇದೊಂದು ಈ ಶತ ಮಾನದ ಉದ್ಗ್ರಂಥವಾಗಿದೆ. ಸು. ೧೪೩೦ ರಲ್ಲಿದ್ದ ಗುರುಬಸವನೆಂಬ ಕವಿಯು ಪರಿವರ್ಧಿನಿ, ಭಾಮಿನಿ, ಭೋಗ, ಕುಸುಮ—ಹೀಗೆ ಬಗೆಬಗೆಯ ಷಟ್ಪದಿಗಳಲ್ಲಿ ಗ್ರಂಥ ಗಳನ್ನು ರಚಿಸಿದ್ದಾನೆ. 'ಶಿವಯೋಗಾಂಗಭೂಷಣ', 'ಸದ್ಗುರುರಹಸ್ಯ', 'ಕಲ್ಯಾಣೇಶ್ವರ', 'ಸ್ವರೂಪಾಮೃತ', 'ವೃಷಭಗೀತೆ', 'ಮನೋವಿಜಯಕಾವ್ಯ', ಇವುಗಳು ಆತನ ಕಾವ್ಯಗಳು. ಹಾಡಿನ ರೂಪದಲ್ಲಿ 'ಅವಧೂತಗೀತೆ' ಯನ್ನೂ ರಚಿಸಿದ್ದಾನೆ. ಈತನು ತನ್ನ ಸಪ್ತಕಾವ್ಯಗಳಲ್ಲಿ ಆಗಮಗಳ ತತ್ತ್ವರಹಸ್ಯ, ಪುರಾಣ, ಆದ್ಯರ ವಚನ ಇವುಗಳನ್ನೆಲ್ಲ ಸೇರಿಸಿ ವೀರಶೈವ ಸಿದ್ಧಾಂತವನ್ನು ವಿವರಿಸಿದ್ದಾನೆ. 'ಸದ್ಗುರು ರಹಸ್ಯ'ವೆಂಬ ಗ್ರಂಥದ ವಿಷಯವಾಗಿ ಈ ಕವಿಯು ಹೇಳಿರುವ,

ವೇದದಂತುಟಿದಲ್ಲ ಶಾಸ್ತ್ರದ
ಹೋದ ಹೊಲಬಲ್ಲೆಲೆ ಪುರಾಣದ
ಗಾದೆಗಳ ಜಂಜಡದ ಜಾಡ್ಯದ ಜನುಗುತನವಲ್ಲ |
ಆದರಿಸಿ ಕೇಳುವಡೆ ಪರಮ ಸ
ಮಾಧಿ ಶಾಂಭವ ಸತ್ಯ ಸಮ್ಯ
ಗ್ಬೋಧ ಲೀಲಾಲೋಲ ಶೀಲಾನ್ವಯ ರಹಸ್ಯವಿದು ||

ಎಂಬ ಉಕ್ತಿಯು ಬಸವಣ್ಣನವರ ವಚನದ ಅಭಿಪ್ರಾಯವನ್ನೂ ಚಾಮರಸನ ಕಾವ್ಯದ ಹೇಳಿಕೆಯನ್ನೂ ಒಳಗೊಂಡಂತಿದೆ. ಈ ಪದ್ಯವು ಈ ಶತಮಾನದ ವೀರಶೈವ ಕವಿಗಳ ಮನೋಭಾವವನ್ನು ಸರಿಯಾಗಿ ಸೂಚಿಸುತ್ತಿದೆ.

CC-0. Jangamwadi Math Collection, Varanasi. An eGangotri Initiative

ಈ ಶತಮಾನದ ಸಾಹಿತ್ಯವು ದೇಪರಾಜನೆಂಬ ವೀರಶೈವ ಷಟ್ಪದಿಕಾರನಿಂದ ಆರಂಭವಾದುದನ್ನು ಈ ಮೊದಲೇ ಹೇಳಿದೆ. ಹಾಗೆಯೇ ಮುಂದೆ ಬಂದರೆ ಮಲ್ಲಣ್ಣ (೧೪೧೭) ನ 'ರೇವಣಸಿದ್ಧೇಶ್ವರ ಕಾವ್ಯ', ಲಕ್ಕಣ್ಣದಂಡೇಶನ 'ಶಿವತತ್ತ್ವಚಿಂತಾ ಮಣಿ, ಚಾಮರಸನ 'ಪ್ರಭುಲಿಂಗಲೀಲೆ', ಗುರುಬಸವನ ಬೇರೆ ಬೇರೆ ಕಾವ್ಯಗಳು, ಬೊಮ್ಮರಸ (೧೪೫೦) ನ 'ಸೌಂದರಪುರಾಣ', ಕಲ್ಲರಸ (೧೪೫೦) ನ 'ಜನವಶ್ಯ', ನೀಲಕಂಠಾಚಾರ್ಯ (೧೪೮೫) ನ 'ಆರಾಧ್ಯಚರಿತ್ರೆ,' ಚತುರ್ಮುಖ ಬೊಮ್ಮರಸ (೧೫೦೧) ನ 'ರೇವಣ ಸಿದ್ಧೇಶ್ವರ ಪುರಾಣ' ಈಯೆಲ್ಲ ಷಟ್ಪದಿ ಕಾವ್ಯಗಳು ಈ ಶತಮಾನದಲ್ಲಿ ರಚಿತವಾದುದು ಕಂಡು ಬರುತ್ತಿದೆ. ಕವಿಚರಿತೆಕಾರರ ಅಭಿಪ್ರಾಯದ ಪ್ರಕಾರ ಇದೇ ಶತಮಾನಕ್ಕೆ ಸೇರಬೇಕಾದ ಇನ್ನೂ ಕೆಲವು ಕವಿಗಳಲ್ಲಿ ಸಿಂಗಿರಾಜ ನೊಬ್ಬನು ಷಟ್ಪದಿಕಾರನಾಗಿದ್ದಾನೆ. ಈತನು ಬಸವಣ್ಣನವರ ಚರಿತ್ರೆಯನ್ನು ಹೊಸ ದೊಂದು ದೃಷ್ಟಿಯಿಂದ ಬರೆದಿದ್ದಾನೆ. ಪ್ರಚಾರದಲ್ಲಿರುವ ಭೀಮಕವಿಯ ಬಸವ ಪುರಾಣದ ಸಂಗತಿಗಳಿಗೂ ಈ ಪುರಾಣದಲ್ಲಿಯ ಹೇಳಿಕೆಗಳಿಗೂ ಕೆಲವು ಮಹತ್ವದ ವ್ಯತ್ಯಾಸಗಳಿವೆ. ಸಿಂಗಿರಾಜನ ಕಾಲದ ಬಗೆಗೆ ಶ್ರೀಮಾನ್ ಹರ್ಡೆಕರ ಮಂಜಪ್ಪ ನವರು ಭಿನ್ನಾಭಿಪ್ರಾಯವನ್ನು ಸೂಚಿಸಿದ್ದಾರೆ.

ಕವಿಚರಿತೆಕಾರರು ಸು. ೧೫೦೦ ರಲ್ಲಿದ್ದರೆಂದು ಹೇಳಿರುವ ವೀರಶೈವ ಕವಿಗಳು ಕೆಳಗಿನಂತಿದ್ದಾರೆ:

ಆನಂದ ಬಸವಲಿಂಗ ಶಿವಯೋಗಿಯು 'ಮಾಚಿದೇವ ಮನೋವಿಲಾಸ'ವೆಂಬ ಗ್ರಂಥವನ್ನು ಗದ್ಯದಲ್ಲಿ ರಚಿಸಿದ್ದಾನೆ. ವಿಸುತ ಮಹಾಲಿಂಗದೇವನು 'ಗುರು ಬೋಧಾ ಮೃತ'ವನ್ನು ತ್ರಿಪದಿಯಲ್ಲಿ ಬರೆದಿದ್ದಾನೆ. ಸುರಂಗಕವಿಯು ತ್ರಿಷಷ್ಟಿ ಪುರಾತನರ ಚರಿತ್ರೆಯನ್ನು ಚಂಪೂರೂಪವಾಗಿ ಬರೆದಿದ್ದಾನೆ. ಶೈವಧರ್ಮದ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಪಡೆದಿರುವ ೬೩ ಪುರಾತನರ ಜೀವನ ಸಾಧನಗಳನ್ನು ಈ ಗ್ರಂಥವು ವಿವರಿಸುತ್ತಿದೆ. ಈ ಭಾಗದಲ್ಲಿ ಸೂಚಿತವಾದ ಇನ್ನೊಂದು ಹೆಸರೆಂದರೆ ನಿಜಗುಣ ಶಿವಯೋಗಿಗಳದು. ಈ ಹೆಸರು ವೀರಶೈವ ಸಾಹಿತ್ಯದಲ್ಲಿಯಷ್ಟೇ ಅಲ್ಲ, ಆದರೆ ಇಡಿಯ ಕನ್ನಡ ಸಾಹಿತ್ಯದಲ್ಲಿ ತೇಜಃಪುಂಜವಾದುದು. ವೇದಾಗಮ ಜ್ಞಾನ ಭಂಡಾರವನ್ನು ಕನ್ನಡಕ್ಕಿಳಿಸಿದ ಕವಿ ಈತನು. ಕನ್ನಡ ಸಾಹಿತ್ಯಕ್ಕೆ ಅಧ್ಯಾತ್ಮದ ಸಂಪತ್ತನ್ನು ದಾನಕೊಟ್ಟ ಕವಿಋಷಿ ಈತನು. ಪ್ರಮಾಣ ಗ್ರಂಥಗಳ ಆಧಾರ, ವೀರಶೈವ ತತ್ತ್ವಗಳ ಸಂದರ್ಭ, ತನ್ನ ಅನುಭವದ ಅಮೃತ, ಇವುಗಳ ಮುಪ್ಪುರಿಯಿಂದ ಹೊರಹೊಮ್ಮಿದ ಆಧ್ಯಾತ್ಮಿಕ, ನೈತಿಕ ಧಾರ್ಮಿಕ ಸಾಹಿತ್ಯವನ್ನು ಈತನು ರಚಿಸಿದ್ದಾನೆ. ಧಾರ್ಮಿಕ ವಿಶ್ವಕೋಶವನ್ನು ಕನ್ನಡದಲ್ಲಿ ರಚಿಸಿದ ಶ್ರೇಯಸ್ಸು ಈ ಕವಿಗಿದೆ.

CC-0. Jangamwadi Math Collection, Varanasi. An eGangotri Initiative

ಈ ಕವಿಯ ಕಾಲದ ಬಗೆಗೆ ಭಿನ್ನಾಭಿಪ್ರಾಯಗಳಿದ್ದರೂ ಈತನ ಘನತೆಯ ಬಗೆಗೆ ಯಾವ ಭಿನ್ನಾಭಿಪ್ರಾಯಗಳೂ ಇಲ್ಲ.

ಈ ಶತಮಾನವು ಮುಖ್ಯವಾಗಿ ವೀರಶೈವ ಯುಗವಾದರೂ ಕೂಡ ಉದಾರರೂ ಕವಿಕಾವ್ಯ ಪಕ್ಷಪಾತಿಗಳೂ ಆದ ವಿಜಯನಗರದ ರಾಜರ ಕಾಲದಲ್ಲಿ ಇತರ ಮತೀಯ ಕವಿಗಳೂ ಆಗಿಹೋಗಿದ್ದಾರೆ. ವಿಜಯನಗರ ರಾಜ್ಯದ ಅಧಿಕಾರದಲ್ಲಿ ಜೈನರೂ ಇದ್ದರು. ಜೈನ ಕವಿಗಳು ಮೊದಲಿನಿಂದ ಚಂಪೂಮಾರ್ಗಾನುಯಾಯಿಗಳಾಗಿದ್ದಾರೆ. ೧೨, ೧೩ನೆಯ ಶತಮಾನಗಳಲ್ಲಿ ನೂತನ ಮಾರ್ಗ ತಲೆದೋರಿದಾಗ ಅದರ ಪ್ರಭಾವ ಜೈನಕವಿಗಳ ಮೇಲೆ ಆಗದೆ ಹೋಗಲಿಲ್ಲ. ಆದರೆ ನೂತನ ಮಾರ್ಗದ ಅಂಗೀಕರಣವು ಮಾತ್ರ ಒಮ್ಮೆಲೇ ನಡೆಯಲಿಲ್ಲ. ಈ ಶತಮಾನದಲ್ಲಿ ಮಾತ್ರ ಈ ಹೊಸ ಮಾರ್ಗದ ಅಂಗೀಕರಣ ಸ್ಪಷ್ಟವಾಗಿ ಕಂಡುಬರುತ್ತಿದೆ. ನೂತನ ಮಾರ್ಗಾವಲಂಬಿಗಳಾದ ಜೈನ ಕವಿಗಳು ಜೈನ ಚರಿತ್ರೆಗಳನ್ನು ಷಟ್ಪದಿಯಲ್ಲಿ ಬರೆಯಹತ್ತಿದರು. ಚಂಪೂರೂಪವು ಪ್ರಾಚೀನವಾಗಿದ್ದಂತೆ ಪವಿತ್ರವೂ ಎಂಬ ಭಾವನೆ ಬೆಳೆದು ಬಂದಿತ್ತು. ಈಗ ಷಟ್ಪದಿಯು ಜೈನ ಮಹಾತ್ಮರ ಚರಿತ್ರೆಗಳನ್ನು ಬರೆಯಲು ಅರ್ಹವೆಂದು ಗಣಿಸಲ್ಪಟ್ಟಿತು. ಅದು ನವೀನವಾಗಿದ್ದರೂ ಅಪವಿತ್ರವಲ್ಲವೆಂದು ಈಗ ನಿರ್ಧಾರವಾದಂತಾಯಿತು. ಈಗ ಜಿನಭಕ್ತರ ಚರಿತ್ರೆಗಳು ಷಟ್ಪದಿಯಲ್ಲಿ ಬರೆಯಲ್ಪಡಹತ್ತಿದವು. ಅಂತಹವುಗಳಲ್ಲಿ ಜೀವಂಧರ ಚರಿತ್ರೆಗೆ ಹೆಚ್ಚಿನ ಮಹತ್ತ್ವವಿದೆ. ಏಕೆಂದರೆ ಇದೊಂದೇ ಶತಮಾನದಲ್ಲಿ ಜೀವಂಧರ ಚರಿತ್ರೆಯು ಮೂವರು ಕವಿಗಳಿಂದ ಬರೆಯಲ್ಪಟ್ಟಿದೆ. ಮೊದಲನೆಯದು ಭಾಸ್ಕರ ಕವಿ (೧೪೨೪)ಯ ಜೀವಂಧರ ಚರಿತ್ರೆ. ಭಾಸ್ಕರನು "ವಾದಿ ಮದಗಜ ಸಿಂಹಸೂರಿಗಳಾದಿಯಲಿ . . . ನವಸಂಸ್ಕೃತದೆ ಸಂಪಾದಿಸಿದ ಭೂವಿನುತ ಜೀವಂಧರನ ಚರಿತವನು . . . . ಭಾಮಿನಿಯ ಷಟ್ಪದದಿಂ ಕನ್ನಡದೊಳ್" ರಚಿಸಿದ್ದಾನೆ. ಇದರಲ್ಲಿ ಧರ್ಮಪ್ರದನಾದ ಜೀವಂಧರನೆಂಬ ಜೈನ ಮಹಾತ್ಮನ ಚರಿತೆಯಿದೆ. ಈ ಕವಿಯ ಭಾಮಿನಿ ಷಟ್ಪದಿಯು ಸುಲಭವೂ ಲಲಿತವೂ ಆಗಿದೆ. ಅಲ್ಲಲ್ಲಿ ಪೂರ್ವಕವಿಗಳ ಅನೇಕ ಉಕ್ತಿಗಳನ್ನು ತನ್ನ ಕಾವ್ಯದಲ್ಲಿ ಅಳವಡಿಸಿಕೊಂಡಿದ್ದಾನೆ. ವಿಶೇಷವಾಗಿ ಷಟ್ಪದಿಯ ಸಂಪ್ರದಾಯಸ್ಥಾಪಕನಾದ ಕವಿ ರಾಘವಾಂಕನ ಉಕ್ತಿಗಳನ್ನು ಈತನು ತನ್ನ ಕಾವ್ಯದಲ್ಲಿ ಉಪಯೋಗಿಸಿದ್ದನ್ನು ನಾವು ಕಾಣಬಹುದಾಗಿದೆ. ಭಾಸ್ಕರ ಕವಿಯು ಷಟ್ಪದಿಯ ಬಗೆಗೆ ತೋರಿದ ಪ್ರೇಮವು ರಾಘವಾಂಕನಿಗಾಗಿ ತೋರಿದ ಗೌರವವಾಗಿ ಪರಿಣಮಿಸಿದೆಯೊ ಏನೋ ಎನ್ನುವಂತಿದೆ. ಈತನ ಷಟ್ಪದಿಯು ನಯವನ್ನು ಮೆಲ್ಪನ್ನು ಪಡೆದು ಮುಂಬರುವ ಲಕ್ಷ್ಮೀಶನ ಝೇಂಕಾರಕ್ಕೆ ಹಾದಿಯನ್ನು ಸಜ್ಜುಗೊಳಿಸುವಂತಿದೆ. ಈತನು ತಾನು ಬಸವಣಾಂಕನ ಸುತನೆಂದು



CC-0. Jangamwadi Math Collection, Varanasi. An eGangotri Initiative

ಹೇಳಿಕೊಂಡಿದ್ದಾನೆ. ಈ ಶತಮಾನದ ಮೂವರು ಕವಿಗಳಿಂದ ರಚಿತವಾದ ಜೀವಂಧರ ಚರಿತೆಯು ಜನ್ನನ ಯಶೋಧರ ಚರಿತೆಯ ರೀತಿಯನ್ನು ಹೋಲುತ್ತಿದೆ. ತೆರಕಣಾಂಬಿ ಬೊಮ್ಮರಸ (೧೪೫೮)ನು ಈ ಚರಿತ್ರೆಯನ್ನು ಸಾಂಗತ್ಯದಲ್ಲಿ ಬರೆಯುವಾಗ "ಸ್ಥಿರವಲ್ಲ ಸಂಸಾರಸುಖವೆಂದು ಜಿನದೀಕ್ಷೆವೆರಸಿ ಸಕಲಕರ್ಮಗಳ ಭರದಿಂದ ಹೇಸಿ ಮುಕ್ತಿಯನೆಯ್ದಿದ ಜೀವಂಧರನ ಕೃತಿ" ಎಂಬುದಾಗಿ ಹೇಳುತ್ತಾನೆ. ನೀತಿ ಬೋಧೆಯೇ ಮುಖ್ಯ ಉದ್ದೇಶವಾಗಿದ್ದ ಗ್ರಂಥವಿದು. ಮೂರನೆಯದಾಗಿ ಕೋಟೀಶ್ವರ ನೆಂಬ ಕವಿ (೧೫೦೦)ಯು ಜೀವಂಧರ ಚರಿತೆಯನ್ನು ಷಟ್ಪದಿಯಲ್ಲಿ ಬರೆದುದಾಗಿ ತಿಳಿಯುತ್ತಿದೆ. ಈ ಶತಮಾನದ ಜೈನ ಕವಿಗಳು ಷಟ್ಪದಿ ಸಾಂಗತ್ಯಗಳಲ್ಲಿಯೇ ತಮ್ಮ ಕಾವ್ಯಗಳನ್ನು ರಚಿಸಿದುದು ಒಂದು ವಿಶೇಷ ಸಂಗತಿ. ಅವರ ಗ್ರಂಥಗಳು ಜೀವನ ಚರಿತೆಗಳು, ತತ್ತ್ವೋಪದೇಶಗಳು, ವ್ಯವಹಾರೋಪಯುಕ್ತ ಕೃತಿಗಳು—ಹೀಗೆ ಮೂರು ವಿಧವಾಗಿವೆ. ಕಲ್ಯಾಣ ಕೀರ್ತಿ (೧೪೪೮)ಯು ಜೈನ ದೃಷ್ಟಿಯ ಕಾಮನ ಕಥೆಯನ್ನು ಸಾಂಗತ್ಯದಲ್ಲಿ ಬರೆದಿದ್ದಾನೆ. ಹಾಗೂ ಆತನು ಜ್ಞಾನಚಂದ್ರನೆಂಬ ಅರಸನ ಕಥೆಯನ್ನು ಎರಡು ಮೂರು ವಿಧದ ಷಟ್ಪದಿಗಳಲ್ಲಿ ಬರೆದಿರುವುದಾಗಿ ತಿಳಿಯುತ್ತಿದೆ. ಅನುಪ್ರೇಕ್ಷೆ ಇತ್ಯಾದಿ ಕೇವಲ ಧಾರ್ಮಿಕ ಗ್ರಂಥಗಳನ್ನೂ ಬರೆದಿದ್ದಾನೆ. ವಿಜಯಣ್ಣನೆಂಬ ಕವಿ (೧೪೪೮)ಯು ದ್ವಾದಶಾನುಪ್ರೇಕ್ಷೆಗಳನ್ನು ಕುರಿತು ಗ್ರಂಥ ಬರೆದಿದ್ದಾನೆ. ಈ ವಿಜಯಣ್ಣನು ಬರ್ವ ಪ್ರಭುವಿನ ಆಜ್ಞೆಯಂತೆ ತನ್ನ ಗ್ರಂಥಗಳನ್ನು ರಚಿಸಿದಂತಿದೆ. ಜೈನ ಚರಿತೆಗಳಲ್ಲಿ ಜೀವಂಧರ ಚರಿತೆಯಲ್ಲದೆ ಶ್ರೇಣಿಕ, ಸನತ್ಕುಮಾರ ಇವರ ಚರಿತೆಗಳನ್ನು ಜಿನದೇವಣ್ಣ, ತೆರಕಣಾಂಬಿ ಬೊಮ್ಮರಸ ಇವರುಗಳು ಬರೆದಿದ್ದಾರೆ. ಸು. ೧೫೦೦ರಲ್ಲಿದ್ದಿರಬಹುದಾದ ಬಾಚರಸ, ಶುಭಚಂದ್ರರೆಂಬವರು ಅಶ್ವವೈದ್ಯ, ಜ್ಯೋತಿಷ ಇವುಗಳ ಮೇಲೆ ಗ್ರಂಥ ರಚಿಸಿದ್ದಾರೆ. ಜಿನಭಕ್ತರ ಉದ್ಬೋಧಕ ಚರಿತ್ರೆ, ಜೈನಮತತತ್ತ್ವ, ಇವುಗಳನ್ನು ರಚಿಸಿ ಜೈನಕವಿಗಳು ಈ ಶತಮಾನದಲ್ಲಿಯೂ ತಮ್ಮ ಹೆಸರನ್ನು ಉಳಿಸಿಕೊಂಡಿದ್ದಾರೆ. ಅವರ ಚಂಪೂಪಕ್ಷಪಾತವು ಕಡಮೆಯಾಗಲಿಕ್ಕೆ ಕನ್ನಡ ಸಾಹಿತ್ಯದಲ್ಲಿ ಈ ಮೊದಲೇ ಬಂದ ನವೀನ ಮಾರ್ಗದ ವರ್ಚಸ್ಸೇ ಕಾರಣವಾಗಿದೆ.

ಕೆಲವು ಉದ್ದಾಮ ಬ್ರಾಹ್ಮಣ ಕವಿಗಳನ್ನು ಕವಿಚರಿತೆಕಾರರು ಈ ಶತಮಾನದಲ್ಲಿ ಸೇರಿಸಿದ್ದಾರೆ. ಕನ್ನಡ ಸಾಹಿತ್ಯದಲ್ಲಿ ಚಿರಂತನಕೀರ್ತಿಯನ್ನು ಗಳಿಸಿದ ಗದುಗಿನ ನಾರಣಪ್ಪನು ಸು. ೧೪೩೦ರಲ್ಲಿದ್ದನೆಂದು ಕವಿಚರಿತೆಕಾರರು ನಿರ್ಧರಿಸಿದ್ದಾರೆ. ವೀರಶೈವ ಪುರಾಣಗಳು ಹಾಗೂ ಕವಿಚರಿತೆಯ ಅಭಿಪ್ರಾಯದ ಮೇರೆಗೆ ಈತನು ಪ್ರೌಢ ದೇವರಾಯ (೧೪೧೯–೧೪೪೬)ನ ಕಾಲದಲ್ಲಿದ್ದಂತೆ ತಿಳಿಯುತ್ತಿದೆ. ಆದರೆ

CC-0. Jangamwadi Math Collection, Varanasi. An eGangotri Initiative

ಬೇರೆ ಕೆಲವು ಸಂಶೋಧಕರು ಈತನು ಕೃಷ್ಣದೇವರಾಯ (೧೫೦೯–೧೫೨೯)ನ ಆಳಿಕೆಯಲ್ಲಿದ್ದನೆಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ಕವಿಯು ಕವಿಕಾವ್ಯಪಕ್ಷಪಾತಿಗಳಾದ ವಿಜಯನಗರದ ಅರಸರ ಸ್ಫೂರ್ತಿ ದೊರೆಯುವ ಕಾಲದಲ್ಲಿದ್ದನೆಂಬುದು ಮಾತ್ರ ನಿಜ. ಈ ಕವಿಯು ಈ ಶತಮಾನದಲ್ಲಿ ಮಾತ್ರವಲ್ಲ, ಇಡಿಯ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೇ ಉದ್ದಾಮ ಕವಿಯಾಗಿದ್ದಾನೆ. ಕನ್ನಡ ಕಾವ್ಯಗಳು ಜನಪದ ಭಾಷೆಯನ್ನು ಬಳಸಿಕೊಂಡು ಎಷ್ಟೊಂದು ಪರಿಣಾಮಕಾರಕವಾಗಬಲ್ಲವೆಂಬುದಕ್ಕೆ ಈತನ ಕಾವ್ಯವು ಉತ್ತಮ ಉದಾಹರಣೆಯಾಗಿದೆ. ಮಾನವ ಸ್ವಭಾವದ ಸೂಕ್ಷ್ಮ ಪರಿಚಯ, ಭಾವನೆಗಳ ಹೋರಾಟ, ವಿಶಾಲಪ್ರಪಂಚದ ಅನುಭವ, ವಿಪುಲವಾದ ಪ್ರತಿಭೆ, ದೇವಶ್ರದ್ಧೆ ಇವುಗಳ ಮೂಲಕ ಈ ಕಾವ್ಯವು ಕನ್ನಡ ಸಾಹಿತ್ಯದಲ್ಲಿ ಹಿರಿಯ ಸ್ಥಾನ ಪಡೆಯುತ್ತಿದೆ. ಇಂತಹ ಉದ್ದಾಮ ಕವಿಗಳಿಂದ ಈ ಯುಗವು ಸಾಹಿತ್ಯಚರಿತ್ರೆಯಲ್ಲಿ ಉಜ್ವಲವಾಗಿ ಮೆರೆಯುತ್ತಿದೆ. ಈ ಕವಿಯು ಸಂಸ್ಕೃತ ಮಹಾಭಾರತವನ್ನು ಕನ್ನಡಕ್ಕೆ ಇಳಿಸಿ ಉದಾತ್ತ ಸಂದೇಶವನ್ನು ಬೀರಿದ್ದಾನೆ. ಆತನ ಬಗೆಗಿರುವ ದಂತಕಥೆಗಳ ಸಂಶೋಧಕ ಸತ್ಯವೇನೇ ಇದ್ದರೂ ಕೂಡ ಅರಸರ ಪ್ರೋತ್ಸಾಹ, ದೇವಶ್ರದ್ಧೆ ಇವು ಈತನ ಕಾವ್ಯರಚನೆಗೆ ಸ್ಫೂರ್ತಿಯನ್ನಿತ್ತವೆಂದು ಈ ಕಥೆಗಳು ಸೂಚಿಸುತ್ತವೆ. ಈ ಕಾವ್ಯದ ಮೂಲಕ ನಾರಣಪ್ಪನು ದೇಶಭಾಷೆಗೆ ಸಲ್ಲಿಸಿದ ಈ ಕಾಣಿಕೆಯು ಅಮೂಲ್ಯವಾಗಿದೆ. ಷಟ್ಪದಿಯುಗದ ವೈಶಿಷ್ಟ್ಯವನ್ನು ಸೂಚಿಸುವಂತೆ ಈ ಕಾವ್ಯವು ಸುಂದರವಾದ ಷಟ್ಪದಿಯಲ್ಲಿದೆ. ಈ ಶತಮಾನದ ಇನ್ನುಳಿದ ಬ್ರಾಹ್ಮಣ ಕವಿಗಳ ವಿಷಯವನ್ನು ಹೀಗೆ ಸಂಗ್ರಹಿಸಬಹುದು: ಸು. ೧೪೫೦ರಲ್ಲಿ ಪರಂಜ್ಯೋತಿಯತಿಯೆಂಬವನು 'ಅನುಭವ ಮುಕುರ' ಎಂಬ ಗ್ರಂಥವನ್ನು ತ್ರಿಪದಿಯಲ್ಲಿ ರಚಿಸಿದನು. ಇದು ವೇದಾಂತ ಗ್ರಂಥವಾಗಿದೆ. ಇದೇ ಸುಮಾರಿಗೆ ನಾರಾಯಣ ಕವಿಯು ಭಾಗವತ ಸಂಹಿತಾರ್ಥವನ್ನು ಗದ್ಯ ರೂಪವಾಗಿ ರಚಿಸಿದಂತೆ ತಿಳಿಯುತ್ತಿದೆ. ಇನ್ನು ಸು. ೧೫೦೦ ರಲ್ಲಿದ್ದವರೆಂದು ಕವಿಚರಿತೆಕಾರರು ಕೆಲವು ಕವಿಗಳನ್ನು ಸೂಚಿಸಿದ್ದಾರೆ. ಅವರ ಕಾಲ ನಿರ್ದುಷ್ಟವಾಗಿ ನಿರ್ಧಾರವಾದಂತಿಲ್ಲ. ಅವರಲ್ಲಿ ಕುಮಾರವಾಲ್ಮೀಕಿಯ ಹೆಸರು ಮಹತ್ವದ್ದಾಗಿದೆ. ಕುಮಾರವ್ಯಾಸನು ಮಹಾಭಾರತವನ್ನು ಕನ್ನಡಕ್ಕೆ ಇಳಿಸಿದರೆ ಕುಮಾರವಾಲ್ಮೀಕಿಯು ರಾಮಾಯಣ ಕಾವ್ಯವನ್ನು ಕನ್ನಡಕ್ಕೆ ಇಳಿಸಿದನು. ಈ ಕಾವ್ಯವಾದರೂ ಸುಲಭವಾದ ಕನ್ನಡ ಷಟ್ಪದಿಯಲ್ಲಿದೆ. ರಾಮಾಯಣವು ಭರತಖಂಡದ ಉದಾತ್ತ ಕಾವ್ಯ. ಪ್ರಾಚೀನಭಾರತ ಸಂಸ್ಕೃತಿಯ ಪ್ರತಿಬಿಂಬ; ಮಾನವ್ಯದ ಆದರ್ಶ. ಅದನ್ನು ಕನ್ನಡಕ್ಕೆ ಇಳಿಸುವುದರ ಮೂಲಕ ಕುಮಾರವಾಲ್ಮೀಕಿಯು ಕನ್ನಡಕ್ಕೆ ಹಿರಿದಾದ

CC-0. Jangamwadi Math Collection, Varanasi. An eGangotri Initiative

ಉಪಕಾರಮಾಡಿದ್ದಾನೆ. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಈ ಕವಿಗೆ ಸಲ್ಲಬೇಕಾದ ಕಾಣಿಕೆ ಇನ್ನೂ ಸಲ್ಲಿಸಲ್ಪಟ್ಟಿಲ್ಲ. ಕನ್ನಡ ಜನಪದವನ್ನು ಸಂಸ್ಕರಿಸಲು ಈ ಕವಿಯು ಬಹಳ ಸಹಾಯ ಮಾಡಿದ್ದಾನೆ. ಈ ಎರಡು ಘನವಾದ ಕಾವ್ಯಗಳನ್ನಲ್ಲದೆ ಈ ಶತಮಾನ ದಲ್ಲಿ ಬ್ರಾಹ್ಮಣ ಕವಿಗಳು ಅಲಂಕಾರ ಗ್ರಂಥಗಳನ್ನೂ ಜೀವನೋಪಯೋಗಿ ಗ್ರಂಥಗ ಳನ್ನೂ ಒದಗಿಸಿ ಕೊಟ್ಟಿದ್ದಾರೆ. ಕವಿಜಿಹ್ವಾಬಂಧನವೆಂಬ ಛಂದಸ್ಸು, ಮಾಧವಾ ಲಂಕಾರ ಇವೆರಡೂ ಈ ಕಾಲದ ಲಕ್ಷಣಗ್ರಂಥಗಳು. ಮೊದಲನೆಯದನ್ನು ಈಶ್ವರ ಕವಿಯೂ ಎರಡನೆಯದನ್ನು ಮಾಧವನೂ ರಚಿಸಿದ್ದಾರೆ. ಮಾಧವಾಲಂಕಾರವು ದಂಡಿಯ ಕಾವ್ಯಾದರ್ಶದ ಭಾಷಾಂತರವಾಗಿದೆ. ಈ ಶತಮಾನದಲ್ಲಿ ಬ್ರಾಹ್ಮಣ ಕವಿ ಗಳು ಮಹತ್ತ್ವದ ಸಂಸ್ಕೃತ ಗ್ರಂಥಗಳನ್ನು ಕನ್ನಡಕ್ಕೆ ಇಳಿಸಿದ್ದು ಕಂಡುಬರುತ್ತಿದೆ. ಸು. ೧೫೦೦ ರಲ್ಲಿದ್ದ ಲಕ್ಷ್ಮಣಾಂಕ, ಜಾಕರಾಜ ಎಂಬಿಬ್ಬರು ಕವಿಗಳು ಅನುಕ್ರಮ ವಾಗಿ ಶಕುನಸಾರ, ಶಕುನಪ್ರಪಂಚ ಈ ಪುಸ್ತಕಗಳನ್ನು ರಚಿಸಿ ವ್ಯವಹಾರೋಪಯುಕ್ತ ಗ್ರಂಥಗಳನ್ನು ಒದಗಿಸಿದರು. ಈ ಕಾಲದ ಇನ್ನೊಂದು ಮಹತ್ತ್ವದ ಹೆಸರೆಂದರೆ ಶ್ರೀಪಾದರಾಯರದು. ಅವರು ಸು. ೧೫೦೦ ರಲ್ಲಿದ್ದಿರಬಹುದೆಂದು ಕವಿಚರಿತೆಕಾರರು ಊಹಿಸುತ್ತಾರೆ. ಹದಿನಾರನೆಯ ಶತಮಾನದಲ್ಲಿ ಭರದಿಂದ ಬೆಳೆಯಹತ್ತಿದ ದಾಸಕೂಟ ಸಾಹಿತ್ಯದ ಆರಂಭವು ಈತನ ಕೀರ್ತನೆಗಳಲ್ಲಿ ಇದೆ. ಹದಿನಾರನೆಯ ಶತಮಾನದಲ್ಲಿ ಹೆಸರು ಹೊಂದಿದ ಹಾಗೂ ದಾಸಕೂಟದ ಆಧಾರಸ್ತಂಭರಾದ ವ್ಯಾಸರಾಯರಿಗೆ ಈತನು ವಿದ್ಯಾಗುರುವಾಗಿದ್ದಂತೆ ತಿಳಿಯುತ್ತಿದೆ. ಈತನು ವಿಜಯನಗರ ಸಾಳುವ ವಂಶದ ನರಸಿಂಹರಾಜನ ಕಾಲದಲ್ಲಿದ್ದು ಆತನ ವಿಶ್ವಾಸವನ್ನು ಪಡೆದಂತಿದೆ. ಈ ಶತಮಾನದ ಆರಂಭದಲ್ಲಿ ಸಂಗಮವಂಶದ ಅರಸರ ಆಶ್ರಯದಲ್ಲಿ ಶೈವ ಕವಿಗಳು ಸಾಹಿತ್ಯ ನಿರ್ಮಾಣಮಾಡಿದುದನ್ನು ನೋಡಿದೆವು. ಈ ಕೊನೆಯ ಭಾಗದಲ್ಲಿ ಸಾಳುವ ಅರಸುಮನೆತನದ ಆಶ್ರಯದಲ್ಲಿ ಶ್ರೀಪಾದರಾಯನಂತಹ ಕವಿಗಳಿಗೆ ಆಶ್ರಯ ದೊರೆತಿದೆ. ಸುಲಭವಾದ ಕನ್ನಡದಲ್ಲಿ, ಕನ್ನಡದ ದೇಸಿಯಲ್ಲಿ, ಸುಂದರವಾದ ಹಾಡುಗಳನ್ನು ರಚಿಸಿ, ನೀತಿಯ ಸಂದೇಶವನ್ನು ಬೀರಿ, ಜನಮನವನ್ನು ಸಂಸ್ಕಾರ ಗೊಳಿಸುವ ಕಾರ್ಯವನ್ನು ದಾಸರು ಮಾಡಿದ್ದಾರೆ. ಈ ಬಗೆಯ ಸಾಹಿತ್ಯದ ಆರಂಭ ಈ ಶತಮಾನದ ಕೊನೆಯಲ್ಲಿ ಆದುದು ಒಂದು ವಿಶೇಷ ಸಂಗತಿಯಾಗಿದೆ. ಈ ಶತಮಾನವನ್ನು ನಾನು ವೀರಶೈವ ಸಾಹಿತ್ಯದ ಪುನರುಜ್ಜೀವನದ ಕಾಲವೆಂದೂ ಷಟ್ಪದಿಯ ಯುಗವೆಂದೂ ಕರೆದಿರುವೆನಾದರೂ ಇನ್ನಿತರ ಮತದ ಕವಿಗಳೂ ಬೇರೆ ರೀತಿಯ ರೂಪಗಳೂ ವಿಜಯನಗರದ ಅರಸರ ವಿಪುಲ ಪೋಷಣೆಯ ಕಾಲದಲ್ಲಿ ಬೆಳೆದಿರುವುದುಂಟು. ಅರಸರಿಂದ ಪ್ರತ್ಯಕ್ಷ ಪೋಷಣೆಯನ್ನು ಪಡೆದ ಕವಿಗಳು

CC-0. Jangamwadi Math Collection, Varanasi. An eGangotri Initiative

ಕೆಲವರಾದರೆ ಕವಿಕಾವ್ಯಪಕ್ಷಪಾತಿಗಳ ಉದಾರ ಧೋರಣೆ, ಸುವ್ಯವಸ್ಥಿತ ಆಡಳತೆ, ಸುಸಂತುಷ್ಟ ವಾತಾವರಣ ಇವುಗಳ ಉಪಯೋಗ ಮಾಡಿಕೊಂಡವರು ಅನೇಕರು. ಹೀಗಾಗಿ ಈ ಶತಮಾನವು ಸಾಹಿತ್ಯಕ್ಷೇತ್ರದಲ್ಲಿಯೂ ವಿಜಯನಗರದ ಬಾವುಟವನ್ನು ಏರಿಸಿದೆ.

ವೀರಶೈವ ಗುರುಗಳ ನವ ಸಂಘಟನೆಯ ಫಲವಾಗಿ ವೀರಶೈವ ಸಿದ್ಧಾಂತವು ರೂಪಗೊಂಡ ಕಾಲವಿದು. ಅಲ್ಲದೆ ಟೀಕಾಪರ ಗ್ರಂಥಗಳು, ಭಕ್ತಿರಸಪ್ರಧಾನ ಭಾವಗೀತಗಳು, ಶೈವ ಜೈನ ಮಹಾತ್ಮರ ಕಥೆಗಳು, ಕೀರ್ತನೆಗಳು, ಕೈವಲ್ಯಗಳು, ವಚನ, ಗದ್ಯ, ಹಾಡು, ಲಕ್ಷಣಗ್ರಂಥಗಳು ಇತ್ಯಾದಿ ಅನೇಕ ವಿಧದ ಸಾಹಿತ್ಯ ರೂಪಗಳು ನಿರ್ಮಾಣವಾದ ಕಾಲವಿದು. ಕನ್ನಡ ಸಾಹಿತ್ಯ ಚರಿತ್ರೆಯ ವಸಂತ ಕಾಲವೆಂದು ಕರೆಯಿಸಿಕೊಳ್ಳಲು ಅರ್ಹವಾದ ಶತಮಾನವಿದು. ಸಂಸ್ಕೃತ ಗ್ರಂಥಗಳಿಗೆ ಭಾಷ್ಯ ಬರೆಯುವ ಕಾಲ ಹಿಂದಾಗಿ ಕನ್ನಡದ ವಚನಗಳಿಗೆ ಭಾಷ್ಯ ಬರೆಯುವ ಪ್ರಸಂಗ ಬಂದುದು ಈ ಶತಮಾನದಲ್ಲಿಯೇ. ಚಾಮರಸ, ಕುಮಾರವ್ಯಾಸರಂತಹ ಷಟ್ಪದಿಯ ಉದ್ದಾಮ ಕವಿಗಳು ಈ ಶತಮಾನದವರೆಂಬುದು ಮಹತ್ವದ ವಿಷಯವೇ. ವೈದಿಕದೃಷ್ಟಿಯ ರಾಮಾಯಣ ಮಹಾಭಾರತಗಳು ಕನ್ನಡಕ್ಕೆ ದೊರೆತುದು ಈಗಲೇ. ಜನಜೀವನದ ನಾಡಿಯನ್ನು ಅರಿತು, ಜನಜೀವನದ ಸಂಸ್ಕಾರಕ್ಕಾಗಿ ಸಾಹಿತ್ಯ ನಿರ್ಮಾಣಮಾಡಬೇಕೆಂಬ ತತ್ತ್ವದ ಅರಿವು ಕೆಲಮಟ್ಟಿಗಾದರೂ ಈ ಶತಮಾನದಲ್ಲಿ ಬಂದಂತಿದೆ. ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಚಂಪುವಿನ ಬಾವುಟ ಉನ್ನತವಾದುದಾದರೂ ಬಹಳ ಎತ್ತರದಲ್ಲಿದ್ದುದರಿಂದ ಬಹು ಜನರನ್ನು ಆಕರ್ಷಿಸಲಿಲ್ಲ. ಆದರೆ ಷಟ್ಪದಿಯದು ಮಾತ್ರ ಬಹು ಜನ ಕನ್ನಡಿಗರನ್ನು ತನ್ನೆಡೆಗೆ ಆಕರ್ಷಿಸಿದ ಬಾವುಟ. ಷಟ್ಪದಿಯ ಬಾವುಟವು ಹೆಚ್ಚು ಹೆಮ್ಮೆಯಿಂದ ಹಾರಲು ಮೊದಲು ಮಾಡಿದುದು ಈ ಶತಮಾನದಿಂದಲೇ ಎಂದು ಹೇಳಬಹುದು.

ಕವಿಚರಿತೆಕಾರರು ಈ ಶತಮಾನದ ಕೊನೆಯ ಭಾಗದಲ್ಲಿ ಇದ್ದಿರಬಹುದೆಂದು ಸೂಚಿಸಿರುವ ಕೆಲವು ಅನಾಮಕರಾದ—ಆದರೆ ಶ್ರೇಷ್ಠರಾಗಿರಬಹುದಾದ—ಕವಿಗಳ ಕೆಲವು ಉಕ್ತಿಗಳನ್ನು ಕವಿಚರಿತೆಯಲ್ಲಿ ಉದಾಹರಿಸಿದ್ದಾರೆ. ಆ ಉಕ್ತಿಗಳು ನೀತಿ ಬೋಧಕವಾಗಿಯೂ ರಮ್ಯವಾಗಿಯೂ ಇವೆ. ಅಂತಹ ಉಕ್ತಿಗಳ ಕೊನೆಯ ಅಂಕಿತವನ್ನು ಅವರು ಸಂಗ್ರಹಿಸಿ ಕೊಟ್ಟಿದ್ದಾರೆ. ಅಂತಹ ಅಂಕಿತಗಳಲ್ಲಿ 'ಕನ್ನಡ ಜಾಣ' ಎಂಬುದೊಂದಾಗಿದೆ. ಆ ಅಂಕಿತದ ಪದ್ಯಗಳಲ್ಲಿ ಒಂದು ಕೆಳಗಿನಂತಿದೆ.—

> **ಪೊಸಕಾಲದ ನವಿಲಾಟಂ**
> **ಸಿಸುಗಳ ಮುದ್ದಾಟಂ ಹರಿಣಹರಿಣಿಯ ನೋಟಂ**

CC-0. Jangamwadi Math Collection, Varanasi. An eGangotri Initiative

ರಸಕವಿಗಳ ಕರ್ಣಾಟಂ
ಶಶಿಮುಖಿಯೊಡಗೂಟದಂತೆ ಕನ್ನಡಜಾಣಾ ||

ಈ ಪದ್ಯವು ಮುದ್ದಾಗಿದೆ. ಇಂತಹ ಮುದ್ದು ಪದ್ಯವು ಕನ್ನಡ ಸಾಹಿತ್ಯದ ವಸಂತಕಾಲದಂತಿರುವ ಈ ಶತಮಾನಕ್ಕೆ ಸರಿಯಾಗಿಯೇ ಅನ್ವಯಿಸುವಂತಿದೆ.

ಎಸ್. ಎಸ್. ಮಾಳವಾಡ.

CC-0. Jangamwadi Math Collection, Varanasi. An eGangotri Initiative

# ನಮ್ಮ ಭೂಮಿ

## ಪೀಠಿಕೆ

ಭೂಮಿಯು ಕಿತ್ತಲೆ ಹಣ್ಣಿನಂತೆ ಗುಂಡಾಗಿರುವುದೆಂದೂ, ಬುಗುರಿಯಂತೆ ತನ್ನ ಅಕ್ಷದ ಮೇಲೆ ತಿರುಗುವುದೇ ಅಲ್ಲದೆ ಸೂರ್ಯನ ಸುತ್ತಲೂ ವೃತ್ತಾಕಾರವಾದ ಪಥದಲ್ಲಿ ವರ್ಷಕ್ಕೊಂದು ಸಲ ಸುತ್ತುವುದೆಂದೂ, ಸಣ್ಣ ಹುಡುಗರು ಓದುವ ಪುಸ್ತಕಗಳಲ್ಲಿ ತಿಳಿಸಿದೆ. ಗಗನದಲ್ಲಿರುವ ಸೂರ್ಯಚಂದ್ರರ ಮತ್ತು ನಕ್ಷತ್ರಗಳ ಗತಿಗಳು, ಭೂಗೋಳದ ಇರುವಿಕೆ ಮೊದಲಾದ ವಿಷಯಗಳನ್ನು, ಇಷ್ಟು ನಿಯತವಾಗಿ ತಿಳಿಸುವುದು ವಿಜ್ಞಾನಿಗಳಿಗೆ ಸುಲಭವಾದ ಕೆಲಸವೇನೂ ಆಗಿರಲಿಲ್ಲ. ಬಹಳ ಕಾಲದ ವರೆಗೆ ಪ್ರಾಚ್ಯ ಮತ್ತು ಪಾಶ್ಚಾತ್ಯದೇಶಗಳಲ್ಲಿ, ಭೂಮಿಯು ತಟ್ಟೆಯ ಆಕಾರದಿಂದಿರುವ ಅಚಲವಾದ ಬ್ರಹ್ಮಾಂಡದ ಭಾಗವೆಂದೂ, ವಿಶಾಲವಿಶ್ವದ ಕೇಂದ್ರ ಪ್ರದೇಶದಲ್ಲಿರತಕ್ಕ ಇದರ ಸುತ್ತಲೂ ಚಂದ್ರಸೂರ್ಯರೇ ಮುಂತಾದ ಗ್ರಹಗಳು ತಿರುಗುವುವೆಂದೂ ನಂಬಿಕೆಯಿದ್ದಿತು. ಈ ವಿಧವಾದ ಭಾವನೆಯು ಸುಮಾರು ೧೬ನೆಯ ಶತಮಾನದ ವರೆಗಿದ್ದಿತೆಂದು ಹೇಳಬಹುದು. ಅದರಿಂದೀಚೆಗೆ ದುರ್ಬೀನನ್ನು ಕಂಡುಹಿಡಿದ ಮೇಲೆ ಗಗನದಲ್ಲಿನ ನಕ್ಷತ್ರಗಳು, ಗ್ರಹಗಳು, ಆಗಾಗ್ಗೆ ಕಂಡುಬರುವ ಧೂಮಕೇತುಗಳು, ಮೊದಲಾದವುಗಳ ವಿಷಯವಾಗಿ ಹೆಚ್ಚಿನ ಸಂಗತಿಗಳು ತಿಳಿದುಬಂದು ಭೂಮಿಯ ಅಚಲತ್ವದಲ್ಲಿ ನಂಬಿಕೆ ಕಡಿಮೆಯಾಯಿತು. ಭೂಮಿಯ ಸ್ಥಾನವು ಸೂರ್ಯಚಂದ್ರಾದಿ ಗ್ರಹಗಳಿಂದಾವೃತವಾದ ವಿಶಾಲ ಬ್ರಹ್ಮಾಂಡದ ಮಧ್ಯಪ್ರದೇಶದಲ್ಲಿ ಇಲ್ಲವೆಂಬ ಮುಖ್ಯ ಶೋಧನೆಯನ್ನು ಗೆಲಿಲಿಯೊ ಎಂಬ ಇಟಲಿದೇಶದ ಖಗೋಳಶಾಸ್ತ್ರಜ್ಞನು ಕಂಡುಹಿಡಿದನು. ಈತನೇ ದುರ್ಬೀನನ್ನು ಕಂಡುಹಿಡಿದವನು. ಭೂಮಿಗೆ ಸಂಬಂಧಿಸಿದ ಈತನ ಹೊಸ ತತ್ತ್ವವು ಆಗಿನ ಮತಗ್ರಂಥಗಳಲ್ಲಿ ಪ್ರತಿಪಾದಿತವಾದ ಪ್ರಪಂಚಸೃಷ್ಟಿಯ ಅಭಿಪ್ರಾಯಗಳಿಗೆ ವಿರೋಧವಾಗಿದ್ದುದರ ಫಲವಾಗಿ ಇವನನ್ನು ಶಿಕ್ಷೆಗೆ ಗುರಿಮಾಡಲು ನ್ಯಾಯಸ್ಥಾನಕ್ಕೆ ಕೊಂಡೊಯ್ದರೆಂದೂ, ಅಲ್ಲಿಯೂ ಸಹ ಈತನು ತನ್ನ ಶೋಧನೆಯ ಸತ್ಯಾಂಶವನ್ನು ಮುಚ್ಚಿಡದೆ, "ಭೂಮಿಗೆ ಚಲನೆಯುಂಟು" ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿದನೆಂದೂ ತಿಳಿದುಬಂದಿದೆ.

ಖಗೋಳಶಾಸ್ತ್ರ ಶೋಧನೆಗಳಿಗೆ ದುರ್ಬೀನು ಬಹಳ ಮುಖ್ಯವಾದ ಅಂಗವಾಗಿ ಆಕಾಶದಲ್ಲಿನ ಅನೇಕ ವಿಷಯಗಳು ತಿಳಿದುಬಂದಿರುತ್ತವೆ. ಆಕಾಶದ ಭಾಗಗಳನ್ನು

CC-0. Jangamwadi Math Collection, Varanasi. An eGangotri Initiative

ಪ್ರತಿಬಿಂಬಿಸುವ ದೊಡ್ಡ ಗುಂಡುಕನ್ನಡಿಗಳನ್ನುಳ್ಳ ದುರ್ಬೀನುಗಳನ್ನು ಪ್ರಪಂಚದ ಅನೇಕ ಭಾಗಗಳಲ್ಲಿರುವ ವೀಕ್ಷಣ ಶಾಲೆಗಳಲ್ಲಿ ಇಟ್ಟಿದ್ದಾರೆ. ಇವುಗಳ ಸಹಾಯದಿಂದ ಭೂಮಿಗೆ ಅತ್ಯಂತ ಸಮೀಪದಲ್ಲಿರುವ ಸೂರ್ಯ ಮತ್ತು ಗ್ರಹಗಳೇ ಅಲ್ಲದೆ ಇವುಗಳಂತಿರುವ ಮತ್ತು ಇವುಗಳಿಗಿಂತ ಅತ್ಯಧಿಕ ಪ್ರಮಾಣಗಳಷ್ಟು ದೊಡ್ಡವಾದ ಇತರ ಸೌರವ್ಯೂಹಗಳನ್ನೂ, ನಕ್ಷತ್ರಗಣಗಳನ್ನೂ, ನೆಬುಲ ಅಥವಾ ನೀಹಾರಕ (Nebula) ಗಳೆಂಬ ಜ್ಯೋತಿರ್ಮಯವ್ಯೂಹಗಳನ್ನೂ ಪತ್ತೆಮಾಡಿರುತ್ತಾರೆ. ಈ ಲೇಖನದ ವಿಷಯಕ್ಕೆ ನೆಬುಲ ಮತ್ತು ಸೌರವ್ಯೂಹಗಳ ವಿಷಯಗಳು ಮುಖ್ಯವಾಗಿವೆ. ನೆಬುಲವೆಂದರೆ ಸಮಸ್ತ ಮೂಲಧಾತುಗಳನ್ನೂ ಅನಿಲರೂಪದಿಂದ ಹೊಂದಿರತಕ್ಕ ಜ್ಯೋತಿರ್ಮಯವಾದ ಬ್ರಹ್ಮಾಂಡವೆಂದು ಹೇಳಬಹುದು. ಇಂತಹ ನೆಬುಲದ ಹೊರ ಮೈಯ ಶಾಖವು ಸೂರ್ಯನ ಹೊರ ಮೈಯ ಕಾವಿಗಿಂತಲೂ ಹತ್ತಾರರಷ್ಟು ಹೆಚ್ಚಾಗಿರುವುದು. ನೆಬುಲಗಳು ಸಾಧಾರಣವಾಗಿ ಗೊತ್ತಾದ ಆಕಾರಗಳನ್ನು ಹೊಂದಿಲ್ಲದಿದ್ದರೂ ಅವುಗಳಲ್ಲಿ ಕೆಲವು ಸುರುಳಿಯಂತಿದ್ದು ಅಣುತಾರಾಗಣಗಳಿಂದ ಕೂಡಿರಬಹುದೆಂದು ಅಭಿಪ್ರಾಯಪಟ್ಟಿರುತ್ತಾರೆ. ಅನೇಕಲಕ್ಷ ಕೋಟಿ ಮೈಲಿಗಳ ದೂರದಲ್ಲಿರುವ ಈ ನೆಬುಲಗಳು ದುರ್ಬೀನಿನಲ್ಲಿ ವಿಶದವಾಗಿ ಕಾಣುವುದೇ ಅಲ್ಲದೆ ಇವುಗಳ ಛಾಯಾ ಚಿತ್ರಗಳನ್ನು ಸಹಾ ತೆಗೆಯಬಹುದಾಗಿದೆ. ನೆಬುಲಗಳ ರಚನೆಯಲ್ಲಿ ಗೊತ್ತಾಗಿರತಕ್ಕ ವಿಷಯಗಳಿಂದ ಖಗೋಳ ಮತ್ತು ಭೂಭೌತಶಾಸ್ತ್ರಜ್ಞರಲ್ಲಿ ಕೆಲವರು ನಮ್ಮ ಸೌರ ವ್ಯೂಹವು ಪ್ರಾರಂಭದಲ್ಲಿ ವಿಶಾಲವ್ಯಾಪ್ತಿಯುಳ್ಳ ನೆಬುಲವೊಂದಾಗಿದ್ದು ಅದರಿಂದ ಕಾಲಕ್ರಮದಲ್ಲಿ ಗ್ರಹಗಳು ಬೇರೆಯಾಗಿ, ಗೋಳಾಕಾರವಾಗಿ ರೂಪಗೊಂಡು, ಈಗಿನ ಸ್ಥಿತಿಗೆ ಬಂದಿರಬಹುದೆಂದು ತಿಳಿಸಿದ್ದಾರೆ. ಸೌರವ್ಯೂಹದ ಹುಟ್ಟು ಮತ್ತು ಬೆಳವಣಿಗೆಗಳ ವಿಚಾರದಲ್ಲಿ ಮುಖ್ಯವಾದ ನಾಲ್ಕು ಸಿದ್ಧಾಂತಗಳಿವೆ. ಭೂಮಿಯು ಸೌರ ವ್ಯೂಹದ ಗ್ರಹಗಳಲ್ಲೊಂದಾಗಿರುವುದರಿಂದ ಇದರ ಮೂಲವನ್ನು ಸೂರ್ಯನ ಮೂಲದೊಂದಿಗೆ ತಿಳಿಯಬೇಕು. ಸೌರವ್ಯೂಹದ ಮೂಲಕ್ಕೆ ಸಂಬಂಧಪಟ್ಟ ವಿಷಯಗಳನ್ನು ವಿವರಿಸುವ ಮೊದಲು ಸೂರ್ಯ ಮತ್ತು ಇದರ ಅನುಬಂಧಿಗಳಾದ ಗ್ರಹಗಳು ಇವುಗಳಿಗಿರುವ ಪರಸ್ಪರ ಸಂಬಂಧ, ದೂರ, ಗಾತ್ರ ಮೊದಲಾದ ವಿಷಯಗಳನ್ನು ಇಲ್ಲಿ ತಿಳಿಸುವುದು ಅಪ್ರಕೃತವಾಗಲಾರದು.

## ಸೌರವ್ಯೂಹ

ಸೂರ್ಯ, ಇದರ ಸುತ್ತಲೂ ಸುತ್ತತಕ್ಕ ಒಂಬತ್ತು ಮುಖ್ಯಗ್ರಹಗಳು, ಇವುಗಳ ಉಪಗ್ರಹಗಳು ಈ ಸಮುದಾಯಕ್ಕೆ ಸೌರವ್ಯೂಹವೆಂದು ಹೆಸರು. ಇದರ ಮೂಲದಲ್ಲಿ

CC-0. Jangamwadi Math Collection, Varanasi. An eGangotri Initiative

ಸೂರ್ಯಸಿದ್ಧಾನ್ತ. ಸೂರ್ಯನಿಂದೀಚೆಗೆ ಗ್ರಹಗಳು ಕ್ರಮವಾಗಿ ಬುಧ, ಶುಕ್ರ, ಭೂಮಿ, ಅಂಗಾರಕ (ಅಥವಾ ಕುಜ), ಗುರು, ಶನಿ, ಯೂರನಸ್, ನೆಪ್ಚ್ಯೂನ್ ಮತ್ತು ಪ್ಲೂಟೊ ಇರುತ್ತವೆ. ನಿರ್ದಿಷ್ಟವಾದ ವೃತ್ತಾಕಾರ ಪಥಗಳಲ್ಲಿ ಈ ಗ್ರಹಗಳು ಸೂರ್ಯನ ಸುತ್ತಲೂ ಸುತ್ತುತ್ತವೆ. ಸೌರವ್ಯೂಹದ ವ್ಯಾಪ್ತಿಯು ಸೂರ್ಯನಿಂದ ಪ್ರಾರಂಭವಾಗಿ ಸುಮಾರು ೩೭ ಸಾವಿರ ಲಕ್ಷ ಮೈಲಿಗಳ ದೂರದಲ್ಲಿರುವ ಪ್ಲೂಟೊ ಗ್ರಹಕ್ಕೂ ಏರಿದೆ. ಆದಿ ನೆಬುಲವು (ಸೂರ್ಯನು) ಗೋಳಾಕಾರವಾಗಿದ್ದಲ್ಲಿ, ಅದರ ವ್ಯಾಸವು ೮೦ ಸಾವಿರ ಲಕ್ಷ ಮೈಲಿಗಳಿದ್ದಿರಬೇಕು. ಸೂರ್ಯನ ವ್ಯಾಸವು ೮,೬೪,೩೭ ಮೈಲಿಗಳು. ಇಷ್ಟು ಅಗಾಧಾಕೃತಿಯುಳ್ಳ ಸೂರ್ಯನು ತನ್ನ ಅಕ್ಷದ ಮೇಲೆ ೨೫ ದಿನಗಳು, ೭ಕ್ಕೆ ಗಂಟೆಗಳಿಗೊಂದು ಸಲ ಸುತ್ತುತ್ತಾನೆ. ಸೂರ್ಯನ ಗಾತ್ರವು ಭೂಮಿಯ ೩,೩೨,೦೦೦ ರಷ್ಟಿದೆ. ಹೀಗಿದ್ದರೂ ಸೂರ್ಯನ ಹೊರ ಮೈಯಿನಲ್ಲಿರುವ ಪದಾರ್ಥಗಳ ಸಾಂದ್ರತೆಯು (Density) ಭೂಮಿಯದರ ನಾಲ್ಕ ರಲ್ಲೊಂದು ಪಾಲಿನಷ್ಟಿದೆ. ಇದಕ್ಕೆ ಕಾರಣ ಸೂರ್ಯನ ಹೊರ ಪ್ರದೇಶದಲ್ಲಿರುವ ಪದಾರ್ಥಗಳು, ಹೆಚ್ಚಾದ ಶಾಖಮಾನದ ದೆಸೆಯಿಂದ ಅನಿಲರೂಪದಿಂದಿರುತ್ತವೆ. ಆದರೆ ಸೂರ್ಯನ ಮಧ್ಯಭಾಗದಲ್ಲಿರತಕ್ಕ ಪದಾರ್ಥಗಳು ಅನಿಲರೂಪದಿಂದಿರುವು ವಾದರೂ, ಅವುಗಳ ಸಾಂದ್ರತೆಯು ಮೂವತ್ತಿರಬೇಕೆಂದು ಖಗೋಳಗಣಿತ ಲೆಖ್ಖಾ ಚಾರಗಳಿಂದ ಗೊತ್ತುಮಾಡಿದ್ದಾರೆ. ಇದರ ಆಧಾರದ ಮೇಲೆ ಸೂರ್ಯನ ಮಧ್ಯ ಭಾಗದಲ್ಲಿರುವ ಪದಾರ್ಥದ ಚದರ ಅಂಗುಲವೊಂದರ ಮೇಲೆ ೬೦ ಲಕ್ಷ ಟನ್ನು ಗಳಷ್ಟು ಒತ್ತಡವಿರಬಹುದೆಂದೂ, ಮಧ್ಯಪ್ರದೇಶದ ಉಷ್ಣತೆಯು ನಾಲ್ಕು ಕೋಟಿ ಸೆಂಟಿಗ್ರೇಡ್ ಡಿಗ್ರಿಗಳಿರಬಹುದೆಂದೂ ಗೊತ್ತಾಗಿದೆ. ಸೂರ್ಯನ ಹೊರ ಮೈಯ ಕಾವು ೬೦೦೦°C ಇರಬಹುದೆಂದು ಅಂದಾಜು ಮಾಡಿದ್ದಾರೆ. ಮಧ್ಯ ಮತ್ತು ಹೊರಗಿನ ಶಾಖಮಾನಗಳ ವ್ಯತ್ಯಾಸದಿಂದ, ಸೂರ್ಯನ ಮಧ್ಯಭಾಗವು ಅಂಚಿನಲ್ಲಿರು ವುದಕ್ಕಿಂತಲೂ ಹೆಚ್ಚು ಪ್ರಕಾಶದಿಂದ ಕಾಣುವುದು.

ಸೂರ್ಯನ ಪ್ರಕಾಶದ ವಿಕಿರಣದಲ್ಲಿ ಆದರ ಪದಾರ್ಥವು ಕಡಿಮೆಯಾಗುವು ದೆಂದು ಗೊತ್ತುಮಾಡಿ, ಈ ವ್ಯಯವು ನಿಮಿಷವೊಂದಕ್ಕೆ ೩೦ ಕೋಟಿ ಟನ್ನುಗಳಿರ ಬಹುದೆಂದು ತಿಳಿಸಿದ್ದಾರೆ. ಪ್ರಾರಂಭದಲ್ಲಿದ್ದ ಸೂರ್ಯನ ತೂಕವು ಈಗಿರುವುದಕ್ಕಿಂತ ೧೦೦ ಪಾಲಿನಷ್ಟು ಇದ್ದಿರಬೇಕು. ಸೂರ್ಯನ ತೂಕವನ್ನು ಸೂಚಿಸಬೇಕಾದರೆ ೨ ಅಂಕಿಯ ಮುಂದೆ ೨೭ ಸೊನ್ನೆಗಳನ್ನು ಬರೆದು ಅಷ್ಟು ಟನ್ನುಗಳ ತೂಕವೆಂದು ಹೇಳಬಹುದು. ಇಂತಹ ಆಕಾರವನ್ನು ಗ್ರಹಿಸಲು ಅಶಕ್ಯವಾಗಿ ಕಾಣುವುದಾದರೂ, ಇತರ ನೆಬುಲಗಳು, ಮತ್ತು ತಾರಾಗಣಗಳಿಗೆ ಹೋಲಿಸಿದರೆ, ಸೂರ್ಯನು ತನ್ನ

CC-0. Jangamwadi Math Collection, Varanasi. An eGangotri Initiative

ವ್ಯೂಹದೊಂದಿಗೆ ವಿಶಾಲವಿಶ್ವದಲ್ಲಿ ಅಣುರೂಪಿಯಾಗಿ ಕಾಣುವನು. ಖಗೋಳ ಶಾಸ್ತ್ರಜ್ಞರು ಇದರ ವಸ್ತುಸ್ಥಿತಿಯನ್ನು ತಿಳಿಸಲು ಒಂದು ಕೋಷ್ಟಕವನ್ನು ಕೊಟ್ಟಿದ್ದಾರೆ. ಇದು ಆಕಾರ ಗಾತ್ರಗಳಲ್ಲಿ ಹೋಲಿಕೆಯನ್ನು ತೋರಿಸುತ್ತದೆ.

೧,೦೦೦ ಭೂಮಿಗಳನ್ನು ಸೇರಿಸಿದರೆ ಒಂದು ಗುರುಗ್ರಹವಾಗುವುದು.

೧,೦೦೦ ಗುರುಗ್ರಹಗಳನ್ನು ಸೇರಿಸಿದರೆ ಒಬ್ಬ ಸೂರ್ಯನಾಗುವನು.

೧,೦೦೦ ಸೂರ್ಯರನ್ನು ಸೇರಿಸಿದರೆ ಒಂದು ನೀಲಿನಕ್ಷತ್ರವಾಗುವುದು.

೧,೦೦೦ ನೀಲಿನಕ್ಷತ್ರಗಳನ್ನು ಸೇರಿಸಿದರೆ ಒಂದು ಕೆಂಪುನಕ್ಷತ್ರವಾಗುವುದು.

ಪ್ರಯೋಗಶಾಲೆಗಳಲ್ಲಿರುವ ಸಲಕರಣೆಗಳ ಮೂಲಕ ವಿಶಾಲವಿಶ್ವದಲ್ಲಿ ೧೫೦ ಕೋಟಿಗಳಿಗೂ ಮೀರಿದಷ್ಟು ನಕ್ಷತ್ರಗಳಿರುವುವೆಂದು ಗೊತ್ತುಮಾಡಿದ್ದಾರೆ. ಇವುಗಳೇ ಅಲ್ಲದೆ ನೆಬ್ಯುಲಗಳೂ ಧೂಮಕೇತುಗಳೂ ಮತ್ತು ಇತರ ಜ್ಯೋತಿರ್ಮಯವ್ಯೂಹಗಳೂ ಅನೇಕವಿರುತ್ತವೆ. ಇಂತಹ ವಿಶಾಲವಿಶ್ವದಲ್ಲಿ ಭೂಮಿಯ ಸ್ಥಾನವು ಎಷ್ಟು ಅಲ್ಪವೆಂದು ತಿಳಿಯಬಹುದು.

ಮುಂದಿನ ಪಟ್ಟಿಯಲ್ಲಿ ಸೌರವ್ಯೂಹದ ಗ್ರಹಗಳು, ಇವುಗಳಿಗಿರುವ ದೂರ, ಇವುಗಳ ಗಾತ್ರ, ಚಲನಕಾಲ, ಉಪಗ್ರಹಗಳ ಸಂಖ್ಯೆ ಮುಂತಾದ ವಿಷಯಗಳನ್ನು ಕೊಟ್ಟಿದೆ. ಒಂದು ಮತ್ತು ಎರಡನೆಯ ಚಿತ್ರಗಳಲ್ಲಿ ಸೂರ್ಯ ಮತ್ತು ಗ್ರಹಗಳ ಪರಸ್ಪರ ಗಾತ್ರಗಳನ್ನು ತೋರಿಸಿದೆ (ಚಿತ್ರ ೧ ಮತ್ತು ೨).

ನಮಗೆ ತಿಳಿದಿರುವಂತೆ ಭೂಮಿಯ ಮೇಲಿರುವ ಹಾಗೆ ಪ್ರಾಣಿ ಮತ್ತು ಸಸ್ಯ ಜೀವನವು ಉಳಿದ ಗ್ರಹಗಳ ಮೇಲೆ ಇರುವುದಿಲ್ಲ. ಅಂಗಾರಕ ಗ್ರಹದಲ್ಲಿ ಜೀವಿಗಳಿರಬಹುದೆಂಬ ಸಂದೇಹವು ಇತ್ತೀಚಿನ ವರೆಗೂ ಇದ್ದಿತು. ಆದರೆ ಇದಕ್ಕೆ ಆಧಾರ ದೊರೆತಿಲ್ಲ. ಭೂಮಿಗೂ ಸೂರ್ಯನಿಗೂ ಮಧ್ಯದಲ್ಲಿರತಕ್ಕ ಗ್ರಹಗಳ ಹೊರಮೈಯ ಉಷ್ಣತೆಯು ಹೆಚ್ಚಾಗಿರುವ ಕಾರಣ ಅಲ್ಲಿಯೂ ಪ್ರಾಯಶಃ ಜೀವದ ನೆಲೆಯಿರಲಾರದು. ಶುಕ್ರಗ್ರಹದ ಸುತ್ತಲೂ ಮಂಜಿನ ಮಾದರಿಯ ವಾಯುಮಂಡಲವಿರುವುದರಿಂದ ಹೆಚ್ಚಿನ ಸಂಗತಿಗಳು ತಿಳಿದುಬಂದಿಲ್ಲ.

## ಸೌರವ್ಯೂಹದ ಮೂಲ

"ಭೂಮಿಗೆ ಚಲನೆಯುಂಟು" ಎಂಬ ಶೋಧನೆಯು ಸ್ಥಿರಪಟ್ಟ ಮೇಲೆ, ಸುಮಾರು ೧೫೦ ವರ್ಷಗಳ ಹಿಂದೆ ಲಾಪ್ಲೇಸ್ ಎಂಬ ಫ್ರಾನ್ಸು ದೇಶದ ತತ್ತ್ವಶಾಸ್ತ್ರಜ್ಞನು ಭೂಮಿಯ ಮತ್ತು ಇಡಿ ಸೌರವ್ಯೂಹದ ಮೂಲದ ವಿಷಯವಾಗಿ ತನ್ನ ಅಭಿಪ್ರಾಯವನ್ನು ಸಿದ್ಧಾಂತ ರೀತಿಯಲ್ಲಿ ತಿಳಿಸಿದನು. ಲಾಪ್ಲೇಶಿಯನ್ ಅಥವಾ ನೆಬ್ಯುಲಾರ್ ಸಿದ್ಧಾಂತವೆಂಬ ಹೆಸರಿನಿಂದ ಈತನ ಪ್ರತಿಪಾದನೆಯು ಪ್ರಖ್ಯಾತಿಗೆ

CC-0. Jangamwadi Math Collection, Varanasi. An eGangotri Initiative




ಚಿತ್ರ ೧. ಸೌರವ್ಯೂಹದ ಗ್ರಹಗಳ ಪರಸ್ಪರ ಗಾತ್ರ

CC-0. Jangamwadi Math Collection, Varanasi. An eGangotri Initiative




ಚಿತ್ರ ೨. ಸೂರ್ಯ ಮತ್ತು ಗುರುಗ್ರಹಗಳ ಪರಸ್ಪರ ಗಾತ್ರ

CC-0. Jangamwadi Math Collection, Varanasi. An eGangotri Initiative

## ಸೌರವ್ಯೂಹದ ಪರಿಚಯ

| ಗ್ರಹಗಳು | ಸೂರ್ಯನಿಂದಿರುವ ದೂರ, ೧೦ ಲಕ್ಷ ಮೈಲಿಗಳು | ಸೂರ್ಯನ ಸುತ್ತಲೂ ತಿರುಗಲು ಬೇಕಾಗುವ ಕಾಲ | | ವ್ಯಾಸ ಮೈಲಿಗಳು | ಗಾತ್ರ ಭೂಮಿಯ ಗಾತ್ರವನ್ನು ಒಂದೆಂದು ಪರಿಗಣಿಸಿದೆ | ತನ್ನ ಅಕ್ಷದ ಮೇಲೆ ತಿರುಗಲು ಬೇಕಾಗುವ ಕಾಲ | | | ಉಪಗ್ರಹಗಳ ಸಂಖ್ಯೆ |
|---|---|---|---|---|---|---|---|---|---|
| | | ವರ್ಷ | ದಿನ | | | ದಿನ | ಗಂಟೆ | ನಿ. | |
| ಸೂರ್ಯ | .... | .... | .... | ೮,೬೪,೩೬೭ | ೩,೩೨೦೦೦ | ೨೫ | ೭ | ೪೮ | ೯ |
| ಬುಧ | ೩೬.೦ | ೦ | ೮೮ | ೩೦೦೮ | ೦.೦೫ | .... | ೨೫ | ೪೨ | .... |
| ಶುಕ್ರ | ೬೭.೨ | ೦ | ೨೨೫ | ೭೬೦೦ | ೦.೮೨ | .... | ೨೩ | ೨೧ | .... |
| ಭೂಮಿ | ೯೨.೯ | ೧ | .... | ೭೯೧೩ | ೧.೦೦ | .... | ೨೩ | ೫೬ | ೧ (ಚಂದ್ರ) |
| ಅಂಗಾರಕ | ೧೪೧.೫ | ೧ | ೩೩೨ | ೪೨೦೦ | ೦ ೧೧ | .... | ೨೪ | ೩೭ $\frac{೧}{೨}$ | ೨ |
| ಗುರು | ೪೮೩.೩ | ೧೧ | ೩೧೪ | E = ೯೦೨೫೪<br>P = ೮, ೭೭೮ | ೩೧೮.೦೦ | .... | ೯<br>೯ | ೫೦<br>೫೬ | ೧೧ |
| ಶನಿ | ೮೮೬.೦ | ೨೯ | ೧೬೭ | E = ೭೫೧೦೦<br>P = ೬೭೨೦೦ | ೯೫.೦೦ | .... | ೧೦<br>೧೦ | ೧೪ $\frac{೧}{೨}$<br>೩೮ | ೯+೩ ಬಳೆಗಳು |
| ಯೂರನಸ್ | ೧೭೮೨.೮ | ೮೪ | ೭ | ೩೧೯೦೦ | ೧೫.೦೦ | .... | ೧೦ | ೪೯ | .... |
| ನೆಪ್ಚೂನ್ | ೨೭೯೩.೪ | ೧೬೪ | ೨೮೦ | ೩೨೯೦೦ | ೧೭.೦೦ | .... | .... | .... | .... |
| ಪ್ಲೂಟೊ | ೩೭೦೦.೦ | ೨೪೮ | .... | .... | .... | .... | .... | .... | .... |

E = Equitorial : ಸಮಭಾಜಕ ವೃತ್ತದ ಬಳಿ. P = Polar : ಧ್ರುವಗಳ ಬಳಿ.

CC-0. Jangamwadi Math Collection, Varanasi. An eGangotri Initiative

ಬಂದಿತು. ಈ ಸಿದ್ಧಾಂತದ ಪ್ರಕಾರ ಆದಿಯಲ್ಲಿ ವಿಶಾಲವ್ಯಾಪ್ತಿಯುಳ್ಳ ಜ್ಯೋತಿರ್ಮಯವಾದ ನೆಬುಲವೊಂದು (ಇದರ ಹೊರಮೈಯ ಶಾಖವು ೫೦,೦೦೦°F.ಗಳಿಗೂ ಮೀರಿದ್ದಿರಬೇಕು) ವಿಶ್ವದ ಯಾವುದೊ ಪ್ರದೇಶದಲ್ಲಿ ತನ್ನ ಅಕ್ಷದ ಮೇಲೆ ತಿರುಗುತ್ತಿದ್ದಿತು. ಈ ನೆಬುಲದ ವಸ್ತುಸಂಯೋಜನೆಯಲ್ಲಿನ ಧಾತುಗಳು ಕರಗಿಯೊ ಅಥವಾ ಅನಿಲರೂಪದಿಂದಲೊ ಇದ್ದಿರಬೇಕು. ಹೀಗೆ ಸುತ್ತುತ್ತಿದ್ದಾಗ ನೆಬುಲದ ಮಧ್ಯಭಾಗದಲ್ಲಿ ಎಂದರೆ ಸಮಭಾಜಕ ವೃತ್ತದ ಬಳಿ, ಬಿಸಿಯಾದ ಭಾಗವೊಂದು ಬಳೆಯ ರೂಪದಿಂದ ಬೇರೆಯಾಗಿ, ಈ ಬಳೆಯು ಆರಿದಂತೆಲ್ಲ ಒಂದು ಕಡೆ ಸೀಳಿ, ಅನಂತರ ಸಂಕುಚಿತವಾದಾಗ ಸೀಳಿದ ಬಳೆಯ ಎರಡು ಕೊನೆಗಳು ಮಧ್ಯಭಾಗಕ್ಕೆ ಸರಿದು ಒಂದು ಗೋಳಾಕೃತಿಯನ್ನು ಹೊಂದಿತು. ಈ ಗೋಳಾಕಾರದ ನೆಬುಲ ಭಾಗಕ್ಕೆ ಗ್ರಹವೆಂದು ಹೆಸರು.

ಇದನ್ನು ಚೆನ್ನಾಗಿ ತಿಳಿಯಬೇಕಾದರೆ, ಒಂದು ಕೆಂಪಗೆ ಕಾದ ಕಬ್ಬಿಣದ ಚೆಂಡನ್ನು ವೇಗವಾಗಿ ಬುಗುರಿಯಂತೆ ತಿರುಗಲು ಬಿಟ್ಟರೆ, ಅದರ ಮಧ್ಯ ಪ್ರದೇಶದಲ್ಲಿ ತಟ್ಟೆಯ ಆಕಾರದ ಜ್ಯೋತಿಯೊಂದು ಕಾಣುವುದು. ಚೆಂಡು ಗಟ್ಟಿಯಾದ ಕಬ್ಬಿಣವಲ್ಲದೆ ವಿರಳವಾಗಿ ಚಲಿಸುವ ಅಣು ಪರಮಾಣುಗಳನ್ನು ಹೊಂದಿದ್ದಲ್ಲಿ ಈ ತಟ್ಟೆಯ ಅಥವಾ ಬಳೆಯ ಆಕಾರದ ಭಾಗದಲ್ಲಿ ಮೂಲಚೆಂಡಿನ ಹೊರಪ್ರದೇಶದ ವಸ್ತು ಸಂಗ್ರಹವಿರುವುದು. ಆಕಾರದಲ್ಲಿ ಬಳೆಯು ಮೂಲಚೆಂಡಿಗೆ ತಗುಲಿಸಿದ ಉಂಗುರದಂತಿರುವುದು. ಮೂಲ ನೆಬುಲವು ಆರಿದಂತೆಲ್ಲ ಮೇಲಿನ ರೀತಿಯಲ್ಲಿ ಮೊದಲು ಬಳೆಗಳು ಬೇರೆಯಾಗಿ ಅವು ಕಾಲಕ್ರಮದಲ್ಲಿ ಗ್ರಹಗಳಾದುವೆಂದೂ ಈ ಗ್ರಹಗಳು ತಮ್ಮ ಸರದಿಯಲ್ಲಿ ಉಪಗ್ರಹಗಳ ರಚನೆಗೆ ಕಾರಣವಾದುವೆಂದೂ ಲಾಪ್ಲೇಶಿಯನ್ ಸಿದ್ಧಾಂತವು ಮುಖ್ಯವಾಗಿ ತಿಳಿಸುವುದು. ನೆಬುಲದಲ್ಲಿ ಮೊದಲಿದ್ದ ಅಣು ಪರಮಾಣುಗಳಿಗೆ ಸ್ವಭಾವವಾಗಿ ಚಲನೆಯಿದ್ದ ಪ್ರಯುಕ್ತ, ಒಟ್ಟುಗೂಡಿದ ಮೇಲೆ ರೂಪಗೊಂಡ ಗ್ರಹಗಳು ಅದೇ ರೀತಿಯಲ್ಲಿ ಚಲನೆಯನ್ನು ಹೊಂದಿ ತಮ್ಮ ಅಕ್ಷದ ಮೇಲೆ ತಿರುಗುವುದೇ ಅಲ್ಲದೆ, ಮೂಲಸೂರ್ಯನ ಗುರುತ್ವಾಕರ್ಷಣದಿಂದ ಸೂರ್ಯನ ಸುತ್ತಲೂ ತಿರುಗತಕ್ಕ ಗತಿಯನ್ನು ಹೊಂದಿದುವು. ಈ ಸಿದ್ಧಾಂತವನ್ನು ನೆಬುಲ ಸಂಕೋಚನ ಸಿದ್ಧಾಂತವೆಂದು ಕರೆಯಬಹುದು.

ನೆಬುಲ ಸಂಕೋಚನ ಸಿದ್ಧಾಂತವನ್ನು ಪುಷ್ಟೀಕರಿಸುವ ವಿಷಯಗಳು ಗ್ರಹಗಳ ಇರುವಿಕೆಯಿಂದಲೂ ಮತ್ತು ಅವುಗಳ ಚಲನೆಯಿಂದಲೂ ಗೊತ್ತಾಗಿವೆ. ಗ್ರಹಗಳೂ ಉಪಗ್ರಹಗಳೂ ಸಾಧಾರಣವಾಗಿ ಒಂದೇ ದಿಕ್ಕಿನಲ್ಲಿ ಚಲಿಸುತ್ತವೆ. ಬಳೆಯಾಕಾರದಿಂದ ನೆಬುಲವು ಬೇರೆಯಾಯಿತೆಂಬುದಕ್ಕೆ ಶನಿಗ್ರಹದ ಸುತ್ತಲೂ ಇರತಕ್ಕ

CC-0. Jangamwadi Math Collection, Varanasi. An eGangotri Initiative

ಬಳೆಗಳು ನಿದರ್ಶನಗಳಾಗಿವೆ. ಆದರೆ ಈ ಸಿದ್ಧಾಂತದಿಂದ ನಿರ್ಣೀತವಾದ ಕೆಲವು ವಿಷಯಗಳಿಗೆ ಖಗೋಳಗಣಿತಶಾಸ್ತ್ರದ ಬೆಂಬಲವಿಲ್ಲ. ನೆಬುಲದಿಂದಾದ ಗ್ರಹಗಳಿಂದ ಉಪಗ್ರಹಗಳಾಗಲು ಸಾಕಾಗುವಷ್ಟು ಶಾಖಮಾನವು ರೂಪಗೊಂಡ ಗ್ರಹಗಳಲ್ಲಿರಲು ಸಾಧ್ಯವಿಲ್ಲ. ಇವೇ ಅಲ್ಲದೆ ಇನ್ನೂ ಕೆಲವು ಉಪಗ್ರಹಗಳ ವಕ್ರಚಲನೆಗಳಿಂದಲೂ ಈ ಸಿದ್ಧಾಂತಕ್ಕೆ ಹೆಚ್ಚಿನ ಬೆಂಬಲವು ಇತ್ತೀಚೆಗೆ ಕಡಿಮೆಯಾಗಿದೆ.

ಲಾಪ್ಲೇಶಿಯನ್ ಸಿದ್ಧಾಂತವನ್ನು ಪ್ರಚುರಪಡಿಸಿದ ಕೆಲವು ಕಾಲದ ಮೇಲೆ ನಾರ್ಮನ್ ಲಾಕಿಯರ್ ಮತ್ತು ಡಾರ್ವಿನ್ ಎಂಬ ವಿಜ್ಞಾನಿಗಳು ಬೇರೊಂದು ವಿಧವಾದ ನೆಬುಲ ಸಿದ್ಧಾಂತದಿಂದ ಸೌರವ್ಯೂಹದ ಮೂಲವನ್ನು ಪ್ರತಿಪಾದಿಸಿದರು. ನೆಬುಲವೊಂದರಿಂದ ಸೂರ್ಯ ಮತ್ತು ಗ್ರಹಗಳಾದುವೆಂದು ಈ ಸಿದ್ಧಾಂತವು ತಿಳಿಸುವುದಾದರೂ, ನೆಬುಲದ ಮೂಲವಸ್ತು ಸಂಯೋಜನೆಯ ವಿಷಯದಲ್ಲಿ ಭಿನ್ನಾಭಿಪ್ರಾಯವನ್ನು ತಿಳಿಸುತ್ತದೆ. ಭೂಮಿಯಲ್ಲಿ ದೊರಕಿರುವ ಉಲ್ಕೆ ಮತ್ತು ಶಿಲಾಪಾತಗಳ ಧಾತುಸ್ವರೂಪನಿರ್ಣಯಗಳಿಂದ ಭೂಗರ್ಭದಲ್ಲಿ ಶಿಲಾಪಾತಗಳಲ್ಲಿ ಕಂಡುಬರುವ ಲೋಹಾಂಶಗಳಿರಬೇಕೆಂದೂ ಆದಕಾರಣ ಆದಿನೆಬುಲವು ಉಲ್ಕೆ ಮತ್ತು ಶಿಲಾಪಾತಗಳ ಸಂಯೋಜನೆಯಿಂದಿದ್ದಿರಬೇಕೆಂದೂ ಈ ಸಿದ್ಧಾಂತವು ತಿಳಿಸುತ್ತದೆ. ನೆಬುಲವು ರೂಪಗೊಳ್ಳುವ ಪೂರ್ವ, ವಿಶೇಷವಾಗಿ ಉಲ್ಕೆ ಮತ್ತು ಶಿಲಾಪಾತಗಳ ವೃಷ್ಟಿಯಾಯಿತು; ಇವುಗಳ ಘರ್ಷಣೆ ಮತ್ತು ಸಂಯೋಜನೆಯಿಂದ ಈ ಶಿಲಾಪಾತ ವಸ್ತುಗಳು ಹೆಚ್ಚಿನ ಶಾಖವನ್ನು ಹೊಂದಿ ಕಣರೂಪದಿಂದಿರುವ ವಿಶಾಲವ್ಯಾಪ್ತಿಯುಳ್ಳ ನೆಬುಲವೊಂದನ್ನು ನಿರ್ಮಿಸಿತು; ಈ ನೆಬುಲದಿಂದ ಕ್ರಮೇಣ ಸೌರವ್ಯೂಹವೂ ರೂಪುಗೊಂಡಿತು, ಎಂಬೀ ವಿಷಯಗಳು ಶಿಲಾಪಾತಸಂಯೋಜನ ಸಿದ್ಧಾಂತದಿಂದ ತಿಳಿದುಬಂದಿವೆ. ಆದರೆ ಖಗೋಳಶಾಸ್ತ್ರದ ಹಲವು ನಿರ್ಣಯಗಳಿಗೆ ವಿರುದ್ಧವಾದ ಅಂಶಗಳಿಂದ ಕೂಡಿರುವುದರಿಂದಲೂ ಉಲ್ಕೆ ಮತ್ತು ಶಿಲಾಪಾತಗಳು ಒಂದುಗೂಡಿ ಕ್ರಮಬದ್ಧವಾದ ಸ್ಥಿತಿಯನ್ನು ಏರ್ಪಡಿಸಲು ಸಾಧ್ಯವಲ್ಲದ್ದರಿಂದಲೂ ಈ ಶಿಲಾಪಾತ ಸಂಯೋಜನೆಯು ಪ್ರತಿಪಾದನೆಗೆ ಹೆಚ್ಚಿನ ಬೆಂಬಲ ದೊರೆಯಲಿಲ್ಲ.

ದುರ್ಬೀನಿನ ಮೂಲಕ ಗಗನಮಂಡಲವನ್ನು ನೋಡುವಾಗ ನಕ್ಷತ್ರಗಣಗಳ ನಡುವೆ ಅಲ್ಲಲ್ಲಿ ಸುರುಳಿಯ ಮಾದರಿಯ ನೆಬುಲಗಳು ಕಂಡುಬರುವುವು. ಸುರುಳಿ ನೆಬುಲಗಳ ಗತಿ ಪರಿಶೀಲನೆಯಿಂದ ಛೇಂಬರ್‌ಲಿನ್ ಎಂಬ ಭೂವಿಜ್ಞಾನಿಯು ಸೌರವ್ಯೂಹವು ಪ್ರಾರಂಭದಲ್ಲಿ ಇಂತಹ ಸುರುಳಿ ನೆಬುಲವೊಂದಾಗಿದ್ದಿರಬೇಕೆಂದು ಸೂಚಿಸಿ, ಅದಕ್ಕೆ ಬೆಂಬಲವಾದ ಅನೇಕ ಪ್ರಮಾಣಗಳನ್ನು ಕೊಟ್ಟನು. ನೆಬುಲದ ಜ್ಯೋತಿರ್ಮಯ ಭಾಗದಲ್ಲಿ ಅಸಂಖ್ಯಾತವಾದ ಗ್ರಹಕಣ (ಪರಮಾಣು)ಗಳು ಇದ್ದು,

CC-0. Jangamwadi Math Collection, Varanasi. An eGangotri Initiative

ಇವುಗಳ ಸಂಯೋಜನೆಯಿಂದ ಸೂರ್ಯ ಮತ್ತು ಗ್ರಹಗಳು ರೂಪಗೊಂಡುವೆಂಬುದೆ ಈತನ ಮತ. ಮಧ್ಯಭಾಗವು ಸೂರ್ಯನಿಂದ ಆವೃತವಾಗಿ, ಸುತ್ತಲಿನ ವಿಶಾಲ ಪ್ರದೇಶದಲ್ಲಿ ಗ್ರಹಗಳು ಜನಿಸಿ, ತಮ್ಮ ಪಥಗಳನ್ನು ನಿರ್ಮಿಸಿಕೊಂಡು ಚಲನೆಯನ್ನು ಹೊಂದಿದುವು. ಸುರುಳಿ ನೆಬ್ಯುಲಗಳಲ್ಲಿ ಕಂಡುಬರುವ ಗಂಟುಪ್ರದೇಶಗಳು ಗ್ರಹಕಣ ಸಂಯೋಜನೆಯ ಕಾರ್ಯದಲ್ಲಿ ಮೂಲಪ್ರದೇಶಗಳಾದುವು. ಈ ಗ್ರಹಕಣಗಳ ಘರ್ಷಣೆಯಿಂದ ಹುಟ್ಟಿದ ಉಷ್ಣವು ಗ್ರಹಗಳ ಗರ್ಭಪ್ರದೇಶದಲ್ಲಿನ ಪದಾರ್ಥಗಳನ್ನು ಕರಗಿಸಲು ಸಹಾಯಕವಾಯಿತು (ಭೂಮಿಗ್ರಹದ ವಿಷಯದಲ್ಲಿ ಈ ವಿಧವಾದ ಭಾವನೆಯಿದೆ. ಮಿಕ್ಕ ಗ್ರಹಗಳ ವಿಷಯವಾಗಿ ಇದನ್ನು ನಿರ್ಧರಿಸಿ ಹೇಳಲು ಸಾಧ್ಯ ವಿಲ್ಲ). ಸಾಧಾರಣವಾದ ಗುಂಗುರು ನೆಬ್ಯುಲವೊಂದರಿಂದ ಮೇಲ್ಕಂಡ ರೀತಿಯಲ್ಲಿ ಸೂರ್ಯ, ಗ್ರಹಗಳು ಮತ್ತು ಉಪಗ್ರಹಗಳು ರೂಪಗೊಂಡು ಇಡಿ ಸೌರವ್ಯೂಹ ವಾಯಿತೆಂದು ಈ ಗ್ರಹಕಣ ಸಂಯೋಜನ ಸಿದ್ಧಾಂತದಿಂದ ತಿಳಿದುಬಂದಿದೆ.

ನೆಬ್ಯುಲದಿಂದ ಸೌರವ್ಯೂಹವು ಹುಟ್ಟಿತೆಂದು ಮೇಲಿನ ಮೂರು ಸಿದ್ಧಾಂತಗಳು ತಿಳಿಸುವುವಾದರೂ, ಮೂಲ ನೆಬ್ಯುಲದ ಸ್ವರೂಪ, ವಸ್ತುಸಂಯೋಜನೆಗಳ ವಿಷಯದಲ್ಲಿ ಭಿನ್ನಾಭಿಪ್ರಾಯವಿರುತ್ತದೆ. ಮೂರನೆಯದಾದ ಗ್ರಹಕಣ ಸಂಯೋಜನ ಸಿದ್ಧಾಂತವು ಇತ್ತೀಚಿನ ವಿಜ್ಞಾನಿಗಳ ಗಮನಕ್ಕೆ ಹೆಚ್ಚಾಗಿ ಬಂದು, ಇದರಿಂದ ಗೊತ್ತಾಗಿರುವ ಹಲವು ವಿಷಯಗಳಿಗೆ ಖಗೋಳ ಮತ್ತು ಭೌತಶಾಸ್ತ್ರಗಳ ಬೆಂಬಲವು ದೊರಕಿದೆ. ಈ ಸಿದ್ಧಾಂತಗಳನ್ನು ತಿಳಿಸುವಾಗ ಪ್ರತಿಯೊಂದರಲ್ಲಿಯೂ ಆಯಾ ಸಿದ್ಧಾಂತಕ್ಕನುಗುಣ ವಾಗಿ ಪ್ರಮಾಣಸಾಧನಗಳನ್ನು ಕೊಟ್ಟಿರುತ್ತಾರೆ. ಅವುಗಳೆಲ್ಲವನ್ನೂ ವಿಶದವಾಗಿ ತಿಳಿಸಲು ಸ್ಥಳಸಂಕೋಚದಿಂದ ಸಾಧ್ಯವಿಲ್ಲದೆ ಸಿದ್ಧಾಂತಗಳಲ್ಲಿ ಪ್ರತಿಪಾದಿತವಾಗಿರುವ ಮುಖ್ಯ ವಿಷಯಗಳನ್ನು ಮಾತ್ರ ವಿವರಿಸಲು ಪ್ರಯತ್ನ ಮಾಡಿದೆ.

ನಾಲ್ಕನೆಯದಾದ ಹೊಸದೊಂದು ಸಿದ್ಧಾಂತವು ಈಚೆಗೆ ಗೊತ್ತಾಗಿ ಹೆಚ್ಚಿನ ಪ್ರಚಾರಕ್ಕೆ ಬಂದಿರುತ್ತದೆ. ಸುಪ್ರಸಿದ್ಧ ವಿಜ್ಞಾನಿಗಳಾದ ಸರ್ ಜೇಮ್ಸ್ ಜೀನ್ಸ್, ಪ್ರೊ|| ಎಡ್ಡಿಂಗ್‌ಟನ್ ಮತ್ತು ಡಾ|| ಜೊಫ್ರೈ ಎಂಬವರು ಇದನ್ನು ಪ್ರತಿಪಾದಿಸಿದ್ದಾರೆ. ಇದರ ಪ್ರಕಾರ ವಿಶಾಲವ್ಯಾಪ್ತಿಯುಳ್ಳ ಸೂರ್ಯನು ವಿಶ್ವದ ಯಾವುದೊ ಒಂದು ಪ್ರದೇಶದಲ್ಲಿ ಚಲಿಸುತ್ತಿದ್ದಾಗ, ಅದಕ್ಕಿಂತಲೂ ಅನೇಕಪಾಲು ದೊಡ್ಡದಾದ ನಕ್ಷತ್ರವೊಂದು ಆಕಸ್ಮಿಕವಾಗಿ ಹತ್ತಿರಕ್ಕೆ ಬಂದಿತು. ಸೂರ್ಯನ ಹೊರಮೈಯ ಪ್ರದೇಶದಲ್ಲಿ ಹೆಚ್ಚಿನ ಉಷ್ಣತೆಯಿಂದ ಕೂಡಿದ ಅನಿಲರೂಪದಿಂದಿದ್ದ ವಸ್ತುಸಂಯೋಜನೆಯಿದ್ದಿತು. ಈ ಭೂತಾಕಾರದ ನಕ್ಷತ್ರವು ಸಮೀಪಕ್ಕೆ ಬಂದಂತೆಲ್ಲಾ ಸೂರ್ಯನ ಹೊರಮೈಯ ಪ್ರದೇಶದಲ್ಲಿ ದೊಡ್ಡದಾದ ಅಲೆಯೊಂದು ಎದ್ದಿತು. ಅಲೆಯು

CC-0. Jangamwadi Math Collection, Varanasi. An eGangotri Initiative




ಚಿತ್ರ ೩. ಸೌರವ್ಯೂಹದ ರಚನೆ

CC-0. Jangamwadi Math Collection, Varanasi. An eGangotri Initiative

ನಕ್ಷತ್ರವು ದೂರದಲ್ಲಿದ್ದಾಗ ಪ್ರಾರಂಭವಾಗಿ, ಅದು ಹತ್ತಿರ ಬಂದಂತೆಲ್ಲಾ ಎತ್ತರಕ್ಕೆ ಎದ್ದು, ಅತ್ಯಂತ ಸಮೀಪಕ್ಕೆ ಬಂದು ದೂರಕ್ಕೆ ಸರಿದಾಗ, ಚುಟ್ಟದ ಆಕಾರದ ಭಾಗವೊಂದು ಸೂರ್ಯನಿಂದ ಬೇರೆಯಾಗಿ, ವಿಶಾಲಾಕಾಶದಲ್ಲಿ ನಿಂತಿತು. ನಕ್ಷತ್ರದ ಮೈಯಮೇಲೂ ಅಲೆಗಳು ಎದ್ದರೂ, ಅದರ ಗಾತ್ರದಿಂದ ಹೆಚ್ಚಿನ ಪರಿಣಾಮ ವೇನೂ ಆಗಲಿಲ್ಲ. ದೊಡ್ಡ ನಕ್ಷತ್ರವು ಈ ರೀತಿಯಾಗಿ ತನ್ನ ಪ್ರಭಾವವನ್ನು ಸೂರ್ಯನ ಮೇಲೆ ಬೀರಿ ತನ್ನ ದಾರಿಯನ್ನು ಹಿಡಿದುಕೊಂಡು ಹೋಯಿತು. ಆದರೆ ಸೂರ್ಯನಿಗೆ ಪದಾರ್ಥ ನಷ್ಟವಾಗಿ ಸುತ್ತಲೂ ಸುತ್ತತಕ್ಕ ವ್ಯೂಹವೊಂದು ಕಾಲ ಕ್ರಮದಲ್ಲಿ ಏರ್ಪಟ್ಟಿತು. ಚುಟ್ಟದ ಆಕಾರದ ಜ್ಯೋತಿರ್ಮಯಭಾಗವು ಆರಿದಾಗ ಗ್ರಹಗಳು ರೂಪಗೊಂಡುವು. ಚುಟ್ಟದ ಉಬ್ಬಿದ್ದ ಮಧ್ಯಪ್ರದೇಶದಲ್ಲಿ ಹೆಚ್ಚು ಗಾತ್ರಗಳನ್ನುಳ್ಳ ಗುರು ಶನಿ ಗ್ರಹಗಳಾದುವು. ಇವುಗಳ ಎರಡು ಕಡೆಗಳಲ್ಲಿ ಉಳಿದ ಗ್ರಹಗಳು ಜನಿಸಿದುವಲ್ಲದೆ, ಗ್ರಹಗಳಿಂದ ಉಪಗ್ರಹಗಳು ಹುಟ್ಟಿದುವು. ಈ ರೀತಿ ಯಲ್ಲಿ ಇಡಿ ಸೌರವ್ಯೂಹದಲ್ಲಿನ ಗ್ರಹಗಳು ತಮ್ಮ ಆಕಾರ ದೂರಗಳಿಗನುಸಾರವಾಗಿ ಮೂಲಸೂರ್ಯನ ಸುತ್ತಲೂ ತಿರುಗತಕ್ಕ ಕಾಲ ಮತ್ತು ಪಥಗಳನ್ನು ನಿರ್ಮಿಸಿ ಕೊಂಡುವು. ಈ ಸಿದ್ಧಾಂತವು ಗ್ರಹಿಸಲು ಸುಲಭವಾಗಿರುವುದೇ ಅಲ್ಲದೆ, ಇದ ರಿಂದ ಗೊತ್ತಾಗಿರುವ ಹಲವು ವಿಷಯಗಳಿಗೆ ಖಗೋಳಶಾಸ್ತ್ರದ ಬೆಂಬಲವೂ ಹೆಚ್ಚಾಗಿದೆ. ಆದರೆ ಹೀಗಾದುದು ನಿಯತವಾದ ಘಟನೆಯಲ್ಲಿ ಆಕಸ್ಮಿಕವಾದುದು. ಆ ನಕ್ಷತ್ರವು ಬಾರದೆ ಹೋಗಿದ್ದಲ್ಲಿ ಪ್ರಾಯಶಃ ಭೂಮಿಯು ಹುಟ್ಟುತ್ತಲೇ ಇರಲಿಲ್ಲ. ಹೀಗೆ ಸೌರವ್ಯೂಹವಾದ ರೀತಿಯನ್ನು ಹಿಂದೆ ೩ನೆಯ ಚಿತ್ರದಲ್ಲಿ ತೋರಿಸಿದೆ. ಈ ನಕ್ಷೆ ಯನ್ನು ಉಬ್ಬರವಿಳಿತ ಸಿದ್ಧಾಂತವು (Tidal Theory) ಪ್ರತಿಪಾದಿಸಿರುವ ವಿಷಯಗಳ ಆಧಾರದ ಮೇಲೆ ಬರೆದಿದೆ. ಇದನ್ನು ಬರೆಯುವುದರಲ್ಲಿ ಅಳತೆಯನ್ನು ಅನುಸರಿಸಿಲ್ಲ.

ಭೂಮಿಯು ಸೌರವ್ಯೂಹದ ಗ್ರಹಗಳಲ್ಲೊಂದಾಗಿ ಇತರ ಗ್ರಹಗಳಂತೆ ಪ್ರಾರಂಭವಾಯಿತು. ಬಿಸಿಯಾದ ಅನಿಲಭಾಗವು ಆರಿ ದ್ರವರೂಪವಾಗಿ ಅನಂತರ ಗಟ್ಟಿಯಾದ ಹೊರಚಿಪ್ಪಾಯಿತು. ಇದಾಗಲು ಬಹಳಕಾಲ ಹಿಡಿದಿರಬೇಕು. ಅನಂತರ ವಾಯುಮಂಡಲವೇರ್ಪಟ್ಟು, ಕ್ರಮೇಣ ಜಲಾಶಯಗಳಾಗಿ, ಯಾವುದೊ ಸನ್ನಿವೇಶ ದಲ್ಲಿ ಪ್ರಾಣಿಜೀವನವು ಕಾಲಿಟ್ಟು, ಬೆಳೆದು, ಪ್ರಕೃತಸ್ಥಿತಿಗೆ ಬಂದಿರುತ್ತದೆ. ಭೂಮಿಯ ಸ್ವರೂಪ ಮತ್ತು ಜೀವನಚರಿತ್ರೆಯ ವಿಷಯವಾಗಿ ಕೆಲವು ಗಮನಾರ್ಹವಾದ ಅಂಶಗಳನ್ನು ತಿಳಿಸಲು ಮುಂದೆ ಪ್ರಯತ್ನಮಾಡಿದೆ.

ಟಿ. ಪಿ. ಕೃಷ್ಣಾಚಾರ್, ಎಂ.ಎಸ್‌ಸಿ.

(ಮುಂದುವರಿಯುವುದು)

CC-0. Jangamwadi Math Collection, Varanasi. An eGangotri Initiative

# ಉದಯನ ಚರಿತ್ರ ಸಂಗ್ರಹ

## ನಾಲ್ಕನೆಯ ವತ್ಸವ ಕಾಂಡ

ಆಮೇಲೆ ಉದಯನನು ವರ್ಷಕರನನ್ನು ತಪ್ಪಿ ಬಹಳ ಕೊಂಡಾಡಿ ತನ್ನ ಆನೆಯನ್ನೂ ಆಭರಣಗಳನ್ನೂ ಅವನಿಗೆ ಕೊಟ್ಟನು. ಬಳಿಕ ಧರ್ಮದತ್ತನನ್ನು ಕುರಿತು "ಪಾಂಚಾಲರಾಜನನ್ನು ಗೆದ್ದದ್ದು ನಿನ್ನಿಂದಲೇ" ಎಂದು ಉಪಚಾರ ಹೇಳಿ, "ಅವನನ್ನು ಗೆದ್ದದ್ದಕ್ಕೆ ಇವು ನೆನಪು ಕುರಿಪುಗಳು" ಎಂದು ನೆತ್ತರುಕೊಡುಗೆ (ನೆಯ್ ತೋರ್‌ಪಟ್ಟಿಕೆ)ಯನ್ನೂ ಹತ್ತು ಊರುಗಳನ್ನೂ ಅವನಿಗೆ ಕೊಟ್ಟನು. ಒಳ್ಳೆಯ ವೇಳೆಯಲ್ಲಿ ಹೊರಟು ಆನೆಯ ಮೇಲೆ ಏರಿಕೊಂಡು ಗೆಳೆಯರು ಬಳಸಿ ಬರಲು ಗೆಲ್ಲ ಬೆಳ್ಗೊಡೆ ಮೇಲೆ ಕವಿಯಲು, ಚವರಿಗಳು ಎರಡು ಕಡೆಯೂ ಬೀಸಲು, ಶಂಖವೂ ಮುರಜವೂ ಮೊಳಗಲು, ಮಹಾಜನಗಳ ಹರಕೆಯುಲಿ ಹೆಚ್ಚಾಗಲು, "ತಕ್ಕವನೇ! ನಿಡುಗಾಲ ಲೋಕವನ್ನು ಕಾಪಾಡಿಕೊಂಡು ಬಾಳುವವನಾಗು" ಎಂದು ಹಲವರು ಗೋಪುರ ಗೋಪುರದಲ್ಲೂ ನಿಂತು ಹೂಮಳೆ ಕರೆಯುತ್ತ ನಿಲ್ಲಲು, ಉದಯನನು ಅರಣ್ಮನೆಯನ್ನು ತಲುಪಿದನು. ಬಳಿಕ, ಆರುಣಿಯೊಡನೆ ಬೆಂಕಿ ಹಾಸಿಗೆಯನ್ನೇರದ ಅವನ ಹೆಂಡತಿಯರಿಗೆ ಕೇಳಿದಷ್ಟು ಹೊನ್ನು ಕೊಟ್ಟು ಬೇರೆ ಕಡೆ ಹೋಗಿ ಇರುವಂತೆ ಮಾಡಿಸಿದನು. "ಸತ್ತವರಿಗೆ ತಕ್ಕ ಕರ್ತವ್ಯಗಳನ್ನು ಮಾಡಿ ತೀರಿಸುವರಾಗಿ" ಎಂದು ಉಳಿದವರಿಗೆ ಬೇಡಿದುವನ್ನು ಕೊಟ್ಟನು. ಹೀಗೆಯೇ ಮಾಡಬೇಕಾದ ಹಲವನ್ನೂ ಮಾಡಿ ಮುಗಿಸಿ ಮೇಲಾದ ಬೇರೆ ಒಂದು ಅರಣ್‌ಮನೆಯನ್ನು ತನಗೆ ಮಾಡಿಸಿ ತನಗೆ ಸೇರಿದವರಾದ ಅಮಾತ್ಯರುಗಳು, ಗೆಳೆಯರು ಮೊದಲಾದವರನ್ನು ಕ್ರಮವಾಗಿ ಒಡನೆ ಇಟ್ಟುಕೊಂಡು ಎಲ್ಲ ಅಂಗಗಳನ್ನೂ ತುಂಬಿ ಅರಣ್‌ಮನೆಯಲ್ಲುಳ್ಳ ದೊಡ್ಡ ಆಸ್ಥಾನದಲ್ಲಿ ಹಗೆಯನ್ನು ಗೆದ್ದ ಸಂತೋಷದಿಂದ ಮಂಡಿಸಿದ್ದನು.

ಆರುಣಿ ಅರಸನಿಂದ ನಡುವೆ ಮಾಡಲ್ಪಟ್ಟ ಹೊಸ ಕೆಟ್ಟ ಆಳ್ಕೆ ಬಗೆಗಳನ್ನೆಲ್ಲ ಆಮೇಲೆ ಅವನ ಅಡಿಯೊಡನೆಯೇ ತೊಲಗಿಸಿ ಬಿಟ್ಟು ನಲ್ಲಾಳ್ಕೆಸಿರಿ ಮೇಲ್ಮೆ ಪಡೆಯುವಂತೆ ಮಾಡಿ ಹಳಮೆಯಾದ ಒಕ್ಕಲುಗಳನ್ನು ನಗರದಲ್ಲೂ ನಾಡಿನಲ್ಲೂ ಎತ್ತಿನಿಲ್ಲಿಸಿದನು. ದೇವಾಲಯಗಳು, ಅರುಮೆತಪದ ಆಶ್ರಮಗಳು, ಬ್ರಾಹ್ಮಣರಿರ್ಕೆ, ತೋಟ, ಬಾವಿ, ಅಂಗಡಿ ಬೀದಿ, ಚೌಕ, (ಮೂರು ಬೀದಿ ಕೂಡುವ) ಮುಕ್ಕೂಟ,



CC-0. Jangamwadi Math Collection, Varanasi. An eGangotri Initiative

ಬೀದಿ, ಮೊದಲಾದುವನ್ನು ಹೊಸದಾಗಿಸಿ, "ತಮಗೆ ಸೇರಿದ್ದುವನ್ನು ಮಧ್ಯದಲ್ಲಿ ಕಳೆದುಕೊಂಡ ಜನರು ಅವನ್ನು ಪಡೆಯುವವರಾಗಲಿ" ಎಂದು ಕಟ್ಟಳೆ ಮಾಡಿದನು. "ಬರಿಯತನ(ದರಿದ್ರ)ವುಳ್ಳವರೂ ಉತ್ಸಾಹ ಮೊದಲಾದುವನ್ನು ಕಳೆದುಕೊಂಡು ಮುಪ್ಪಿನಿಂದ ಬಗ್ಗಿ ಹೋಗಿರುವವರೂ, ಗಂಡಂದಿರು ಕೈಬಿಟ್ಟದ್ದರಿಂದ ಬಾಳ್ಗೆಟ್ಟು ಸಂಕಟಪಡುವ ಹೆಂಗಸರೂ, ಅಂಗ ಕೊರೆಯಾದವರೂ, ಉಳಿದವರೂ ಬಂದು ಬೇಕಾದುವನ್ನು ಬೇಕಾದ ರೀತಿಯಲ್ಲಿ ಪಡೆದು ಬಾಳುವವರಾಗಿ" ಎಂದು ಸಭೆ ಸಭೆಯಲ್ಲೂ ಬೀದಿ ಬೀದಿಯಲ್ಲೂ ಮುರಜು ಬಾರಿಸಿ ಸಾರಿಸಿ ಅವರವರಿಗೆ ಬೇಕಾದು ವನ್ನು ಕೊಡುವಂತೆ ಮಾಡಿದನು.

ಕದನದಿಂ ಬಾಳ್ವವರು, ಅರಿವಿಂದ ಬಾಳ್ವವರು,
ದಾರದಿಂ ಬಾಳ್ವವರು, ಪುರುಳ್ಗಳನು ಮಾರುತಾ
ಫಲದಿಂದ ಬಾಳ್ವವರು, ನೆಲದೆ ನೆಲೆ ಮಾರದಿಹ
ವೇದದಿಂ ಬಾಳ್ವವರು, ಸಡೆಯಿಂದ ಬಾಳ್ವವರು,
ಹೆಣೆದು ಕೂಡಿಪ ಶಿಲ್ಪಸೂತ್ರದಿಂ ಬಾಳ್ವವರು,
ಮೇಲವರು ಮೊದಲಾಗಿ ಕೀಳವರು ಕಡೆಯಾಗಿ

(೪. ೨ : ೪೭—೫೨)

ಎಲ್ಲರಿಗೂ ಸ್ವಲ್ಪವೂ ದುಃಖ ಉಂಟಾಗದ ಹಾಗೆ ಮಾಡಿಸಿದನು. ಧರ್ಮ ಉನ್ನತಿ ಹೊಂದಿತು; ಪಾಪ ನೀಗಿಹೋಯಿತು. ಮೃತ್ಯು ಅಕಾಲದಲ್ಲಿ ಬಂದು ಪ್ರಾಣ ಗಳನ್ನು ಕವರಿಕೊಂಡು ಹೋಗುವುದನ್ನು ನಿಲ್ಲಿಸಿತು. ನಾಲ್ನೆಲಗಳೂ ಹುಲುಸಾದವು. ತಮ್ಮಂದಿರು ಹಗೆಗಳ ಊರೂರಿಗೂ ಹೋಗಿ ಅವರುಗಳನ್ನು ಅಡಗಿಸಿ ಬರುವವ ರಾದರು. ದರ್ಶಕನ ಸೇನೆಯೊಡನೆ ಬಂದು ಸಹಾಯಮಾಡಿದ ವೀರರುಗಳಿಗೆ ಬೇಡಿದುವನ್ನು ಉದಯನನು ಕೊಟ್ಟು ಕಳಿಸಿದನು. ಅರುಮೆ ಬೆಲೆಯ ಒಳ್ಪೊಡವೆ ಮೊದಲಾದುವನ್ನು ನಂಟರ ಮೂಲಕ ಅವನಿಗೆ ಕಳಿಸಿದನು.

ಪಟ್ಟಪಡೆದ ಪದ್ಮಾವತಿಯೊಡನೆ ಈ ರೀತಿ ಉದಯನನು ಸುಖಹೊಂದುವವನಾಗಿ ಚೆಂಗದಿರ ಸಿರಿಯುವನ ಏಳನ್ನೂ ಬೀಳನ್ನೂ ತಿಂಗಳನ್ನೂ ದಿನವನ್ನೂ ತಿಳಿಯಲಿಲ್ಲದೆ ಆನಂದ ಹೊಂದಿ ಚೆನ್ನಾಗಿ ರಾಜ್ಯಭಾರಮಾಡುತ್ತ ತನ್ನ ನಾಡನ್ನು ಸಮೃದ್ಧಿ ಗೊಳ್ಳುವಂತೆ ಮಾಡಿದನು.

ಉದಯನನು ತನ್ನ ನಾಡಿನಲ್ಲಿರುವವರ ದುಃಖವನ್ನು ಹೀಗೆ ಪರಿಹರಿಸಿದ ಬಳಿಕ, "ಮಾಡಬೇಕಾದದ್ದು ಯಾವುದು ?" ಎಂದು ಆರೈದು ಉಜ್ಜೈನಿಯಿಂದ ತನ್ನನ್ನು ಎರಿಸಿಕೊಂಡು ಬಂದ ಪಿಡಿ ಬಿದ್ದ ಎಡೆಯನ್ನು ಚೆನ್ನಾಗಿ ತಿಳಿಯುವಂತೆ ಹೇಳಿ,

CC-0. Jangamwadi Math Collection, Varanasi. An eGangotri Initiative

"ಅದರ ಎಲುಬು ತೊಗಲು ಮೊದಲಾದುವನ್ನು ಬೇಗ ತೆಗೆದುಕೊಂಡು ಬನ್ನಿ" ಎಂದು ಕೆಲವರನ್ನು ಕಳಿಸಿಬಿಟ್ಟು ಆ ಪಕ್ಕದಲ್ಲಿರುವ ಬೇಡನಾಯಕರನ್ನೂ ಕುರುಬರುಗಳನ್ನೂ ಕರಸಿ, "ನಮ್ಮನ್ನು ಹೊತ್ತುಕೊಂಡು ಬಂದು ಕಾಡಿನಲ್ಲಿ ಬಿದ್ದ ಪಿಡಿ ಮಾಡಿದ ದೊಡ್ಡ ಸಹಾಯಕ್ಕೆ ನಾವು ಮಾಡುವ ಪ್ರತ್ಯುಪಕಾರ ಯಾವುದೂ ಇಲ್ಲ. ಆದರೂ ಅದನ್ನು ಮರೆಯದೆ ಇರುವುದು ಶ್ರೇಷ್ಠತೆಯುಳ್ಳದ್ದಾದ್ದರಿಂದ ಅದು ಬಿದ್ದ ಎಡೆಯಲ್ಲಿ ಒಂದು ಮಾಡವನ್ನೆಬ್ಬಿಸಿ ಅದರಲ್ಲಿ ಅದರ ರೂಪವನ್ನು ಮಾಡಿಸಿ ಬೆಳಗು ಬೈಗುಗಳಲ್ಲಿ ಅದನ್ನು ಪೂಜಿಸಬೇಕು. ಆ ದಾರಿಯಲ್ಲಿ ಹೋಗುವವರಿಗೆ ಹಸಿವು ತೀರುವಂತೆ ಅಡಿಗೆ ಶಾಲೆಯನ್ನು ಕಟ್ಟಿಸಿ ಊಣವು ಕೊಡಬೇಕು. ದಾಹ ತೀರಿಸುವುದಕ್ಕೆ ತಣ್ಣೀರ ಹಂದರಗಳನ್ನು (ಅರವಟಿಗೆಗಳನ್ನು) ಹಾಕಿ ಕುಡಿನೀರು ಕೊಡಬೇಕು. ಯಾರೇ ಆಗಿದ್ದರೂ ಸಂಕಟಪಡುವವರಿಗೆ ತಕ್ಕ ಅನುಭವ ವಸ್ತುಗಳನ್ನು ಕೊಡಬೇಕು" ಎಂದು ಹೇಳಿ ಅವಕ್ಕೆ ಬೇಕಾದ ದ್ರವ್ಯಗಳನ್ನು ಅವರಿಗೆ ಕೊಟ್ಟು ಅವರುಗಳೊಡನೆ ಆ ಮಾಡವನ್ನು ಕಟ್ಟಿಸುವುದಕ್ಕೆ ಬೇಕಾದ ಬಡಗಿಗಳು ಮೊದಲಾದವರುಗಳನ್ನೂ ಅದರ ಆಕಾರವನ್ನು ರಚಿಸುವವರನ್ನೂ ಕಳಿಸಿದನು.

ಅದಾದ ಮೇಲೆ ಹಿಂದೆ ಹೇಳಿದಂತೆ ಆ ಪಿಡಿಯ ಎಲುಬು ಮೊದಲಾದುವನ್ನು ತೆಗೆದುಕೊಂಡು ಬಂದವರಿಗೆ ಬೇಡಿದುದನ್ನು ಕೊಟ್ಟು ಕಳಿಸಿಬಿಟ್ಟು ಅವನ್ನು ಕೌಶಾಂಬಿಯ ಪಕ್ಕದಲ್ಲಿ ಒಂದೆಡೆಯಲ್ಲಿ ರಕ್ಷಿಸಿಟ್ಟು ಅಲ್ಲಿ ಒಂದು ಗೆಲುಬಾಗಿಲನ್ನೂ ಅದರ ಮುಂದೆ ಬಹಳ ಎತ್ತರವಾದ ಮಾಡವೊಂದನ್ನೂ ಮಾಡಿಸಿ ಆ ಬಾಗಿಲಿಗೆ ಆ ಪಿಡಿಯ ಹೆಸರನ್ನಿಟ್ಟು ಆ ಮಾಡದಲ್ಲಿ ಆ ಪಿಡಿಯ ರೂಪವನ್ನು ನಿರ್ಮಿಸಿ ಆ ವಿಗ್ರಹವನ್ನು ಪೂಜಿಸತಕ್ಕವರನ್ನೂ ಉಳಿದವರನ್ನೂ ನೇಮಿಸಿ ಅನ್ನಸತ್ರಗಳನ್ನೂ ತಣ್ಣೀರು ಹಂದರುಗಳನ್ನೂ (ಅರವಟಿಗೆ) ಆ ಮಾಡದ ಪಕ್ಕದಲ್ಲೆ ನಿರ್ಮಿಸಿ ಅದನ್ನು ಬಳಸಿ ನಾಟ್ಯಗಾತಿಯರ ಕೇರಿಯನ್ನೂ ಧರ್ಮಚರಿತಗಳನ್ನು ಹೇಳುವವರುಗಳ ವಾಸದೆಡೆಗಳನ್ನೂ ಕಟ್ಟಿ, 'ತಿಂಗಳು ತಿಂಗಳೂ ಉತ್ಸವಮಾಡಬೇಕು' ಎಂದು ಕಟ್ಟಳೆಮಾಡಿ ಬೇಕಾದ ವಸ್ತುಗಳನ್ನು ಕೊಟ್ಟನು.

ಹೀಗೆ ಉದಯನನು ತನ್ನ ಕರ್ತವ್ಯಗಳನ್ನು ನೆರವೇರಿಸಿ ಸಂತೋಷಹೊಂದಿ ಇರುವಕಾಲದಲ್ಲಿ ಉಜ್ಜೈನಿನಗರದಲ್ಲುಳ್ಳ ಬ್ರಹ್ಮಚಾರಿಯೂ ವೇದ ಮೊದಲಾದುವನ್ನು ಚೆನ್ನಾಗಿ ಓದಿ ತಿಳಿದವನೂ ಪೇರ್ಯಾಣೆ ಮೊದಲಾದ ವೀಣೆ ಬಗೆಯನ್ನೂ ಬೇರೆ ಶಾಸ್ತ್ರಗಳನ್ನೂ ಚೆನ್ನಾಗಿ ಅರಿತವನೂ ಆಗಿರುವ *ಅರುಂಜುಗನೆಂಬ ಬ್ರಾಹ್ಮಣನೊಬ್ಬನು ಕೌಶಾಂಬಿಯಲ್ಲಿರುವ ತನ್ನ ಬಂಧುಗಳನ್ನು ನೋಡುವುದಕ್ಕಾಗಿ ಹೊರಟು

---

* ಅರಿಂಜಯನೆಂದು ಬೇರೆ ಗ್ರಂಥಗಳಲ್ಲಿ ಹೇಳಿದೆ.

CC-0. Jangamwadi Math Collection, Varanasi. An eGangotri Initiative

ಬಂದನು. ನಡುಹಾರಿಯಲ್ಲಿ ನೀರು ಕುಡಿಯಲು ಹೊರಟ ಆನೆಗುಂಪಿನ ನಡುವೆ ಅವನು ಸಿಕ್ಕಿಬಿದ್ದು ಭಯಪಟ್ಟು ಅಲ್ಲಿದ್ದ ಬಹು ಎತ್ತರವಾದ ವೇಂಗೈಮರವೊಂದರ ಕೊಂಬೆಯ ಮೇಲೆ ಹತ್ತಿನಿಂತು ನಾಲ್ಕು ಕಡೆಯನ್ನೂ ನೋಡಿದನು. ಆಗ ಘೋಷವತಿಯೆಂಬ ವೀಣೆ ನಾಯಕನನ್ನಗಲಿದ ಪತಿವ್ರತೆಯಂತೆ ಅಂದಗೆಟ್ಟು ನರಗಳನ್ನು ಬಿದುರು ಮೀಟುವಾಗ 'ತಾವ್, ತೀವ್' ಎಂಬ ಮೊಳಗುಳ್ಳದ್ದಾಗಿ ಅಲ್ಲಿ ಸಿಕ್ಕಿಕೊಂಡು ಬಿದ್ದಿರುವುದನ್ನು ಕಂಡನು. ಅದರ ಇನಿಯ ನಾದವನ್ನು ಕೇಳಿ ಆನೆಗಳು ಕೋಪತೊರೆದು ಶಾಂತಿಪಡೆದು ಹೋದದ್ದನ್ನರಿತು ಅವನು ಅದರ ಸಮೀಪಕ್ಕೆ ಹೋಗಿ, "ಇದು ಕಿನ್ನರರಿಂದ ಇಡಲ್ಪಟ್ಟಿದ್ದಾದರೂ ಯಕ್ಷರುಗಳು ಮೈಮರೆತು ಬಿಟ್ಟುಹೋದದ್ದಾದರೂ ದೇವಲೋಕದಿಂದ ಬಿದ್ದದ್ದಾದರೂ ಬೇರೆ ಯಾವುದಾದರೂ ಆಗಿರಲಿ" ಎಂದು ನೆನೆದು ಹಲವು ಮಲರುಗಳಿಂದ ಅರ್ಚಿಸಿ ಅದನ್ನು ಕೈಯಲ್ಲಿ ತೆಗೆದುಕೊಂಡು ಕೌಶಾಂಬಿಯನ್ನು ಸೇರಿ ಉದಯನನ ಅರಣ್ಮನೆಯ ಪಕ್ಕದೆಡೆಯಲ್ಲುಳ್ಳ ತನ್ನ ಬಂಧುಗಳನ್ನು ಹೋಗಿ ಸೇರಿ ಅವರುಗಳೊಡನೆ ಆನಂದಗೊಂಡು ಇರುವಲ್ಲಿ ಸಂಧ್ಯಾಕಾಲ ಬಂತು. ಆ ಕಾಲದಲ್ಲಿ ಅವನು ಅದನ್ನು ಬಾಜಿಸಿದನು.

ಬಾಜಿಸಲು, ಮೇಲ್ಮಾಡದ ಕಿಟಕಿಯನ್ನು ತೆರೆದಿಟ್ಟುಕೊಂಡು ಪದ್ಮಾವತಿಯೊಡನೆ ಮಾತಾಡುತ್ತ ಸಂತೋಷಗೊಂಡಿದ್ದ ಉದಯನನು ಆ ವೀಣೆಯುಲಿಯನ್ನು ಕೇಳಿ ವಿಸ್ಮಯಪಟ್ಟು ಆರೈದು ನೋಡಿ, "ಈ ಉಲಿ ನಮ್ಮ ವೀಣೆಯ ಉಲಿಯಿರಬೇಕು" ಎಂದು ತಿಳಿದು ಒಡನೆ ಅದನ್ನು ತರಿಸಲೆಣಿಸಿ ಹೊರಕ್ಕೆ ಬಂದು ತನ್ನ ಮೈಗಾವಲಿನವರನ್ನು ಹುಡುಕಿದಾಗ ಅಲ್ಲಿ ಎಚ್ಚರವಾಗಿ ಮಲಗಿದ್ದ ವಸಂತಕನು ಎದ್ದು ಬೇಗನೆ ಹೋಗಿ, "ಏನು ನಡೆಯಿತು?" ಎಂದು ಕೇಳಿದನು. ಉದಯನನು "ಘೋಷವತಿಯ ದನಿ ಇಲ್ಲಿ ಕೇಳುತ್ತಿದೆ. ನೀನೂ ಕೇಳುವವನಾಗು. ಬೇಗಹೋಗಿ ಅದನ್ನು ಬಾಜಿಸುವವನನ್ನು ಇಲ್ಲಿ ಕರೆದುಕೊಂಡು ಬಾ" ಎಂದನು. ಒಡನೆ ವಸಂತಕನು ಮಾಡದಿಂದ ಕೆಳಗಿಳಿದು ಆ ಉಲಿ ಹುಟ್ಟಿದ ಎದುರು ಮನೆಗೆ ಹೋಗಿ ಒಳಹೊಕ್ಕು ವೀಣೆಬಾಜಿಸುವವನನ್ನು ನೋಡಿ, "ಈ ವೀಣೆ ನಿನಗೆ ಹೇಗೆ ಸಿಕ್ಕಿತು?" ಎಂದು ಕೇಳಲು ಅವನು, "ಉಜ್ಜೈನಿಯಿಂದ ನಾನು ನರ್ಮದಾ ನದಿಯನ್ನು ದಾಟಿ ಬರುವಾಗ ಒಂದು ಮಲೆಯ ತಪ್ಪಲಲ್ಲಿ ಇದು ಸಿಕ್ಕಿತು" ಎಂದು ಹೇಳಿದನು. ಹೇಳಲು ವಸಂತಕನು ಆ ವೀಣೆಯೊಡನೆ ಅವನನ್ನು ಕರೆದುಕೊಂಡು ಬಂದು ತೋರಿಸಿ, "ನಾವು ಉಜ್ಜಯಿನೀ ನಗರದಿಂದ ಬರುವ ದಿನ ನಟ್ಟಿರುಳಿನಲ್ಲಿ ಭದ್ರಾವತಿ ಬಹು ವೇಗವಾಗಿ ಬರುತ್ತಿರುವಾಗ ವಿಂಧ್ಯಪರ್ವತದ ತೆಂಕದಿಕ್ಕಿನ ತಪ್ಪಲಲ್ಲಿ ಬಿದ್ದ ಘೋಷವತಿ ಇದು" ಎಂದು ಹೇಳಿದನು.

CC-0. Jangamwadi Math Collection, Varanasi. An eGangotri Initiative

ಒಡನೆ ಉದಯನನು ತಾಳದ ಸಂತೋಷವುಳ್ಳವನಾಗಿ, "ಬಾ, ನನ್ನ ನಲ್ವೀಣೆ, ಬಾ ವತ್ಸನಮೃತವೇ" ಎಂದು ಅದನ್ನು ತೆಗೆದುಕೊಂಡು, "ನನ್ನ ಜೀವಸಹಾಯ ವಾದ ಈ ವೀಣೆಯನ್ನು ತಂದುಕೊಟ್ಟ ನೀನು ಬೇಕಾದುವನ್ನು ಕೇಳುವವನಾಗು" ಎಂದು ಹೇಳಿ, ಬೇಡಿದ ಅರುಮೆಯೊಡವೆಗಳನ್ನೂ ಮಿಗಿಲಾದ ಹಣವನ್ನೂ ಒಂದು ಊರನ್ನೂ ಅರುಂಜುಗನಿಗೆ ಕೊಟ್ಟು, "ನೀನು ಈ ನಗರದಲ್ಲೇ ಇರಬೇಕು" ಎಂದು ಹೇಳಿ ಮತ್ತೂ ಬಯಸಿದುವನ್ನು ಕೊಟ್ಟು ಅವನನ್ನು ಕಳಿಸಿಬಿಟ್ಟು ತಣಿಯದ ಆಸೆಯಿಂದ ಹೊತ್ತು ಹುಟ್ಟುವವರೆಗೂ ನೆನೆಯುತ್ತಲೂ ಮನಕರಗುತ್ತಲೂ ಅದನ್ನು ತಬ್ಬುತ್ತಲೂ ಕೊಂಡಾಡಿ ವಾಸವದತ್ತೆಯನ್ನು ನೆನೆಯುತ್ತಲೇ ರಾತ್ರಿಹೊತ್ತನ್ನು ಕಳೆದನು.

ಬೆಳಗಾದೊಡನೆ ಆ ವೀಣೆಯನ್ನು ಹೊಸದುಮಾಡಿಸಿ ವಾಸವದತ್ತೆಯನ್ನು ನೆನೆದು, "ವಾಸವದತ್ತೇ! ನೀನು ಕಲಿತ ವೀಣೆ ಇಗೋ ಬಂದು ಬಿಟ್ಟಿತು. ನೀನು ಬಂದು ಇದನ್ನು ಬಾಜಿಸಿ ಸಂತೋಷಪಡುವವಳಾಗು. ನನ್ನನ್ನು ಮರತೆ" ಎಂದು ಅವಳನ್ನು ನೆನೆದು ನೆನೆದು ಹಲುಬುವವನಾಗಿ ಕಳೆದುಕೊಂಡ ತಮ್ಮಂದಿರನ್ನು ಪಡೆದೂ ಘೋಷವತಿಯನ್ನು ಪಡೆದುಕೊಂಡೂ ಸ್ವಲ್ಪವೂ ಸಂತೋಷವಿಲ್ಲದೆ ಕಾಲ ಕಳೆಯುವವನಾದನು.

ಅವನು ಹೀಗೆ ಇರುತ್ತಿರುವಲ್ಲಿ ರಾಜಗೃಹ ನಗರದಲ್ಲಿ ದರ್ಶಕನು ತಾನು ಕಾಪಾಡಿಕೊಂಡಿಟ್ಟಿದ್ದ ಸಂಘರಾಜರಿಗೆ ಸೇರಿದ ವಸ್ತುಗಳನ್ನು ಅವರ ಬಳಿ ಕಳಿಸಿ ಬಿಟ್ಟು, "ಇಲ್ಲಿ ಇರುವ ಅರಸರುಗಳನ್ನು ಸೆರೆಯಿಂದ ಬಿಡಿಸಿ ಬಳಿಕ ಕಳಿಸುವೆನು. ರುಮಣ್ವಂತನನ್ನು ಸೆರೆಯಿಂದ ಬಿಡಿಸಿ ಇಲ್ಲಿಗೆ ಬೇಗ ಕಳಿಸುವುದು" ಎಂಬದನ್ನು ಹೇಳುವಂತೆ ತನ್ನ ಕರ್ಮಕಾರರುಗಳನ್ನು ಆ ಹಗೆಗಳ ಬಳಿಗೆ ಕಳಿಸಿದನು. ಕೇಳಿದ ಅವರುಗಳು ಬಹು ಸಂತೋಷಿಸಿ,

"ಕೀಳು ಜನಗಳ ಕೂಡೆ ಸುಖವ ಪಡೆವುದಕಿಂತ
ಮೇಲು ಜನಗಳ ಕೂಡೆ ಮಿಗೆ ಹಗೆಯೆ ಇನಿದು"

(೪. ೪ : ೨೧—೨)

ಎಂದು ಹೇಳಿ ಹಿಗ್ಗಿನಿಂದ ದರ್ಶಕನನ್ನು ಹೊಗಳಿ ರುಮಣ್ವಂತನನ್ನು ಸೆರೆಯಿಂದ ಬಿಡಿಸಿ ಅವನ ಬಳಿ ಕಳಿಸಿದರು. ರುಮಣ್ವಂತ ಬಂದು ದರ್ಶಕನನ್ನು ಕಂಡು ಎಲಿಚ್ಛವಿಯರಸನ ತಮ್ಮನಾದ ಚಿತ್ರಾಂಗದನನ್ನೂ ಬೇರೆ ಅರಸರುಗಳನ್ನೂ ಸೆರೆಯಿಂದ ಬಿಡಿಸಿ ಅವರು ಗಳಿಗೆ ಬೇಕಾದುವನ್ನು ಕೊಟ್ಟು ಕಳಿಸುವಂತೆ ಮಾಡಿದ ಬಳಿಕ, ಉದಯನನಿಗೆ ನಡೆದ ಸಂಗತಿಗಳನ್ನೆಲ್ಲ ಹೇಳಿ ಎಲ್ಲೆಯಿಲ್ಲದ ಸಂತೋಷದಿಂದ ಅಲ್ಲಿ ಇದ್ದನು.

CC-0. Jangamwadi Math Collection, Varanasi. An eGangotri Initiative

ಯೂಗಿ ಕೊಟ್ಟ ಓಲೆಯನ್ನು ಚಾತಕನು ಅವೊತ್ತು ತೆಗೆದುಕೊಂಡು ಬಂದು ರುಮಣ್ವಂತನಿಗೆ ಕೊಟ್ಟನು. ಆ ಓಲೆಯಲ್ಲಿ "ನಾವೆಣಿಸಿದ ಕಾರ್ಯ ಇನಿದಾಗಿ ನೆರವೇರಿದ್ದರಿಂದ ಇನ್ನು ವಾಸವದತ್ತೆಯನ್ನು ಉದಯನನಿಗೆ ಒಪ್ಪಿಸುವುದು ಒಳ್ಳೆಯದು" ಎಂದು ಬರೆದಿತ್ತು. ಅದನ್ನರಿತ ರುಮಣ್ವಂತ ಚಾತಕನನ್ನು ಕುರಿತು, "ನಮ್ಮನ್ನು ಬಿಟ್ಟು ಅಗಲಿದ ಬಳಿಕ ನಡೆದುವನ್ನು ಹೇಳಬೇಕು" ಎನ್ನಲು ಅವನು ಅವನ್ನೆಲ್ಲ ಹೇಳಿದನು. ಒಡನೆ ರುಮಣ್ವಂತ ಅವನೊಡನೆ ಹೊರಟು ನಡುವೆ ತಂಗಬೇಕಾದ ಎಡೆಗಳಲ್ಲಿ ತಂಗಿ ಪುಂಡ್ರವೆಂಬ ನಗರವನ್ನು ಸೇರಿ ಅಲ್ಲಿ ಇದ್ದ ಯೂಗಿಯನ್ನೂ ವಾಸವದತ್ತೆ ಮೊದಲಾದವರುಗಳನ್ನೂ ನೋಡಿ, ಹೆಚ್ಚು ಸಂತೋಷಪಟ್ಟು ಅವರುಗಳೊಡನೆ ಕೌಶಾಂಬಿಯನ್ನು ಸಾರಿ ಅದರ ಹೊರಗಡೆ ಇರುವ ಮಧುಗಾಂಭೀರವೆಂಬ ತೋಪಿನಲ್ಲಿ ಹೊಸಬರಾಗಿ ಬರುವ ಅರಸರುಗಳಿಗಾಗಿ ಕಟ್ಟಿದ್ದ ಮಾಡವೊಂದರಲ್ಲಿ ವಾಸವದತ್ತೆ ಮೊದಲಾದವರು ಇರುವಂತೆ ಮಾಡಿ ತಾನು ಮಾತ್ರ ಉದಯನನ ಬಳಿ ಹೋಗುವವನಾದನು.

ರುಮಣ್ವಂತ ಹೋಗುವುದಕ್ಕೆ ಮೊದಲು ಒಂದು ದಿನ ಉದಯನನು ಘೋಷವತಿಯನ್ನು ಬಾಜಿಸುತ್ತ ಸಂತೋಷದಿಂದಿರುವಾಗ ಪದ್ಮೆ, "ಅರಸ, ನಿನ್ನನ್ನು ಸೇವಿಸಿ ವಾಸವದತ್ತೆ ಕಲ್ತು ಒಲ್ಲವಳಾದ್ದಕ್ಕೆ ಕಾರಣವಾದ ಈ ವೀಣೆಯನ್ನು ಅಡಿಯವಳಾದ ನಾನೂ ಸೇವಿಸಿ ಕಲಿಯುವುದಕ್ಕೆ ಅಪೇಕ್ಷೆಯುಳ್ಳವಳಾಗಿದ್ದೇನೆ. ಹೇಳಿಕೊಟ್ಟು ಕರುಣಿಸಬೇಕು" ಎಂದು ಮೆಲ್ಲನೆ ಹೇಳಿ ಕೈಮುಗಿದಳು. ಮುಗಿಯಲು ಅವನು ವಾಸವದತ್ತೆಯ ನೆನಪಿನಿಂದ ಮನಸಡಿಲಿ ಕರಗಿ ಬಿಕ್ಕುತ್ತ ಪದ್ಮೆಗೆ ಯಾವುದೊಂದು ಉತ್ತರವನ್ನೂ ಕೊಡದವನಾದನು.

ಅದನ್ನರಿತ ಪದ್ಮೆ, "ಈಗ ನಾವು ಮುನಿಯುವುದು ಸರಿಯಲ್ಲ" ಎಂದೂ "ವಾಸವದತ್ತೆಯನ್ನು ಇವರು ನೆನೆದು ಸಂಕಟಪಡುವುದು ನ್ಯಾಯವೇ. ಮೇಲಾದವರ ನಡವಳಿಕೆ ಇದೇ ಸರಿ" ಎಂದೂ ಎಣಿಸಿ ಯಾವುದೊಂದನ್ನೂ ಅರಿಯದವಳಂತೆ ಇದ್ದು ಬೇರೊಂದು ಕಾರ್ಯವನ್ನು ಇಟ್ಟುಕೊಂಡು ಏಳುವವಳಂತೆಯೇ ಎದ್ದು ಗೆಳತಿಯರು ಬಳಸಲು ತನ್ನ ಮಾಡಕ್ಕೆ ಹೋಗಿ ಸೇರಿದಳು.

ಆವೊತ್ತು ವಸಂತಕನು ಉದಯನನನ್ನು ನೋಡಿ, "ಇದುವರೆಗೂ ಇಬ್ಬರು ಹೆಂಡತಿಯರನ್ನೂ ಸಮವಾಗಿ ನೆನೆದು ನಡೆಯುತ್ತಿದ್ದ ನೀನು ವಾಸವದತ್ತೆಯನ್ನು ನೆನೆದು ಇಂದು ಇವಳಲ್ಲಿ ಪ್ರೀತಿಗುಂದಿದ್ದದ್ದಕ್ಕೆ ಕಾರಣವೇನು ?" ಎಂದು ಕೇಳಲು ಅವನು ಅದನ್ನೂ ಕೇಳದವನಾದನು; ಪದ್ಮಾವತಿಯನ್ನೂ ನೆನೆಯಲಿಲ್ಲ. ಬಳಿಕ ನಳಗಿರಿಯನ್ನಡಗಿಸಿ ಅದರ ಹೆಡತಲೆಯಲ್ಲಿ ಏರಿದಾಗ ವಾಸವದತ್ತೆಯನ್ನು ಕಂಡದ್ದು ಮೊದಲು ಅವಳು ಬೆಂಕಿಬಾಯಿಗೆ ಬಿದ್ದು ಸತ್ತಳೆಂಬುದು ಕಡೆಯಾಗಿ ಇರುವ ಸುದ್ದಿಗಳನ್ನು

CC-0. Jangamwadi Math Collection, Varanasi. An eGangotri Initiative

ಎಡೆಬಿಡದೆ ಹೇಳಿ ಅಲವತ್ತುಕೊಂಡು ಹಾಸಿಗೆಯಲ್ಲಿ ಮಲಗಿದನು. ಮಲಗಲು ಸ್ವಲ್ಪ ನಿದ್ದೆ ಬಂತು. ಆಗ ಹಾಲ್ಗಡಲೆಡೆಯಲ್ಲುಳ್ಳ ಬಿಳಿಯ ಗೂಳಿಯೊಂದು ಬಂದು ತಂಗಿದ ಬೆಳ್ದಾವರೆ ಹೂವೊಂದನ್ನು ಒಬ್ಬ ದೇವತಾಸ್ತ್ರೀ ತನಗೆ ಕೊಟ್ಟದ್ದಾಗಿ ಒಂದು ಕನಸು ಕಂಡನು. ಒಡನೆ ಎದ್ದು ಅರುಹನನ್ನು ನಮಸ್ಕರಿಸಿ ಒಬ್ಬ ಮುನಿಗಳನ್ನು ಕಂಡು ವಂದಿಸಿ ತಾನು ಹಿಂದಿನ ರಾತ್ರಿ ಕಂಡ ಕನಸನ್ನು ತಿಳಿಸಿ ಅದರ ಫಲವನ್ನು ಹೇಳಬೇಕೆಂದು ಬೇಡಿದನು.

ಆ ಮುನಿಗಳು, "ವಾಸವದತ್ತೆ ಬೆಂಕಿಯಲ್ಲಿ ಮುಳುಗಿ ಸತ್ತಳೆಂದು ಎಣಿಸಿರುವೆ. ಅದು ಸುಳ್ಳು. ಅವಳನ್ನು ಬೇಗ ಪಡೆಯುತ್ತೀಯೆ. ಪಡೆದ ಬಳಿಕ ಅವಳಲ್ಲಿ ವಿದ್ಯಾಧರರ ಲೋಕವನ್ನು ಆಳುವ ಚಕ್ರವರ್ತಿಯಾಗಲು ತಕ್ಕ ಒಬ್ಬ ಮಗನನ್ನು ಪಡೆಯುವೆ" ಎಂದು ಹೇಳಿ ಅದಕ್ಕಿರುವ ಕಾರಣವನ್ನೂ ಹೇಳಿದರು. ಕೇಳಿದ ಉದಯನನು, "ಮುನಿಗಳ ವಾಕ್ಕು ಎಂದೂ ವ್ಯರ್ಥವಾಗುವುದಿಲ್ಲ. ವಾಸವದತ್ತೆಯನ್ನು ನಾವು ಎದುರು ಕಾಣುವುದೂ ನಿಜವಾಗುವುದೊ" ಎಂದು ಎಣಿಸಿಕೊಂಡಿದ್ದನು. ಇರುವಲ್ಲಿ ರುಮಣ್ವಂತನ ಬರವನ್ನು ಬಾಗಿಲುಕಾಯುವವರು ತಿಳಿಸಿದರು. ಒಡನೆ ಉದಯನನು "ಬರಲಿ" ಎಂದು ಹೇಳುತ್ತ ತಾನೇ ಎದ್ದು ಬೇಗನೆ ಹೋಗಿ ತನ್ನಡಿಗೆರಗಿದ ರುಮಣ್ವಂತನ ಕೈಯನ್ನು ಹಿಡಿದುಕೊಂಡು ಯೂಗಿಯನ್ನು ಪಡೆದ ಸಂತೋಷವನ್ನು ಹೊಂದಿ ತನ್ನ ಅಂತಃಪುರವನ್ನು ಸೇರಿದನು.

ಆಮೇಲೆ ಉದಯನನು ಅವನೊಡನೆ ತನಿಯಾಗಿ ಒಂದೆಡೆಯಲ್ಲಿ ಕುಳಿತು, "ನಡೆದುವನ್ನು ಹೇಳು" ಎಂದು ಕೇಳಲು, ರುಮಣ್ವಂತ ತಾನು ಸೆರೆಪಟ್ಟದ್ದು ಮೊದಲಾದ ಸಂಗತಿಗಳನ್ನು ಬೆಳಗುವಂತೆ ಹೇಳಿಬಿಟ್ಟು, "ಇಲ್ಲಿ ನಡೆದ ಸಂಗತಿಗಳನ್ನು ಹೇಳು" ಎಂದು ಅಲ್ಲಿ ಬಂದ ವಸಂತಕನನ್ನು ಕೇಳಲು, ಅವನು ಉದಯನನು ಘೋಷವತಿಯನ್ನು ಪಡೆದದ್ದನ್ನು ಹೇಳಿದನು. ಆಗ ಉದಯನನು ಅದನ್ನು ಕಲಿತ ವಾಸವದತ್ತೆಯನ್ನು ನೆನೆದು ಮತ್ತೂ ಹಲುಬುವವನಾದನು. ಅವನ ಮನೋವ್ಯಥೆಯನ್ನು ಒಂದು ಬಗೆಯಾಗಿ ಹೋಗಲಾಡಿಸ ಬಯಸಿದ ವಸಂತಕನು, "ಹೆಂಡತಿಯರಿಬ್ಬರಲ್ಲಿ ಅರಿವಿನಲ್ಲೂ ನಡವಳಿಕೆಯಲ್ಲೂ ಶ್ರೇಷ್ಠಳಾದವಳು ಯಾರು? ಯಾರಲ್ಲಿ ನಿನಗೆ ಪ್ರೀತಿ ಹೆಚ್ಚು?" ಎಂದು ಕೇಳಲು, "ನನಗೆ ಶ್ರೇಷ್ಠಳಾದವಳು ವಾಸವದತ್ತೆಯೇ. ನಾನು ತಪವಿಲ್ಲದವನಾದ್ದರಿಂದ ಅವಳು ಬೆಂಕಿಯಲ್ಲಿ ಮರೆಯಾದಳು" ಎಂದು ಹೇಳಿ ಉದಯನನು ಮತ್ತೂ ಮನಮರುಗುವವನಾದನು.

ಕಂಡ ವಸಂತಕನು, "ವಾಸವದತ್ತೆಯನ್ನು ಮರಳಿ ಬರಿಸುವ ಹಿರಿಯರನ್ನು ದರ್ಶಿಸಿ ನಮಸ್ಕಾರ ಮಾಡುವುದಕ್ಕೆ ನಾವು ಮಗಧಕ್ಕೆ ಹೋದಾಗ ಪದ್ಮೆಯನ್ನು

CC-0. Jangamwadi Math Collection, Varanasi. An eGangotri Initiative

ಕಂಡು ಅವಳನ್ನು ಪ್ರೀತಿಸಿ ಅವಳ ಮಯವಾಗಿ ಇದ್ದೆಯಲ್ಲಾ; ಹಾಗೆ ಇದ್ದದ್ದು ನಿನಗೆ ಗುಣವೋ? ನಿನ್ನ ಮನಸ್ಸು ಒಂದು ಮಾರ್ಗದಲ್ಲಿ ನಿಲ್ಲುವುದಿಲ್ಲ" ಎಂದು ಹೇಳಲು ಉದಯನನು, "ವಾಸವದತ್ತೆಗೂ ಪದ್ಮೆಗೂ ರೂಪದಲ್ಲಿಯೂ ಗುಣಗಳಲ್ಲಿಯೂ ಸ್ವಲ್ಪವೂ ಬೇರ್ಪಾಟಿಲ್ಲದ್ದರಿಂದ ನಾನು ಪ್ರೀತಿಸಲಾದೆನು. ಅಲ್ಲದೆಯೂ ಪದ್ಮೆಯನ್ನು ನಾನು ಪ್ರೀತಿಸಿದ್ದಕ್ಕೆ ಕಾರಣ ಕರ್ಮಫಲವೂ ಆಗಿದೆ. ಅದನ್ನು ತಡೆಯುವದಕ್ಕೆ ಯಾರಿಂದಾದೀತು?" ಎಂದು ಹೇಳಿದನು. ಕೇಳಿದ ವಸಂತಕನು, "ಅರಿಯದವನೆಂದು ನನ್ನನ್ನು ನಿಂದಿಸಬಾರದು. ನಾನು ಹೇಳುವುದನ್ನು ಮನಸ್ಸಿಟ್ಟು ಕೇಳಬೇಕು. ಹಿಂದೆ ರಾಜಗೃಹದ ಹೊರಗಡೆ ಇರುವ ತೋಪಿನಲ್ಲಿ ನಾವು ಕಂಡ ಪಡೆಯಲರಿದಾದ ಹಿರಿಯವರು ಇಂದು ಬಂದಿದ್ದಾರೆ. ವಾಸವದತ್ತೆಯನ್ನು ಬರಿಸಿ ತರುವುದಾಗಿಯೂ ಅವರಾಗಿಯೇ ಹೇಳಿದರು. ಆದ್ದರಿಂದ ನೀನು ಕೆಲವು ದಿನ ಪದ್ಮೆಯನ್ನು ಬಿಟ್ಟು ಒಂಟಿಯಾಗಿ ಪರಿಶುದ್ಧನಾಗಿರುವುದು ಒಳ್ಳೆಯದು" ಎಂದು ಹೇಳಿದನು. ಹೇಳಿದೊಡನೆ ಉದಯನನು ಆಶ್ಚರ್ಯಪಟ್ಟು ಹೋಗಿ ಪದ್ಮಾವತಿಯನ್ನು ನೋಡಿ, "ಉಳಿದಿರುವ ಹಗೆಗಳನ್ನು ಕೆಡಿಸುವುದಕ್ಕೆ ಬೇಕಾದ ಮೇಲಾದ ಆಲೋಚನೆಯೊಂದುಂಟು. ಅದನ್ನು ನಾನು ಒಂಟಿಯಾಗಿದ್ದು ಮಾಡಬೇಕು. ಆದ್ದರಿಂದ ಗೆಳತಿಯರೊಡನೆ ನೀನು ಬೇರೆ ಎಡೆಗೆ ಹೋಗು" ಎಂದು ಹೇಳಿ ಕಳಿಸಿಬಿಟ್ಟು ಅವಳ ಅಂತಃಪುರವನ್ನು ಶುದ್ಧಮಾಡಿ ಬೆಳಕು ಹೊತ್ತಿಸಿ ತಾನೂ ಶುದ್ಧನಾಗಿ ಬೆಳ್ಳುಡೆಯುಟ್ಟು, "ದೇವರೇ! ವಾಸವದತ್ತೆಯನ್ನು ನನಗೆ ಕೊಡಬೇಕು" ಎಂದು ಹೇಳಿಕೊಂಡೂ ವೀಣೆಯನ್ನು ಕೈಯಲ್ಲಿ ತಬ್ಬಿಕೊಂಡೂ ಮಲಗುವವನಾದನು.

ಅವನು ಹಾಗೆ ಮಲಗಿರುವಾಗ ಬೇರೆ ಹೆಂಗಸರಲ್ಲಿ ಅವನಿಗೆ ಅಪೇಕ್ಷೆ ಇಲ್ಲದಿರುವುದನ್ನೂ ಹಗೆಗಳನ್ನು ಗೆಲ್ಲುವುದಕ್ಕೆ ದರ್ಶಕನ ಸ್ನೇಹವನ್ನು ಪಡೆಯ ಬಯಸಿಯೇ ಅವನ ತಂಗಿಯಾದ ಪದ್ಮಾವತಿಯನ್ನು ಅವನು ಮದುವೆಮಾಡಿಕೊಂಡನೆಂಬುದನ್ನೂ ರಾತ್ರಿ ಹಗಲೂ ವಾಸವದತ್ತೆಯನ್ನೇ ನೆನೆದು ಮಲಗಿದಾಗಲೂ ಕೂಗಿಕೊಂಡು ಹಲವು ಬಗೆಯಲ್ಲಿ ಹಲುಬುತ್ತಲೇ ಇರುವನೆಂಬುದನ್ನೂ ತೋರಿಸಿ ವಾಸವದತ್ತೆಯನ್ನು ಸಮಾಧಾನಮಾಡ ಬಯಸಿ ಮಂತ್ರಿಗಳು ಅವಳನ್ನು ಸಿವಿಗೆಯಲ್ಲೇರಿಸಿ ಕರೆದುಕೊಂಡು ಬಂದು, "ನಿನ್ನ ನಾಯಕನ ಸ್ಥಿತಿಯನ್ನು ನೀನು ನೋಡುವವಳಾಗು" ಎಂದು ಆ ಅಂತಃಪುರದೊಳಕ್ಕೆ ಕಳಿಸಿದರು. ಆ ಸಮಯದಲ್ಲಿ ಉದಯನನು, "ವಾಸವದತ್ತೇ! ನಿನಗೆ ವೀಣೆಯನ್ನು ಕಲಿಸುವಾಗ ನಿನ್ನ ನೋಟದಿಂದ ನೊಂದ ನಾನು ನಿನ್ನನ್ನಗಲಿ ತಾಳಲಾರದವನಾಗಿದ್ದೇನೆ, ನನ್ನನ್ನು ಮರೆತೆಯೋ?" ಎಂದು ಕೂಗಿಕೊಂಡೂ ಅಲ್ಲಿರುವ ಹೂಮಾಲೆಗಳನ್ನು ಬಾಡುವಂತೆ ಮಾಡುವ ಬೇಯುವ

CC-0. Jangamwadi Math Collection, Varanasi. An eGangotri Initiative

ಉಸುರುಳ್ಳವನಾಗಿಯೂ ಕನಸಿನಲ್ಲಿ ಅವನು ವ್ಯಥೆಪಡುವುದನ್ನು ವಾಸವದತ್ತೆ ಕಂಡಳು. ಕಂಡು, "ನನಸಿನಲ್ಲೂ ನನ್ನ ಜೀವಾಧಾರನಿರುವುದು ಈ ರೀತಿ ತಾನೇ ? ತಾವಲ್ಲದೆ ಬೇರೆ ದೈವವಿಲ್ಲದ ಹೆಂಗಸರ ವಿರಹಿನಲ್ಲಿ ಅವರುಗಳನ್ನು ನೆನೆದು ವ್ಯಥೆ ಪಡುವುದು ಶ್ರೇಷ್ಠರಾದ ಗಂಡಂದಿರ ಸ್ವಭಾವವೆಂದು ಗ್ರಂಥಗಳು ಹೇಳುವುದನ್ನು ಇಂದು ನೇರವಾಗಿ ಕಂಡೆನು" ಎಂದು ತಣಿಯದ ಸಂತೋಷವುಳ್ಳವಳಾಗಿ "ಹೀಗೆ ಒಳ್ಳೆಯ ನಡವಳಿಕೆಯುಳ್ಳ ಇವರಿಗೆ ಪರದಲ್ಲಿಯೂ ಸುಖವುಂಟಾಗಲಿ" ಎಂದು ಹೇಳಿ ಅವನಿಗೆ ಕೈ ಮುಗಿದು ಮೆಲ್ಲನೆ ಪಕ್ಕಕ್ಕೆ ಹೋಗಿ ಘೋಷವತಿಯನ್ನು ಕಂಡು ಅಗಲಿದ ಮಗುವನ್ನು ಕಾಣುವ ತಾಯಿಯಂತೆ ತಣಿವು ಹೊಂದಿ ಅದನ್ನು ಮೆಲ್ಲನೆ ಎತ್ತಿಕೊಂಡು ಬಾಜಿಸತೊಡಗಿದಳು. ಆ ಉಲಿ ಅವನ ಕಿವಿಯಲ್ಲಿ ಬೀಳಲು, "ವಾಸವದತ್ತೇ! ಬಂದೆಯಾ!" ಎಂದು ಕೂದಲು ಮೊದಲಾಗಿ ಅಂದವಾದ ಬೆನ್ನನ್ನು ತಡವಿ, "ನನ್ನನ್ನು ಬಹುದಿನ ಅಗಲಿ ನೀನು ಹೇಗೆ ತಾಳಿಕೊಂಡಿದ್ದೆ ! ಅದನ್ನು ಹೇಳಬೇಕು" ಎಂದು ಕೇಳಲು, ಅವಳು ಆಶ್ಚರ್ಯಪಟ್ಟು ಉತ್ತರ ಹೇಳದವಳಾಗಿ ನಮಸ್ಕಾರ ಮಾಡಿ ಸುಮ್ಮನೆ ಇದ್ದಳು. ಅವನು ಮತ್ತೂ, "ವನವಿಹಾರ ಮಾಡಬಯಸಿ ನಾವು ಲಾವಾಣಕ ಪರ್ವತದ ತಪ್ಪಲಲ್ಲಿ ತಂಗಿದ್ದಾಗ ಒಂದು ದಿನ, 'ಎಲೆ ಮೊದಲಾದುವನ್ನು ತೆಗೆದುಕೊಂಡು ಬರಬೇಕು' ಎಂದು ನೀನು ಹೇಳಲು ಕೇಳಿ ನಾನು ತೆಗೆದುಕೊಂಡು ಬರುವುದಕ್ಕೆ ಕಾಡಿಗೆ ಹೋದ ಕಾಲದಲ್ಲಿ ಮನೆಯಲ್ಲಿ ಬೆಂಕಿಬಿದ್ದು ಇನಿದಾದ ಪ್ರಾಣವನ್ನು ನೀಗಿದ ಚೆಲುವೊಡವೆಯು ಮುಗ್ಧೆಯೇ! ತಕ್ಕ ಅಲಂಕಾರಗಳನ್ನೆಲ್ಲ ತೆಗೆದುಹಾಕಿ ಕೃಶವಾಗಿ ಬೇರೊಬ್ಬಳಂತೆ ತೋರುತ್ತಿರುವೆಯಲ್ಲಾ! ಬೆಂಕಿಯಲ್ಲಿ ಬೆಂದವರ ರೀತಿ ಹೀಗೇಯೋ ? ಇದನ್ನು ಹೇಳಬೇಕು" ಎಂದು ಅವಳ ಮೈಯನ್ನು ಮುಟ್ಟಿ ನಿದ್ರಿಸತೊಡಗಿದನು.

ಆಗ ವಸಂತಕನು ಬಂದು ಅವಳನ್ನು ಕುರಿತು, "ನೀವು ಇಲ್ಲಿ ಬರಬೇಕಾದ್ದು ನಾಳೆಯ ದಿನ ಯೂಗಿಯೊಡನೆಯೇ ಸರಿ. ನಾಯಕನು ಯಾವಾಗಲೂ ನಿಮ್ಮಲ್ಲಿ ಪ್ರೀತಿಯಿಂದಿರುವುದನ್ನು ತೋರಿಸುವುದಕ್ಕೇ ಇವತ್ತು ಕರೆದುಕೊಂಡು ಬಂದೆವು" ಎಂದು ಹೇಳಲು, ಅವಳು ಅಗಲಿಕೆಗೆ ಅಂಜಿ ನಡುಗುವ ಮನಸ್ಸಿನಿಂದ ತನ್ನ ಮೇಲೆ ಬಿದ್ದಿದ್ದ ಉದಯನನ ಕೈಯನ್ನು ಮೆಲ್ಲನೆ ಎತ್ತಿ ಹಾಸಿಗೆಯ ಮೇಲಿಟ್ಟುಬಿಟ್ಟು ಅವನನ್ನು ನಮಸ್ಕರಿಸಿ ಒಡಲಿನಿಂದ ಹೊರಟು ಹೋಗುವ ಪ್ರಾಣದಂತೆ ಹೊರಕ್ಕೆ ಹೋಗಿ ಶಾಂಕಿಯತ್ತಾಯಿಯನ್ನೂ ಯೂಗಿಯನ್ನೂ ಸೇರಿದಳು. ಉದಯನನು ಹೊರಳಿ ಎದ್ದು, "ನನಗೆ ಏಕೆ ಉತ್ತರ ಕೊಡಲಿಲ್ಲ?" ಎಂದು ಅವಳನ್ನು ತಬ್ಬುವುದಕ್ಕೆ ಹೋಗಿ ಅವಳನ್ನು ಅಲ್ಲಿ ಕಾಣದವನಾಗಿ ಕೆಲಸಗೆಟ್ಟು ನಿದ್ದೆಯ ಮಬ್ಬುಹೋಗಿ,

CC-0. Jangamwadi Math Collection, Varanasi. An eGangotri Initiative

ಶ್ರೇಷ್ಠವಾದ ಮಾಣಿಕ್ಯವನ್ನು ಪಡೆದ ದರಿದ್ರನೊಬ್ಬನು ಅದನ್ನು ಆಳವಾದ ನೀರ್‌ನೆಲೆಯಲ್ಲಿ ಹಾಳು ಮಾಡಿಬಿಟ್ಟು ದುಃಖ ಪಡುವಂತೆ ನಿದ್ದೆಯಲ್ಲಿ ಕಂಡ ತನ್ನ ಪ್ರಾಣಾಧಾರೆಯನ್ನು ಕಣ್ಣು ತೆರೆದ ಮೇಲೆ ಕಾಣದ್ದರಿಂದ ಹಲುಬುವವನಾದನು.

ಅದನ್ನರಿತ ವಸಂತನು ಬಹು ಬೇಗ ಹೋಗಿ, "ಹೀಗೆ ರಾತ್ರಿಯೂ ಹಗಲೂ ದುಃಖದಿಂದ ಹಲುಬುವುದು ಅರಸರಿಗೆ ರೀತಿಯಲ್ಲ" ಎಂದು ತಕ್ಕ ಕಾರಣಗಳನ್ನು ತೋರಿಸಿ ಹೇಳಿದನು. ಉದಯನನು, "ವಾಸವದತ್ತೆ ನಿನ್ನೆ ರಾತ್ರಿ ನನ್ನ ಸಜ್ಜೆ ಮನೆಯಲ್ಲಿ ಮೆಲ್ಲನೆ ಬಂದು ಘೋಷವತಿಯನ್ನು ಎತ್ತಿಕೊಂಡು ಬಾಜಿಸುತ್ತಿದ್ದಳು; ಆಗ ಅವಳ ಎಣ್ಣೆಯಿಲ್ಲದೆ ಕೊಳೆಕಟ್ಟಿ ಮಾರ್ಪಟ್ಟ ಕೂದಲ ಜಡೆಯುಳ್ಳ ಬೆನ್ನನ್ನೂ ಹಣೆಯನ್ನೂ ತಡವಿ ವ್ಯಥೆ ಕಳೆದು ನಿದ್ದೆ ಹೋದೆನು. ನಿದ್ದೆ ಹೋದಾಗ ಅವಳು ನನ್ನನ್ನು ಬಿಟ್ಟು ಹೊರಟು ಹೋದಳು. ನನ್ನ ಮನಸ್ಸು ನನಗೆ ವಶವಾಗಿಲ್ಲ. ನಾನೇನು ಮಾಡಲಿ?" ಎಂದು ಹೇಳಲು, "ಕನಸಿನಲ್ಲಿ ಕಂಡ ವಸ್ತುವನ್ನು ನನಸಿನಲ್ಲಿ ಪಡೆಯುವುದು ದೇವತೆಗಳಿಗೂ ಸಾಧ್ಯವಲ್ಲ. ಈ ಮಾತನ್ನು ಕೇಳಿದರೆ ಉಳಿದವರು ನಗುತ್ತಾರೆ. ವಾಸವದತ್ತೆಯ ಆಕಾರವನ್ನು ತಾಳಿಕೊಂಡ ಯಕ್ಷಿಯೆಂಬ ದೇವತೆ ಇಲ್ಲಿ ಉಂಟು. ಅದನ್ನು ತಡೆಯುವುದಕ್ಕೆ ತಕ್ಕ ಮಂತ್ರವನ್ನು ನಾನು ಬಲ್ಲೆ" ಎಂದು ಇದೇ ರೀತಿಯ ಹುರುಳಿಲ್ಲದ ಮಾತುಗಳು ಹಲವನ್ನು ಹೇಳಿ ಬಹಳ ನಿಶ್ಚಯದಿಂದ ಇದ್ದನು. ಸ್ವಲ್ಪ ಹೊತ್ತಿನಲ್ಲಿ ಹೊತ್ತು ಹುಟ್ಟಿತು.

ಒಡನೆ ಉದಯನನು ಕಣ್‌ತೊಳೆದು ನಿಯಮಗಳನ್ನು ಮುಗಿಸಿಕೊಂಡು ಗೊರಸು ಮತ್ತು ಕೋಡುಗಳಿಗೆ ಹೊನ್ನು ತೊಡಿಸಿದುವೂ ಹೊಸ ಬಟ್ಟೆಗಳನ್ನು ಹೊದೆಯಿಸಿದುವೂ ಆದ ಹಸುಗಳು ಹಲವನ್ನು ವಾಸವದತ್ತೆಯನ್ನು ನೆನೆದು ಅರುಮೆ ವೇದಗಳನ್ನರಿತ ಬ್ರಾಹ್ಮಣರಿಗೆ ಏಳುನಲ ಕೊಟ್ಟು, ತನ್ನ ಕನಸನ್ನು ಬೇರೆ ಯಾರಿಗೂ ಹೇಳದೆ "ವಿರಹವುಳ್ಳವರಿಗೆ ಉಂಟಾಗುವ ಕಾರ್ಯ ಇದೇಯೋ?" ಎಂದು ನೆನೆಯುತ್ತ ಇದ್ದನು. ಆಗ ವಸಂತಕನು ಬಂದು, ನಾವು ಹಿಂದೆ ಮಗಧದಲ್ಲಿ ಕಂಡ ಹಿರಿಯರು ಈ ನಗರದ ಪಕ್ಕದಲ್ಲಿರುವ ಮಧುಗಾಂಭೀರವನವೆನ್ನುವ ತೋಪಿನಲ್ಲಿ ಬಂದು ಇಳಿದು ಕೊಂಡಿದ್ದಾರೆ, ಅಲ್ಲಿಗೆ ಹೋಗೋಣ" ಎಂದು ಹೇಳಲು ಉದಯನನು ಸಂತೋಷಿಸಿ ತೇರೇರಿ ಅವನೊಡನೆ ಆ ತೋಪನ್ನು ಹೋಗಿ ಸೇರಿದನು.

ಅಲ್ಲಿರುವ ಮಾಡದ ಒಂದು ಕೋಣೆಯಲ್ಲಿ ತಪೋವೇಷದಿಂದ ಯೂಗಿ ಕೂತಿದ್ದನು. ಮತ್ತೊಂದು ಕೋಣೆಯಲ್ಲಿ ಶಾಂಕಿಯತ್ತಾಯೊಡನೆ ವಾಸವದತ್ತೆ ಇದ್ದಳು. ವಸಂತಕನು ಮೊದಲು ಇವನ ಬರವನ್ನು ಯೂಗಿಗೆ ತಿಳಿಸಿ, ಉದಯನನೊಡನೆ ಹೋಗಿ ಅವನನ್ನು ತೋರಿಸಲು, ಉದಯನನು, "ಇವನು ನಾವು ಮಗಧದಲ್ಲಿ ಕಂಡ

CC-0. Jangamwadi Math Collection, Varanasi. An eGangotri Initiative

ಮುನಿ ಅಲ್ಲ, ಯೋಗಿಯೇ. ಇವನನ್ನು ತಬ್ಬುವುದಕ್ಕೆ ಮನಸ್ಸು ತ್ವರೆಪಡುತ್ತಿದೆ. ಇದನ್ನು ಚೆನ್ನಾಗಿ ಅರಿಯಬೇಕು" ಎಂದು ಆಶ್ಚೈಯುವಲ್ಲಿ ಅವನ ಎದೆಯಲ್ಲಿರುವ ಆನೆಯ ಕೊಂಬಿನಿಂದುಂಟಾದ ಕಲೆ ಕಾಣಬಂತು. ಕಾಣಲು ಸಂದೇಹ ಪರಿಹಾರ ವಾಗಿ ಬಿಸಿಯುಸಿರುಬಿಟ್ಟು ಎದ್ದುನಿಂತು,

"ಎಡರಿರದ ನೀತಿಗಳ ಯೂಗಂದರಾಯಾ!
ನರುಗಂಪು ನೀಳ್ಗೂದಲವಳ ಮರುಹುಟ್ಟಿನಿಂ
ಮರಳಿ ತರುವುರು ಬಲ್ಮೆವಡೆದ ಮುನಿ! ನೀನಿಂತು
ಹೊಸಗೈಮೆಗೊಂಡುದನು ತಿಳಿದೆನಾನಿಂದು;
ನಿನಗೆ ವಂದನೆ" ಎಂದು ತನ್ನ ಚಂದನವೆದೆಗೆ
ಹೂಮಾಲೆ ನಸುಕುವೊಲು ತಟ್ಟನೆಯೆ ತಪ್ಪಿದನು.
ನೀಜೇನಿನೊಡಗಲೆತ ನವಿಹಾಲಿನಂದದಲಿ
ನಲಿವುಪ್ಪಿ ಹೊಮ್ಮುತಿಹ ಮೊಗದವನು ತಾನಾಗಿ
"ತೊರೆದರಿಗೆ ತಕ್ಕುದಲ್ಲೈ, ನಿನ್ನ ಹಿರಿದಾದ
ಕೃಪೆಯ ಬಗೆ"

(೪. ೭: ೧೮೬–೯೫)

ಎಂದು ಹೇಳಿ, "ಇನ್ನು ಯಾವುದನ್ನು ಉದ್ದೇಶಿಸಿಯಾದರೂ ಬಿಟ್ಟು ಹೋಗುವೆ ಯಾದರೆ ನನ್ನ ಜೀವ ಹೋಗುವುದು" ಎಂದು ಹೇಳಿದಾಗ, ಯೂಗಿ "ವಾಸವ ದತ್ತೆಯನ್ನು ಬೇಗ ಇವನಿಗೆ ಕಾಣಿಸಬೇಕು" ಎಂದು ಹೇಳಿದನು. ಒಡನೆ ಗೆಳೆಯರು ವಾಸವದತ್ತೆ, ಸಾಕುತಾಯಿಯೊಡನೆ ಇದ್ದ ಕೋಣೆಯಲ್ಲಿ ಅವನನ್ನು ಕರೆದುಕೊಂಡು ಹೋದರು. ಆಗ ವಾಸವದತ್ತೆ, "ನಿಮಗೆ ದೊಡ್ಡ ಅನುಕೂಲ ಉಂಟಾಗುವುದೆಂಬು ದನ್ನು ತಿಳಿಸಿ ನಿಮ್ಮ ಸ್ನೇಹಿತರು ಹೇಳಿದ್ದನ್ನು ಒಪ್ಪಿ ಕೈಕೊಂಡು ನಿಮ್ಮ ಕಟ್ಟಳೆ ಯನ್ನು ಪಡೆಯದಿದ್ದ ಅಪಚಾರವನ್ನು ಮಾಡಿದ, ಸರಿಯಾದ ಪಾತಿವ್ರತ್ಯವನ್ನು ಕಲಿಯದ, ಕೀಳಾದವಳು ನಾನು" ಎಂದು ನಾಚಿಕೊಂಡು ನಡುಗಿ ಎದ್ದು ಕೈಮುಗಿದು ತನ್ನ ಕೂದಲು ಅವನ ಕಾಲಿನಲ್ಲಿ ಹೊರಳುವಂತೆಯೂ ಕಣ್ಣೀರು ಅವನ ಹೊರ ಅಡಿಯನ್ನು ನೆನೆಸುವಂತೆಯೂ ನಮಸ್ಕರಿಸುತ್ತ ಬಿದ್ದಿದ್ದಳು. ಉದಯನನು ಅವಳನ್ನು ಎತ್ತಿ ಹಲವು ಸಲ ತಬ್ಬಿ, ದೂರ ನಿಂತ ಶಾಂಕಿಯತ್ತಾಯನ್ನು ನೋಡಿ,

"ದುಃಖದಾ ಕಾಲದಲಿ ನೆರವು ನಮಗಾಗಿ
ಸುಖವನೀವುದಕೊಪ್ಪಿ ನಡುವೆ ಕೈಬಿಡದೆ

CC-0. Jangamwadi Math Collection, Varanasi. An eGangotri Initiative

ತಾಯಿಗಿಂ· ಮಿಗಿಲಾಗಿ ಪೊರೆದ, ಮೇಲ್ತಪವ
ತಳೆದ ಹಿರಿಯಳೆ, ನಿಮ್ಮ ಮೈಗೆ ನಾನ್ಗೈದ
ಕಿರಿದೊಂದು ಉಪಕಾರ ಬತ್ತಿಹೋಗದೆಯೆ,
ಆಲಬಿತ್ತಿನ ಹಾಗೆ ಹೆಚ್ಚಿ ಲೋಕದಲಿ
ಉಪಕಾರವಿತ್ತುದು . . . .

(೪. ೭ : ೨೧೯–೨೫)

ಎಂದು ಪ್ರೇಮಮಯವಾದ ಮಾತುಗಳನ್ನು ಅವಳಿಗೆ ಬಹಳವಾಗಿ ಹೇಳಿದನು.

ಬಳಿಕ ವಾಸವದತ್ತೆಯ ಇರಿಕೆಯನ್ನರಿತು ಉದಯನನು ಮನಸೊಂದನು. ಅವಳನ್ನು ತಾನು ಪಡೆದ ಒಳ್ಳೆಯ ಸುದ್ದಿಯನ್ನು ನಗರದವರಿಗೆ ಮುರಜುಬಾರಿಸಿ ತಿಳಿಸಿದನು. ಅರಿತ ನಗರದವರು ತಂತಮ್ಮ ಮಾಡಗಳ ಮೇಲೆ ಗುಡಿ ಎತ್ತಿಕಟ್ಟಿ ಉತ್ಸವ ಮಾಡಿದರು. ಯೂಗಿಯ ಸಾಮರ್ಥ್ಯವನ್ನೂ ಅವನ ಪ್ರೀತಿಯ ಶ್ರೇಷ್ಠತೆಯನ್ನೂ ವಾಸವದತ್ತೆಯ ಮನಃಸ್ಥೈರ್ಯವನ್ನೂ ವಿಸ್ಮಯಪಟ್ಟು ಗಮನಿಸಿ ಹಲವು ಬಗೆಯಲ್ಲಿ ಕೊಂಡಾಡಿದರು. ಆ ಮೇಲೆ ಉದಯನನೂ ವಾಸವದತ್ತೆಯೂ ಯೂಗಿಯೂ ಪಂಚ ವರ್ಣದ ಪತಾಕೆಗಳು ಹಲವು ಅಳ್ಳಾಡುವಂತೆ ಆನೆಯ ಹೆಡತಲೆಯಲ್ಲಿ ಕೊಂಡುಬಂದ ಪುಣ್ಯತೀರ್ಥಗಳಿಂದ ಮಿಂದು ಬೆಲೆಯೆಲ್ಲೆಯಿಲ್ಲದ ಶ್ರೇಷ್ಠವಾದ ಆ ಆಭರಣಗಳನ್ನು ಅಲಂಕರಿಸಿಕೊಂಡು ಮಿಗಿಲು ಸುಖದಿಂದ ಮಹಿಮೆಗೊಂಡು ಬೆಳಗಿದರು.

ಆಮೇಲೆ ಉದಯನನು ಯೂಗಿಗೆ ಉಪಚಾರ ನುಡಿಗಳನ್ನು ಹೇಳುವುದು ಬೇರ್ಪಾಟನ್ನು ಸೂಚಿಸುವುದೆಂದು ಎಣಿಸಿ ಬಂದನ್ನೂ ಹೇಳದವನಾಗಿ ಶಾಂಕಿಯತ್ತಾಯಿಯ ಕರುಣೆಯ ಹೆಚ್ಚಿಗೆಯನ್ನು ಮತ್ತೂ ಕೊಂಡಾಡಿದನು. "ನಿಮ್ಮಕ್ಕನನ್ನು ಬಂದು ನೋಡಿ ಹೋಗಬೇಕು" ಎಂದು ಪದ್ಮಾವತಿಗೆ ಅವನು ಹೇಳಿ ಕಳಿಸಲು ಒಡನೆ ಅವಳು ಉದಯನನಿಗೆ ವಾಸವದತ್ತೆ ಪ್ರಾಣಾಧಾರೆಯೆಂಬುದನ್ನು ಚೆನ್ನಾಗಿ ಅರಿತವಳಾದ್ದರಿಂದ ಆ ಮಾತನ್ನು ಪ್ರೀತಿಯಿಂದ ಒಪ್ಪಿಕೊಂಡು ಶ್ರೇಷ್ಠವಾದ ಒಡವೆಗಳನ್ನು ಕಾಣಿಕೆಯಾಗಿ ತೆಗೆದುಕೊಂಡು ಗೆಳತಿಯರು ಸುತ್ತಿಬರಲು ಅರಸನನ್ನು ಬಿಟ್ಟು ಒಂಟಿಯಾಗಿದ್ದ ಸಮಯವನ್ನರಿತು ತನ್ನ ಬರವನ್ನು ಅವಳಿಗೆ ಮೊದಲೇ ತಿಳಿಸಿ ಹೋಗಿ ವಾಸವದತ್ತೆಯನ್ನು ನಮಸ್ಕರಿಸಿದಳು. ನಮಸ್ಕರಿಸಲು ಅವಳು ಪದ್ಮೆಯನ್ನು ತಬ್ಬಿ ಎತ್ತಿ, "ಪಾತಿವ್ರತ್ಯದಲ್ಲಿ ಇನ್ನೂ ಮೇಲ್ಪಡುವವಳಾಗು" ಎಂದು ಆಶೀರ್ವಾದ ಮಾಡಿ ಮಿಗಿಲು ಸಂತೋಷಹೊಂದಿದಳು. ಆ ಮೇಲೆ, ಇಬ್ಬರೂ ಆನೆಯ ದಂತದಿಂದ ಮಾಡಲ್ಪಟ್ಟ ಕಾಲುಗಳುಳ್ಳ ಮಂಚದ ಮೇಲಿರುವ ಮೃದುಹಾಸೊಂದರಲ್ಲಿ ಹತ್ತಿ ಕುಳಿತು ಒಂದು ತಾವರೆ ಮಲರಸಲ್ಲಿ ಸೇರಿ ತಂಗಿರುವ ಇಬ್ಬರು ಸಿರಿದೇವಿಯರಂತೆ ಬೆಳಗಿದರು.

CC-0. Jangamwadi Math Collection, Varanasi. An eGangotri Initiative

ಉದಯನನು ದೊಡ್ಡ ಆಸ್ಥಾನದಲ್ಲಿ ಹಲವರು ಹಿರಿಯರು ಬಳಸಿರಲು ಕುಳಿತು ಯೂಗಿಯನ್ನು ಕುರಿತು, "ಉಜ್ಜೈನೀ ನಗರದಲ್ಲಿ ನಾನು ಪಡೆದ ಸೆರೆಯನ್ನು ಪರಿಹರಿಸಿದ ಮೇಲೆ ಮತ್ತೂ ನಿನಗೆ ಉಂಟಾದ ಮೋಸದ ಸಾವಿಗೂ ವಾಸವದತ್ತೆ ಬೆಂಕಿಯಲ್ಲಿ ಸತ್ತಳೆಂಬ ಮೋಸದ ಸುದ್ದಿಗೂ ಇದ್ದ ಕಾರಣಗಳನ್ನು ತಿಳಿಯಹೇಳಬೇಕು" ಎಂದು ಕೇಳಲು ಯೂಗಿ, "ಪಾಂಚಾಲ ರಾಜನು, ಕೌಶಾಂಬಿಯನ್ನು ತನ್ನದಾಗಿ ಮಾಡಿಕೊಂಡಿದ್ದದ್ದನ್ನೂ ಪ್ರದ್ಯೋತನನೊಡನೆ ಸ್ನೇಹಗೊಳ್ಳುವುದಕ್ಕೆ ಪ್ರಯತ್ನಿಸಿ ಅದಕ್ಕೆ ತಕ್ಕ ಕಾಲವನ್ನು ಅವನು ನೋಡುತ್ತಿದ್ದದ್ದು ಮೊದಲಾದುವನ್ನೂ ಒಳಬೇಹಿನವರಿಂದ ಚೆನ್ನಾಗಿ ತಿಳಿದು ಅವನ ಮಾರ್ಪಾಟನ್ನೂ ದೊಡ್ಡ ಪ್ರಯತ್ನವನ್ನೂ ಕುಗ್ಗಿಸಬೇಕೆಂದು ನಿಶ್ಚಯಿಸಿ ಅವನನ್ನು ಗೆದ್ದು ಹಳೆಯ ಅರಸಾಳ್ಕೆಯನ್ನು ಪಡೆಯುವುದರಲ್ಲಿ ಸ್ವಲ್ಪವೂ ಗಮನವಿಲ್ಲದೆ ವಾಸವದತ್ತೆಯನ್ನು ಒಂದು (ಸ್ವಲ್ಪ) ಹೊತ್ತೂ ಅಗಲದೆ ಸುಖಪಡುತ್ತಿದ್ದ ನಿನ್ನ ಸ್ವಭಾವವನ್ನು ಬೇರ್ಪಡಿಸಬೇಕೆಂದೂ ದರ್ಶಕನನ್ನು ನಿನಗೆ ಪಡೆಸಹಾಯಕನೆಂದು ನಿಶ್ಚಯಿಸಿಯೂ ಪಿಂಗಲ ಕಟಕರನ್ನು ನಿನ್ನೊಡನೆ ಸೇರಿಸಲೆಣಿಸಿಯೂ ಹೀಗೆ ಮಾಡಿದೆನು. ಎಣಿಸಿದುವೆಲ್ಲ ದೈವವಶದಿಂದ ಸರಿಯಾಗಿಯೇ ನೆರವೇರಿದುವು. ನಿನ್ನಲ್ಲಿಯೂ ವಾಸವದತ್ತೆಯಲ್ಲಿಯೂ ನಾವುಗಳು ಎಣಿಸಿದುವೆಲ್ಲ ಕೊನೆ ಮುಟ್ಟಿ ನೆರವೇರಿದ್ದಕ್ಕೆ ಕಾರಣ ಈ ಶಾಂಕಿಯತ್ತಾಯಿಯ ದೊಡ್ಡ ಉಪಕಾರವೇ. ನಿನ್ನ ಕಟ್ಟಳೆಯಿಲ್ಲದೆ ಬಾಧ್ಯತೆಯಿಂದ ನಾನು ಮಾಡಿದುವನ್ನು ತಾಳಿಕೊಂಡು ಕರುಣಿಸಬೇಕು" ಎಂದು ಹೇಳಿದನು. ಕೇಳಿದ ಉದಯನನು, "ನನ್ನ ಮೇಲ್ಮೆಯನ್ನು ನಾನು ಪಡೆಯುವಂತೆ ಮಾಡಿದೆಯೆಂಬುದನ್ನು ಬೇರೆಯವರಿರುವಾಗ ಹೇಳುವೆನಾದರೆ ಅದು ಬೇರ್ಪಾಟುಂಟುಮಾಡುವುದು. ನಾವಿಬ್ಬರೂ ಒಂದೇ ಜೀವ" ಎಂದು ಉಪಚಾರ ಹೇಳಿ ಅವನನ್ನು ಕರೆದುಕೊಂಡು ಅರಮನೆಗೆ ಹೋದನು.

ಹೋದಬಳಿಕ ಅವನು ಪದ್ಮೆಯನ್ನು ನೋಡಿ, "ವಾಸವದತ್ತೆಯೊಡನೆ ನೀನು ಒಂದು ಪಾತ್ರೆಯಲ್ಲೆ ಉಣ್ಣಬೇಕು" ಎಂದು ಹೇಳಿದಾಗ, ಅವಳು ನಮಸ್ಕರಿಸಿ,

"ಹಿರಿಯ ತಗುಮೆಯ ಪತಿವ್ರತದ ಹಿರಿಯವಳೊಡನೆ
ಅಗಲಿದ್ದ ಅನಿತು ತಿಂಗಳಲೆಲ್ಲ ಅಗಲದೆಯೆ
ಕೂಡಿ ಅಲ್ಲಿಯೆ ಇಹುದ ಬೇಡುವೆನು, ಅಡಿಗಳೇ!
ಆ ವರವ ನೀಡುವುದು; ಕೋರಿಕೆಯಿದೆನದು."

(೪. ೮ : ೯೩-೫)

ಎಂದು ಬೇಡಿದಳು. ಉದಯನನು ಅವಳನ್ನು ಪ್ರೀತಿಯಿಂದ ಬಹಳ ಕೊಂಡಾಡಿ ಕಳಿಸಿದನು. ಅದು ತಿಳಿದ ವಾಸವದತ್ತೆ ಪದ್ಮಾವತಿಯಲ್ಲಿ ಅವನು ಇಟ್ಟಿದ್ದ ಪ್ರೀತಿ

CC-0. Jangamwadi Math Collection, Varanasi. An eGangotri Initiative

ಯನ್ನು ನೆನೆದು ಬಹಳ ಕೋಪಗೊಂಡಳು. ಅದನ್ನು ಕಂಡ ಉದಯನನು ಅವಳನ್ನು ಕುರಿತು, "ಅರಿವಿನಲ್ಲೂ ಸಹಜ ಸೌಂದರ್ಯದಲ್ಲೂ ನಿನ್ನನ್ನು ಹೋಲಿರುವುದರಿಂದಲೇ ಪದ್ಮೆಯನ್ನು ಮದುವೆಮಾಡಿಕೊಂಡೆ" ಎಂದು ತಿಳಿಯಹೇಳಲು, ಪದ್ಮೆ ತನ್ನನ್ನು ಹೋಲುವವಳೆಂಬ ಮಾತು ಮನಸ್ಸನ್ನು ನೋಯಿಸಲು ವಾಸವದತ್ತೆ ಕಡೆಗಣ್ಣು ಕೆಂಪಾಗಿ ಅತ್ತ ಹೊರಟುಹೋದಳು. ಆಗ ಅವನು ಅವಳನ್ನು ಹಲವು ರೀತಿಯಲ್ಲಿ ಹೊಗಳಿ, ಕೊಂಡಾಡಿ, "ರೂಪದಲ್ಲಲ್ಲದೆ ಪೆಣ್ಮೆಯಲ್ಲಿ ನಿನ್ನನ್ನು ಅವಳು ಹೋಲುವುದಿಲ್ಲ" ಎಂದು ಅವಳು ಸಂತೋಷಿಸುವುದಕ್ಕೆ ತಕ್ಕ ಇನಿದಾದ ನುಡಿಗಳು ಹಲವನ್ನು ನುಡಿದು ಸಮಾಧಾನಮಾಡಿಯೂ ತಿಳಿಸಿಯೂ ಮರುಳುಗೊಳಿಸಿಯೂ ಸಂತೋಷಿಸಿಯೂ ಅವಳ ಮುನಿಸನ್ನು ತೀರಿಸಿದನು. ಆಮೇಲೆ ಕಂಡವರು ವಿಸ್ಮಯಪಡುವಂತೆ ಒಬ್ಬರನ್ನೊಬ್ಬರು ಅಗಲದೆ ಇರುವವರಾದರು.

ಹಾಗೆ ಇರುವ ಕಾಲದಲ್ಲಿ, ಉದಯನನು ತನ್ನ ಪರಿಜನದವರೆಲ್ಲರನ್ನೂ ಇಟ್ಟುಕೊಂಡು ರುಮಣ್ವಂತನಿಗೆ ಸೇನಾಪತಿ ಪಟ್ಟವನ್ನು ಕೊಟ್ಟು 'ಏನಾದಿ' ಉಂಗುರವನ್ನು ತಾನೇ ಅವನ ಬೆರಳಲ್ಲಿ ಇಟ್ಟದ್ದಲ್ಲದೆ ಹಲವು ಲಕ್ಷ ಹೊನ್ನು ವರಮಾನವುಳ್ಳ ಹಲವು ಊರುಗಳನ್ನೂ ನಾಲ್ಕು ಬಗೆಯ ರಥಗಳನ್ನೂ ಕೊಟ್ಟು ಪದ್ಮೆಯ ಗೆಳತಿಯಾದ 'ಇರಾಶನ್ಯೆ' ಎಂಬವಳನ್ನು ಅವನಿಗೆ ಬಹಳ ವೈಭವದಿಂದ ಮದುವೆಮಾಡಿಸಿ ಜಯಂತಿ ನಗರವನ್ನೂ ಲಾವಾಣಕ ನಗರವನ್ನೂ ಕೊಟ್ಟು, "ಹಿರಿಯರನ್ನು ಕಂಡು ಸೇವೆ ಮಾಡಿಕೊಂಡು ಆ ಯೆಡೆಯಲ್ಲಿ ಇದ್ದು ನಾವು ಇಷ್ಟಪಟ್ಟ ಕಾಲದಲ್ಲಿ ಇಲ್ಲಿ ಬಂದು ಹೋಗುವವನಾಗು" ಎಂದು ಹೇಳಿ ಅವನನ್ನು ಕಳಿಸಿದನು. ಆ ಮೇಲೆ ಚೇದಿನಾಡನ್ನೂ ವೈಶಾಲಿ ನಗರವನ್ನೂ ಯೂಗಿಗೆ ಕೊಟ್ಟು ಆ ಸುದ್ದಿಯನ್ನು ಆ ನಾಡಿನವರೂ ನಗರದವರೂ ಅರಿತುಕೊಳ್ಳುವಂತೆ ಶ್ರೀಮುಖವನ್ನು ಕಳಿಸಿ ತಿಳಿಸಿದನು. ವೃಷಭಕನಿಗೆ ಮುಸ್ಸೆಯೂರೆಂಬ ಹೆಸರುಳ್ಳ ಒಂದು ತಲೆನಗರವನ್ನೂ ಕಾಡುನಾಡು ಐವತ್ತನ್ನೂ ಕೊಟ್ಟು ಮತ್ತೂ ಕೆಲವು ವರಮಾನಗಳನ್ನು ಕೊಟ್ಟು, "ಪುಷ್ಪಕನಗರವನ್ನು ಸೇರಿ ಸ್ನೇಹಿತರೊಡನೆ ಸಂತೋಷಗೊಂಡಿದ್ದು ಕರೆದ ಮೇಲೆ ಬಾ" ಎಂದು ಅವನನ್ನು ಕಳಿಸಿದನು. ವಸಂತಕನಿಗೆ ಹನ್ನೊಂದು ನಗರಗಳನ್ನು ಕೊಟ್ಟದ್ದರ ಜೊತೆಗೆ ಒಂದೊಂದು ದಿನಕ್ಕೂ ಸಾವಿರ ಹೊನ್ನು ವೇತನ ಕೊಟ್ಟು, "ಯಾವಾಗಲೂ ನನ್ನೊಡನೆ ವಾಸವಾಗಿರು" ಎಂದು ಕಟ್ಟಳೆಮಾಡಿದನು. 'ಇಶ್ಯೆಚ್ಚನ್' ಮೊದಲಾದ ಗೆಳೆಯರಿಗೆ ಹಲವು ಊರುಗಳನ್ನು ಕೊಟ್ಟು ಇಷ್ಟವಾದ ಎಡೆಗಳಲ್ಲಿ ಹೋಗಿ ಇರುವಂತೆ ಮಾಡಿಸಿದನು. ತಾನು ಉಜ್ಜೈನೀ ನಗರದಲ್ಲಿ ಸೆರೆಯಲ್ಲಿದ್ದ ಕಾಲದಲ್ಲಿ ಹಲವೆಡೆಗಳಲ್ಲಿ ಮರಸಿಕೊಂಡಿದ್ದು ಕಾಪಾಡಿಕೊಂಡು ಬಂದ

CC-0. Jangamwadi Math Collection, Varanasi. An eGangotri Initiative

ವೀರರುಗಳನ್ನು ಡಂಗುರಹೊಡಸಿ ಬರಮಾಡಿಕೊಂಡು ಬೇಡಿದುವನ್ನು ಕೊಟ್ಟು ಕಳಿಸಿಬಿಟ್ಟು ಯುದ್ಧದಲ್ಲಿ ಸತ್ತವರ ಸಂತತಿಯವರನ್ನು ತಿಳಿದು ಕರಸಿ ಅವರುಗಳಿಗೆ ಅಪೇಕ್ಷಿಸಿದುವನ್ನಿತ್ತನು. ಚಾತಕನೆಂಬ ಕುಲಾಲನನ್ನು ಕರಸಿ ಅವನಿಗೆ ಹಿರಿಕುಂಬಾರ ಪಟ್ಟವನ್ನು ಕೊಟ್ಟು, "ನೀನು ಚಿಂತೆಯಿಲ್ಲದೆ ಲಾವಾಣಕ ನಗರದಲ್ಲಿರು" ಎಂದು ಹೇಳಿ ಅವನಿಗೆ ಎರಡು ಊರುಗಳನ್ನು ಕೊಟ್ಟನು. ತನಗಾಗಿ ಬಂದು ಮಗಧನಾಡಿನಲ್ಲಿ ಕಷ್ಟಪಟ್ಟು ಸಹಕರಿಸಿದ ಜನರಿಗೆ ಬಯಸಿದ ವಸ್ತುಗಳನ್ನು ಕೊಟ್ಟು ತಂತಮ್ಮ ಊರುಗಳಿಗೆ ಹೋಗಿ ಇರುವಂತೆ ಕಳಿಸಿದನು. ಆದಿತ್ಯಧರ್ಮನೆಂಬ ವೀರನಿಗೆ ಒಂದೂರು ಕೊಟ್ಟನು. ಯುದ್ಧದಲ್ಲಿ ಪ್ರಾಣಬಿಟ್ಟ ಸತ್ಯಕಾಯನೆಂಬ ವೀರನ ಮಕ್ಕಳನ್ನು ಬರಮಾಡಿಕೊಂಡು ಅವರುಗಳ ಕೂಟದವರಲ್ಲಿ ನಾಯಕತನವನ್ನು ಪಡೆದುಕೊಂಡಿರುವ ಪದವಿಯನ್ನು ಅವರುಗಳಿಗೆ ಕೊಟ್ಟನು. ಯೂಗಿಯನ್ನು ಮಟ್ಟಿಗೆ ತನ್ನೊಡನೆ ಇರುವಂತೆ ಮಾಡಿಬಿಟ್ಟು ಅವನೊಡನೆ ಇದ್ದ ಪಡೆಯವರು ಹಲವರನ್ನೂ ತಕ್ಕ ಎಡೆಗಳಲ್ಲಿ ನಿಲ್ಲುವಂತೆ ಬೇಡಿದುವನ್ನು ಕೊಟ್ಟು ಕಳಿಸಿದನು. ತನ್ನ ತಾಯ ಬಳಿ ಹೋಗಿ ನಮಸ್ಕಾರ ಮಾಡಿ, "ಬೇಕಾದ ದಾನಗಳನ್ನು ಮಾಡುವವಳಾಗು" ಎಂದು ಬಹಳ ವರಮಾನವುಳ್ಳ ಒಂದು ನಾಡನ್ನು ಕೊಟ್ಟನು. ವಾಸವದತ್ತೆಗೂ ಪದ್ಮೆಗೂ ದೇವಿಯರಿಗೆ ಕೊಡತಕ್ಕ ವೃತ್ತಿಯನ್ನು ಕೊಟ್ಟನು. ಆಟ, ಪಾಟ, ಚೆಲುವು ಎಂಬುವುಗಳಲ್ಲಿ ಮಿಗಿಲಾದ ಚೇಟಿಯರನ್ನು ಎರಡು ಭಾಗವಾಗಿ ಮಾಡಿ ಮತ್ತೂ ಅವರುಗಳಿಗೆ ಕೊಟ್ಟು ಅವರುಗಳೊಡನೆ ಬಹಳ ಸಂತೋಷಿಸಿ ವಾಸಮಾಡುವವನಾದನು.

ಹೀಗಿರುವಲ್ಲಿ ಒಂದು ದಿನ ಬಾಗಿಲು ಕಾಯುವವನು ಬಂದು ನಮಸ್ಕಾರ ಮಾಡಿ, "ಪ್ರದ್ಯೋತನನ ದೂತರು ಬಾಗಿಲಲ್ಲಿ ಬಂದು ನಿಂತಿದ್ದಾರೆ" ಎಂದನು. ಉದಯನನು, "ಅವರುಗಳನ್ನು ಬರಬಿಡು" ಎನ್ನಲು,

"ನೆಲನಾಳ್ವ ದೊರೆಗಳಿಗೆ ಕಣ್ಣೆನಲು ನೆಲೆಗೊಂಡ
ನೀತಿಶಾಸ್ತ್ರಗಳ ಮಿಗೆಯೋದಿರುವ ನಾಲಗೆಯಳ್ ;
ಕಲ್ತು ನಮ್ರತೆಯಾಂತು ದ್ವೇಷವನು ರಾಗವನು
ನೆರೆ ನೀಗಿ ಬಗೆಬಗೆಯ ತತ್ತ್ವಭೇದಗಳಲ್ಲಿ
ಅಡಗಿದರ್ಥವ ಕುರುಹಿನಿಂದ ನಿರಿವಿಡಿದರಸಿ
ಜೀನ್ ನೆನಸಿದಂತಿರುವ ನುಡಿಗಳಿಂ ತಿಳಿಯಾಗಿ
ತಾನು ತಿಳಿದರಿವಂಥ ಸಹಜಗುಣದರಿವಿನವಳ್ ;
ಅಂಗಗಳ ಕಡಿದೊಡಂ, ಉಸಿರ್ಮೊದಲ ತಿರಿಚಿದೊಡಂ,

CC-0. Jangamwadi Math Collection, Varanasi. An eGangotri Initiative

ನಿಲಿಸಿ ಪಲ ಸೂಜಿಗಳ ದಟ್ಟಯಿಸಿ ನಾಟಿದೊಡಂ,
ಮುನಿದು ಹಲಬಗೆಯ ಕೇಡುಗಳ ಕಾಣಿಸಿದೊಡಂ,
ಕಾಣಿಸದೆ ಹಲವು ಸನ್ಮಾನಗಳ ಮಾಡಿದೊಡಂ,
ಮಾರ್ಪಟ್ಟು ಬೇರೆಯದ ನುಡಿಯದವಳ್ ; ಪೆರೆಯೊಡವೆ
ಯೆದೆಯು ದೊರೆಯೊಡನೆ ಕುರಿತೊರೆಯದಿಹ ಭಾವದವಳ್ ;
ಇಂಥದನು ಮಾಡೆಂಬ ಅಪ್ಪಣೆಯೆ ಇರದೊಡಂ
ನೆಲೆಗೊಂಡ ದೊರೆಯ ಮನವರಿದು ಮುನ್ನವೆ ಅದನು
ಮಾಡಿ ಮುಗಿಸುವ ಯತ್ನದವಳು ; ಹೊಂದದ ಹಗೆಗಳ್
ಮೇಲಾದುವನು ಮಗುಳೆ ಮಾಡಿದೊಡಮರಿತೊಡಂ
ಜಾಡಿ ನುಡಿ ನುಡಿಯದೆಯೆ ಹೊಗಳುವಾ ಗುಣದವಳು ;
ಅಲ್ಪರಾ ಬಾಯ್ನುಡಿಯನುಳಿದೊಗೆದು ಸಲ್ಲವರ
ನಿಶ್ಚಯದ ಶಾಸ್ತ್ರ ಮಾತುಗಳ ಕಿವಿಯೊಳಕೊಂಡು
ವಿನಯವಾಂತವಳು ; ಸವಿನುಡಿಯುವಳು—ಇಂತಪ್ಪ
ಹುರುಳ್‌ನುಡಿಯ ಪದ್ಮೆಯೆಂಬವಳೊಡನೆ ''

(೪. ೧೦ : ೧೯—೩೫)

ಮೇಲ್ಮೆಯುಳ್ಳ ಕಾರ್ಯಕಾರರೂ ಗಣಕರೂ ತಿಣೆಯವರೂ ಕಾವಲಾಳುಗಳೂ ಆದ ಇವರುಗಳು, ಐವತ್ತು ಯುವನ ಬಂಡಿ ಮೊದಲಾದ ವಸ್ತುಗಳು ಹಲವನ್ನು ತಂದಿಟ್ಟು, ಸಾವಿರ ಗೆಳತಿಯರನ್ನೂ ಮೇಲೆ ಹೇಳಿದ ನರ್ಮದೆ ಮೊದಲಾದ ನಾಟಕದ ಹೆಣ್ಣು ಗಳನ್ನೂ ಇತರರನ್ನೂ ಒಳಕ್ಕೆ ಕರೆದುಕೊಂಡು ಬಂದು ನಿಲ್ಲಿಸಿ ಉದಯನನಿಗೆ ತೋರಿಸಿ, "ಇವನ್ನೂ ಇವರುಗಳನ್ನೂ ನಿಮ್ಮೆಡೆ ಸೇರಿಸಬೇಕೆಂಬುದು ನಮ್ಮ ಅರಸನ ಕಟ್ಟಳೆ'' ಎಂದು ತಿಳಿಸಿದರು. ಆಗ ಪದ್ಮೆಯೆಂಬ ಹುರುಳೊರೆಯ ಹೆಣ್ಣು ನಮಸ್ಕಾರ ಮಾಡಿ ಹತ್ತಿರ ಹೋಗಿ ಪ್ರದ್ಯೋತನನು ಕೊಟ್ಟ ಶ್ರೀಮುಖವನ್ನು ವಿನಯದಿಂದ ಉದಯನನ ಮುಂದೆ ನೀಡಿದಳು. ಒಡನೆ ಅವನು ಪ್ರೀತದಿಂದ ಇಳಿದು ಮಿಗಿಲಾದ ಭಕ್ತಿಯಿಂದ ಕೈಗಳಿಂದ ಎತ್ತಿಕೊಂಡು ಅದನ್ನು ಓದಿ ನೋಡಿದನು. ಅದರಲ್ಲಿ, "ಪ್ರದ್ಯೋತನ ಅರಸನ ಓಲೆಯನ್ನು ಉದಯನನು ನೋಡಲಿ. ನಿನ್ನ ನೆರವನ್ನು ಪಡೆಯ ಬಯಸಿದ ನಾನು ಯುದ್ಧಮಾಡಿ ನಿನ್ನನ್ನು ಗೆಲ್ಲುವುದು ಅರಿದೆಂದು ನೆನೆದು ಮಾಯದಾನೆಯನ್ನು ತೋರಿಸಿ ನಿನ್ನನ್ನು ಹಿಡಿದುಕೊಂಡು ಬರುವಂತೆ ಹಿಂದೆ ನನ್ನ ಮಂತ್ರಿ ಮೊದಲಾದವರನ್ನು ಕಳಿಸಿದೆನು ; ಈಗ ಆ ನೆನವನ್ನು ಬಿಟ್ಟು ಬಿಟ್ಟೆನು. ನಿನ್ನ ತಂದೆಯಾಗಿಯೇ ನನ್ನನ್ನು ಭಾವಿಸಬೇಕೆಂದು ಬಯಸಿದ್ದೇನೆ.

CC-0. Jangamwadi Math Collection, Varanasi. An eGangotri Initiative

ನಾನೂ ಪಟ್ಟದ ದೇವಿಯೂ ತೃಪ್ತಿ ಪಡುವಂತೆ ವಾಸವದತ್ತೆಯೊಡನೆ ನೀನು ಇಲ್ಲಿ ಬಂದು ಸಂತೋಷವನ್ನು ಉಂಟುಮಾಡು. ಪಾಂಚಾಲನನ್ನು ಗೆದ್ದು ನೀನು ಜಯ ಗೊಂಡದ್ದನ್ನು ಕೇಳಿದೆನು. ನಾನು ಮಾಡಬೇಕಾದ್ದನ್ನು ನೀನು ಮಾಡಿದೆ. ನಿನ್ನ ಕೊಡೆನೆಳಲಲ್ಲಿ ತಂಗಿ, ಲೋಕ ಸುಖಪಡುವ ಹಾಗೆ ಮಗುವನ್ನು ಸಾಕುವವರ ಹಾಗೆ ಕಡೆಗಣಿಸದೆ ಕಾಪಾಡಿ ಹೊಗಳುಪಡೆಯುವಂತೆ ಬಾಳು; ಯೂಗಿಯನ್ನು ಬೇಗನೆ ಈಯೆಡೆಗೆ ಕಳುಹು. ಅವನನ್ನು ನೋಡಬೇಕೆಂದೂ ಬಯಕೆ ನನಗೆ ಬಹಳವಾಗಿ ಉಂಟು. ಇದರಲ್ಲಿ ಬರೆದಿರುವವನ್ನೆಲ್ಲ ನಾನು ಆಸೆಯಿಂದ ಬರೆದಿರುವೆನೆಂದು ಎಣಿಸಿಕೊ" ಎಂಬುದು ಬರೆಯಲ್ಪಟ್ಟಿತ್ತು.

ಉದಯನನು ಎಲ್ಲವನ್ನೂ ನೋಡಿ ಅವನ್ನು ಮನಸ್ಸಿನಲ್ಲಿ ಅಡಗಿಸಿಕೊಂಡು ಪದ್ಮೆಯನ್ನು ಕುರಿತು, "ವಾಸವದತ್ತೆ ಬೆಂಕಿಯಲ್ಲಿ ಬಿದ್ದದ್ದು ಸುಳ್ಳು ಸುದ್ದಿಯಾದರೂ ಆ ಸುದ್ದಿಯನ್ನು ಈ ಓಲೆಯಲ್ಲಿ ಏಕೆ ಬರೆಯಲಿಲ್ಲ?" ಎಂದು ಕೇಳಲು ಅವಳು ಕೈ ಮುಗಿದು, "ನಮ್ಮ ಚಕ್ರವರ್ತಿ ಈ ಸುದ್ದಿಯನ್ನು ಕೇಳಿ ಬಹಳ ವ್ಯಥೆ ಪಟ್ಟು ಅರಿವಿನಲ್ಲಿ ಶ್ರೇಷ್ಠರಾದ ಒಬ್ಬ ಮುನಿಗಳ ಬಳಿ ಹೋಗಿ ಒಂದನ್ನೂ ಹೇಳದೆ ಮುಖ ಬಾಡಿಸಿಕೊಂಡು ಅವರ ಮುಂದೆ ನಿಂತನು. ಒಡನೆ ಅವರು, ನಿಮ್ಮ ಮಂತ್ರಿಗಳೊ ಡನೆ ಆರೈದು ತಿಳಿದವರ ಹಾಗೆ, 'ವಾಸವದತ್ತೆ ಮರಸಿಕೊಂಡಿರುವ ದಿನಗಳು ಇಷ್ಟು; ಅವಳು ನಿಮ್ಮನ್ನು ಬಂದು ಸೇರುವ ಕಾಲ ಇಂಥದು' ಎಂದು ತೊಟ್ಟ ಮಾಲೆಯನ್ನು ಎತ್ತಿದ ಹಾಗೆ ಹೇಳಿದ್ದಲ್ಲದೆ ಇಲ್ಲಿಯವರೆಗೂ ಉಳ್ಳ ಸಂಗತಿಗಳನ್ನೆಲ್ಲ ಬೆಳಗುವಂತೆ ಹೇಳಿದರು. ಆ ಮುನಿಗಳು ಪ್ರೀತಿಯುಳ್ಳವರಾದ್ದರಿಂದ ಅದನ್ನು ಅರಸನು ತಿಳಿದು ಅಡಗಿದನು. ಅರಸರ ತಲೆವಾ! ನಾನು ಹೇಳಿದುವು ಹೊಂದು ತ್ತವೆಯೆ?" ಎಂದು ಹೇಳಿದಳು; ಅದಕ್ಕೆ ಉದಯನನು, "ಎಲ್ಲ ಸರಿಯಾಗಿಯೇ ಇವೆ" ಎಂದು ಹೇಳಿ, ಆ ಮುನಿಗಳನ್ನು ಹೊಗಳಿ ಇನಿಯ ಗೆಳೆಯರೊಡನೆ ಹೋಗಿ ಅಲ್ಲಿ ಇಡಲ್ಪಟ್ಟಿರುವುವಾದ ಹಲವು ಪುರುಳುಗಳನ್ನು ನೋಡಿ ಸಂತೋಷಪಟ್ಟು ಬಂದವರಿಗೆ ಇನಿನುಡಿಗಳನ್ನು ಹೇಳಿ ಆ ಸಂಗತಿಗಳನ್ನೆಲ್ಲ ವಾಸವದತ್ತೆಗೆ ಅವರುಗಳು ಹೇಳುವಂತೆ ಮಾಡಿಸಿ ಅವರುಗಳಿಗೆ ತನಿಯೆಡೆಗಳನ್ನು ಬೇರೆ ಬೇರೆಯಾಗಿ ಮಾಡಿಸಿ ಉಪಚರಿಸಿ ಬೇಕಾದುವನ್ನು ಕೊಟ್ಟನು. ಯೂಗಿಯನ್ನು ಕುರಿತು, "ನೀನು ಪ್ರದ್ಯೋತನನ ಬಳಿ ಹೋಗಿ ಇಲ್ಲಿ ನಡೆದುವನ್ನೆಲ್ಲ ಹೇಳಿ ನಿನ್ನ ನೀತಿಶಾಸ್ತ್ರಪಾರಂಗ ತತ್ವವನ್ನೂ ಚೆನ್ನಾಗಿ ಬೆಳಗಿಸಿ ತಾಮಸ ಮಾಡದೆ ಬೇಗನೆ ಬಾ" ಎಂದು ಹೇಳಿದನು.

ಹಾಗೆ ಹೇಳಿದ ಬಳಿಕ ಉದಯನನು, "ನಿಮ್ಮ ನಾಡಿಗೂ ನಮ್ಮ ನಾಡಿಗೂ ನಡುವೆ ಇರುವ ಕುರುಚಲು ಕಾಡಿನ ಪಾಲೆನೆಲವೂ, ದೊಡ್ಡಮಲೆಸುತ್ತಣ ಎಡೆಯೂ



CC-0. Jangamwadi Math Collection, Varanasi. An eGangotri Initiative

ನಾನು ಇಲ್ಲಿಲ್ಲದ ಕಾಲದಲ್ಲಿ ಎಲ್ಲೆ ಕೆಟ್ಟು ಹೆರರ ವಶವಾಗಿ ಹಾಳಾಗಿ ಹೋದುವು; ಅವು ನಮ್ಮ ಆಳಿಕೆಗೆ ಒಳಪಟ್ಟಲ್ಲದೆ ನಮ್ಮವರು ಹೊಗುವುದಕ್ಕೆ ಎಡೆಗೊಡವು" ಎಂದು ಬಹಳ ನಮ್ರತೆಯಿಂದ ಬರೆದ ಓಲೆಯೊಂದನ್ನು ಪ್ರದ್ಯೋತನನಿಗೆ ದೂತರ ವಶದಲ್ಲಿ ಕೊಟ್ಟು ಕಳಿಸಿದ್ದಲ್ಲದೆ, "ಯಾವ ಕಾಲದಲ್ಲೂ ಎರಡು ಕುಲದವರೂ ಇನ್ನು ಮನಕಲೆತೇ ನಡೆದುಕೊಳ್ಳುವಂತೆ ಮಾಡಿಸಿಬಿಡಿ" ಎಂಬುದನ್ನೂ ತಿಳಿಸುವಂತೆ ಹೇಳಿ ಕಳಿಸಿದನು. ಪ್ರದ್ಯೋತನನಿಗೆ ಕೊಡುವಂತೆ ಹಲವು ಹೊಸ್ನೊಡವೆಗಳನ್ನೂ ಲಕ್ಷಣದಲ್ಲಿ ಶ್ರೇಷ್ಠವಾದುವುಗಳಾದ ನಾಲ್ಕು ಸಾವಿರ ಕುದುರೆಗಳನ್ನೂ, ಐನೂರು ತೇರುಗಳನ್ನೂ, ನೂರು ಆನೆಗಳನ್ನೂ, ಹತ್ತು ಸಾವಿರ ಹಸುಗಳನ್ನೂ, ವಾಸವದತ್ತೆಯ ಹೆತ್ತತಾಯಿಗೆ ಸೇವೆಮಾಡುವಂತೆ ಪಾಂಚಾಲನ ಅಂತಃಪುರದಿಂದ ಕರೆದುತಂದ ಹಲವರು ಹೆಂಗಸರನ್ನೂ ಕಳಿಸಿದನು; ಹಾಗೆಯೇ ಗೋಪಾಲಕನ ಹೆತ್ತತಾಯಿ, ಗೋಪಾಲಕ, ಪಾಲಕುಮಾರ, ಭರತಕ, ಶ್ವೇತ, ಎಂಬವರುಗಳಿಗೆ ಕೊಡುವಂತೆ ತಕ್ಕ ಪುರುಳುಗಳು ಹಲವನ್ನು ಬಗೆಬಗೆಯಾಗಿ ಕಳಿಸಿ, ಮಿಗಿಲು ಚೆಲುವುಳ್ಳದ್ದಾದ ವೈಯಾಘ್ರವೆಂಬ ತೇರನ್ನು ಯೂಗಿಗೆ ಕೊಟ್ಟು, ವಿಣ್ಣುತ್ತರಾಯನೆಂಬವನನ್ನು ಮೈಗಾವಲಿನವನಾಗಿ ಅವನೊಡನೆ ಹೋಗುವಂತೆ ಕಟ್ಟಳೆಯಿಟ್ಟು ಒಳ್ಳೆಯ ದಿನದಲ್ಲಿ ಎಲ್ಲರನ್ನೂ ಪ್ರದ್ಯೋತನನ ಬಳಿಗೆ ಕಳಿಸಿಕೊಟ್ಟನು. ಆ ಮೇಲೆ ಇಬ್ಬರು ದೇವಿಯರೂ ತನಗೆ ಸೇವೆಮಾಡಲು ಅವರುಗಳೊಡನೆ ಹಲವೆಡೆಗಳಿಗೆ ಹೋಗಿ ವಿಹರಿಸಿ ಮಿಗಿಲು ಹಿಗ್ಗಿನಿಂದಿದ್ದನು.

ಪಾಂಚಾಲರಾಜನ ಅಂತಃಪುರದಿಂದ ಹಿಡಿದುಕೊಂಡು ಬಂದ ರಂಗಗೆಲಸದ ಹೆಂಗಸರು ಸಾವಿರದೆಂಟು ಜನರನ್ನು ಹಂಚಿ ಇಬ್ಬರು ದೇವಿಯರಿಗೂ ಉದಯನನು ಕೊಟ್ಟನು. ದೇವಿಯರಿಬ್ಬರೂ, ಅರಸನು ಹೊರಕ್ಕೆ ಹೋಗಿ ಸಂಚಾರಮಾಡಿಕೊಂಡು ಬರುವ ಸಮಯನೋಡಿ ಅಂಗಳದಲ್ಲಿ ಚೆಂಡು ಆಡುವುದಕ್ಕೆ ಎಣಿಸಿ ನಿಂತರು. ಆ ಸುದ್ದಿಯನ್ನು ಅರಿತ ವಸಂತಕನು, "ದೇವಿಯರಿಬ್ಬರೂ ಗೆಳತಿಯರೊಡನೆ ಚೆಂಡಾಡುವುದಕ್ಕೆ ನಿಶ್ಚಯಿಸಿರುವರು; ಅದು ನೋಡತಕ್ಕದ್ದು; ಆದ್ದರಿಂದ ಹೊರಕ್ಕೆ ಹೋಗದೆ ಹೆಣ್ಣುವೇಷ ಹಾಕಿಕೊಂಡು ಪಿಡಿಯ ಮೇಲೇರಿ ಅವರುಗಳು ಅರಿಯದ ಹಾಗೆ ನೋಡಬೇಕು" ಎಂದು ತಿಳಿಸಿದನು. ಉದಯನನು ಅದಕ್ಕೆ ಒಡಂಬಟ್ಟು ತಾನು ಹೊರಕ್ಕೆ ಹೋಗುವುದಾಗಿ ಉಳಿದವರು ನೆನೆಯುವಂತೆ ಮಾಡಿ ಸೇನೆಗಳನ್ನು ಮಾತ್ರ ಹೊರಕ್ಕೆ ಕಳಿಸಿಬಿಟ್ಟು ತಾನು ಹೆಣ್ಣುರೂಪು ಹಾಕಿಕೊಂಡು ಬಂದು ಹಲವು ಹೆಂಗಸರುಗಳೆಡೆಯಲ್ಲೇ ಹೆಣ್ಣಾನೆಯೊಂದರ ಮೇಲೆ ಕುಳಿತು ನೋಡುವವನಾದನು.

ಅಲ್ಲಿ ದೇವಿಯರಿಬ್ಬರೂ ತಂತಮ್ಮ ಗೆಳತಿಯರೊಡನೆ ಆ ಅಂಗಳದಲ್ಲಿ ಒಬ್ಬರಿಗೊಬ್ಬರು ಎದುರೆದುರಾಗಿ ನಿಂತರು. ಆಗ ಪದ್ಮೆಯ ಗೆಳತಿಯಾದ 'ಇರಾಶನೈ'

CC-0. Jangamwadi Math Collection, Varanasi. An eGangotri Initiative

ಎಂಬವಳು ಏಳು ಚೆಂಡುಗಳನ್ನು ತೆಗೆದುಕೊಂಡು ಸಾವಿರ ಕೈ ಹೊಡೆದುಬಿಟ್ಟು ಹೋದಳು; ಆ ಮೇಲೆ, ಕಾಂಚನಮಾಲೆ ಚೆಂಡುಗಳನ್ನು ಕೈಗೆ ತೆಗೆದುಕೊಂಡು ಸಾವಿರ ದೈನೂರು ಕೈ ಹೊಡೆದುಬಿಟ್ಟು ಹೋದಳು; ಬಳಿಕ, ಪದ್ಮೆಯ ಮತ್ತೊಬ್ಬ ಗೆಳತಿಯಾದ ಐರಾವತಿಯೆಂಬ ಗೂನಿ ಎರಡು ಸಾವಿರ ಕೈ ಹೊಡೆದುಬಿಟ್ಟು ಹೋದಳು; ವಾಸವದತ್ತೆಯ ಗೆಳತಿಯಾದ ವಿಶ್ವಲೇಖೆ ಎಂಬ ಕುಳ್ಳಿ ಹೊಡೆಯುವುದಕ್ಕಿರುವ ಕೋಲನ್ನು ಕೈಗೆ ತೆಗೆದುಕೊಂಡು ಚೆಂಡುಗಳನ್ನು ಹೊಡೆದು ಎರಡು ಸಾವಿರದ ಐನೂರು ಕೈ ಹೊಡೆದುಬಿಟ್ಟು ಹೋದಳು; ಪದ್ಮೆಯ ಉಸಿರು ಗೆಳತಿಯಾದ ಆರ್ಯೆ ಎಂಬವಳು ಅತಿ ವಿಚಿತ್ರವಾಗಿ ಮೂರು ಸಾವಿರ ಕೈ ಹೊಡೆದು ಚೆಂಡನ್ನು ಹಾಕಿ ಬಿಟ್ಟು ನಡೆದಳು; ಆ ಮೇಲೆ ಚೆಂಡುಗಳು ಹೊಡೆಯುವುದಕ್ಕೆ ಯಾರೂ ಎತ್ತಿಕೊಳ್ಳದೆ ಕೆಡೆದಿದ್ದುವು.

ಆಗ ವಾಸವದತ್ತೆ ತಲೆ ತಗ್ಗಿಸಿ, "ಹೊಡೆಯತಕ್ಕವರು ಯಾರು?" ಎಂದು ಕಡೆಗಣ್ಣಿಂದ ನೋಡುತ್ತ ಸ್ವಲ್ಪ ಮನೋವ್ಯಥೆಯುಳ್ಳವಳಾಗಿ ನಿಂತಳು. ಆ ಕುರುಹನ್ನರಿತು, ಅವಳ ಬಳಿ ಸೇವೆಮಾಡಿಕೊಂಡಿರುವವಳೂ ಬಹಳ ಚೆಲುವೆಯೂ 'ಮಾನನೀಗ್ಯೆ' ಎಂಬ ಹೆಸರುಳ್ಳವಳೂ ಆದ ಮಡದಿಯೊಬ್ಬಳು ಬಂದು ಅಲ್ಲಿ ನಿಂತು, ತನಗಿಂತ ಮುಂಚೆ ಆಡಿದವರ ಆಟವನ್ನು ಹೀಯಾಳಿಸಿ ನುಡಿದು ನಕ್ಕು ಚೆಂಡಾಟದ ಲಕ್ಷಣಗಳು ಹಲವನ್ನು ಅಲ್ಲಿ ನಿಂತ ಎಲ್ಲರೂ ಅರಿಯುವಂತೆ ಹೇಳಿಬಿಟ್ಟು ಆಡತೊಡಗಿ ಇಪ್ಪತ್ತೊಂದು ಚೆಂಡುಗಳನ್ನು ತೆಗೆದುಕೊಂಡು ಉಳಿದವರು ಬೆರಗಾಗುವಂತೆ ಆಡಿದಳು. ಆಡುವಾಗ

"ಸುಳಿಸುತ್ತಿದುವು ಮಾಲೆ; ಸುತ್ತಿ ಬಳಸಿತು ಕೂದಲ್;
ಕಾಯ್ದು ಬಿಸಿಯಾಯ್ತು ಮೈ; ಸಡಿಲವಾಯಿತು ಪಟ್ಟಿ;
ಮೂಡಿದುದು ಕಿರುಬೆವರು; ಇಳಿದುಹೋಯಿತು ಸಾದು;
ಓಡಿದುವು ಕಡೆಗಣ್ಣು; ಕೂಡಿದುವು ಕುಡಿಹುಬ್ಬು;
ಅಂಗೈಯಿನೇರಿಸುತ, ಹೊರಗೈಯಿನೋಡಿಸುತ;
ತಂಗುವೊಲು ಬಾಗಿಸುತ ತಾನಿರದು ಹೊಡೆಯುತ್ತ,
ಎಡೆಯೆಡೆಯೊಳಿರ್ಕಾಲ ತಿಳಿವಂತೆ ಮಡಿಸುತ್ತ,
. . . . . . . . . . . .
ಮುತ್ತೆನಿಪ ಕಿರುಬೆವರ ಹತ್ತಿಯಿಂದೊರಸುತ್ತ,
ಹಿಡಿದಿಡುವ ಚೆಂಡು ಸುತ್ತುವ ಬಗೆಯನೊರೆಯುತ್ತ,
ದಂಡೆಯನು ಮಾಲೆಯನು ಕ್ರಮವಾಗಿ ರಚಿಸುತ್ತ,

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. ......4607......
CC-0. Jangamwadi Math Collection, Varanasi. An eGangotri Initiative

ಅಡಿಯಿಂದ ಮುಡಿವರೆಗೆ ಹಲವೊಡವೆ ತಿದ್ದುತ್ತ,
ಮೊರೆದುಂಬಿಯೆಬ್ಬಿಸುತ, ಕೆಡೆದ ಚೆಂಡೆಣಿಸುತ್ತ,
ನರುಗಂಪು ಮಾಲೆಗಳ ತೆರೆತೆರದೆ ಹೆಣೆಯುತ್ತ,
ಚೆಂಡು ಬರೆಸೋಡುತ್ತ, ತಾಳಬರೆ ಚಿಟಿಕೆಗಳ
ತಟ್ಟುತ್ತ, ಮಾಳೆಯನು ಮುಡಿಮುಡಿದು ಹೊಡೆಯುತ್ತ,
ಕಂಪಿತವ ಹಾಡುತ್ತ, ಚಕ್ರವೆನೆ ತಿರುಗುತ್ತ,
ಗೆಳತಿಯೊಡನಡಿಗಡಿಗೆ ನುಡಿಯುತ್ತ, ಹಲಬಗೆಯ
ಚಾರಿಗಳಲೋಡಿಸುತ, 'ಬಾಳ್' ಎಂದು ಹರಸುತ್ತ,
'ಚೆಲ್ವ ತಳಿರ್ಗಣ್ಣವಂತಿಕೆ ಗೆಲ್ಗೆ, ಗೆಲ್ಗೆ'ನಲು
ಹೊಂದೊಟ್ಟ ಮಡದಿಯರು, ಹಲಹಲವು ಬಗೆಯಿಂದ
ಎಂಟು ಸಾವಿರ ಕೈಯ ಹೊಡೆದಳ್. ಆಪುರಿ ಹೊಡೆಯೆ,"

(೪. ೧೨ : ೨೨೫–೪೫)

ವಾಸವದತ್ತೆ ಆಶ್ಚರ್ಯಪಟ್ಟು, "ಅರಸನು ಇವಳನ್ನು ಕಂಡರೆ ಅವನ ಮನಸ್ಸು ಬೇರ್ಪಡುವುದು" ಎಂದು ಎಣಿಸಿ ನಿಂತಳು.

ಆಗ ಮಾನಸೀಗೆಯ ಶ್ರೇಷ್ಠವಾದ ತೋರ್ಕೆಯನ್ನು ಕಂಡು ಮುಗ್ಧನಾಗಿ ಅವಳ ಬಳಿ ಹೋದ ತನ್ನ ಮನಸ್ಸನ್ನು ಒಂದು ಬಗೆಯಾಗಿ ಹಿಂದಿರುಗಿಸುವುದಕ್ಕೆ ಸ್ವಲ್ಪವೂ ಶಕ್ತಿಯಿಲ್ಲದವನಾಗಿ ಉದಯನನು ಸಹಜ ರೂಪದೊಡನೆ ಅಲ್ಲಿ ಕಾಣಿಸಿಕೊಂಡನು. ಅವನನ್ನು ಕಂಡ ದೇವಿಯರಿಬ್ಬರೂ ಗೆಳತಿಯರೊಡನೆ ತಂತಮ್ಮೆಡೆಗೆ ಹೋದರು.

ಅವರುಗಳು ಹಾಗೆ ಹೋಗಲು ಕಾಮದ ಹೆಚ್ಚಿಗೆಯಿಂದ ನೊಂದು ಬಳಲಿದ ಉದಯನನು ಸಜ್ಜೆಮನೆಯಲ್ಲಿ ತಾನು ಇದ್ದು ದೇವಿಯರಿಬ್ಬರನ್ನೂ ಕರೆದುಕೊಂಡು ಬರುವಂತೆ ಹೇಳಿಕಳಿಸಿದನು. ಗೆಳತಿಯರು ಹೋಗಿ ಹೇಳಿದೊಡನೆ ಅವರಿಬ್ಬರೂ, ಅರಸನು ಕರಸಿದ್ದಕ್ಕೆ ಕಾರಣ ಇಂಥದೆಂಬುದನ್ನು ಅರಿಯದವರಾಗಿ ಸಂದೇಹಪಟ್ಟು ಮಾನಸೀಗೈಯನ್ನು ಮಟ್ಟಿಗೆ ಒಂದೆಡೆಯಲ್ಲಿ ಮರಸಿಟ್ಟುಬಿಟ್ಟು ಮಿಕ್ಕ ಗೆಳತಿಯರೊಡನೆ ಹೋಗಿ ಅವರುಗಳನ್ನು ಹೊರಗಡೆ ನಿಲ್ಲಿಸಿ ತಾವು ಮಟ್ಟಿಗೆ ಅರಸನ ಬಳಿಗೆ ಬಂದು ನಮಸ್ಕರಿಸಿದರು. ನೋಡಿದ ಉದಯನನು, "ಇವರುಗಳ ಗೆಳತಿಯರನ್ನೂ ಇಲ್ಲಿಗೆ ಬರಬಿಡಿರಿ" ಎಂದನು. ಅವರುಗಳೂ ಬಂದು ನಮಸ್ಕರಿಸಿ ನಿಂದಾಗ ಅವರುಗಳನ್ನೆಲ್ಲ ಕ್ರಮವಾಗಿ ನೋಡಿ, "ನಿಮ್ಮ ಬಳಗದವರನ್ನೂ ನಿಮ್ಮ ಹೆಸರನ್ನೂ ಹೇಳಿ" ಎಂದನು. ಅವರುಗಳು ಅವನ್ನು ಹೇಳಿದಾಗ, ಉದಯನನು ನೋಡದವನ

CC-0. Jangamwadi Math Collection, Varanasi. An eGangotri Initiative

ಹಾಗೆಯೇ ಅವರುಗಳನ್ನು ಕ್ರಮವಾಗಿ ನೋಡಿ ವಾಸವದತ್ತೆಯನ್ನು ಕುರಿತು "ನಿನ್ನ ಗೆಳತಿಯರಲ್ಲಿ ಒಬ್ಬಳು ಮಟ್ಟಿಗೆ ಇಲ್ಲಿ ಬಾರದಿರುವುದಕ್ಕೆ ಕಾರಣವೇನು?" ಎಂದು ಕೇಳಲು, ವಾಸವದತ್ತೆ, "ಅವಳಿಗೆ ಹೇಳಬೇಕಾದ್ದು ಏನಾದರೂ ಇದ್ದರೆ, ಅದನ್ನು ತನಿಯಾಗಿ ನೋಡಿಕೊಳ್ಳಿ; ಈ ಕೂಟದಲ್ಲಿ ಆಗಬೇಕಾದ್ದು ಯಾವುದು?" ಎಂದು ಹೇಳಿ ಬಹಳ ಕೋಪಗೊಂಡಳು; ಅವಳ ಕಣ್ಣುಗಳು ಬಹಳ ಕೆಂಪಾದುವು. ಅವಳ ಸಿಟ್ಟನ್ನು ಕಣ್‌ಕೆಂಪಿನಿಂದರಿತ ಅರಸನು, "ಪಾಂಚಾಲರಾಜನು ಪಡೆದ ಸಂಪತ್ತನ್ನೂ ಅವನಿಗಿರುವ ಮಿಕ್ಕುವನ್ನೂ ಅವಳು ಚೆನ್ನಾಗಿ ತಿಳಿದವಳೆಂದು ಮಂತ್ರಿಗಳಿಂದ ಅರಿತಿರುವೆನು; ಅವನ್ನು ತಿಳಿದು ಕೊಳ್ಳುವುದಕ್ಕಾಗಿಯೇ ಅವಳನ್ನು ಕುರಿತು ಈಗ ನಾನು ಕೇಳಿದೆನು; ಕಾರಣ ಬೇರೆ ಒಂದೂ ಇಲ್ಲ" ಎಂದನು.

ಆ ಬಳಿಕ, ವಾಸವದತ್ತೆ ಮಾನನೀಗ್ಯೆಯನ್ನು ಅಲ್ಲಿಗೆ ಬರಮಾಡಿದಳು; ಅವಳು ಬಂದು ಅಡಿಗೆರಗಿದಳು; ಉದಯನನು ಅವಳನ್ನು ಕುರಿತು, "ಪಾಂಚಾಲರಾಜನಿಗೆ ಸೇರಿದ ಹಲವು ಸೇವೆಗಳಲ್ಲೂ ಅವನ ಅಂತಃಪುರದವರಿಗೆ ಅಲಂಕಾರಮಾಡುವುದರಲ್ಲಿಯೂ ನೀನು ಬಲ್ಲಿದಳೆಂದು ಹೇಳುವುದನ್ನು ಕೇಳಿದ್ದೇನೆ. ನಿನ್ನ ಹೆಸರನ್ನೂ ನಿನ್ನ ಬಳಗದವರ ಹೆಸರುಗಳನ್ನೂ ಹೇಳು" ಎಂದು ಕೇಳಲು, ಅವಳು ಮತ್ತೂ ನಮಸ್ಕಾರ ಮಾಡಿ ಕೈಮುಗಿದುಕೊಂಡು ಅರಸನನ್ನು ಕುರಿತು, "ಅಡಿಯವಳು, ಕೋಸಲ ದೇಶದ ಅರಸನ ಮಹಾದೇವಿಯಾದ ವಸುಂಧರಿಯೆಂಬವಳ ಚೇಟಿಯಾಗಿರುವೆನು; ನನ್ನ ಹೆಸರು ಮಾನನೀಗ್ಯೆ; ಪಾಂಚಾಲರಾಜನು ದಂಡೆತ್ತಿಬಂದು ನಮ್ಮರಸನ ಪಡೆಗಳನ್ನು ಗೆದ್ದು ಅವನ ಅಂತಃಪುರದಲ್ಲಿದ್ದ ಸೇವಕಿಯರೊಡನೆ ನನ್ನನ್ನೂ ಹಿಡಿದುಕೊಂಡು ಹೋಗಿ ತನ್ನ ದೇವಿಗೆ ಕೊಟ್ಟನು. ಆಗ, ಅಡಿಯವಳು ಆ ದೇವಿಗೆ ಬಣ್ಣಮಗಳಾಗಿ (ಸೈರಂಧ್ರಿಯಾಗಿ) ದ್ದೆನು; ಇದನ್ನಲ್ಲದೆ, ದೇವರು ಅಪ್ಪಣೆಕೊಡಿಸಿದ ಬೇರೊಂದು ಕೆಲಸವನ್ನೂ ಅರಿಯೆನು" ಎಂದು ಹೇಳಿ ಅಳುತ್ತಾ ನಿಂತಳು. ಆಗ ಉದಯನನು ಅವಳನ್ನು ಕುರಿತು, "ನೀನು ವಾಸವದತ್ತೆಗೆ ಇಂದು ಮೊದಲುಗೊಂಡು ಸೈರಂಧ್ರಿಯಾಗಿ ಇದ್ದು ಅವಳನ್ನು ದಿನದಿನವೂ ಅಲಂಕರಿಸುವವಳಾಗು" ಎಂದು ಕಟ್ಟಳೆಯಿಡಲು, ಅವಳು ಅದೇ ರೀತಿಯಲ್ಲೇ ಹೋಗಿ ಕಂಡವರು ಆಶ್ಚರ್ಯಪಡುವಂತೆ ಅಡಿ ಮೊದಲು ಮುಡಿ ಕಡೆಯಾಗಿ ಅವಳನ್ನು ಅಲಂಕರಿಸಿದಳು; ಬಳಿಕ ವಾಸವದತ್ತೆ ಬಂದು ಉದಯನನಿಗೆ ಆ ಅಲಂಕಾರವನ್ನು ತೋರಿಸಿದಳು. ಆಗ ಉದಯನನು, "ಮಾನನೀಗ್ಯೆ ಅಲಂಕಾರ ಮಾಡುವುದರಲ್ಲಿ ಗಟ್ಟಿಗಳಲ್ಲ; ನಾನು ಅಲಂಕರಿಸುವೆನು, ನೋಡು" ಎಂದು ಅವಳು ಮಾಡಿದ ಅಲಂಕಾರವನ್ನು ಅಳಿಸಿಬಿಟ್ಟು ಯವನಭಾಷೆಯ ಅಕ್ಷರಗಳನ್ನು ಮಾನನೀಗ್ಯೆ ಚೆನ್ನಾಗಿ ಕಲಿತವಳು ಎಂಬುದನ್ನು ಆ ಹಿಂದೆ ಕೇಳಿದ್ದವ

CC-0. Jangamwadi Math Collection, Varanasi. An eGangotri Initiative

ನಾದ್ದರಿಂದ, ಹೂವಿನ ಪರಾಗವನ್ನೂ ಚಂದನದ ಗಂಧವನ್ನೂ ಕಲಸಿ ವಾಸವದತ್ತೆಯ ಹಣೆಯಲ್ಲಿ, "ಉದಯನನ ಓಲೆಯನ್ನು ಮಾನನೀಗೈ ಕಾಣಲಿ: ನೀನು ಆಡಿದ ಚೆಂಡಾಟದಲ್ಲಿ ನಿನ್ನ ಕಣ್ಣುಗಳು ನನ್ನ ಮನಸ್ಸನ್ನು ನೀಳಲು ಅದರಿಂದ ಗಾಯ ಹೊಂದಿದೆನು. ಆ ಗಾಯವನ್ನು ಮಾಯಿಸುವ ಮದ್ದನ್ನು ನೀನು ಬಲ್ಲೆ. ನನ್ನ ದುಃಖ ಆರಿಸುವುದಕ್ಕೆ ಅರಿದು. ಬೇಡುವವರಿಗೆ ಅವರು ಬಯಸಿದ್ದನ್ನು ಕೊಡುವುದು ಒಳ್ಳೆಯದು. ಇಲ್ಲಿ ಬರೆಯುವುದಕ್ಕೆ ಎಡೆ ಇಲ್ಲವಾದ್ದರಿಂದ ನಾನು ಅಡಕವಾಗಿ ಬರೆದಿದ್ದೇನೆ. ನೀನು ನನ್ನ ಅಭಿಪ್ರಾಯವನ್ನು ಚೆನ್ನಾಗಿ ಅರಿತುಕೊಳ್ಳಬೇಕು" ಎಂದು ಬರೆದುಬಿಟ್ಟು ವಾಸವದತ್ತೆಯನ್ನು ಕುರಿತು, "ನಿನಗೆ ನಾನು ಮಾಡಿದ ಅಲಂಕಾರ ಇವೊತ್ತು ಒಪ್ಪುವುದಾಗಿದೆ" ಎಂದು ಹೇಳಿ ಅವಳನ್ನು ಕಳಿಸಿದನು. ಒಡನೆ ವಾಸವದತ್ತೆ ತನ್ನ ಅಂತಃಪುರವನ್ನು ಸೇರಿ ಅಲ್ಲಿ ಬಂದ ಮಾನನೀಗೈಗೆ, "ಈ ಅಲಂಕಾರವನ್ನು ನೀನು ನೋಡು" ಎಂದು ತೋರಿಸಿದಳು. ಅವಳು ಅದನ್ನು ಓದಿ ಅರಿತು ನಾಚಿ, "ಅರಸರು ಮಾಡಿರುವ ಅಲಂಕಾರ ಬಹಳ ಸೊಗಸುಳ್ಳದ್ದು" ಎಂದು ವಾಸವದತ್ತೆಯನ್ನು ಮರುಳುಗೊಳಿಸಿದಳು. ಆ ದಿನ ಕಳೆಯಿತು.

ಮರುದಿನ ಬೆಳಗಿನಲ್ಲಿ ವಾಡಿಕೆಯಂತೆಯೇ ವಾಸವದತ್ತೆಯನ್ನು ಮಾನನೀಗೈ ಅಲಂಕರಿಸಿಬಿಟ್ಟು ಅವನು ಬರೆದಿದ್ದ ಭಾಷೆಯಲ್ಲಿಯೇ ಅವನಿಗೆ ತನ್ನ ಅಭಿಪ್ರಾಯ ವನ್ನು ತಿಳಿಸಲೆಳಸಿ, "ಅಡಿಯವಳನ್ನು ಪುರುಳಾಗಿ ಎಣಿಸಿ ದೇವರು ಬರೆದ ಶ್ರೀಮುಖ ವನ್ನು ಪೂರ್ತಿಯಾಗಿ ತಪ್ಪಿಲ್ಲದಂತೆ ತಿಳಿದುಕೊಂಡೆನು. ಅಡಿಯವಳೆಡೆಯಲ್ಲಿ ಕೃಪೆ ಯಿದ್ದರೂ ಅದನ್ನು ಈಗ ಬಿಡಬೇಕು. ದೇವಿಯರಿಗೆ ಮಿಗಿಲಾದ ವ್ಯಥೆಯನ್ನು ಉಂಟು ಮಾಡುವ ಕೆಲಸವನ್ನು ಮಾಡುವುದಕ್ಕೆ ನನ್ನ ಮನಸ್ಸಿಗೆ ಧೈರ್ಯವಿಲ್ಲ. ಕಾವಲಿನಲ್ಲಿ ಇರುವ ಅಡಿಯವಳು ಹೆರರು ಕಾಣಕೆಂದು ತಗದ್ದನ್ನು ಮಾಡುವುದು ಸರಿಯಲ್ಲ. ಮಾಡಿ ದರೆ ಕೆಟ್ಟ ಹೆಸರುಂಟಾಗುವುದು; ಧರ್ಮವೂ ಹಾಳಾಗುವುದು. ಕಿರಿಯವಳೆಡೆಯಲ್ಲಿ ಇಟ್ಟ ಬಯಕೆಯನ್ನು ಮರೆಯುವುದು ಒಳ್ಳೆಯದು" ಎಂದು ಅವಳ ಹಣೆಯಲ್ಲಿ ಬರೆದು, "ನನ್ನಿಂದ ಮಾಡಲು ಸಾಧ್ಯವಾದ ಅಲಂಕಾರ ಇದೇ" ಎಂದು ಹೇಳಿ ಕಳಿಸಿದಳು.

ವಾಸವದತ್ತೆ ಹೋಗಿ ಅರಸನನ್ನು ವಂದಿಸಿದಳು. ವಂದಿಸಲು ಅವನು ಮಾನನೀಗೈ ಬರೆದಿರುವುದನ್ನು ಕಂಡು ಅವಳ ಅಭಿಪ್ರಾಯವನ್ನರಿತು ಬೆಂಕಿಯಿಂದ ಉಂಟಾದ ಹುಣ್ಣಿನ ಮೇಲೆ ಕೋಲು ಚುಚ್ಚಿದ್ದರ ಹಾಗೆ ಮನಕಲಕಿ, ಆ ಅಲಂಕಾರವನ್ನು ತೆಗೆದುಹಾಕಿ, "ನಿನ್ನನ್ನು ಇಂದಿನೊಳಗೆ ಪಡೆಯೆನಾದರೆ ನನ್ನ ಪ್ರಾಣವನ್ನು ಹೋದ ದ್ದನ್ನಾಗಿಯೇ ಎಣಿಸಿಕೊ" ಎಂದು ಅವಳ ಹಣೆಯಲ್ಲಿ ಬರೆದು, "ಈ ಹೊಸದೊಂದು ಅಲಂಕಾರವನ್ನು ಅವಳಿಗೆ ತೋರಿಸುವವಳಾಗು" ಎಂದು ಹೇಳಿ ಮತ್ತೆ ಕಳಿಸಿದನು.

CC-0. Jangamwadi Math Collection, Varanasi. An eGangotri Initiative

ಅದನ್ನು ಕಂಡು ತನ್ನ ಮನವನ್ನು ಗಟ್ಟಿಮಾಡಿಕೊಂಡು ಮರುದಿನ ಬೆಳಗ್ಗೆ ಮಾನಸೀಗ್ಯೆ, "ಇವತ್ತು ಇರುಳಿನಲ್ಲಿ ನಾಟಕಶಾಲೆಯೆಡೆಯಲ್ಲಿ ಘೂರ್ಜರ ಗುಡಿಸಿಲಿನ ವೇದಿಕೆಯ ಮೇಲೆ ದಯಮಾಡಿಸಿ ಬರುವುದು" ಎಂದು ಆ ಸ್ಥಳವೂ ತಿಳಿಯುವಂತೆ ಸಂಕೇತ ವಾಗಿ ಒಂದು ಬಗೆಯ ಅಲಂಕಾರವನ್ನು ಬರೆದು ಕಳಿಸಿದಳು; ವಾಸವದತ್ತೆ ಬಂದು ಮಣಿದು ನಿಂತಳು. ಅದನ್ನು ಕಂಡ ಉದಯನನು ಅವಳು ಬರೆದ ಕುರಿಪನ್ನು ಅರಿತು ಸಂತೋಷಿಸಿ, "ಮಾನಸೀಗ್ಯೆ ಇವತ್ತು ಭಯಪಟ್ಟು ಮಾಡಿದ ಅಲಂಕಾರ ಬಹಳ ಚೆಲುವುಳ್ಳದ್ದು" ಎಂದು ಹೇಳಿ ವಾಸವದತ್ತೆಯೊಡನೆ ಕಲೆತು ಜೊತೆಗೂಡಿದ್ದನು. ಹಗಲುಕಾಲ ಕಳೆಯಿತು. ಇರುಳಿನಲ್ಲಿ ವಾಸವದತ್ತೆಗೆ ತಿಳಿಯದಂತೆ ಮಾನಸೀಗ್ಯೆ ತಾನು ಕುರಿಪಿಟ್ಟ ಎಡೆಯಲ್ಲಿ ಹೋಗಿದ್ದಳು. ಉದಯನನು, "ವಾಸವದತ್ತೆಯೊಡನೆ ಮಲಗಲು ಹೋಗುವೆನು" ಎಂದು ಪದ್ಮೆಯ ಬಳಿಯೂ, "ಪದ್ಮೆಯ ಬಳಿ ಮಲಗಲು ಹೋಗುವೆನು" ಎಂದು ವಾಸವದತ್ತೆಯೊಡನೆಯೂ ಆಸೆಯ ಗುರುತು ಇಲ್ಲದಂತೆ ಹೇಳಿದನು. ಹೇಳಲು ವಾಸವದತ್ತೆ ಸಂದೇಹಪಟ್ಟು ಒಂದೆಡೆಯಲ್ಲಿ ಹೋಗಿ ಇದ್ದಳು. ಆಗ ಉದಯನನು ಎದ್ದು ಹುದುಗಿಕೊಂಡು ಬೇರೆಡೆಗೆ ಹೋಗುವವನಾದನು. ಅದನ್ನು ಕಂಡ ವಾಸವದತ್ತೆ ಕಾಂಚನಮಾಲೆಯನ್ನು ಕೈತಟ್ಟಿ ಕರೆದು, "ಅರಸನು ಹೋಗುವ ಎಡೆಯನ್ನು ನೀನು ಅರಿತು ಬಾ" ಎಂದು ಕಟ್ಟಳೆಯಿಡಲು ಅವಳು ಅವನು ಅರಿತುಕೊಳ್ಳದಂತೆ ಹಿಂದೆ ಹೋಗಿ, ಅರಸನು ಆಟದ ಪಿರಿಯರೆಯನ್ನು ಸಾರಿದ ಬಳಿಕ ಅವಳೂ ಹಿಂದೆ ಹೋಗಿ ಅಲ್ಲಿ ಒಂದು ಪಕ್ಕದಲ್ಲಿ ಮರಸಿಕೊಂಡು ಇದ್ದಳು.

ಹೋದ ಉದಯನನೂ ಮೊದಲೇ ಅಲ್ಲಿ ಬಂದಿದ್ದ ಮಾನಸೀಗ್ಯೆಯೂ ಒಬ್ಬರ ನ್ನೊಬ್ಬರು ಕಂಡು ಮಾತಾಡಿ ನಿಡಿದು ಹೊತ್ತು ವಿಹರಿಸುತ್ತಿದ್ದ ಬಳಿಕ ವಾಸವದತ್ತೆಯ ಮುಖದಲ್ಲಿ ಕಾದಲಿನಿಂದ ಬರೆದುಬಿಟ್ಟ ಪತ್ರಗಳನ್ನೆಲ್ಲ ಇಬ್ಬರೂ ಹೇಳಿಕೊಂಡಿದ್ದರು. ತರುವಾಯ ಉದಯನನು, "ದಿನದಿನವೂ ತಪ್ಪದಂತೆ ಇಲ್ಲಿ ಬರಬೇಕು" ಎಂದು ಹೇಳಿ ತನ್ನ ಕಿರುಬೆರಳ ಉಂಗುರವನ್ನು ಅವಳಿಗೆ ಕೊಟ್ಟುಬಿಟ್ಟು ಹೊರಟನು.

ಎಲ್ಲವನ್ನೂ ನೋಡುತ್ತಲೇ ಇದ್ದ ಕಾಂಚನಮಾಲೆ ಹೆಚ್ಚಾದ ಕೋಪದಿಂದ ಹೋಗಿ ನಡೆದುವನ್ನೆಲ್ಲ ವಾಸವದತ್ತೆಯೆಡೆಯಲ್ಲಿ ಹೇಳಿದಳು. ಕೇಳಿದ ವಾಸವದತ್ತೆ ಕೋಪವನ್ನು ಮನಸ್ಸಿನಲ್ಲಿ ಅಡಗಿಸಿಕೊಂಡಿದ್ದುಬಿಟ್ಟು ಬೆಳಗ್ಗೆ ಅರಸನ ಬಳಿ ಸಾರಿ ನಮಸ್ಕರಿಸಿ ಅವನನ್ನು ಕುರಿತು, "ನಿನ್ನೆ ರಾತ್ರಿಯಲ್ಲಿ ನಾನು ಒಂದು ಕನಸು ಕಂಡೆ; ಅದು ದೋಷವಿಲ್ಲದ್ದು" ಎಂದು ಹೇಳಲು ಅವನು, "ಏನು ಅದು?" ಎಂದು ಕೇಳಿದನು. ಒಡನೆ ಅವಳು, "ನೀವು ನನಗೆ ತಿಳಿಯದಂತೆ ತನಿಯಾಗಿ ಹೋಗಿ ಒಬ್ಬ ಮಡದಿಯೊಡನೆ ಆಟದ ರಂಗ ಒಂದರ ಮೇಲೆ ಏರಿ ಬಹುಕಾಲ ವಿಹಾರಮಾಡುತ್ತ

CC-0. Jangamwadi Math Collection, Varanasi. An eGangotri Initiative

ಇದ್ದು ನನ್ನ ಹಣೆಯಲ್ಲಿ ಉತ್ತರ ಪ್ರತ್ಯುತ್ತರವಾಗಿ ಬರೆದ ಪತ್ರಗಳನ್ನೆಲ್ಲ ಹೇಳಿಕೊಂಡು ನಿಮ್ಮ ಪ್ರೀತಿಯನ್ನು ಹೊರಪಡಿಸಿಕೊಳ್ಳುತ್ತಲೇ ಇದ್ದು ಹೊರಹೊಡುವ ಕಾಲದಲ್ಲಿ ಅವಳಿಗೆ ಉಂಗುರವನ್ನು ಕೊಟ್ಟು ಬಂದುಬಿಟ್ಟಿರಿ. ಆ ಮೇಲೆ ನನ್ನ ಕಣ್ಣುಗಳು ತೆರೆದುವು" ಎಂದು ಹೇಳಿದಳು. ಉದಯನನು, "ನನ್ನ .ಮನಸ್ಸಿನಲ್ಲಿಯೂ ಇಲ್ಲದ್ದನ್ನು ನೀನು ಕಂಡೆಯಾದ್ದರಿಂದ ಕಳವಳವನ್ನು ಪಡೆದೆಯೆಂದು ತೋರುತ್ತದೆ" ಎಂಬುದು ಮೊದಲಾದುವನ್ನು ಹೇಳಲು, ಅವಳು, "ಕನಸಿನಲ್ಲಿ ಕಂಡದ್ದನ್ನು ಬೇರೆಯವರೊಡನೆ ಹೇಳಿದರೆ ಅದರಿಂದ ಉಂಟಾಗುವ ಕೆಟ್ಟದು ನೀಗಿ ಹೋಗುವುದೆಂದು ಗ್ರಂಥಗಳು ಹೇಳುವುದರಿಂದ ನಾನು ಈಗ ತಿಳಿಸಿದೆನು; ಅಲ್ಲದೆ ಏನನ್ನು ಕಂಡರೂ ಅವನ್ನು ಅರಸನೆಡೆಯಲ್ಲಲ್ಲದೆ ಬೇರೆ ಯಾರೆಡೆ ಹೇಳುವುದು ?'' ಎಂದು ಹೇಳಿಬಿಟ್ಟು ಮನಸ್ಸಿನಲ್ಲಿ ನಗುತ್ತ ಹೋದಳು. ಉದಯನನು, "ದೇವಿಗೆ ಉಂಟಾದ ಕಳವಳವನ್ನು ಒಂದು ರೀತಿಯಾಗಿ ಹೋಗಿಸಿಬಿಟ್ಟೆವು" ಎಂದು ಸಂತೋಷದಿಂದಿದ್ದನು. ಹೀಗಿರುವಲ್ಲಿ ಹಗಲು ಕಾಲ ಕಳೆಯಿತು; ರಾತ್ರಿ ಬಂತು.

ವಾಸವದತ್ತೆಯೋ ಮಾನನೀಗ್ಯೆಯನ್ನು ಹಿಡಿದುಕೊಂಡು ಬರುವಂತೆ ಮಾಡಿ ಕಾವಲಿನಲ್ಲಿಟ್ಟುಬಿಟ್ಟು ಹೆರರು ಅರಿತುಕೊಳ್ಳದ ಹಾಗೆ ಕಾಂಚನಮಾಲೆಯೊಡನೆ ಹೋಗಿ ಆಟದ ರಂಗವನ್ನು ಸೇರಿ ಮಾನನೀಗ್ಯೆ ಇದ್ದ ಎಡೆಯಲ್ಲಿ ಇದ್ದಳು; ಉದಯನನು ನಡೆದದ್ದನ್ನರಿಯದೆ ಹಿಂದಿನ ದಿನದ ಹಾಗೆಯೆ ಮೆಲ್ಲನೆ ಹೋಗಿ ಅವಳ ಸಮೀಪವನ್ನು ಸೇರಿದನು. ಆಗ ವಾಸವದತ್ತೆ, "ಅರಸನು ಇಲ್ಲಿ ಏನು ಮಾಡುತ್ತಾನೆ? ಇನ್ನು ಅವನು ಮಾಡುವುದನ್ನು ಅರಿಯೋಣ" ಎಂದು ಎಣಿಸಿ ಕೈಯಿಂದ ತೊಲಗಿಸಲು, ಉದಯನನು, "ಮಾನನೀಗ್ಯೆ ಮುನಿಸಿಕೊಂಡಿದ್ದಾಳೆ" ಎಂದು ನೆನೆದು,

"ಮುರಜ ಮೊಳಗುವ ಸೇನೆಯುರಸುತನದೊಡನೆ ನೀನ್
ಎಳಸಿದುದನೀಗಲೇ ಕೊಡುವೆನುಳಿ ಸಂಕಟವ,
ಜಿಂಕೆಯೇ! ಜೇನೇ! ಎಲೆ ಮಾನನೀಗ್ಯೆ!"

(೪. ೧೩ : ೨೨೭–೯)

ಎಂದು ಅವಳ ಕಾಲನ್ನು ಕೈಯಲ್ಲಿ ಹಿಡಿದುಕೊಂಡನು. ಕಾಲನ್ನು ಕೊಡದವಳಾಗಿ ವಾಸವದತ್ತೆ ಆ ಕಡೆ ಹೋದಳು. ಅದನ್ನು ಸಹಿಸದ ಉದಯನನು, "ಯಾವುದಾದರೂ ಹೊಸ ಸುದ್ದಿಯೊಂದನ್ನು ಹೇಳಿ ಇವಳ ಒಲವು ಮುನಿಸನ್ನು ತೀರಿಸಿ ಮಾತು ಕೇಳುವಂತೆ ಮಾಡಿಕೊಳ್ಳುವೆನು" ಎಂದು ನೆನೆದು ಅವಳನ್ನು ಕುರಿತು, "ನಿನ್ನೆ ರಾತ್ರಿಯಲ್ಲಿ ನಮ್ಮಿಬ್ಬರಿಗೂ ಇಲ್ಲಿ ನಡೆದುವನ್ನೆಲ್ಲ ಕನಸಿನಲ್ಲಿ ಕಂಡದ್ದಾಗಿ ವಾಸವದತ್ತೆ ಸ್ವಲ್ಪವೂ ತಪ್ಪಿಲ್ಲದಂತೆ ಹೇಳಿ ಕೋಪಿಸಲು ನಾನು, 'ನನ್ನ ಮನಸ್ಸಿನಲ್ಲಿ

CC-0. Jangamwadi Math Collection, Varanasi. An eGangotri Initiative

ಸ್ವಲ್ಪವೂ ಆ ಎಣಿಕೆಯಿಲ್ಲ' ಎಂದು ಹೇಳಿ ಆ ಸಂಕಟವನ್ನು ಪರಿಹರಿಸಿದೆನು; ಅದನ್ನು ನೀನು ಅರಿತಿಲ್ಲ. ಮಾನನೀಗೈ! ಕೃಪೆ ಮಾಡಬೇಕು" ಎಂದು ತಿರುಗಿ ತಿರುಗಿ ಹೇಳಿದರೂ ತಾಳಲಾರದವನಾದರೂ ಹಿತ ನುಡಿಗಳನ್ನು ನುಡಿದರೂ ನಮಸ್ಕಾರ ಮಾಡಿದರೂ ಒಂದನ್ನೂ ಗಣಿಸದವಳಾಗಿ ವಾಸವದತ್ತೆ ನಗುತ್ತ, "ನೀನು ಹೇಳಿದ ಜಿಂಕೆಯೂ ಜೇನೂ ಮಾನನೀಗೈಯೂ ನಾನಲ್ಲ; ನನ್ನ ಹೆಸರು ವಾಸವದತ್ತೆ" ಎಂದಳು. ಒಡನೆ ಉದಯನನು ಬೆಚ್ಚಿ ಬೇಗ ಬೇಗ ಓಡಿಹೋಗಿ ಬೇರೊಂದು ಮಂಟಪದಲ್ಲಿ ತನಿಯಾಗಿ ಅಡಗಿಕೊಂಡಿದ್ದನು. ವಾಸವದತ್ತೆಯೂ ಸಿಟ್ಟುಗೊಂಡು ಅವನನ್ನು ನೋಡದೆ ಹೊರಟು ಹೋದಳು. ರಾತ್ರಿಯೂ ಕಳೆಯಿತು.

ಬೆಳಗ್ಗೆ ವಾಸವದತ್ತೆ ಮಾನನೀಗೈಯನ್ನು ಬರಿಸಿ ಬಹಳ ಕೋಪಿಸಿಕೊಂಡು ಒಂದು ಕಂಬಕ್ಕೆ ಸೇರಿಸಿ ಕಟ್ಟಿ ಅವಳನ್ನು ನೋಡಿ, "ನಾಟ್ಯಶಾಲೆಯಲ್ಲಿ ನೀನು ಅರಸನೊಡನೆ ಹೇಳಿದ ಮಾತುಗಳನ್ನೆಲ್ಲ ಹೇಳು" ಎಂದು ನುಡಿದು ಹತ್ತಿರದಲ್ಲಿ ನಿಂತ ಒಬ್ಬಳನ್ನು ನೋಡಿ, "ಇವಳ ಕೂದಲನ್ನು ಕತ್ತರಿಸುವುದಕ್ಕೆ ಒಂದು ಕತ್ತರಿಯನ್ನು ಕೊಂಡು ಬರುವವಳಾಗು" ಎಂದು ಹೇಳಿದಳು. ಅದನ್ನು ಪಕ್ಕದೆಡೆಯಲ್ಲಿ ಇದ್ದ ವಸಂತಕನು ಅರಿತು ಬೇಗನೆ ಹೋಗಿ ಉದಯನನಿಗೆ ತಿಳಿಸಲು ಅವನು, "ಮಾನನೀಗೈಯ ಒಂದು ಕೂದಲನ್ನು ಕತ್ತರಿ ಮುಟ್ಟುವುದಾದರೆ, ನನ್ನ ಪ್ರಾಣ ಹೋಗುವುದು; ಈ ಕ್ರೂರಕಾರ್ಯಗಳನ್ನು ತಪ್ಪಿಸುವವನಾಗು" ಎಂದನು. ವಸಂತಕನು, "ನಡೆದದ್ದೇನು?" ಎಂದನು. ಉದಯನನು, "ಎಲ್ಲವೂ ನಿನ್ನಿಂದಲೆ ಆದದ್ದು ತಾನೆ" ಎನ್ನಲು ವಸಂತಕನು, "ಚೆಂಡಾಟವನ್ನು ನಾನು ನೋಡಹೇಳಿದ್ದು ಉಂಟೇ ಅಲ್ಲದೆ ಬೇರೆ ಯಾವುದನ್ನೇ ಆದರೂ ಮಾಡಹೇಳಿದ್ದುಂಟೋ? ರಾಜಮಹಾದೇವಿಯ ತಣಿಯದ ಕೋಪವನ್ನು ತೀರಿಸುವ ಬಲ್ಮೆ ಯಾರಿಗುಂಟು? ಆದರೂ ಆರೇಳು ಗಳಿಗೆಯ ಹೊತ್ತು ಆ ಕೋಪವನ್ನು ತಣಿಸುವೆನು. ಅಷ್ಟರೊಳಗೆ ಬೇರೆ ಯಾರನ್ನಾದರೂ ಅಲ್ಲಿಗೆ ದಯಮಾಡಿ ಕಳಿಸಬೇಕು" ಎಂದು ಹೇಳಿಬಿಟ್ಟು ಬೇಗನೆ ಹೋಗಿ ದೇವಿಯನ್ನು ಸಾರಿ, "ಅರಸನು ಎಲ್ಲಿ ಇದ್ದಾನೆ?" ಎಂದು ಹುಡುಕಲು, ಅಲ್ಲಿ ಇದ್ದ ಕಾವಲು ಹೆಂಗಸೊಬ್ಬಳು "ಇದು ತಲೆವಿಗೆ ಕೋಪವುಳ್ಳ ಸಮಯ" ಎಂದು ಅರುಗಿಗೆ ಬಂದು ಮೆಲ್ಲಗೆ ಹೇಳಿ, "ಸುಮ್ಮನೆ ಇರಿ" ಕೈಯೆತ್ತಿ ಸೂಚಿಸಿದಳು. ಒಡನೆ ವಸಂತಕನು ನಡುಗಿ, "ತಲೆವಿಗಿರುವ ಕೊರತೆಯಾವುದು?" ಎಂದು ಕೇಳಿದನು. ಅದನ್ನು ವಾಸವದತ್ತೆ ಅರಿತು ಅವನನ್ನು ಕುರಿತು, "ಅರಸನ ರೂಪವನ್ನು ತಾಳಿಕೊಂಡಿರುವ ಧೂರ್ತ ಕಳ್ಳನನ್ನು ಕೇಳುವಿರಾದರೆ ನನ್ನ ಕೋಪದ ಕಾರಣವನ್ನು ತಾವು ಸುಲಭವಾಗಿ ಅರಿತುಕೊಳ್ಳಲು ಸಾಧ್ಯವಾಗುವುದು" ಎಂದು ಹೇಳಿ ಅಲ್ಲಿದ್ದವಳೊಬ್ಬಳನ್ನು ನೋಡಿ, "ಈ ಕತ್ತರಿ

CC-0. Jangamwadi Math Collection, Varanasi. An eGangotri Initiative

ಯಿಂದ ಇವಳ ಕೂದಲನ್ನು ಕತ್ತರಿಸು" ಎಂದು ಬಹಳ ಕೋಪಗೊಂಡು ನುಡಿದಳು. ವಸಂತಕನು, "ಹಾಗಾದರೆ ಕೂದಲು ಕತ್ತರಿಸುವುದರಲ್ಲಿ ನನಗೆ ಬಹಳ ಪಳಕವುಂಟು" ಎಂದನು. ಎನ್ನಲು ಅವಳು ಕತ್ತರಿಸುವಂತೆ ಹೇಳಲು, ಅವನು ವಾಸವದತ್ತೆಯನ್ನು ನೋಡಿ, "ಕತ್ತರಿಯ ಲಕ್ಷಣಗಳು ಹಲವು ಇವೆ; ನಿನ್ನ ಕೈಮಲರು ಕೂದಲನ್ನು ಮುಟ್ಟುವುದು ತಗದು; ಆಯುಧವನ್ನು ಕೊಡಿ" ಎಂದು ಹೇಳಿ ತೆಗೆದುಕೊಂಡು ಅದರ ಲಕ್ಷಣವನ್ನು ಬೆಳಗುವಂತೆ ಹೇಳುವವನ ಹಾಗೆ ಕತ್ತರಿಯ ಬೇರೆ ಬೇರೆ ಲಕ್ಷಣ ಹಲವನ್ನು ಹೇಳಿ, "ಈ ಕತ್ತರಿಯಿಂದ ಇವಳ ಕೂದಲನ್ನು ಮುಟ್ಟಿದರೆ ಇವಳಿಗೆ ಬಹಳ ಮೇಲ್ಮೆಯುಂಟಾಗುವುದು; ಆದ್ದರಿಂದ ಇದು ಬೇಡ" ಎಂದು ಅದನ್ನು ದೂರದಲ್ಲಿ ಎಸೆದನು. ಬಳಿಕ ಅವಳಿಂದ ಕೊಡಲ್ಪಟ್ಟ ಕತ್ತರಿ ಒಂದೊಂದಕ್ಕೂ ಒಂದೊಂದು ದೋಷವನ್ನು ಹೇಳಿ ಹೇಳಿ ಎಸೆಯುವವನಾದನು.

ಅವನ್ನೆಲ್ಲ ಒಡನೊಡನೆ ಬೇಹಿನವರಿಂದ ಅರಿತುಕೊಳ್ಳುತ್ತಲೇ ಇದ್ದ ಉದಯನನು *ಯೋಗಿಯನ್ನು ಬರಿಸಿ ನಡೆದುದನ್ನು ಅಡಕವಾಗಿ ಹೇಳಿದನು; ಕೇಳಿದ ಯೋಗಿ, "ನಾನೂ ಆರೇಳು ಗಳಿಗೆಯ ವರೆಗೆ ಅವಳ ಕೂದಲನ್ನು ಕಾಪಾಡುವೆನು; ಅದರ ಮೇಲೆ ಯಾವುದೊಂದನ್ನೂ ಮಾಡಲರಿಯೆನು" ಎಂದು ಕೀಳಾದ ಹಲವು ಬಗೆಯ ಪುರುಳುಗಳನ್ನು ತನ್ನ ಅಂಗಗಳ ಮೇಲೆ ಧರಿಸಿಕೊಂಡು, ವಿಭೂತಿಯನ್ನು ಮೈಯಲ್ಲೆಲ್ಲ ಪೂಸಿಕೊಂಡು ಹುಚ್ಚರ ವೇಷ ಹಾಕಿಕೊಂಡು, ಕಂಡವರು ಗಾಬರಿಯಾಗಿ ಅಂಜುವಂತೆ ಅಲ್ಲಿಗೆ ಹೋದನು.

ವಾಸವದತ್ತೆಯನ್ನು ಸುತ್ತಿ ನಿಂತ ಹೆಂಗಸರು ಅವನನ್ನು ಕಂಡು ಭಯಪಟ್ಟು ಹಲವೆಡೆಗೂ ಓಡುವವರಾಗಿ ಬೀಳುವವರೂ ಏಳುವವರೂ ಮೇಲೆ ಬರಲು ನಡುಗಿ ಅಳುವವರೂ ದೇವಿಯ ಹಿಂದೆ ಸೇರುವವರೂ ಆದರು; ವಾಸವದತ್ತೆ ಅದನ್ನು ಕಂಡು ನಗುತ್ತ ಆ ನೋಟವನ್ನೇ ಬಯಸಿ ನಿಂತಳು.

ಆ ಸುದ್ದಿಯನ್ನು ಹೇಳುವಂತೆ ವಸಂತಕನು ಒಬ್ಬ ದೂತಿಯನ್ನು ಗುಟ್ಟಾಗಿ ಅರಸನ ಬಳಿ ಕಳಿಸಿದನು. ಆಗ ಅರಸನು ಪದ್ಮೆಯನ್ನು ಬರಿಸಿ ಏನೋ ಹೇಳತೊಡಗಿ ದಿಗಿಲುಪಟ್ಟು ತಡೆದನು. ಆ ದಿಗಿಲನ್ನರಿತ ಪದ್ಮೆ, "ನನಗೆ ಹೇಳಬಾರದ್ದಾದ ಕೆಲಸ ಯಾವುದಿದೆ? ದಯವಿಟ್ಟು ಹೇಳಬೇಕು" ಎಂದು ನಮಸ್ಕರಿಸಿ ಕೇಳಲು ಅವನು,

---

* ಉದಯನನಿಂದ ಕಳಿಸಲ್ಪಟ್ಟು ಪ್ರದ್ಯೋತನನ ಬಳಿ ಹೋದ ಯೋಗಿ ಅವನನ್ನು ಕಂಡು ಒಡನೆ ಕೌಶಾಂಬಿಗೆ ಬಂದುಬಿಟ್ಟನೆಂಬುದನ್ನು ಹೇಳುವ ಭಾಗ ಇದರ ಮೂಲಗ್ರಂಥದಲ್ಲಿ ಶಿಥಿಲವಾಗಿ ಹೋಗಿರಬೇಕೆಂದು ತಿಳಿಯುತ್ತದೆ; 'ಉದಿತೋದಯ ಕಾವ್ಯಂ' ಮೊದಲಾದುವು ಈ ಅಭಿಪ್ರಾಯವನ್ನು ಬಲಪಡಿಸುತ್ತವೆ.

CC-0. Jangamwadi Math Collection, Varanasi. An eGangotri Initiative

"ನಾನು ಹೇಳುವುದಕ್ಕೆ ನಾಚುವೆನು; ನಿಮ್ಮಕ್ಕನನ್ನು ಬಳಿಸಾರುವೆಯಾದರೆ ಅವಳು ಹೇಳುವಳು; ನೀನು ನನ್ನ ದೋಷವನ್ನು ಕಾಣದ ದೇವತೆಯಾದ್ದರಿಂದ ಅವಳ ಕೋಪವನ್ನು ತಣಿಸಿ ನನ್ನ ಪ್ರಾಣವನ್ನು ಉಳಿಸಬೇಕು" ಎಂದು ಅವಳನ್ನು ಕಳಿಸಿದನು.

ಪದ್ಮೆ ವಾಸವದತ್ತೆಯ ಬಳಿ ಹೋಗಿ ನಮಸ್ಕರಿಸಿದಳು. ಆಗ ಅವಳು ನಡೆದುವನ್ನು ಹೇಳಲು ಪದ್ಮೆ, "ನೀವು ತಾಳಿಕೊಳ್ಳಬೇಕು; ಈ ವರವನ್ನು ನನಗೆ ಕೊಡುವ ಕೃಪೆ ಮಾಡಬೇಕು" ಎಂದು ಹೇಳಿ ತಾನು ಬಂದ ಕಾರ್ಯವನ್ನು ತಿಳಿಸಿ ಮತ್ತೂ ನಮಸ್ಕರಿಸಿ ಅವಳ ಮುಖವನ್ನು ನೋಡುತ್ತಲೇ ನಿಲ್ಲುವವಳಾದಳು.

ಆಗ ಬಾಗಿಲು ಕಾವಲವನು ಬಂದು ಉದಯನನನ್ನು ವಂದಿಸಿ, "ಕೋಸಲದರಸನ ದೂತರು ಬಾಗಿಲಲ್ಲಿ ಬಂದು ನಿಂತಿದ್ದಾರೆ" ಎಂದು ಹೇಳಲು ಕೇಳಿ ಉದಯನನು ಅವರನ್ನು ಬರಮಾಡಿ ಬಂದ ಕಾರ್ಯವನ್ನು ಹೇಳುವಂತೆ ಕೇಳಿದಾಗ ಅವರು, "ಕೋಸಲದರಸರು ತಮ್ಮ ಹಿರಿಯ ಮಹಾದೇವಿಯರಿಗೆ ಒಂದು ಶ್ರೀಮುಖವನ್ನು ಕೊಟ್ಟು ಕಳಿಸಿದ್ದಾರೆ. ಅದನ್ನು ಅಲ್ಲಿ ಕಳಿಸಬೇಕು" ಎಂದು ಕೊಟ್ಟರು. ಆಗ ಉದಯನನು, "ಈ ಸಮಯದಲ್ಲಿ ಇದು ಬಂದದ್ದು ಒಳ್ಳೆಯದೇ" ಎಂದು ಎಣಿಸಿ ಅದನ್ನು ವಾಸವದತ್ತೆಯ ಬಳಿ ಕಳಿಸಿದನು. ಅವಳು ಅದನ್ನು ತೆಗೆದುಕೊಂಡು, "ಇದನ್ನು ಓದಿ ಹೇಳು" ಎಂದು ಪದ್ಮೆಯ ಕೈಯಲ್ಲಿ ಕೊಟ್ಟಳು. ಪದ್ಮೆ ಎದ್ದು ಅದನ್ನು ತೆಗೆದುಕೊಂಡು ಬಿಚ್ಚಿ, "ಕೋಸಲದರಸನ ಓಲೆಯನ್ನು ವಾಸವದತ್ತೆ ಕಾಣುವವಳಾಗಲಿ: ನಾನು ಎಚ್ಚರ ತಪ್ಪಿದ ಸಮಯನೋಡಿ ನನ್ನ ಊರನ್ನು ಸುಟ್ಟ ಪಾಂಚಾಲರಾಜನಿಂದ ನಿನ್ನ ತಂಗಿ* ವಾಸವದತ್ತೆ ಆಯದವರೊಡನೆ ಕೈಕೊಳ್ಳಲ್ಪಟ್ಟು ಹೋದಳು. ಪಾಂಚಾಲರಾಜನನ್ನು ಗೆದ್ದ ಉದಯನನಿಂದ ಹಲವು ಹೆಂಗಸರೊಡನೆ ಅವಳು ಹಿಡಿಯಲ್ಪಟ್ಟು ಬಳಿಕ ನಿನ್ನ ಬಳಿ ಊಳಿಗದ ಹೆಣ್ಣಾಗಿ ಇರುವುದನ್ನು ಕೇಳಿದೆನು. ಅವಳು ತನ್ನನ್ನು ಇಂಥವಳೆಂದೂ ತನ್ನ ಹೆಸರು ಇಂಥದೆಂದೂ ತಿಳಿಸದೆ ಮಾನನೀಗೈ ಎಂದು ಹೆಸರಿಟ್ಟುಕೊಂಡಿರುವುದನ್ನೂ ಅರಿತೆನು. ಬೇಗನೆ ಅಲ್ಲಿ ಬರುವೆನು. ನಾನು ಬರುವ ವರೆಗೂ ದುಃಖವನ್ನು ಪರಿಹರಿಸಿ ಅವಳನ್ನು ಕಾಪಾಡಬೇಕಾದ್ದು ನಿನ್ನ ಕರ್ತವ್ಯ; ಇದೇ ನನ್ನ ಕೋರಿಕೆ" ಎಂದು ಅದರಲ್ಲಿ ಬರೆದಿದ್ದ ವಿಷಯಗಳನ್ನು ಓದಿ ತಿಳಿದು ವಾಸವದತ್ತೆಯನ್ನು ನೋಡಿ, "ಇದರಲ್ಲುಳ್ಳ ವಿಷಯ ನನಗೆ ತಿಳಿಯಲಿಲ್ಲ; ನೀವೇ ನೋಡಿಕೊಳ್ಳಿ" ಎಂದು ಅವಳಿಗೆ ಕೊಟ್ಟಳು.

---

* ವಾಸವದತ್ತೆಗೆ ತಾಯಿಯ ವರ್ಗಕ್ಕೆ ಸೇರಿದವಳ ಮಗಳಾಗಿ ವಯಸ್ಸಿನಲ್ಲಿ ಕಿರಿಯವಳಾಗಿಯೂ ಇದ್ದದ್ದರಿಂದ ಅವಳು "ತಂಗಿ" ಎನ್ನಲ್ಪಟ್ಟಳು.

CC-0. Jangamwadi Math Collection, Varanasi. An eGangotri Initiative

ವಾಸವದತ್ತೆ ಅದನ್ನು ತೆಗೆದುಕೊಂಡು ಓದಿ ಎಡೆಯೆಡೆಯಲ್ಲಿ ಸಂಕಟಪಟ್ಟು ಕಣ್ಣೀರು ಸುರಿಸಿಕೊಂಡು, "ಹೆಣ್ಣುತನಕ್ಕೆ ಸ್ವಭಾವ ತಪ್ಪುಮಾಡುವುದೇ ಎಂದು ತೋರುವುದು" ಎಂದು ಹೇಳಿ ಮಾಸನೀಗೈ ಪಟ್ಟ ದುಃಖಕ್ಕೆ ಆರದವಳಾಗಿ ಎದ್ದು ಪದ್ಮೆಯೊಡನೆ ಹೋಗಿ ಮಾಸನೀಗೈಯ ಕಟ್ಟನ್ನು ಬಿಚ್ಚಿಬಿಟ್ಟು ಅವಳನ್ನು ತಬ್ಬಿಕೊಂಡು, "ಮದ್ದಾನೆಯ ಗುಂಪುಗುಳ್ಳ ಕೋಸಲನ ಮಗಳೇ! ಅಳಬೇಡ; ಎನ್ನ ಬೊಂಬೆಯೇ! ಅರುಮೆ ಪಡಪಿನಕ್ಕಾ! ಮಾಡಿದ್ದನ್ನು ತಾಳಿಕೊ" ಎಂದು ಹೇಳಿ ಅವಳ ಕಣ್ಣೀರನ್ನು ತೊಡೆದು ಸುತ್ತುವರಿದಿರುವವರನ್ನು ಹೊರಕ್ಕೆ ಹೋಗುವಂತೆ ಮಾಡಿಬಿಟ್ಟು ಅವಳನ್ನು ಒಡನೆ ಇರುವಂತೆ ಮಾಡಿ ಅವಳ ಕೂದಲನ್ನು ತನ್ನ ಕೈಯಿಂದ ಬಾಚಿ ಬಿಡಿಸಿ ಆರಿಸಿ ಎಣ್ಣೆ ತೊಡೆದು ಮಿಾಯಿಸಿ ಬಟ್ಟೆ ಉಡಿಸಿ ಪದ್ಮೆಯೂ ತಾನೂ ನಿಂತು ಅವಳಿಗೆ ಇನಿನುಡಿಗಳು ಹಲವನ್ನು ಹೇಳಿ ಮೇಲಾದ ಎಡೆಯಲ್ಲಿದ್ದು ಮೂವರೂ ಒಂದು ಪಾತ್ರೆಯಲ್ಲಿ ಉಣ್ಣುವವರಾದರು. ಅದನ್ನು ಕಂಡ ವಸಂತಕನು ಬೇಗನೆ ಹೋಗಿ ಉದಯನನಿಗೆ ಹೇಳಲು ಅವನು ಕೇಳಿ ಬಹಳ ಸಂತೋಷಪಟ್ಟು ಅವನನ್ನು ತಬ್ಬಿಕೊಂಡನು.

ಆಗ ವಾಸವದತ್ತೆ, "ಕೋಸಲದೇಶದರಸನ ಮಗಳಿಗೆ ಮದುವೆಯಲಂಕಾರ ಮಾಡು" ಎಂದು ಪದ್ಮೆಗೆ ಹೇಳಿಬಿಟ್ಟು ಅರಸನಿಗೆ ಮದುವೆಸುದ್ದಿಯನ್ನು ಹೇಳಿ ಕಳಿಸಿದಳು. ಒಡನೆ ಮದುವೆ ವೇಷದೊಡನೆ ಅವನು ಬಂದು ಮದುವೆ ಹಂದರದಲ್ಲಿ ಪೀಠದಮೇಲೆ ಕೂತಿದ್ದನು. ಆಗ ವಾಸವದತ್ತೆಯೂ ಪದ್ಮೆಯೂ ಪ್ರೀತಿಯಿಂದ ಕೊಡಲು ಅವನು ಕೋಸಲದರಸನ ಮಗಳನ್ನು ಮದುವೆಮಾಡಿಕೊಂಡನು. ಆ ತರುವಾಯ,

"ಪೂರ್ಣಭೂಷಣೆಯರಹ ಮಡದಿಯರು ಮೂವರೂ
ಸೇವಿಸಲು; ಗೆಲ್ಗೊಂಡ ಹಲವರಸರೊಳ್ಪೊಳ್ಳೆ
ಕಪ್ಪಗಳ ಕೊಡುತಿರಲು; ಮಿಗೆ ಸಮೃದ್ಧಿಯ ತರುವ
ಹಲವು ಕುಲಗಳು ಹೆಚ್ಚಿ ಬೆಳೆಯುತಿರಲ್; ನಿರಿಯರಸ
ನಲ್ಲಾಳ್ಕೆ ನಡಸುತ್ತ"

(೪. ೧೪ : ೧೮೩–೫)

ಸಂತೋಷದಿಂದಿದ್ದನು.

ಉದಯನನು ಈ ರೀತಿ ಇರುವ ಕಾಲದಲ್ಲಿ, ಲಾವಾಣಕ ನಗರದ ಪಕ್ಕದಲ್ಲುಳ್ಳ ತೋಪಿನಲ್ಲಿ ಹಿಂದೆ ಉಂಡಾಟ ನಡೆದ ಕಾಲದಲ್ಲಿ ಎಳಮೆ ವಯಸ್ಸಿನಲ್ಲಿ ಅವನಿಂದ ಮಾಲೆ ಮೊದಲಾದುವನ್ನು ಮುಡಿಸಿಕೊಂಡಿದ್ದ ವಿರಚಿಕೆಯೆಂಬವಳು ಅವನು ಸೂಡಿದ

CC-0. Jangamwadi Math Collection, Varanasi. An eGangotri Initiative

ಮಾಲೆಯನ್ನಲ್ಲದೆ ಬೇರೊಂದನ್ನೂ ಅರಿಯದವಳಾಗಿ ವ್ರತದಿಂದಿದ್ದು ವಯಸ್ಸಿನ ಪೂರ್ಣಾವಸ್ಥೆಯನ್ನು ಪಡೆದು ಬೆಳಗಿದಳು. ಅದನ್ನರಿತ ಅವಳ ತಂದೆಯಾದ ಒಬ್ಬ ಮುನಿಗಳು ಬೇಗನೆ ಬಂದು ಕೌಶಾಂಬೀ ನಗರವನ್ನು ಸೇರಿ ತಮ್ಮ ಬರವನ್ನು ತಿಳಿಸಿ ಉದಯನನನ್ನು ಕಂಡು, "ನಾನು ಹೇಳುವುವನ್ನು ಅಂಗೀಕರಿಸಿ ಕೇಳಬೇಕು. ವ್ಯಾಸರು ಮೊದಲಾದ ಹಿರಿಯರು ಬೆಳಗಿದ ಕುರುಕುಲದಲ್ಲಿ ನೀನು ಹುಟ್ಟಿದವನು. ನಾನು ಬೆಳ್ಳಿಮಲೆಯಲ್ಲುಳ್ಳ ಮಂದರ ಅರಸನು (ವಿದ್ಯಾಧರ ರಾಜ). ಅಮಾತ್ಯರೊಡನೆ ಅರಸಾಳ್ಕೆಗೈದುಕೊಂಡಿದ್ದ ನಾನು ಮುಕ್ತಿಯನ್ನು ಬಯಸಿದ ಪ್ರಯತ್ನವುಳ್ಳವನಾಗಿ ನನ್ನ ಭಾರವನ್ನು ಮಗನಿಗೆ ಒಪ್ಪಿಸಿಬಿಟ್ಟು ಕಾಶಿಯರಸನ ಪುತ್ರಿಯೂ ನೀಲಕೇಶಿ ಯೆಂಬ ಹೆಸರುಳ್ಳವಳೂ ಆದ ನನ್ನ ಮನೆವಿ (ಹೆಂಡತಿ) ಯೊಡನೆಯೂ ವಿರಿಚಿಕೆಯೆಂಬ ಪುತ್ರಿಯೊಡನೆಯೂ ಕಾಡೊಂದನ್ನು ಸೇರಿ ತಪಸ್ಸು ಮಾಡಿಕೊಂಡಿದ್ದೆನು. ಆಗ ಒಂದು ದಿನ ನಾನು ಪುಣ್ಯತೀರ್ಥಸ್ನಾನ ಮಾಡುವುದಕ್ಕೆ ಪಕ್ಕದೆಡೆಗೆ ಹೋಗಿರುವಲ್ಲಿ ನೀನು ಬಂದು ನನ್ನ ಮಗಳು ವಿರಿಚಿಕೆಯನ್ನು ತೊಡೆಯಲ್ಲಿ ಕೂರಿಸಿಕೊಂಡು ಅವಳಿಗೆ ಮಾಲೆಸೂಡಿ ಹೋದೆ. ಅದನ್ನೇ ತನಗೆ ಆಧಾರವಾಗಿ ಇಟ್ಟುಕೊಂಡು ನಿನ್ನನ್ನೇ ಬಯಸಿ ಅವಳು ಕಾಲವನ್ನು ಕಳೆಯುವವಳಾದಳು. ನಿನ್ನನ್ನೆ ಬಯಸಿರುವ ಅವಳ ಮನದಾವರೆವೊಗ್ಗು ಬೇರೊಬ್ಬರಿಗಾಗಿಯೂ ಅರಳುವುದರಿದು. ತಮ್ಮಲ್ಲಿ ಪ್ರೀತಿ ಯುಳ್ಳ ಕನ್ನೆ ಮಗಳುದಿರು ಯಾರೇ ಆದರೂ ಅವರನ್ನು ತಾವೂ ಪ್ರೀತಿಸಿ ಅವರ ದುಃಖವನ್ನು ತೀರಿಸಿ ಕಾಪಾಡುವುದು ಪುರುಷತಿಲಕನಿಗೆ ಕರ್ತವ್ಯವೆಂಬುದು ಲೋಕ ಅರಿತದ್ದೇ. 'ನನ್ನ ಮಗಳನ್ನು ನಾನು ಕಳಿಸುವೆನು; ನೀನು ಪಡೆದುಕೊ' ಎಂದು ತಿಳಿಸಿ ಕೊಳ್ಳುವುದು ಸಂಪ್ರದಾಯವಲ್ಲವಾದರೂ ಹೇಳುತ್ತಿರುವೆನು. ಸ್ವಭಾವವಾಗಿಯೇ ನಿನ್ನಿಂದ ಮಾಲೆ ಸೂಡಲ್ಪಟ್ಟವಳಾದ್ದರಿಂದ ಅವಳು ನಿನ್ನ ಹೆಂಡತಿಯೇ. ಆದ್ದರಿಂದ ನನ್ನ ಪ್ರಾರ್ಥನೆಯಂತೆ, ಕೆಂಬೆಂಕಿ ದೇವರ ಮುಂದೆ ಅವಳನ್ನು ಒಳ್ಳೆಯ ದಿನದಲ್ಲಿ ಮದುವೆಮಾಡಿಕೊಳ್ಳುವುದು ಒಳ್ಳೆಯದು" ಎಂದು ತಿಳಿಸಿದರು.

ಕೇಳಿದ ಉದಯನನು ಅದನ್ನು ವಾಸವದತ್ತೆಗೆ ತಿಳಿಸಿದನು. ಈ ಸಂಗತಿಯನ್ನು ಸಹಜವಾಗಿಯೇ ಹಿಂದೆ ಅರಿತವಳಾದ್ದರಿಂದ, ವಾಸವದತ್ತೆ ಸ್ವಲ್ಪವೂ ಮುನಿಸು ಗೊಳ್ಳದವಳಾಗಿ ಅಂಗೀಕರಿಸಿದಳು. ಅವಳ ಮನಸ್ಸನ್ನರಿತ ಉದಯನನು ಬಳಿಕ ತಾನು ಒಡಂಬಟ್ಟದ್ದನ್ನು ಆ ಮುನಿಗಳಿಗೆ ತಿಳಿಸಿ ಆ ಸಂತೋಷದಿಂದ ಯಾಚಕ ರಿಗೆ ಅರುಮೆಪುರುಳುಗಳನ್ನು ಮಿಗಿಲಾಗಿ ಕೊಟ್ಟನು. ಆ ಮದುವೆಯ ಸುದ್ದಿ ಯನ್ನು ನಾಡಿನವರೂ ನಗರದವರೂ ಅರಿತು ತಂತಮ್ಮೆಡೆಗಳನ್ನು ಅಲಂಕರಿಸುವುದು ಮೊದಲಾದುವನ್ನು ಮಾಡುವಂತೆ ಮುರಜುಬಾರಿಸಿ ಸಾರಿಸುವಂತೆ ಮಾಡಿದನು.

CC-0. Jangamwadi Math Collection, Varanasi. An eGangotri Initiative

ಅಲಂಕಾರದ ಹೆಚ್ಚಿಗೆಯಿಂದ ಆ ನಗರ ಭೋಗಭೂಮಿಯಹಾಗೆ ಬೆಳಗಿತು. ಯಾವ ಕಡೆಯಲ್ಲಿಯೂ ನಗರದವರು ಮುಚ್ಚದ ಬಾಗಿಲವರೂ ಎಲ್ಲೆಯಿಲ್ಲದ ಕೊಡುಗೆಯುಳ್ಳವರೂ ಇಲ್ಲದವರಿಗೆ ಮಿಗಿಲು ಪುರುಳುಗಳನ್ನು ತೂರಿಕೊಡುವವರೂ ಆಗಿ, "ತಾಪಸನ ಮುಗ್ಧಮಗಳು ಇಲ್ಲಿ ಬರುವುದನ್ನು ನಾವು ನೋಡಬೇಕು" ಎಂದು ಬಯಸಿ ಹೋಗಿ

> ಹೂ ಹೆಣೆದ ಮಾಡ, ಹುಲಿಮುಖಮಾಡ, ನರ್ತನವ
> ನಾಡುವೆಡೆ, ಬಿಳಿಗಾರೆಕುಂದ, ಆಯುಧಕೋಟೆ,
> ಪಟ್ಟಣದ ಕೋಟೆ, ಬಾಗಿಲುಮಾಡ, ಮಣಿಮಯದ
> ಮಂಟಪಗಳ್—ಈ ಪರಿಯ ಮಿಕ್ಕುವನು
>
> (೪. ೧೫ : ೧೦೮—೧೧೨)

ಏರಿ ನಿಲ್ಲುವವರಾದರು.

ಅದು ತಿಳಿದ ಉದಯನನು, "ಸಿವಿಗೆ, ಮೊದಲಾದುವುಗಳಲ್ಲಿ ಹತ್ತಿಕೊಳ್ಳದೆ ನಗರದೊಳಗೆ ವಿರಿಚಿಕೆ ನಡೆದೇ ಬರುವವಳಾಗಲಿ" ಎಂದು ಹೇಳಿ ಕಳಿಸಿದನು. ಆ ಮೇಲೆ, "ಮನೆಮನೆಯ ಬಾಗಿಲಿನಲ್ಲೂ ನರುಮಲರು ಹರಡಲಿ; ಆನೆ ಮೊದಲಾದುವು ಬೀದಿಯಲ್ಲಿ ಸಂಚರಿಸುವುದನ್ನು ತಪ್ಪಿಸಿರಲಿ" ಎಂದು ಆಳುಗಳ ಮೂಲಕವಾಗಿ ನಗರದವರಿಗೆ ತಿಳಿಸಿದನು. "ಅರಣ್ ಮನೆಯಿಂದ ಮಂಗಳ ಮಡದಿಯರೂ ಹಿರಿಯರುಗಳೂ ಪ್ರೀತಿಯಲ್ಲಿ ಬೇರ್ಪಡದ ಗುಣದಿಂದ ಕೂಡಿದ ಕಾಂಚುಕಿಗಳೂ ಎದುರು ಹೋಗಿ ಕರೆದುಕೊಂಡು ಬರಲಿ" ಎಂದು ಕಟ್ಟಳೆಯಿಟ್ಟನು. ಹಾಗೆಯೇ ಅವರುಗಳು ಹೋದರು. ವಿರಿಚಿಕೆಯನ್ನು ನೋಡುವುದಕ್ಕೆ ಜನರು ದಾರಿಯ ಎರಡು ಕಡೆಗಳಲ್ಲೂ ದಟ್ಟಯಿಸಿ ನಿಂತರು. ಆಶ್ರಮದಿಂದ ಹೊರನಗರಕ್ಕೆ ಅವಳನ್ನು ಕರೆದುಕೊಂಡು ಬರುವುದಕ್ಕಾಗಿ ಪರಿವಾರಗಳೊಡನೆ ಸಿವಿಗೆ ಕಳಿಸಲ್ಪಟ್ಟಿತು.

ಕರೆದುಕೊಂಡು ಬರಲು ಹೋದವರು ವಿರಿಚಿಕೆಯನ್ನು ಸಿವಿಗೆಯಲ್ಲೇರಿಸಿ ಕರೆದುಕೊಂಡು ಬಂದು ಹೊರನಗರದಲ್ಲಿ ತೋಪಿನಲ್ಲುಳ್ಳ ಮಾಡವೊಂದರಲ್ಲಿ ಇಳಿಸಿ, ಕೆಲವಾದ ಕೂದಲನ್ನು ಮೆಲ್ಲನೆ ಎತ್ತಿ ಮುಡಿಕಟ್ಟಿ, ಆ ಕೂದಲು ಮುಡಿಯಲ್ಲಿ ಉದಯನನಿಂದ ಹಿಂದೆ ಸೂಡಲ್ಪಟ್ಟದ್ದೂ ಬಾಡಿರುವುದೂ ಆದ ಮಾಲೆಯೊಡನೆ ತಳಿರಿನಿಂದಲೂ ಅರಳುಮೊಗ್ಗಿನಿಂದಲೂ ಕಟ್ಟಿದ ಹೊಸ ದಂಡೆಯನ್ನು ಮುಡಿಸಿ, ತಾಳೆಸುಳಿಯ ಓಲೆಯನ್ನು ಕಿವಿಯಲ್ಲಿ ಸಿಕ್ಕಿ, ನೆಲ್ಲುಕಿರು ತಾಲಿಯನ್ನು ಕತ್ತಿನಡಿಯಲ್ಲಿ ಸೇರಿಸಿ, ಮುತ್ತುಕೋದ ಬಂದೆಳೆಯ ವಡವನ್ನು (ಮಾಲೆಯನ್ನು) ಎದೆಯಲ್ಲಿ ಧರಿಸಿ, ಕಾವಿಯುಡೆಯನ್ನು ಬಿಡಿಸಿ ಹೊಸ ಬಟ್ಟೆಯನ್ನು ಉಡಿಸಿ ಒಂದು ಉತ್ತರೀಯವನ್ನು

CC-0. Jangamwadi Math Collection, Varanasi. An eGangotri Initiative

ಮೇಲೆ ಸೇರಿಸಿ, ಕೈಯಲ್ಲಿ ಹಿಡಿದುಕೊಳ್ಳುವಂತೆ ಒಂದು ಕೋಳೆಯ ಅರಳುಮೊಗ್ಗನ್ನು ಕೊಟ್ಟು ಅವಳನ್ನು ಅಲಂಕಾರ ಮಾಡಿದರು.

ಮಾಡಿದ ಬಳಿಕ ಒಡನೆ ಬಂದ ಮುನಿಗಳ ಹೆಂಗಸರಲ್ಲಿ ಕೆಲವರು ಶಾಂಕಿಯತ್ತಾಯಿ ಮೊದಲಾದವರನ್ನು ನೋಡಿ, "ಇವಳನ್ನು ಕಾಪಾಡುವುದು ನಿಮ್ಮ ಕರ್ತವ್ಯ" ಎಂದು ಹೇಳಿ ಒಪ್ಪಿಸಿಕೊಟ್ಟು, "ಇನ್ನು ಇವಳಿಗೆ ತಾಯೂ ತಂದೆಯೂ ಅಕ್ಕಂದಿರೂ ಉದಯನನೇ" ಎಂದು ಹೇಳಿಬಿಟ್ಟು ಅವರುಗಳಿಂದ ಬೀಳ್ಕೊಂಡು ತಮ್ಮೆಡೆಗೆ ಹೋದರು.

ವಿರಿಚಿಕೆಯ ತಂದೆಗೆ ನಡೆದುವನ್ನು ಅವರುಗಳು ಹೇಳಲು ಆ ಮುನಿಗಳು ತಮ್ಮ ಮನೆವಿಯನ್ನು ಕರೆದು, "ವಿರಿಚಿಕೆಯನ್ನು ಮದುವೆಮಾಡಿಕೊಳ್ಳುವಂತೆ ಉದಯನನಿಗೆ ಹೇಳಿ ಸೇರಿಸಿಬಿಟ್ಟೆನು; ಇನ್ನು ನಿನ್ನನ್ನೂ ತೊರೆದು ನಾನು ತಪಸ್ಸುಮಾಡಲು ಹೋಗುವೆನು" ಎಂದು ಹೇಳಿದರು. ಕೇಳಿದ ಅವಳು ವ್ಯಥೆಪಟ್ಟು ಹಲುಬಿದಳು. ಅದನ್ನು ಆ ಮುನಿಗಳು ಮನಸ್ಸಿಗೆ ತಂದುಕೊಳ್ಳದವರಾಗಿ ಕಠಿನವಾದ ತಪಸ್ಸಿನ ನಡವಳಿಯನ್ನು ಕೈಕೊಂಡು ಬೇರೆಡೆಗೆ ಹೋದರು.

ಆ ಮೇಲೆ ಆ ವನದಲ್ಲುಳ್ಳ ಹೆಂಗಸರಲ್ಲಿ ಕೆಲವರು ವಿರಿಚಿಕೆಯಿಂದ ಬೆಳಸಲ್ಪಟ್ಟು ಅವಳೊಡನೆ ಪಳಗಿದ ಕೋಗಿಲೆ ಮೊದಲಾದುವನ್ನೂ ತಪಶ್ಶಾಲೆಯಲ್ಲುಳ್ಳ ಅರುಮೆ ಪುರುಳುಗಳನ್ನೂ ಅರುಮೆಯೊಡವೆಗಳನ್ನೂ ತೆಗೆದುಕೊಂಡು ಒಡನೆ ಬರಲು ಬೀದಿಯಲ್ಲಿ ವಿರಿಚಿಕೆ ನಡೆದು ಹೋಗುವವಳಾದಳು. ಕಂಡವರು, "ಇವಳು ಮುನಿಗಳ ಬೇಳ್ವೆಯಲ್ಲಿ ಹುಟ್ಟಿದ ದೇವತಾಸ್ತ್ರೀ; ಇವಳನ್ನು ಮನುಷ್ಯಸ್ತ್ರೀ ಎನ್ನುವುದು ನಿಜವಲ್ಲ" ಎಂದೂ, "ಸೂಡಿರುವ ತಳಿರ್ಮಾಲೆ ಬಾಡುವುದು ಮೊದಲಾದ ಸಂಗತಿಗಳು ಇವಳು ದೇವತಾಸ್ತ್ರೀ ಅಲ್ಲವೆಂಬುದನ್ನು ತಿಳಿಸುವುವು" ಎಂದೂ, "ಇವಳು, ಕೊಳದಿಂದ ಹೊರಟುಬಂದು ಕೋಳೆಮಲರನ್ನು ಹಿಡಿದುಕೊಂಡು ಹೋಗುವ ನೀರ್ದೇವತೆ" ಎಂದೂ, "ನೀರ್ದೇವತೆಯಾಗಿದ್ದರೆ ಇವಳ ಕಣ್ಣುಗಳು ಎವೆಯಾಡುವುವೋ? ಉದಯನನನ್ನು ಮದುಮಗನಾಗಿ ಪಡೆಯುವುದಕ್ಕೆ ಹಿಂದಿನ ಹುಟ್ಟಿನಲ್ಲಿ ತಪಸ್ಸು ಮಾಡಿದ ಒಬ್ಬಳು ಇವಳು" ಎಂದೂ, "ಉದಯನನನ್ನು ಸಾರಿ ಭೋಗವನ್ನನುಭವಿಸುವುದಕ್ಕೆ ಬಂದ ಯಕ್ಷಿ" ಎಂದೂ, "ಉದಯನನು ಇವಳನ್ನು ಬಿಟ್ಟು ನಿಡುಗಾಲ ಅಗಲಿದ್ದದ್ದು ತಪ್ಪು" ಎಂದೂ, "ಇವಳಿಗೆ ಅವಯವಗಳೇ ಅಲಂಕಾರಗಳು; ಆಭರಣಗಳನ್ನು ಅಲಂಕರಿಸುವವರು ಅರಿವಿಲ್ಲದವರೇ" ಎಂದೂ, "ಚೆಲುವಿನಲ್ಲಿ ತಮ್ಮನ್ನು ಹೋಲುವವರು ಇಲ್ಲ ಎಂದು ಎಣಿಸಿರುವ ಹೆಂಗಸರು ಇವಳನ್ನು ನೋಡುವವರಾಗಲಿ" ಎಂದೂ, "ಉದಯನನಿಗೆ ಇವಳೇ ತಕ್ಕವಳು" ಎಂದೂ ಹೇಳುತ್ತ

CC-0. Jangamwadi Math Collection, Varanasi. An eGangotri Initiative

ನಿಲ್ಲಲು, ವಿರಿಂಚಿಕೆ ತನ್ನ ಅಡಿಗಳು ಸಣ್ಣಮಲರುಗಳನ್ನು ತುಳಿದು ಕೆಂಪಾಗಿ ಆಯಾಸ ಉಂಟಾಗುವಂತೆ ಮೆಲ್ಲಮೆಲ್ಲನೆ ಬೀದಿಯಲ್ಲಿ ನಡೆದು ಹೋಗಿ ಅರಣ್ಮನೆಯ ಬಾಗಿಲನ್ನು ಸೇರಿದಳು. ಆಗ ಅರಣ್ಮನೆಯಿಂದ ಮಂಗಳ ವಸ್ತುಗಳನ್ನು ತೆಗೆದುಕೊಂಡು ಕೆಲವರು ಎದುರುಗೊಂಡರು; ವಿರಿಂಚಿಕೆ ಅರಣ್ಮನೆಯೊಳಕ್ಕೆ ಹೋದಳು. ದೇವಿಯರು ಮೂವರೂ ಮಾಡಬೇಕಾದುವನ್ನು ಮಾಡಿ ಅವಳ ತಂದೆತಾಯಿಗಳ ಹಾಗೆ ಕೊಡಲು ಉದಯನನು ಅವಳನ್ನು ಮದುವೆಮಾಡಿಕೊಂಡನು.

ಆ ಮೇಲೆ, ದೇವಿಯರು ನಾಲ್ವರೂ ಸೇವಿಸಲು ಮಿಗಿಲಾದ ಸಂಪತ್ತಿನಿಂದ ಕೂಡಿ ಹಲವು ಜೀವಿಗಳನ್ನೂ ಉದಯನನು ಕಾಪಾಡಿಕೊಂಡು ಬರುವವನಾದನು.

CC-0. Jangamwadi Math Collection, Varanasi. An eGangotri Initiative

# ಬೆಂಗಳೂರಿಗೆ ನೀರಿನ ಸರಬರಾಯಿ

ನಮ್ಮ ದೇಶದಲ್ಲಿ ಪಾಶ್ಚಾತ್ಯ ನಾಗರಿಕತೆಯ ಫಲವಾಗಿ ಜನರು ಹಳ್ಳಿಗಳನ್ನು ಬಿಟ್ಟು ವಿದ್ಯಾಭ್ಯಾಸ, ವಾಣಿಜ್ಯ, ಕೈಗಾರಿಕೆ ಮತ್ತು ಇತರ ಉದ್ಯೋಗಗಳಿಗಾಗಿ ಪಟ್ಟಣಗಳನ್ನು ಸೇರುವುದು ಇತ್ತೀಚೆಗೆ ಸರ್ವಸಾಮಾನ್ಯವಾಗಿ ಹೋಗಿದೆ. ಇದರಿಂದ ಗ್ರಾಮಜೀವನದ ಮೇಲಿನ ಪರಿಣಾಮ ಹೇಗಾದರೂ ಇರಲಿ, ನಗರನಿವಾಸಿಗಳಿಗೆ ತಕ್ಕಷ್ಟು ಸೌಕರ್ಯಗಳನ್ನೊದಗಿಸುವುದು ಬಹು ಕಷ್ಟವಾಗುತ್ತ ಬಂದಿದೆ. ಇನ್ನೇನೂ ಬೇಡವೆಂದರೂ, ಆರೋಗ್ಯಕರವಾದ ನೀರು, ಊರಿನ ಕಸ ತಿಪ್ಪೆಗಳನ್ನು ದೂರ ಸಾಗಿಸುವ ಏರ್ಪಾಡು, ರಸ್ತೆ, ದೀಪ, ಇವುಗಳನ್ನಾದರೂ ನಗರಾಭಿವೃದ್ಧಿಯಲ್ಲಿ ದೃಷ್ಟಿಯುಳ್ಳವರು ಕಲ್ಪಿಸಲೇ ಬೇಕಾಗುತ್ತದೆ. ಇವುಗಳಲ್ಲಿ ಕುಡಿಯುವ ನೀರನ್ನು ನಮ್ಮ ಸೀಮೆಯಲ್ಲಿ ಅತಿವಿಸ್ತಾರವಾದ ಬೆಂಗಳೂರು ನಗರಕ್ಕೆ ಒದಗಿಸಿದುದರ ಕತೆಯನ್ನು ಇಲ್ಲಿ ಸಂಗ್ರಹವಾಗಿ ವಿವರಿಸಿದೆ.

ಈಗ ಸುಮಾರು ಎಂಬತ್ತು ವರ್ಷಗಳಿಂದಲೂ ಬೆಂಗಳೂರಿಗೆ ಒಳ್ಳೆಯ ಕುಡಿಯುವ ನೀರನ್ನು ಒದಗಿಸುವ ಆಲೋಚನೆಯಿದ್ದರೂ, ತತ್ಕಾಲಕ್ಕೆ ಸಮರ್ಪಕವಾದ ಸೂಚನೆ ತಲೆದೋರಿದ್ದು ಆಳಿದ ಶ್ರೀ ಚಾಮರಾಜೇಂದ್ರ ಒಡೆಯರವರ ಪ್ರಭುತ್ವದಲ್ಲಿ. ಅದಕ್ಕೆ ಮುಂಚೆ ಧರ್ಮಾಂಬುಧಿ ಕೆರೆಯಿಂದ ನೀರನ್ನು ಗಾರೆಯ ನಳಿಗೆಗಳ ಮೂಲಕ ಅಲ್ಲಲ್ಲಿ ಅನುಕೂಲವಾದ ಜಾಗಗಳಲ್ಲಿ ಕಟ್ಟಿದ್ದ ತೊಟ್ಟಿಗಳಿಗೆ ಸಾಗಿಸಿ ಹತ್ತಿರದ ಪ್ರದೇಶಗಳಿಗೆಲ್ಲಾ ಹಂಚುತ್ತಿದ್ದರು. ಪಟ್ಟಣದ ಈಶಾನ್ಯದಲ್ಲಿ ಎಲ್ಲರಿಗೂ ಸಂಪಿಗೆ ಕೆರೆಯೇ ಆಧಾರವಾಗಿತ್ತು. ಉಳಿದ ಕಡೆ ಬಾವಿ, ಕೊಳ, ಕಟ್ಟೆ, ಕೆರೆ, ಇವುಗಳಿಂದ ನೀರನ್ನು ಒಯ್ಯುತ್ತಿದ್ದರು. ಈ ಪದ್ಧತಿಯಲ್ಲಿ ಎಲ್ಲರಿಗೂ ಆರೋಗ್ಯಕರವಾದ ನೀರು ದೊರೆಯುತ್ತಿತ್ತೆಂದು ಹೇಳಲಾಗುತ್ತಿರಲಿಲ್ಲ. ಅದಕ್ಕಾಗಿ ೧೮೯೨ರಲ್ಲಿ ದಿವಾನರಾಗಿದ್ದ ಸರ್ ಕುಮಾರಪುರಂ ಶೇಷಾದ್ರಿ ಅಯ್ಯರವರು ಬೆಂಗಳೂರಿಗೆ ಸಮೀಪವಾಗಿರುವ ನೀರಿನ ವಸತಿಗಳನ್ನೆಲ್ಲಾ ಪರಿಶೀಲಿಸಿ, ಊರಿಗೆಲ್ಲಾ ಒಂದೇ ಸಮನಾಗಿ ನೀರು ಒದಗಬೇಕಾದರೆ ಯಾವುದಾದರೂ ಒಂದು ನದಿಗೆ ಅಡ್ಡಕಟ್ಟೆ ಹಾಕಬೇಕೆಂತಲೂ, ಅರ್ಕಾವತಿಗಿಂತ ಸಮೀಪವಾದ ನದಿ ಇನ್ನೊಂದಿಲ್ಲವೆಂತಲೂ ನಿರ್ಧರಿಸಿದರು. ಅದೇ ಪ್ರಕಾರ ಹೇಸರಘಟ್ಟದ ಕೆರೆಯನ್ನು ವಿಸ್ತರಿಸಿ ೨½ ಲಕ್ಷ ಜನಕ್ಕೆ ದಿನ ಒಂದಕ್ಕೆ ಒಬ್ಬರಿಗೆ ೧೨½ ಗ್ಯಾಲನ್ ಅಥವಾ ೨ ಸಲೆ ಅಡಿಯಷ್ಟು ನೀರಿನ ಪ್ರಮಾಣದಂತೆ ಮೂರು ವರ್ಷಗಳ ವರೆಗೂ ಆಗುವಷ್ಟು ನೀರನ್ನು ಶೇಖರಿಸುವ ಸನ್ನಾಹ ಮಾಡ



CC-0. Jangamwadi Math Collection, Varanasi. An eGangotri Initiative

ಬೇಕೆಂದು ಸೂಚಿಸಿದರು. ಆಗ ನಗರದ ಜನಸಂಖ್ಯೆ ೮೦,೨೮೫; ದಂಡಿನ ಜನಸಂಖ್ಯೆ ೧,೦೦,೧೮೧. ಆ ಕಾಲದಲ್ಲಿ ಚೀಫ್ ಇಂಜಿನಿಯರಾಗಿದ್ದ ಕರ್ನಲ್ ಮ್ಯಾಕ್‌ಸ್ವೆಲ್ ಕ್ಯಾಂಬ್‌ಬೆಲ್ ಅವರು ಮುಂದಿನ ತಲೆಮಾರಿನವರ ಅನುಕೂಲತೆಗಾಗಿ ಈಗಿನವರ ದುಡ್ಡನ್ನು ಖರ್ಚುಮಾಡಿಸುವುದು ಸೂಕ್ತವಾಗಿ ತೋರುವುದಿಲ್ಲವೆಂದೂ, ಎರಡು ಲಕ್ಷ ಪ್ರಜೆಗೆ ದಿನಂಪ್ರತಿ ೧೦ ಗ್ಯಾಲನ್ ಪ್ರಕಾರ ಎರಡು ವರ್ಷಗಳ ಕಾಲಕ್ಕೆ ಆಗುವಷ್ಟೇ ನೀರು ಸಾಕೆಂದೂ ಅಭಿಪ್ರಾಯ ಪಟ್ಟದ್ದರ ಮೇಲೆ ಅವರ ಮಾತಿನಂತೆಯೇ ಕೆಲಸಕ್ಕೆ ಪ್ರಾರಂಭವಾಯಿತು.

ಆ ಸಮಯದಲ್ಲಿ ಬೆಂಗಳೂರು ದಂಡಿನವರು ಮಲ್ಲಿಗಲ್ಲು ಕೆರೆಯಿಂದ ಬೇರೆಯಾಗಿ ನೀರನ್ನು ತರುವ ಆಲೋಚನೆಯಲ್ಲಿದ್ದುದರಿಂದ ಪ್ರಾರಂಭದಲ್ಲಿ ನಗರಕ್ಕೆ ಮಾತ್ರವೇ ಹೇಸರಘಟ್ಟದಿಂದ ನೀರನ್ನು ತರುವುದಾಗಿ ಯೋಚಿಸಿದ್ದರು. ಆದರೆ ಕೊನೆಯಲ್ಲಿ ಅವರೂ ನಗರದವರೊಂದಿಗೆ ಸಹಕರಿಸಲು ಮನಸ್ಸು ಮಾಡಿದರು.

ಹೇಸರಘಟ್ಟದ ಕೆರೆಯು ಬೆಂಗಳೂರಿಗೆ ಈಶಾನ್ಯದಲ್ಲಿ ೧೩ ಮೈಲಿಗಳ ದೂರ ಅರ್ಕಾವತಿ ನದಿಗೆ ಅಡ್ಡವಾಗಿದೆ. ಅರ್ಕಾವತಿಯ ಉದ್ಭವ ನಂದಿಬೆಟ್ಟದಲ್ಲಿ. ಈ ಕೆರೆಗೆ ೩೨ ಚದರಮೈಲಿಗಳಷ್ಟು ವಿಸ್ತೀರ್ಣದಲ್ಲಿ ಬೀಳುವ ಮಳೆನೀರಿನ ಸ್ವತಂತ್ರವಾದ ಆಧಾರವಿದೆ. ಮೇಲಿನ ಕೆರೆಗಳನ್ನು ಸೇರಿಸಿದರೆ ಒಟ್ಟು ಜಲಾನಯನ ಭೂಮಿಯು ೨೧೨ ಚದರಮೈಲಿಗಳಷ್ಟಾಗುತ್ತದೆ. ಈ ಪ್ರಾಂತದಲ್ಲಿ ಸಾಧಾರಣವಾಗಿ ಒಂದು ವರ್ಷಕ್ಕೆ ೨೬ರಿಂದ ೩೦ ಅಂಗುಲ ಪ್ರಮಾಣ ಮಳೆ ಸುರಿಯುತ್ತದೆ. ತೀರ ಅನಾವೃಷ್ಟಿಯೆಂದರೆ ೧೬ರಿಂದ ೨೦ ಅಂಗುಲದಷ್ಟು, ಅತಿವೃಷ್ಟಿಯಾದಾಗ ೫೦ರಿಂದ ೫೬ ಅಂಗುಲದ ವರೆಗೂ ಮಳೆ ಬೀಳುವುದಾಗಿ ಹಲವು ವರ್ಷಗಳು ಅಳತೆಮಾಡಿ ನೋಡಿದ್ದಾಗಿದೆ.

ಮಳೆನೀರು ನೆಲದ ಮೇಲೆ ಬಿದ್ದ ಬಳಿಕ ಸ್ವಲ್ಪಭಾಗವು ಆವಿಯಾಗಿ ಮೇಲಕ್ಕೆ ಹೋಗುತ್ತದೆ. ಇನ್ನು ಕೆಲವುಭಾಗವು ನೆಲದೊಳಗೆ ಇಂಗುತ್ತದೆ. ಹೀಗೆ ಇಂಗಿದ ನೀರಿನಲ್ಲಿ ಬಹುಭಾಗವನ್ನು ಮರಗಿಡಗಳು ಉಪಯೋಗಿಸಿಕೊಳ್ಳುತ್ತವೆ; ಕೊಂಚ ಮಟ್ಟಿಗೆ ಅನುಕೂಲವಾದ ಕಡೆಗಳಲ್ಲಿ ಬುಗ್ಗೆಗಳ ಮೂಲಕ ಮೇಲಕ್ಕೆ ಬರುವ ಸಂಭವವೂ ಉಂಟು. ಉಳಿದ ನೀರು ಹನಿಗೂಡಿ ಹಳ್ಳವಾಗಿ ನೆಲದ ಮೇಲೆ ಹರಿದು ತೊರೆಯಾಗಿ ಹೊಳೆಯನ್ನು ಸೇರುತ್ತದೆ.

ಒಟ್ಟು ಬಿದ್ದ ಮಳೆಯ ನೀರಿನಲ್ಲಿ ಎಷ್ಟುಭಾಗ ಹೀಗೆ ನೆಲದ ಮೇಲೆ ಹರಿದು ಕೆರೆ ಕಟ್ಟೆಗಳನ್ನು ತುಂಬುತ್ತದೆ ಎಂಬುದು ಬಹು ಮುಖ್ಯವಾದ ಪ್ರಶ್ನೆ. ಇದನ್ನು ನಿರ್ಧರಿಸುವುದರಲ್ಲಿ ನಾವು ಹಲವು ಅಂಶಗಳನ್ನು ಗಮನಿಸಬೇಕಾಗುತ್ತದೆ.—

CC-0. Jangamwadi Math Collection, Varanasi. An eGangotri Initiative

೧. ಬೀಳುವ ಮಳೆ: ಅದರ ಪ್ರಮಾಣ, ಹರಡಿರುವ ವಿಸ್ತಾರ; ಮಳೆಗಾಲದ ಅವಧಿ.

೨. ಜಲಾಸಯುಸ ಭೂಮಿಯ ಅಳತೆ ಮತ್ತು ಆಕಾರ.

೩. ಭೂಮಿಯ ಲಕ್ಷಣ: ಇಳಿಜಾರಾಗಿದೆಯೆ? ಅಥವಾ ಮಟ್ಟವಾಗಿದೆಯೆ? ಭೂಮಿಯೊಳಗಿನ ಮಣ್ಣಿನ ಸ್ವಭಾವವೇನು? ಬರಿಯ ಕಲ್ಲೇ? ಅಥವಾ ನೀರನ್ನು ಹೀರುವ ಸ್ವಭಾವವೇ? ದಟ್ಟವಾದ ಕಾಡುಗಳಿಂದ ಕೂಡಿದೆಯೆ? ಬೇಸಾಯದ ಭೂಮಿಯೇ? ಅಲ್ಲಲ್ಲಿ ಸಣ್ಣ ಕೊಳ ಕಟ್ಟೆಗಳೇನಾದರೂ ಇವೆಯೆ? ದೊಡ್ಡಮಳೆ ಬೀಳುವ ಕಾಲದಲ್ಲಿ ಎಷ್ಟುಭಾಗ ತೇವವಾಗಿರುತ್ತದೆ?

ಈ ವಿಚಾರಗಳಲ್ಲಿ ಒಂದು ಪ್ರದೇಶದ ಹಾಗೆ ಇನ್ನೊಂದು ಇರುವುದಿಲ್ಲ. ಒಟ್ಟಿನಲ್ಲಿ ಹೇಸರಘಟ್ಟದ ಕೆರೆಗೆ ಆಯಾ ವರ್ಷ ಬಿದ್ದ ಮಳೆಯಲ್ಲಿ ನೂರಕ್ಕೆ ೧೦ರಿಂದ ೧೪ ಭಾಗಗಳ ವರೆಗೂ ಬಂದು ಸೇರುವುದೆನ್ನಬಹುದು. ಹೀಗೆ ಕೆರೆಗೆ ಬಂದ ನೀರೆಲ್ಲಾ ನಮಗೆ ಉಪಯೋಗವಾಗುವುದಿಲ್ಲ. ಕೆಲವು ಭಾಗವು ಕೆರೆಯ ಅಂಗಳದಲ್ಲಿ ಪ್ರತಿನಿತ್ಯವೂ ಆವಿಯಾಗಿ ಹೋಗಲೇಬೇಕು. ಕೆರೆಯ ನೀರು ಹೆಚ್ಚಾಗಿ ಹರಡಿದಷ್ಟೂ ಈ ನಷ್ಟ ಹೆಚ್ಚು. ಸರಾಸರಿ ಒಂದು ವರ್ಷಕ್ಕೆ ಐದು ಅಡಿಯಷ್ಟು ನೀರು ಈ ರೀತಿ ಹೋಗುತ್ತದೆ. ಇನ್ನು ಕೆಲವು ಭಾಗವು ಕೆರೆಯ ಅಂಗಳದ ಅಡಿಯಲ್ಲಿಯೂ, ಏರಿಯ ಮೂಲಕವೂ ಜಿನುಗಿ ಮಾಯವಾಗುತ್ತದೆ. ಹೀಗೆ, ಇರುವ ನೀರಿನ ಪಳನೆಯ ಒಂದು ಭಾಗವು ಪ್ರತಿವರ್ಷವೂ ಕೈತಪ್ಪಿಸಿಕೊಳ್ಳುತ್ತದೆ. ಅಲ್ಲದೆ, ತೂಬಿನ ಕೆಳಗೆ ಇರುವ ನೀರನ್ನು ಬಿಟ್ಟು, ಅದರ ಮೇಲೆ ಕೋಡಿಯವರೆಗೆ ಇರುವ ನೀರಿನಿಂದಲೇ ನಮಗೆ ಪ್ರಯೋಜನ. ಈ ನೀರು ದಿನ ಒಂದಕ್ಕೆ ೧೦ ಗ್ಯಾಲನ್ ಪ್ರಮಾಣದಲ್ಲಿ ಎರಡು ಲಕ್ಷ ಜನಕ್ಕೆ ಎರಡು ವರ್ಷಗಳ ವರೆಗೂ ಉಪಯೋಗಿಸುವುದಕ್ಕೆ ಆಗುವಷ್ಟು ಇರಬೇಕು. ಎರಡು ವರ್ಷಗಳವರೆಗೂ ಏಕೆ ಎಂದು ಕೇಳಬಹುದು. ಲಕ್ಷಾಂತರ ಪ್ರಜೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಯೋಜನೆಗಳಲ್ಲಿ ಪ್ರತಿಯೊಂದು ಸಣ್ಣ ವಿಚಾರದಲ್ಲಿಯೂ ಬಹು ಎಚ್ಚರಿಕೆಯಿಂದಿರಬೇಕು. ನಾವು ಉಪಯೋಗಿಸುವ ನೀರಿಗೆಲ್ಲಾ ಮಳೆರಾಯನೇ ಆಧಾರ. ಪ್ರತಿ ವರ್ಷವೂ ಎಲ್ಲಿಯೂ ಸಮೃದ್ಧಿಯಾಗಿ ಮಳೆ ಆಗುವುದಿಲ್ಲ. ಒಟ್ಟಿಗೆ ಎರಡು ವರ್ಷಗಳ ಕಾಲ ಚೆನ್ನಾಗಿ ಮಳೆ ಆಗದೆ ಇರುವುದುಂಟು. ಹೀಗೆ ಒಂದೇ ಸಮನಾಗಿ ದೀರ್ಘಕಾಲ ಮಳೆ ಬಹಳ ಕಡಮೆಯಾದದ್ದು ಹಿಂದಿನ ಧಾತು-ಈಶ್ವರ ಕ್ಷಾಮದ ಸಮಯದಲ್ಲಿ. ೧೮೭೫ರಲ್ಲಿ ೨೨ ಅಂಗುಲ, ೧೮೭೬ರಲ್ಲಿ ೧೭ ಅಂಗುಲ, ೧೮೭೭ರಲ್ಲಿ ೩೪ ಅಂಗುಲ, ಈ ರೀತಿ ಈ ಪ್ರದೇಶದಲ್ಲಿ

CC-0. Jangamwadi Math Collection, Varanasi. An eGangotri Initiative

ಮಳೆ ಬಂತು. ತಿರುಗಿ ೧೯೨೩ರಲ್ಲಿ ೨೨ ಅಂಗುಲ, ೧೯೨೪ರಲ್ಲಿ ೨೩ ಅಂಗುಲ, ೧೯೨೫ರಲ್ಲಿ ೨೨ ಅಂಗುಲ ಹೀಗೆ ಮಳೆ ಕಡಮೆಬಿದ್ದಿದೆ. ಇಂಥ ಕಾಲದಲ್ಲಿ ಕೂಡ ಉಪಯೋಗಕ್ಕೆ ಬೇಕಾದಷ್ಟು ನೀರನ್ನು ಒದಗಿಸಿದ ಮೇಲೂ ಕೆರೆಯ ನೀರು ಬತ್ತದ ಹಾಗೆ ಇರಬೇಕು. ಈ ಆಧಾರದ ಮೇಲೆ ಕೆರೆ ತುಂಬಿದಾಗ ೬೩ ಕೋಟಿ ಸಲೆ ಅಡಿ ನೀರು ನಿಂತರೆ ಸಾಕೆಂದು ತೀರ್ಮಾನವಾಯಿತು.

ನಾವು ಕೆರೆಯ ಪಾತ್ರವನ್ನಳವಡಿಸುವುದೇನೋ ಅನಾವೃಷ್ಟಿಯ ಕ್ಷೋಭೆಯನ್ನು ದಾಟುವುದಕ್ಕೆ. ಆದರೆ ಕೋಡಿಯನ್ನು ಕಟ್ಟುವುದು ಅತಿವೃಷ್ಟಿಯ ಹಾವಳಿಯನ್ನು ತಪ್ಪಿಸುವುದಕ್ಕೆ. ಕೆರೆಯ ಮುಖ್ಯವಾದ ಅಂಗಗಳೆಂದರೆ (೧) ಏರಿ, (೨) ಕೋಡಿ, (೩) ತೂಬು. ಏರಿ ಭದ್ರವಾಗಿರಬೇಕಾದರೆ ಎಷ್ಟು ದೊಡ್ಡ ಪ್ರವಾಹ ಬರಲಿ, ಕೋಡಿಯ ಮೇಲೆ ಹರಿದು ಹೋಗುವಂತಿರಬೇಕು. ಅಭೂತಪೂರ್ವವಾದ ಪ್ರವಾಹಗಳನ್ನು ಅಂದಾಜು ಮಾಡಿ ತಿಳಿಯುವುದು ಕಷ್ಟ. ಸ್ಥೂಲವಾಗಿ ಹೇಳುವುದಾದರೆ, ಮೊದಲು ಚೆನ್ನಾಗಿ ಮಳೆ ಬಿದ್ದು ಮೇಲಿನ ಕೆರೆಗಳೆಲ್ಲಾ ತುಂಬಿ ನೆಲವೆಲ್ಲಾ ತೇವವಾಗಿದ್ದಾಗ ಅಕಸ್ಮಾತ್ತಾಗಿ ಎಲ್ಲಾ ಕಡೆಯಲ್ಲಿಯೂ ಭಾರಿ ಮಳೆ ಬಿದ್ದರೆ ಮಹಾ ಪ್ರವಾಹ ಬರುತ್ತದೆ. ಈ ಪರಿಸ್ಥಿತಿಯಲ್ಲಿ ಅನಿಶ್ಚಿತವಾದ ಅಂಶಗಳು ಅನೇಕವಾಗಿವೆ. ನೆಲದ ಸ್ವಭಾವವೇನು? ಅದು ಎಷ್ಟರಮಟ್ಟಿಗೆ ತೇವವಾಗಿತ್ತು? ಒಟ್ಟು ಜಲಾಸಯನ ಭೂಮಿಯ ಎಷ್ಟು ಮತ್ತು ಯಾವ ಭಾಗದಲ್ಲಿ ಮಳೆಯಾಯಿತು? ಇದನ್ನೆಲ್ಲಾ ಕೇಳ ಹೋದರೆ "ಕಂಬಳೀ ಕತಿ ರೋಮಾಣಿ?" ಎಂದು ಕೇಳಿದ ಹಾಗೆ ತೋರಬಹುದು. ಈ ಪ್ರಶ್ನೆಗೇನೋ ಕೇಳುವವರಿಗೂ ಉತ್ತರಬೇಕಿಲ್ಲ. ಆದರೆ ನಮ್ಮ ಪ್ರಶ್ನೆಗೆ ಹಾಗಲ್ಲ. ಅದಕ್ಕಾಗಿ ಹತ್ತಾರು ಕಡೆ ಬಂದ ಪ್ರವಾಹಗಳನ್ನು ವಿಮರ್ಶಿಸಿ ಕೆಲವು ಸೂತ್ರಗಳನ್ನು ಕಂಡು ಹಿಡಿದಿದ್ದಾರೆ. ಎಷ್ಟೋ ಸಾರಿ ನದಿಗಳು ಈ ಸೂತ್ರಗಳನ್ನು ಅತಿವರ್ತಿಸಿದುದೂ ಉಂಟು. ಈ ಸಂದರ್ಭಗಳಲ್ಲಿ ಸುಗಮವಾದ ದಾರಿಯೊಂದಿದೆ. ಕೆರೆ, ಕಟ್ಟೆ, ಅಥವಾ ಸೇತುವೆಯನ್ನು ಕಟ್ಟಬೇಕಾದ ಸ್ಥಳದ ಹತ್ತಿರದಲ್ಲಿರುವ ನದೀ ತೀರದ ಹಳ್ಳಿಗಳಿಗೆ ಹೋಗಿ ಜ್ಞಾನವೃದ್ಧರೂ, ವಯೋವೃದ್ಧರೂ ಆದವರನ್ನು ವಿಚಾರಿಸುವುದು. ಸಾಧಾರಣವಾಗಿ ಅವರು ದೇವಸ್ಥಾನದ ಗೋಡೆಯ ಮೇಲೋ, ಮನೆಯ ಅಂಗಳದಲ್ಲೋ, ಇಲ್ಲವೆ ರಸ್ತೆಯ ಮೇಲೋ ಒಂದೆರಡು ಗುರುತು ತೋರಿಸಿ "ಈಗ ಮೂವತ್ತು ಮೂರು ವರ್ಷಗಳ ಹಿಂದೆ ಗಂಗೆ ಇಲ್ಲಿಯವರೆಗೆ ಬಂದಿತ್ತು. ನನಗೆ ಬುದ್ಧಿ ಕಂಡ ಮೇಲೆ ಈ ಅರುವತ್ತುಮೂರು ವರ್ಷಗಳ ಅವಧಿಯಲ್ಲಿ ಇಂಥ ಹುಚ್ಚು ಹೊಳೆ ಬಂದದ್ದಿಲ್ಲ" ಎಂದು ಹೇಳಿ ಇನ್ನೂ ಏನೇನೋ ಹೇಳುತ್ತಾರೆ. ಹೀಗೆ ಒಂದೆರಡು ಹಳ್ಳಿಗಳಲ್ಲಿ ಈ ಹೆಗ್ಗುರುತುಗಳನ್ನು ವಿಚಾರಿಸಿ ಒಂದಕ್ಕೊಂದಕ್ಕೆ ಮಟ್ಟವನ್ನು ಹೋಲಿಸಿ ಅಲ್ಲಿಯ

CC-0. Jangamwadi Math Collection, Varanasi. An eGangotri Initiative

ವರೆಗೆ ನೀರು ಹತ್ತಬೇಕಾಗಿದ್ದರೆ ಬಂದ ಪ್ರವಾಹದ ಪ್ರಮಾಣವೆಷ್ಟು ಎಂದು ಗುಣಿಸಬಹುದು. ಜೊತೆಗೆ, ಆ ಹುಚ್ಚು ಹೊಳೆ ಬಂದ ವರ್ಷ ಆ ಪ್ರಾಂತದಲ್ಲಿ ಮಳೆಯ ಲೆಕ್ಕವನ್ನು ನೋಡಿ ನಮ್ಮ ಸೂತ್ರಗಳನ್ನೂ ಕೊಂಚ ಬಲಪಡಿಸಿಕೊಳ್ಳಬಹುದು. ಪ್ರವಾಹದ ಅಳತೆಯನ್ನು ನಿರ್ಣಯಿಸಬೇಕಾದರೆ, ಒಂದು ಸೆಕೆಂಡಿಗೆ ಇಷ್ಟು ಸಲೆ ಅಡಿ ನೀರು ಈ ಜಾಗದಲ್ಲಿ ಹರಿಯಿತು ಎಂದು ಲೆಕ್ಕಹಾಕುತ್ತೇವೆ. ಹೇಸರ ಘಟ್ಟದಲ್ಲಿ ಕೆರೆ ಭದ್ರವಾಗಿರಬೇಕಾದರೆ ಕೋಡಿಯ ಮೇಲೆ ಒಂದು ಸೆಕೆಂಡಿಗೆ ೧೭,೦೦೦ ಸಲೆ ಅಡಿ ಪ್ರವಾಹವನ್ನು ಬಿಟ್ಟರೆ ಸಾಕೆಂದು ತಿಳಿದಿದೆ. ಕೋಡಿ ಬಿದ್ದು ಅದರ ಮೇಲೆ ೪ ಅಡಿಯ ವರೆಗೂ ಹರಿಯಲು ಅವಕಾಶವಿದೆ. ಈ ಪ್ರಕಾರ ಒಟ್ಟು ಕೋಡಿಯ ಉದ್ದ ೭೦೦ ಅಡಿ ಇರಬೇಕು. ಬಲ ದಡದಲ್ಲಿ ೨೦೦ ಅಡಿ ಉದ್ದವಿರುವ ೨ ಕೋಡಿ ಗಳನ್ನೂ ಎಡಗಡೆ ೩೦೦ ಅಡಿ ಉದ್ದದ ಒಂದು ಕೋಡಿಯನ್ನೂ ಕಟ್ಟಿದೆ.

ಈ ಕೆರೆಯ ಕೋಡಿಯು ಸಮುದ್ರ ಮಟ್ಟದ ಮೇಲೆ ೨,೮೩೨ ಅಡಿಗಳ ಎತ್ತರ ದಲ್ಲಿದೆ. ಕೆಳಮಟ್ಟದ ತೂಬು ಈ ಮಟ್ಟಕ್ಕೆ ೨೫ ಅಡಿಗಳ ಕೆಳಗೆ ಇದೆ. ಈ ಮಟ್ಟದಲ್ಲಿ ೧೫ ಅಂಗುಲದ ಉಕ್ಕಿನ ಕೊಳಾಯಿಗಳ ಮಾರ್ಗವಾಗಿ ತೂಬಿನ ನೀರು ಏರಿಯನ್ನು ದಾಟಿ ಹಿಂಭಾಗಕ್ಕೆ ಬರುತ್ತದೆ. ಮುಂಭಾಗದಲ್ಲಿ ಕೆಳತೂಬಿನ ಮೇಲೆ ಲ್ತ್ತಿ ಅಡಿ ಎತ್ತರದಲ್ಲೂ ಮತ್ತು ೧೭ ಅಡಿ ಎತ್ತರದಲ್ಲೂ ಎರಡು ಕಡೆ ಕೆರೆಯಿಂದ ನೀರನ್ನು ಎಳೆಯುವುದಕ್ಕೆ ಅನುಕೂಲವಿದೆ. ಈ ವಿಧಾನದಲ್ಲಿ ಕೆರೆಯ ನೀರು ಇಳಿದಿರಲಿ ಏರಿರಲಿ, ತೂಬಿನ ಮುಚ್ಚಳಗಳಿಗೆ ಒಂದೇ ಸಮನಾದ ಒತ್ತಡ ಬರುವಂತೆ ಯಾವಾಗಲೂ ತಿಳಿಯಾದ ನೀರನ್ನೇ ಹೊರಗೆ ತೆಗೆದುಕೊಳ್ಳುವುದಕ್ಕೆ ಆಸ್ಪದವಾಗುತ್ತದೆ.

ಏರಿಯು ಕೋಡಿಯ ಮೇಲೆ ೧೩ ಅಡಿ ಎತ್ತರವಾಗಿದೆ. ಮೇಲುಗಡೆ ಏರಿಯ ಅಗಲ ೨೦ ಅಡಿ; ಕೆಳಗೆ ಹೋಗುತ್ತಾ, ಎರಡು ಪಕ್ಕಗಳಲ್ಲಿಯೂ ಒಂದು ಅಡಿ ಆಳಕ್ಕೆ ಎರಡು ಅಡಿ ಅಗಲ ಹೆಚ್ಚಾಗುತ್ತ ಹೋಗಿ ತಳದಲ್ಲಿ ಸುಮಾರು ೧೭೦ ಅಡಿ ಅಗಲ ವಾಗಿದೆ. ಏರಿಯನ್ನು ಒಳ್ಳೆಯ ಹದವಾದ ಮಣ್ಣಿನಿಂದ ಕಟ್ಟಿದ್ದಾರೆ.

ತೂಬಿನಿಂದ ಹೊರಗೆ ಬಂದ ನೀರು ತರಬನಹಳ್ಳಿ ಮತ್ತು ಸೋಲದೇವನ ಹಳ್ಳಿಯಲ್ಲಿರುವ ನೀರೆಳೆಯುವ ಯಂತ್ರಗಳಿಗೆ ನಾಲ್ಕು ಮೈಲಿ ದೂರ ಗಾರೆಯ ನಳಿಗೆ ಯಲ್ಲಿ ಹೋಗುತ್ತದೆ. ತರಬನಹಳ್ಳಿಯ ಯಂತ್ರಗಳು ದಂಡಿನವರ ಅಧೀನದಲ್ಲೂ ಸೋಲದೇವನಹಳ್ಳಿಯ ಯಂತ್ರಗಳು ಮೈಸೂರು ಸರ್ಕಾರದ ಅಧೀನದಲ್ಲೂ ಇವೆ. ಈ ಯಂತ್ರಗಳಿಂದ ಪ್ರತ್ಯೇಕವಾದ ಕಬ್ಬಿಣದ ಕೊಳಾಯಿಗಳಲ್ಲಿ ನೀರನ್ನು ಮಲ್ಲೇಶ್ವರದ ಕೊನೆಯಲ್ಲಿರುವ ಕೊಳಗಳಿಗೆ ಪಂಪು ಮಾಡುತ್ತಾರೆ. ಸೋಲದೇವನಹಳ್ಳಿಯ ಮಟ್ಟ ಸಮುದ್ರ ಮಟ್ಟದ ಮೇಲೆ ೨,೭೯೦ ಅಡಿ. ಮಲ್ಲೇಶ್ವರವು ಇದಕ್ಕಿಂತ ೨೯೩ ಅಡಿ

CC-0. Jangamwadi Math Collection, Varanasi. An eGangotri Initiative

ಎತ್ತರದಲ್ಲಿದೆ. ಮೊದಲು ದಿನಂಪ್ರತಿ ಒಂದು ಲಕ್ಷ ಗ್ಯಾಲನ್ ನೀರನ್ನು ಈ ಎತ್ತರಕ್ಕೆ ಎತ್ತುವ ಶಕ್ತಿಯುಳ್ಳ ವರ್ದಿಂಗ್ಟನ್ ಕಂಪೆನಿಯ ಮೂರು ಪಂಪುಗಳನ್ನಿಟ್ಟಿದ್ದರು. ಈ ಪಂಪುಗಳನ್ನು ರೈಲುಗಾಡಿಯ ಎಂಜಿನಿನ ಹಾಗೆ ನೀರಿನ ಆವಿಯ ಬಲದಿಂದ ನಡೆಸುತ್ತಿದ್ದರು. ಆವಿಯನ್ನು ಪ್ರಥಮದಲ್ಲಿ ಬ್ಯಾಬ್‌ಕಾಕ್ ಮತ್ತು ವಿಲ್‌ಕಾಕ್ಸ್ ಕಂಪೆನಿಯ ಬಾಯಿಲರುಗಳಲ್ಲಿಯೂ ಆಮೇಲೆ ಲ್ಯಾಂಕಾಷೈರು ಬಾಯಿಲರುಗಳಲ್ಲಿಯೂ ಉತ್ಪತ್ತಿಮಾಡುತ್ತಿದ್ದರು. ಈ ಆವಿಯ ಯಂತ್ರಗಳೂ ಪಂಪುಗಳೂ ೧೯೧೬ನೆಯ ಇಸವಿಯ ಲಾಗಾಯಿತು ತೊಂದರೆಕೊಡುವುದಕ್ಕೆ ಪ್ರಾರಂಭಮಾಡಿದುವು. ವಿದ್ಯುಚ್ಛಕ್ತಿಯೇನೋ ಸುಲಭವಾಗಿ ದೊರಕುವ ಹಾಗಿದ್ದರೂ ನೀರೆತ್ತುವುದಕ್ಕೆ ಯಂತ್ರಗಳನ್ನು ತರಿಸಲು ಯೂರೋಪಿನ ಮಹಾಯುದ್ಧದ ದೆಸೆಯಿಂದ ೧೯೨೦ರ ವರೆಗೂ ಸಾಧ್ಯವಾಗಲಿಲ್ಲ. ಆಮೇಲೆ ಅದೇ ಮೇ ತಿಂಗಳಲ್ಲಿ ಪಂಪುಗಳನ್ನು ವಿದ್ಯುತ್ತಿನ ಬಲದಿಂದ ನಡೆಸಲು ಆರಂಭವಾಯಿತು. ಸೋಲದೇವನಹಳ್ಳಿಯಲ್ಲಿರುವ ಮೋಟಾರುಗಳು ಒಂದೊಂದೂ ೧೭೦ ಅಶ್ವಶಕ್ತಿಯುಳ್ಳವು. ಇವನ್ನು ಐದು ಅಂತಸ್ತಿನ "ಸೆಂಟ್ರಿಫ್ಯೂಗಲ್" ಪಂಪುಗಳಿಗೆ ನೇರವಾಗಿ ಜೋಡಿಸಿದೆ. ಒಂದು ಪಂಪು ಕೆಲಸ ಮಾಡಿದರೆ ೧೧ ಲಕ್ಷ ಗ್ಯಾಲನ್ ನೀರನ್ನು ಒಂದು ದಿವಸದಲ್ಲಿ ೫೦೦ ಅಡಿ ಎತ್ತರಕ್ಕೆ ಎತ್ತಬಹುದು. ಇಂಥ ಯಂತ್ರಗಳು ಮೂರಿವೆ. ಎರಡು ಸಂತತವಾಗಿ ಕೆಲಸಮಾಡುತ್ತಿರುತ್ತವೆ. ಇವುಗಳಲ್ಲಿ ಯಾವುದಾದರೂ ಕೆಟ್ಟುಹೋದಾಗ ಮೂರನೆಯ ಯಂತ್ರವನ್ನು ನಡೆಸುತ್ತಾರೆ. ಈ ಯಂತ್ರಗಳನ್ನು ಹೂಡಿ ಕೆಲವು ವರ್ಷಗಳ ಮೇಲೆ ತರಬನಹಳ್ಳಿಯಲ್ಲಿ ೩೦೦ ಅಶ್ವಶಕ್ತಿಯ ಒಂದು ಮೋಟಾರನ್ನೂ ದಿನ ಒಂದಕ್ಕೆ ೧೫ಲಕ್ಷ ಗ್ಯಾಲನ್ ನೀರನ್ನು ೫೦೦ ಅಡಿ ಎತ್ತುವ ಒಂದು ಪಂಪನ್ನೂ ಜೋಡಿಸಿದರು. ಒಂದು ವೇಳೆ ಈ ಯಂತ್ರವು ಕೆಟ್ಟುಹೋದರೆ ಹಿಂದೆ ಇದ್ದ ಆವಿಯ ಯಂತ್ರವೇ ನಡೆಯುವ ಹಾಗೆ ಅಣಿಯಾಗಿಟ್ಟಿದ್ದಾರೆ.

ಮಲ್ಲೇಶ್ವರಕ್ಕೆ ಬಂದಮೇಲೆ ನೀರು ಎರಡು ಹಣಿಸುವ ಕೊಳಗಳಲ್ಲಿ ತಿಳಿಯಾಗುತ್ತಿತ್ತು. ತಿಳಿಯಾದ ನೀರನ್ನು ನಿಧಾನವಾಗಿ ಮರಳಿನಿಂದ ಶುದ್ಧಿಮಾಡಿ ದಿನ ಒಂದಕ್ಕೆ ನಗರ ಮತ್ತು ದಂಡಿಗೆ ಒಟ್ಟು ೨೫ಲಕ್ಷ ಗ್ಯಾಲನ್ ನೀರನ್ನು ಒದಗಿಸುತ್ತಿದ್ದರು. ಈ ನೀರು ಸಾಕಷ್ಟು ಶುದ್ಧವಾಗಿರಲಿಲ್ಲ. ಇಷ್ಟರಲ್ಲಿಯೇ ಕೋಲಾರದ ಚಿನ್ನದ ಗಣಿಗಳಿಗೆ ನೀರನ್ನು ಒದಗಿಸುವ ಬೇತಮಂಗಲದ ಕೆರೆಯ ಬಳಿಯಲ್ಲಿ ಅಮೇರಿಕದ ಜ್ಯೂಯೆಲ್ (Jewell Rapid Gravity Filters) ಕಂಪೆನಿಯವರಿಂದ ತಯಾರಾದ ಶೋಧಕಯಂತ್ರಗಳನ್ನು ಹೂಡಿದ್ದರು. ಬೆಂಗಳೂರು ನಗರ ಮತ್ತು ದಂಡಿನಲ್ಲಿ ಉಪಯೋಗಿಸುವ ನೀರನ್ನು ಶೋಧಿಸುವುದಕ್ಕೋಸ್ಕರ ೧೯೧೧ರಲ್ಲಿ ಇದೇ ಸಮೂ

CC-0. Jangamwadi Math Collection, Varanasi. An eGangotri Initiative

ನೆಯ ಯಂತ್ರಗಳನ್ನೇ ಹೂಡಿದರು. ಮುಂಚೆ ಆರು ಹೊಸರೀತಿಯ ಶೋಧನ ಯಂತ್ರಗಳನ್ನು ಹೂಡಿದ್ದರು. ಈ ಯಂತ್ರಗಳಿಗೆ ಬರುವುದಕ್ಕೆ ಮುಂಚೆ ನೀರು ಅಶುದ್ಧವಾಗಿರುತ್ತದೆ. ಆದ್ದರಿಂದ ಅದಕ್ಕೆ ಸುಣ್ಣ ಮತ್ತು ಪಟಿಕ ಇವುಗಳನ್ನು ಒಂದು ಪ್ರಮಾಣದಲ್ಲಿ ಬೆರಸಿ ಅಗಲವಾದ ಕೊಳಗಳಲ್ಲಿ ತಿಳಿಯಾಗುವುದಕ್ಕೆ ಬಿಡುತ್ತಾರೆ. ತಿಳಿಯಾದ ನೀರು ಶೋಧಕಯಂತ್ರಗಳಲ್ಲಿ ಸ್ವಚ್ಛವಾಗಿ ಮತ್ತೊಂದು ಕೊಳದಲ್ಲಿ ನಿಂತು ಎಲ್ಲಾ ಕಡೆಗಳಿಗೂ ಸರಬರಾಯಿ ಆಗುತ್ತದೆ. ಒಂದೊಂದು ಶೋಧಕ ಯಂತ್ರದಲ್ಲಿಯೂ ದಿನ ಒಂದಕ್ಕೆ ೫ ಲಕ್ಷ ಗ್ಯಾಲನ್ ನೀರನ್ನು ಶೋಧಿಸಬಹುದು. ಪ್ರತಿಯೊಂದು ಯಂತ್ರವನ್ನೂ ದಿನಕ್ಕೆ ಒಂದುಸಾರಿ ತೊಳೆಯುತ್ತಾರೆ. ತೊಳೆಯುವಾಗ ಒಳಗಿರುವ ಮರಳನ್ನೆಲ್ಲಾ ಚೆನ್ನಾಗಿ ಕಬ್ಬಿಣದ ಸಲಾಕೆಗಳಿಂದ ಕೆದಕಿ ಕಸವೆಲ್ಲಾ ತೊಳೆದುಹೋದ ಮೇಲೆ ತಿರುಗಿ ನೀರನ್ನು ಬಿಡುತ್ತಾರೆ.

ಈ ಯಂತ್ರಗಳು ಇನ್ನೂ ಬೆಂಗಳೂರಿಗೆ ನೀರನ್ನು ಒದಗಿಸುತ್ತಿವೆ. ಆದರೆ ಬೆಂಗಳೂರಿನಲ್ಲಿ ನೀರಿನ ಖರ್ಚು ದಿನ ಒಂದಕ್ಕೆ ೩೫ ಲಕ್ಷ ಗ್ಯಾಲನ್ನಿಗೆ ಏರಿದಾಗ ಇನ್ನೊಂದು ಶೋಧಕಯಂತ್ರವನ್ನು ಜೋಡಿಸಬೇಕಾಯಿತು. (ಇದನ್ನು ಈಚೆಗೆ ದಾವಣಗೆರೆಗೆ ರವಾನೆ ಹಾಕಿದ್ದಾರೆ.) ಜೊತೆಗೆ ಹಣಿಸುವ ಕೊಳಗಳ ಆಳವನ್ನು ಒಂದು ಅಡಿಯಷ್ಟು ಹೆಚ್ಚಿಸಬೇಕಾಗಿ ಬಂತು. ಇತ್ತಲಾಗಿ ಮತ್ತೂ ಹೆಚ್ಚು ನೀರು ಬೇಕು ಎನ್ನುವ ಹಾಗಾದಾಗ ಪಂಪುಗಳೂ ಫಿಲ್ಟರುಗಳೂ ಅವಿಶ್ರಾಂತವಾಗಿ ಕೆಲಸ ಮಾಡಬೇಕಾಯಿತು.

೧೮೯೧ನೆಯ ಇಸವಿಯಿಂದ ೧೯೦೧ರ ವರೆಗಿನ ಕಾಲದಲ್ಲಿ ಒಟ್ಟು ಬೆಂಗಳೂರಿನ ಜನಸಂಖ್ಯೆಯು ೧,೮೦,೩೬೬ರಿಂದ ೧,೫೯,೦೦೦ಕ್ಕೆ ಇಳಿಯಿತು. ಆಗ ಕೆಲವುಕಾಲ ಹರಡಿದ್ದ ಪ್ಲೇಗ್ ಗಲಾಟೆಯೇ ಈ ಪ್ರಬಲವಾದ ಮರಣಸಂಖ್ಯೆಗೆ ಕಾರಣ. ಆದರೆ ೧೯೦೧ರ ಲಾಗಾಯಿತು ಬೆಂಗಳೂರು ನಾನಾಮುಖವಾಗಿ ಅಭಿವೃದ್ಧಿ ಹೊಂದುತ್ತಿದೆ. ೧೮೯೨ರಲ್ಲಿ ಚಾಮರಾಜಪೇಟೆ, ಶೇಷಾದ್ರಿಪುರ ಇವೆರಡೇ ವಿಸ್ತರಣಗಳಿದ್ದುವು. ಹೆಸರಘಟ್ಟದಿಂದ ಮೊದಲು ಬೆಂಗಳೂರಿಗೆ ನೀರು ಬಂದದ್ದು ೨೩–೬–೧೮೯೭ರಲ್ಲಿ. ೧೮೯೮ರಲ್ಲಿ ಬಸವನಗುಡಿ, ಮಲ್ಲೇಶ್ವರಗಳಲ್ಲಿ ಮನೆಗಳಾದುವು. ೧೯೦೮ರಲ್ಲಿ ಶಂಕರಪುರವನ್ನು ಕಟ್ಟಿದರು. ೧೯೧೫ರಲ್ಲಿ ಗವೀಪುರವೂ, ೧೯೧೬ರಲ್ಲಿ ಶ್ರೀರಾಮಪುರವೂ, ೧೯೧೮ರಲ್ಲಿ ವಿಶ್ವೇಶ್ವರಪುರವೂ ನಿರ್ಮಾಣವಾದುವು. ಇತ್ತಲಾಗಿ ೧೯೨೩ರಲ್ಲಿ ಗವೀಪುರಗುಟ್ಟಹಳ್ಳಿಯಲ್ಲಿಯೂ, ೧೯೨೫ರಲ್ಲಿ ವೆಂಕಟರಂಗಪುರದಲ್ಲಿಯೂ, ೧೯೨೭ರಲ್ಲಿ ಕಲಾಸಿಪಾಳ್ಯದಲ್ಲಿಯೂ, ಮಾವಳ್ಳಿಯಲ್ಲಿಯೂ ಮನೆಗಳಾದುವು. ೧೯೩೦ರಲ್ಲಿ ಗಾಂಧೀನಗರವೂ, ೧೯೩೬ರಲ್ಲಿ ನರಸಿಂಹರಾಜ ಕಾಲೊನಿಯೂ,

CC-0. Jangamwadi Math Collection, Varanasi. An eGangotri Initiative

೧೯೩೮ರಲ್ಲಿ ಮನೋರೋಗದ ಹೊಸ ಆಸ್ಪತ್ರೆಯ ಹತ್ತಿರದ ವಿಸ್ತರಣವೂ ಬೆಳೆದು ಬಂದುವು. ಇನ್ನೂ ಹೊಸ ವಿಸ್ತರಣಗಳು ಬೆಳೆಯುತ್ತಲೇ ಇವೆ.

ನಗರದಲ್ಲಿ ಹೇಗೋ ಹಾಗೆ ದಂಡಿನಲ್ಲಿಯೂ ಅನೇಕ ಹೊಸ ವಿಸ್ತರಣಗಳಾಗಿವೆ. ಜನಸಂಖ್ಯೆಯಂತೂ ಈ ಕೆಳಗೆ ಕಂಡಂತೆ ಅಪಾರವಾಗಿ ಹೆಚ್ಚಿದೆ.

| ಇಸವಿ | ನಗರ | ದಂಡು | ಒಟ್ಟು |
|---|---|---|---|
| ೧೮೮೧ | ೬೨,೩೧೭ | ೯೩,೫೪೦ | ೧,೫೫,೮೫೭ |
| ೧೮೯೧ | ೮೦,೨೮೫ | ೧,೦೦,೦೮೧ | ೧,೮೦,೩೬೬ |
| ೧೯೦೧ | ೬೯,೪೪೭ | ೮೯,೫೯೯ | ೧,೫೯,೦೪೬ |
| ೧೯೧೧ | ೮೮,೬೫೧ | ೧,೦೦,೮೩೪ | ೧,೮೯,೪೮೫ |
| ೧೯೨೧ | ೧,೧೮,೫೫೬ | ೧,೧೮,೯೪೦ | ೨,೩೭,೪೯೬ |
| ೧೯೩೧ | ೧,೭೨,೩೫೭ | ೧,೩೪,೧೧೩ | ೩,೦೬,೪೭೦ |
| ೧೯೪೧ | ೨,೪೭,೯೦೨ | ೧,೪೬,೯೬೪* | ೩,೯೪,೮೬೬ |

* ಸೈನಿಕರ ಸಂಖ್ಯೆ ಇದರಲ್ಲಿ ಸೇರಿಲ್ಲ.

ಕೆರೆಯನ್ನು ಕಟ್ಟಿದ ಕಾಲದಲ್ಲಿ ನಗರ ಮತ್ತು ದಂಡಿನ ಪ್ರಜಾ ಸಂಖ್ಯೆಯು ೨ ಲಕ್ಷದ ಮೇಲೆ ಹೋಗಲಾರದೆಂದೂ, ದಿನಕ್ಕೆ ಒಬ್ಬರಿಗೆ ೧೦ ಗ್ಯಾಲನ್ ನೀರು ಸಾಕೆಂದೂ ಭಾವಿಸಿದ್ದರು. ಅದೇ ಪ್ರಕಾರ ಒಟ್ಟು ಜನಸಂಖ್ಯೆಯು ೨ ಲಕ್ಷಕ್ಕೆ ಬರುವವರೆಗೂ ಹೇಸರಘಟ್ಟದ ಕೆರೆಯಿಂದ ನಿರೀಕ್ಷಿಸಿದ ಸಹಾಯ ಧಾರಾಳವಾಗಿ ದೊರೆಯಿತು. ಅದರ ಮೇಲೆ ಜನಸಂಖ್ಯೆ ಏರುತ್ತ ಬಂದ ಹಾಗೆ ನೀರು ಎಲ್ಲರಿಗೂ ಒದಗುವುದು ಕಷ್ಟವಾಗುತ್ತಿದೆ. ಬೆಂಗಳೂರಿನಂಥ ಪಟ್ಟಣದಲ್ಲಿ ಒಬ್ಬರಿಗೆ ಒಂದು ದಿನಕ್ಕೆ ೧೦ ಗ್ಯಾಲನ್ನಿನಷ್ಟು ನೀರು ಯಾತಕ್ಕೂ ಸಾಲದು. ಹೇಸರಘಟ್ಟದಿಂದ ನೀರು ಬಂದ ತರುಣದಲ್ಲಿ ಜನರು ಬಾವಿ, ಕೆರೆಗಳಿಂದ ಕೊಂಚ ನೀರನ್ನು ತೆಗೆದು ಕೊಳ್ಳುತ್ತಿದ್ದರು. ಆದರೆ ಕೊಳಾಯಿಗಳಲ್ಲಿ ನೀರನ್ನು ಒದಗಿಸಿರುವ ಕಡೆಗಳಲ್ಲೆಲ್ಲಾ ಆಗಿರುವಂತೆ, ಇಲ್ಲಿಯೂ ಕೂಡ ಕೆರೆ ಬಾವಿಗಳ ಮೇಲಿನ ಅವಲಂಬನೆ ಕ್ರಮೇಣ ತಪ್ಪಿಹೋಗಿ ಎಲ್ಲರೂ ಸುಲಭವಾಗಿ ಸಿಕ್ಕುವ ನಲ್ಲಿಯ ನೀರನ್ನೇ ಎಲ್ಲಕ್ಕೂ ಉಪಯೋಗಿಸತೊಡಗಿದರು. ನೀರು ಸಾಲದು ಎಂಬುದಕ್ಕೆ ಜನಸಂಖ್ಯೆ ಹೆಚ್ಚಿರುವುದೊಂದೇ ಅಲ್ಲದೆ ಇದೂ ಒಂದು ಕಾರಣ.

ನೀರನ್ನು ಹೆಚ್ಚಾಗಿ ದೊರಕಿಸಬೇಕಾಗಿ ಬಂದ ಹಾಗೆಲ್ಲಾ ಸರಬರಾಯಿ ಇಲಾಖೆಯವರು ಕೆರೆ, ಕೊಳಾಯಿ ಮತ್ತು ಯಂತ್ರಗಳನ್ನು ಬಡಾವಣೆ ಮಾಡಲು

CC-0. Jangamwadi Math Collection, Varanasi. An eGangotri Initiative

ಆರಂಭಿಸಿದರು. ಆದರೆ ಹೇಸರಘಟ್ಟದ ಕೆರೆಯ ಕೋಡಿಯನ್ನು ನಾಲ್ಕೈದು ಅಡಿಗಳಷ್ಟು ಎತ್ತಿ, ಮಳೆ ಪಾಲಿಸಿದ ವರ್ಷಗಳಲ್ಲಿ ಕೋಡಿಯ ಮೇಲೆ ಉರುಳ ಬಹುದಾದ ನೀರನ್ನು ನಿಲ್ಲಿಸುವ ಭರವಸೆಯೇ ಈ ಸನ್ನಾಹಗಳಿಗೆಲ್ಲಾ ಆಧಾರ. ೧೯೨೪ನೆಯ ಇಸವಿಯಲ್ಲಿ ನೀರು ಸಾಲದೆಂಬ ಕೂಗು ಬಲವಾಯಿತು. ಆ ವರ್ಷ ದಂಡಿನ ಅಧಿಕಾರಿಗಳು ಮದರಾಸಿನಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರಾಗಿದ್ದ ಮಲ್ಲಿಂಗ್ಸ್ ಅವರನ್ನು ಕರೆಸಿ ಈ ಪರಿಸ್ಥಿತಿಯನ್ನು ಉತ್ತಮಗೊಳಿಸುವುದಕ್ಕೆ ಕಾರ್ಯಕ್ರಮವನ್ನು ಸೂಚಿಸುವಂತೆ ಕೇಳಿದರು. ಅವರು ಬಂದು ಎಲ್ಲವನ್ನೂ ಪರಿಶೀಲಿಸಿ ಹೇಸರಘಟ್ಟದ ಕೆರೆಯ ಕೋಡಿಯನ್ನು ೮ ಅಡಿಯಷ್ಟು ಎತ್ತರಿಸಿ, ಕೆರೆಯಿಂದ ಯಂತ್ರಾಗಾರ (Pumping Station) ದ ವರೆಗೆ ಇನ್ನೊಂದು ಗಾರೆಯ ನಳಿಗೆಯನ್ನು ಕಟ್ಟಿದರೆ ಬೆಂಗಳೂರಿಗೆಲ್ಲಾ ಇನ್ನು ೩೦ ವರ್ಷದವರೆಗೂ ಸಾರೋದ್ಧಾರವಾಗಿ ನೀರು ದೊರಕುವುದೆಂದು ಅಭಿಪ್ರಾಯಪಟ್ಟರು. ಅವರ ಅಂದಾಜಿನಲ್ಲಿ ಆಗಿನಿಂದ (೧೯೨೪) ಮೂವತ್ತು ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರ ಮತ್ತು ದಂಡಿನ ಜನಸಂಖ್ಯೆಯು ೩,೩೦,೦೦೦ ಕ್ಕೆ ಮೀರುವುದಿಲ್ಲವೆಂದು ಭಾವಿಸಿದ್ದರು. ಅದಕ್ಕಾಗಿ ಮೂರು ವರ್ಷಕ್ಕೊಂದು ಸಾರಿ ಕೆರೆ ತುಂಬುವುದೆಂದು ಯೋಚಿಸಿ, ಒಬ್ಬರಿಗೆ ಒಂದು ದಿನಕ್ಕೆ ೧೮ ಗ್ಯಾಲನ್ನಿನಂತೆ ದಿನಕ್ಕೆ ೬೦ ಲಕ್ಷ ಗ್ಯಾಲನ್ ಪ್ರಕಾರ ಎರಡು ವರ್ಷಗಳ ವರೆಗೂ ಬೇಕಾಗುವಷ್ಟು ನೀರು ಈ ಕೆರೆಯಿಂದ ದೊರಕುವುದೆಂದು ಊಹಿಸಿದರು. ಒಳಚರಂಡಿಗಳನ್ನು ಹಾಕುವ ಪ್ರಯತ್ನ (Waterborne Sewage System)ವನ್ನು ನೀರು ಸಾಲದ್ದರಿಂದ ಬಿಟ್ಟೇಬಿಡಬೇಕೆಂದು ಸೂಚಿಸಿದರು. ಇಷ್ಟೇ ಅಲ್ಲದೆ ಕೆರೆಯಲ್ಲಿ ನೀರು ಕೋಡಿಯ ಕೆಳಗೆ ೮ ಅಡಿಗಿಂತ ಹೆಚ್ಚಾಗಿ ಇಳಿದಾಗ ಎಲ್ಲರಿಗೂ ಕೇಳಿದಷ್ಟು ನೀರನ್ನು ಕೊಡಲಾಗದೆಂದೂ ಸಲಹೆಕೊಟ್ಟರು. ಇವರ ವರದಿಯನ್ನು ವಿಮರ್ಶಿಸಿ ಮೈಸೂರು ಸರ್ಕಾರದವರು ಕೆರೆಯ ಏರಿಯ ಸಾಮರ್ಥ್ಯವನ್ನು ಮೀರದ ಹಾಗೆ ಕೋಡಿಯನ್ನು ೫ ಅಡಿ ಎತ್ತರಿಸಿದರೆ ಸಾಕೆಂದು ತೀರ್ಮಾನಿಸಿದರು. ಕೆರೆಯ ಕೆಲಸಗಳಿಗಾಗಿ ೭,೨೩,೫೫೫ ರೂಪಾಯಿನ ಅಂದಾಜನ್ನೂ ಸೋಲದೇವನಹಳ್ಳಿಯಿಂದ ಮಲ್ಲೇಶ್ವರದ ವರೆಗೆ ಮತ್ತೊಂದು ಕೊಳಾಯಿ ಸಾಲನ್ನು ಹಾಕುವುದಕ್ಕಾಗಿ ೬,೫೦,೦೦೦ ರೂಪಾಯಿನ ಅಂದಾಜನ್ನೂ ಮಂಜೂರುಮಾಡಿದರು. ಈ ಪ್ರಕಾರ ಕೆಲಸಕ್ಕೂ ಪ್ರಾರಂಭವಾಯಿತು. ಅಷ್ಟರಲ್ಲಿ ಕೆರೆಯ ನೀರು ಬಹಳ ತಗ್ಗಿಗೆ ಇಳಿಯಿತು. ಈ ಕೆಲಸವನ್ನು ನಿಲ್ಲಿಸಿದರು.

ಹೇಸರಘಟ್ಟದ ಕೆರೆಗೆ ನೀರು ನಿರೀಕ್ಷಿಸಿದಂತೆ ಒಂದೇ ಸಮನಾಗಿ ಈಗ ಅನೇಕ ವರ್ಷಗಳಿಂದ ಬಂದಿಲ್ಲ. ೧೯೨೨ರಲ್ಲಿ ಕೆರೆ ಕೋಡಿ ಬಿತ್ತು. ಆಮೇಲೆ

CC-0. Jangamwadi Math Collection, Varanasi. An eGangotri Initiative

ಒಂದೇ ಸಮನಾಗಿ ೮ ವರ್ಷಗಳ ವರೆಗೂ ಒಂದು ಸಾರಿಯಾದರೂ ಕೆರೆ ತುಂಬಲಿಲ್ಲ. ಈ ಕಾಲದಲ್ಲಿ ಕೆರೆಗೆ ಬಂದ ನೀರನ್ನು ನೋಡಿದರೆ ಆಶ್ಚರ್ಯವಾಗುವ ಹಾಗಿದೆ.

| ವರ್ಷ | ಕೆರೆಗೆ ಬಂದ ನೀರು (ಕೋಟಿ ಸಲೆಅಡಿ) | ಕೆರೆಯ ಪ್ರಮಾಣ (ಕೋಟಿ ಸಲೆಅಡಿ) |
|---|---|---|
| ೧೯೩೩ | ೬೨.೭ | ೬೨.೭ |
| ೧೯೩೪ | ೩೧.೭ | ... |
| ೧೯೩೪ | ೩೧.೨ | ... |
| ೧೯೩೫ | ಏನೂ ಇಲ್ಲ | ... |
| ೧೯೩೬ | ೪೫.೬ | ... |
| ೧೯೩೭ | ೩೬.೯ | ... |
| ೧೯೩೮ | ೫೦.೫ | ... |
| ೧೯೩೯ | ಏನೂ ಇಲ್ಲ | ... |
| ೧೯೪೦ | ೬೧.೧ | ... |

ಈ ಸ್ಥಿತಿಯಲ್ಲಿ ಬೆಂಗಳೂರು ಬೆಳೆದ ಹಾಗೆಲ್ಲಾ ಇದೇ ಕೆರೆಯನ್ನೇ ದೊಡ್ಡದು ಮಾಡಿ ನಗರ ಮತ್ತು ದಂಡಿಗೆಲ್ಲಾ ನೀರು ಬಂತು ಎನ್ನಿಸುವುದು ಅಸಾಧ್ಯದ ಮಾತು. ಈ ಕೆರೆಯನ್ನು ಅನಸ್ಯವಾಗಿ ನಂಬಿದ ಮಲ್ಲಿಂಗ್ಸ್ ಸಾಹೇಬರು ಹೆಚ್ಚು ಮಂದಿಗೆ ನೀರನ್ನು ಒದಗಿಸುವುದಕ್ಕೆ ಸೂಚಿಸಿದ ವಿಧಾನವೇನೆಂದರೆ ಎಷ್ಟು ಬೇಕೋ ಅದಕ್ಕಿಂತ ಕಮ್ಮಿ ನೀರನ್ನು ಒತ್ತಾಯವಾಗಿ ಹಂಚುವುದು! ಜನವಾದರೋ ನೀರು ಸಾಲದೆಂದು ಕೂಗುವುದನ್ನು ನಿಲ್ಲಿಸಲೇ ಇಲ್ಲ. ೧೯೩೫ರಲ್ಲಿ ಕೆರೆಗೆ ಒಂದು ತೊಟ್ಟು ನೀರೂ ಬರಲಿಲ್ಲ. ಇದ್ದ ನೀರು ಬಹಳ ತಗ್ಗಿಗೆ ಇಳಿದು ಬೆಂಗಳೂರಿಗೆ ನೀರೇ ಇಲ್ಲದ ಹಾಗಾಗುವ ಭಯ ಒದಗಿತ್ತು. ಮೇಲಿನ ಕೆರೆಗಳ ನೀರನ್ನೆಲ್ಲಾ ಹೇಸರಘಟ್ಟದ ಕೆರೆಯೊಳಕ್ಕೆ ಬಗ್ಗಿಸಿ ತತ್ಕಾಲಕ್ಕೆ ಉಪಶಮನಮಾಡಿದ ಹಾಗಾಯಿತು. ೧೯೩೬ನೆಯ ಜನವರಿಯಲ್ಲಿ ಇದ್ದ ನೀರು ಇನ್ನು ಮೂರು ನಾಲ್ಕು ತಿಂಗಳ ಮೇಲೆ ತಡೆಯುವುದಿಲ್ಲವೆಂದು ಕಂಡಿತು. ಆಗ ಸದ್ಯಕ್ಕೆ ಗಂಡಾಂತರ ತಪ್ಪುವ ಹಾಗೆ ಹೊಸಕೋಟೆಗೆ ಹೋಗುವ ರಸ್ತೆಯ ೧೧ನೆಯ ಮೈಲಿಯಲ್ಲಿರುವ ಎಲೆಮಲ್ಲಪ್ಪಶೆಟ್ಟರ ಕೆರೆಯಿಂದ ಬೆಂಗಳೂರಿಗೆ ನೀರು ತರುವ ಆಲೋಚನೆಮಾಡಿದರು. ಕೆರೆಯ ಹತ್ತಿರವೇ ಎಲೆಕ್ಟ್ರಿಕ್ ಟ್ರಾನ್ಸ್‌ಫಾರ್ಮರ್, ಮೋಟಾರು ಮತ್ತು ಪಂಪುಗಳನ್ನು ಅಣಿಮಾಡಿದರು. ಬೆಂಗಳೂರಿನಿಂದ ಹೊಸದಾಗಿ ವಿದ್ಯುತ್ತಿನ ತಂತಿ (Power Line)ಯನ್ನು

CC-0. Jangamwadi Math Collection, Varanasi. An eGangotri Initiative

ಕೆರೆಯುವರೆಗೂ ಎಳೆದರು. ಆತುರಾತುರವಾಗಿ ಕೊಳಾಯಿ ಜೋಡಿಸಿದ್ದಾಯಿತು. ಬೆಂಗಳೂರಿಗೆ ಈ ಕೆರೆಯ ನೀರು ೧೫–೪–೨೭ರಲ್ಲಿ ಬಂದು ಇಳಿಯಿತು. ಆ ವೇಳೆಗೆ ಹೇಸರಘಟ್ಟದಲ್ಲಿ ನೀರು ಸಂಪೂರ್ಣವಾಗಿ ಬತ್ತಿಹೋಗಿತ್ತು. ತೂಬಿನ ಕೆಳಗೆ ಇದ್ದ ನೀರನ್ನೂ ಪಂಪುಮಾಡಿ ಬೆಂಗಳೂರಿಗೆ ಸಾಗಿಸಿದ್ದರು.

ಮಾರನೆಯ ವರ್ಷ ಹೇಸರಘಟ್ಟದ ಕೆರೆಗೆ ಸುಮಾರಾಗಿ ನೀರು ಬಂತು. ಆದರೆ ಅಷ್ಟುಹೊತ್ತಿಗೆ ಈ ಕೆರೆಗೆ ಸ್ವತಂತ್ರವಾಗಿ ಬೆಂಗಳೂರಿಗೆ ನೀರಿನ ಯೋಗಕ್ಷೇಮ ನೋಡಿಕೊಳ್ಳುವ ಸಾಮರ್ಥ್ಯ ಕುಗ್ಗಿತ್ತು. ಆಮೇಲೆ ಏಳು ವರ್ಷಗಳ ವರೆಗೂ ಎಲೆಮಲ್ಲಪ್ಪಶೆಟ್ಟರ ಕೆರೆಯಿಂದ ನೀರು ತಪ್ಪದೆ ಬೆಂಗಳೂರಿಗೆ ಬರುತ್ತಲೇ ಇತ್ತು. ಈ ಏರ್ಪಾಟನ್ನೇ ಶಾಶ್ವತಮಾಡೋಣವೆಂದರೆ ಎಲೆಮಲ್ಲಪ್ಪನವರ ಕೆರೆಯಿಂದಲೂ ನೀರು ಒಂದೇ ಸಮನಾಗಿ ಒದಗುವುದಿಲ್ಲ. ಸದ್ಯದ ಉಪಯೋಗಕ್ಕೆಂದರೂ ಖರ್ಚು ವಿಪರೀತ ಆಗುತ್ತದೆ. ಯಾವ ಹೊತ್ತಿಗೆ ಈ ಕೆರೆಯೂ ಕೈಕೊಡುವುದೋ ಎಂಬ ಕೊರಗು ಸಂತತವಾಯಿತು.

ಹೀಗೆ ಸುಮಾರು ಎರಡೂವರೆ ಲಕ್ಷ ಪ್ರಜೆಗಳಿಗೆ ಕುಡಿಯುವ ನೀರಿಗೆ ಅಭಾವ ವೆಂದು ಆಳಿದ ಮಹಾಸ್ವಾಮಿಯವರ ಗಮನಕ್ಕೆ ಬಂತು. ಇನ್ನುಮುಂದೆ ಬೆಂಗಳೂರಿಗೆ ಇನ್ನೂ ಹೆಚ್ಚು ನೀರು ಬೇಕಾಗುವುದಾಗಿ ಅವರಿಗೆ ತೋರಿದ್ದರಿಂದ ಅಲಕ್ಷ್ಯ ಮಾಡಿದರೆ ಪರಿಸ್ಥಿತಿಯು ವಿಷಮವಾಗುವುದೆಂದು ತಿಳಿದು ಕೂಡಲೆ ಈ ಪಟ್ಟಣಕ್ಕೆ ನೀರನ್ನು ಒದಗಿಸುವ ವಿಚಾರದಲ್ಲಿ ಸಮರ್ಪಕವಾದ ಏರ್ಪಾಡುಮಾಡುವುದಾಗಿ ಮನಸ್ಸುಮಾಡಿದರು.

ಅದೇ ಪ್ರಕಾರ ೧೯೨೬ನೆಯ ಮೇ ತಿಂಗಳಲ್ಲಿಯೇ ಡಾಕ್ಟರ್ ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಮಗ್ಗುಲಲ್ಲಿ ಕಂಡ ಶಿಲ್ಪವಿಶಾರದರ ಸಮಿತಿ ಯೊಂದನ್ನು ಸ್ಥಾಪಿಸಿದರು. ಸಮಿತಿಗೆ ವಹಿಸಿದ ಕೆಲಸವೇ ನೆಂದರೆ—(೧) ಬೆಂಗಳೂರಿಗೆ ಈಗ ಇರುವ ನೀರಿನ ಸರಬರಾಯಿ ಕ್ರಮದಲ್ಲಿ ಇರತಕ್ಕ ನ್ಯೂನತೆಗಳನ್ನು ಆಮೂಲಾಗ್ರ ವಾಗಿ ಪರಿಶೋಧಿಸುವುದು. (೨) ನಗರಕ್ಕೆ ಮತ್ತು ದಂಡಿಗೆ ಸಾರೋದ್ಧಾರವಾಗಿ ಸಮರ್ಪಕವಾಗಿ ಕುಡಿಯುವ ನೀರನ್ನು ಒದಗಿಸಲು ಉಚಿತವಾದ ಸಲಹೆಗಳನ್ನು ಕೊಡುವುದು.

ಶ್ರೀಮಾನ್ ವಿ. ರಂಗಸ್ವಾಮಿ ಅಯ್ಯಂಗಾರ್ ಅವರು
,, ಕೆ. ಆರ್. ಶೇಷಾಚಾರ್ಯರು
,, ಜಾರ್ನ್ ಭೋರ್ ಅವರು
,, ಎಸ್. ಜಿ. ಫೋರ್ಬ್ಸ್ ಅವರು
,, ಎಚ್. ಆರ್. ವೆಂಕಟಸುಬ್ಬರಾಯರು (ಕಾರ್ಯದರ್ಶಿ)

CC-0. Jangamwadi Math Collection, Varanasi. An eGangotri Initiative

ಸದ್ಯಃ ಮೂರು ಲಕ್ಷ ಜನಗಳಿಗೆ ದಿನಂಪ್ರತಿ ಒಬ್ಬರಿಗೆ ೨೦ ಗ್ಯಾಲನ್ನಿನಂತೆ ೬೦ ಲಕ್ಷ ಗ್ಯಾಲನ್ ನೀರನ್ನು ಒದಗಿಸುವಂತೆಯೂ, ಕ್ರಮೇಣ ದಿನಕ್ಕೆ ೯೦ ಲಕ್ಷ ಅಥವಾ ೧ ಕೋಟಿ ಗ್ಯಾಲನ್ನಿನವರೆಗೂ ದೊರಕುವಂತೆಯೂ ಒಂದು ಏರ್ಪಾಡನ್ನು ಸೂಚಿಸಬೇಕೆಂದು ಸಮಿತಿಯವರು ಮೊಟ್ಟಮೊದಲೇ ತೀರ್ಮಾನಿಸಿ ಕೊಂಡರು. ಅದರಿಂದ ಹೇಸರಘಟ್ಟದ ಕೆರೆಯ ತಂಟೆಯನ್ನೇ ಅವರು ಬಿಟ್ಟುಬಿಡಬೇಕಾ ಯಿತು. ಈ ಹೊಸ ದೃಷ್ಟಿಯಿಂದ ಬೆಂಗಳೂರಿನ ಸುತ್ತಮುತ್ತ ಇರುವ ಪ್ರತಿಯೊಂದು ನೀರಿನ ವಸತಿಯನ್ನೂ ಪರೀಕ್ಷಿಸಿ ಜಲಾಶಯದ ರಚನೆ ಸಾಧ್ಯವೇ ಎಂದು ಪರಿಶೋ ಧನೆ ಮಾಡಿದರು. ಬೆಂಗಳೂರು ಇರುವುದು ಅರ್ಕಾವತಿ ಮತ್ತು ದಕ್ಷಿಣಪಿನಾಕಿನಿ ನದಿಗಳ ನೀರುನೆತ್ತಿಯ (Watershed) ಮೇಲೆ. ಈ ಎರಡು ನದಿಗಳೂ ಜೀವನದಿ ಗಳಲ್ಲ. ಆದ್ದರಿಂದ ಈ ಕೆಲಸವು ಅಷ್ಟೇನೂ ಸುಲಭ ಸಾಧ್ಯವಾಗಲಿಲ್ಲ. ಕೊನೆಗೆ ಕಾವೇರಿ ಅಥವಾ ಹೇಮಾವತಿಯ ನೀರನ್ನಾದರೂ ತಂದು ಬೆಂಗಳೂರಿನ ದಾಹ ಶಾಂತಿಮಾಡುವುದಾಗಿ ನೋಡಿದ್ದಾಯಿತು. ಕಾವೇರಿಯನ್ನು ಶರಣುಹೊಗುವ ಯೋಚನೆಯೇನೂ ಹೊಸದಲ್ಲ. ಹೇಸರಘಟ್ಟಕ್ಕಿಂತಲೂ ಮುಂಚೆ ೧೮೮೭ರಲ್ಲಿ ಈ ಸೂಚನೆಯಿತ್ತು. ಆದರೆ ಆಗ ಈ ಕೆಲಸವನ್ನು ಸಾಧಿಸಲು ತಕ್ಕ ಯಂತ್ರಬಲವಿರ ಲಿಲ್ಲ. ಈಗ ಅದು ಸಾಧ್ಯ; ಸುಲಭವಲ್ಲ. ಕಾವೇರಿಯಿಂದ ನೀರು ಬರಬೇಕಾದರೆ ಶಿವಸಮುದ್ರದಿಂದ ೬೫ ಮೈಲಿ ದೂರ ತರಬೇಕು. ಬೆಂಗಳೂರು ಶಿವಸಮುದ್ರಕ್ಕಿಂತ ೧೦೦೦ ಅಡಿ ಎತ್ತರದ ಮೇಲಿದೆ. ಕೊಳಾಯಿಯ ಅಳತೆ ಕನಿಷ್ಠಪಕ್ಷ ೨೪ ಅಂಗುಲ ಅಗಲವಾದರೂ ಇರಬೇಕು. ಈ ಯಂತ್ರ ಯುಗದಲ್ಲಿಯೂ ಒಂದೇ ಮಜಲಿನಲ್ಲಿ ಶಿವಸ ಸಮುದ್ರದಿಂದ ಬೆಂಗಳೂರಿಗೆ ಬೇಕಾದಷ್ಟು ನೀರನ್ನು ಪಂಪುಮಾಡುವುದು ಇನ್ನೂ ಸಾಧ್ಯವಿಲ್ಲ. ಮಧ್ಯೆ ಎರಡು ಕಡೆ ಪಂಪುಗಳನ್ನು ಬದಲಾಯಿಸಬೇಕು. ಬದಲಾಯಿಸುವ ಸ್ಥಳದಲ್ಲಿಯೂ, ಪ್ರಾರಂಭದಲ್ಲಿ ಶಿವಸಮುದ್ರದಲ್ಲಿಯೂ ದೊಡ್ಡ ತಿಳಿನೀರಿನ ಕೊಳ ಗಳನ್ನು ಕಟ್ಟಬೇಕು. ಈ ಕೊಳಗಳು ಕೊನೆಯಪಕ್ಷ ಬೆಂಗಳೂರಿಗೆಲ್ಲಾ ಎರಡು ದಿನಕ್ಕಾ ದರೂ ಸಾಕಾಗುವಷ್ಟು ನೀರನ್ನು, ಎಂದರೆ ಸದ್ಯಕ್ಕೆ ೧೨೦ ಲಕ್ಷ ಗ್ಯಾಲನ್ ನೀರನ್ನು, ಹಿಡಿಸುವಷ್ಟು ದೊಡ್ಡವಾಗಿರಬೇಕು. ಇಷ್ಟೆಲ್ಲಾ ಮಾಡುವುದಕ್ಕೆ ಖರ್ಚು ವಿತಿಮೀರಿ ಹೋಗುತ್ತದೆ. ನೀರೇನೋ ಬೇಕಾದಷ್ಟು ಒದಗುತ್ತದೆ. ಆದರೆ ಸಾಕಾದಷ್ಟು ನೀರು ತೊಂದರೆಯಿಲ್ಲದೆ ದೊರಕುವಹಾಗೆ ಮತ್ತು ಖರ್ಚು ಹಾಳತದಲ್ಲಿರುವಂತೆ ಉಪಾಯ ಹುಡುಕುವುದೇ ಸಮಿತಿಗೆ ಬಹು ಕಷ್ಟವಾಯಿತು.

ತಿರುಗಿ ಅವರು ಅರ್ಕಾವತಿ ಮತ್ತು ದಕ್ಷಿಣಪಿನಾಕಿನಿ ನದಿಗಳನ್ನೇ ಹಿಡಿಯ ಬೇಕಾಯಿತು. ಈ ನದಿಗಳಲ್ಲಿ ಪ್ರತಿವರ್ಷವೂ ಒಂದೇ ಸಮನಾಗಿ ನೀರಿರುವುದಿಲ್ಲ.

CC-0. Jangamwadi Math Collection, Varanasi. An eGangotri Initiative

ಮಳೆ ನಡೆಸಿದ ವರ್ಷ ನೀರು ತುಂಬಿಕೊಂಡು ಉಳಿದ ವರ್ಷ ಬಳಸಿಕೊಳ್ಳಬೇಕಾಗುತ್ತದೆ. ಹೀಗೆ ಮಾಡುವುದಕ್ಕೆ ಹೇಸರಘಟ್ಟದ ಕೆರೆಯಲ್ಲಿ ಇನ್ನೊಂದು ತೊಂದರೆಯಿದೆ. ಅದರ ಪಾತ್ರವು ಬಹಳ ಅಗಲ. ಒಂದುಪಾಲು ನೀರು ಬೆಂಗಳೂರಿಗೆ ಬಂದರೆ ಒಂದೂವರೆಯಷ್ಟು ಕೆರೆಯ ಅಂಗಳದಲ್ಲಿ ಆವಿಯಾಗಿಯೂ ಏರಿಯ ಕೆಳಗೆ ಜಿನುಗಿಯೂ ನಷ್ಟವಾಗುತ್ತದೆ. ಹೀಗೆ ನೀರು ಹರಡಿಕೊಂಡು ಆಳವೇ ಇಲ್ಲದ ಕೆರೆಗಳು ಎಷ್ಟಿದ್ದರೂ ಒಂದೇ. ಒಂದೆರಡು ಕಾಲ ಮಳೆ ಹೋದರೆ ಎಲ್ಲಾ ಬತ್ತಿಹೋಗುತ್ತವೆ. ಮೂರು ನಾಲ್ಕು ವರ್ಷ ನೀರು ಬಾರದೆಹೋದರೂ ತಡೆದುಕೊಳ್ಳಬೇಕಾದರೆ ಕೆರೆಯಲ್ಲಿ ನೀರು ಆಳವಾಗಿರಬೇಕು. ಹೆಚ್ಚಾಗಿ ಹರಡಿರಬಾರದು. ಜೊತೆಗೆ ಎಷ್ಟು ಕಮ್ಮಿ ಮಳೆಯಾದರೂ ಇದ್ದದ್ದರಲ್ಲಿ ಹೆಚ್ಚು ಪಾಲು ನೀರು ಕೆರೆಗೆ ಹರಿದುಬರುವುದಾದರೆ ಇನ್ನೂ ಅನುಕೂಲ. ಈ ದೃಷ್ಟಿಯಿಂದ ಸಮಿತಿಯ ಸದಸ್ಯರು ಬಂದ ಸಲಹೆಗಳನ್ನೆಲ್ಲಾ ಕೂಲಂಕಷವಾಗಿ ಚರ್ಚಿಸಿದರು. ಹೀಗೆ ಜಲಾಶಯದ ನಿರ್ಮಾಣಕ್ಕಾಗಿ ಪರೀಕ್ಷಿಸಿದ ಪ್ರದೇಶಗಳ ಮುಖ್ಯಾಂಶಗಳನ್ನು ಮುಂದಿನ ಪುಟದಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ನೋಡಬಹುದು.

ಈ ಪೈಕಿ ತಿಪ್ಪಗೊಂಡನಹಳ್ಳಿಯೇ ಎಲ್ಲಾ ವಿಚಾರಗಳಲ್ಲೂ ಸಮರ್ಪಕವಾಗಿದೆಯೆಂದು ಅವರಿಗೆ ತೋರಿತು. ಈ ಪ್ರದೇಶವು ಬೆಂಗಳೂರಿಂದ ಪಶ್ಚಿಮಕ್ಕೆ ಮಾಗಡಿಗೆ ಹೋಗುವ ರಸ್ತೆಯಲ್ಲಿ ೨೦ನೆಯ ಮೈಲಿಯ ಸುಮಾರಿನಲ್ಲಿದೆ. ಇಲ್ಲಿ ಕುಮುದ್ವತೀ ನದಿಯು ಅರ್ಕಾವತಿ ನದಿಯೊಂದಿಗೆ ಸಂಗಮವಾಗುತ್ತದೆ. ಈ ಜಾಗದಲ್ಲಿ ಸದ್ಯಕ್ಕೆ ೨೦೯ ಕೋಟಿ ಸಲೆ ಅಡಿ ನೀರು ಹಿಡಿಯುವ ಹಾಗೆ ಕಲ್ಲಿನಿಂದ ಅಡ್ಡ ಕಟ್ಟೆ ಹಾಕಬಹುದಾಗಿ ಸಮಿತಿಯವರು ತೀರ್ಮಾನಕ್ಕೆ ಬಂದರು. ಕಟ್ಟೆಯ ಹತ್ತಿರವೇ ಹೊಸದಾದ ಶೋಧನಯಂತ್ರಗಳಲ್ಲಿ ನೀರನ್ನು ಶೋಧಿಸಿ, ಶುದ್ಧವಾದ ನೀರನ್ನು ಒಂದೇ ಮಜಲಿನಲ್ಲಿ ಅಲ್ಲಿಂದ ಬೆಂಗಳೂರಿಗೆ ಪಂಪುಮಾಡುವಂತೆ ಸೂಚಿಸಿದರು. ಅದಕ್ಕೆ ಆವಶ್ಯಕವಾದ ಯಂತ್ರಸಾಧನ, ಕೊಳಾಯಿಗಳು, ವಿದ್ಯುತ್‌ತಂತಿ, ಇವೆಲ್ಲವನ್ನೂ ಯಥಾಕ್ರಮವಾಗಿ ಅಂದಾಜುಮಾಡಿ ಸದ್ಯಕ್ಕೆ ೬೦ ಲಕ್ಷ ಗ್ಯಾಲನ್ ನೀರನ್ನು ದಿನಂಪ್ರತಿ ಒದಗಿಸುವುದಕ್ಕೆ ಸುಮಾರು ೫೦ ಲಕ್ಷ ರೂಪಾಯಿ ತಗುಲಬಹುದೆಂದು ಲೆಕ್ಕಹಾಕಿದರು.

ಈ ಸೂಚನೆಗಳಿಗೆಲ್ಲಾ ಕ್ಷಿಪ್ರದಲ್ಲಿಯೇ ಸರ್ಕಾರದವರ ಅನುಮತಿ ದೊರೆಯಿತು. ಅದರಂತೆಯೇ ಕೆಲಸಕ್ಕೂ ಪ್ರಾರಂಭವಾಯಿತು.

ತಿಪ್ಪಗೊಂಡನಹಳ್ಳಿಯ ಕಟ್ಟೆಗೆ ಸ್ವತಂತ್ರವಾದ ಜಲಾಸಯನ ಭೂಮಿಯು ೧೦೩ ಚದರ ಮೈಲಿಗಳಷ್ಟಿದೆ. ಈ ಪ್ರದೇಶದಲ್ಲಿ ಗುಡ್ಡಗಾಡುಗಳೇ ಹೆಚ್ಚಾಗಿರುವುದರಿಂದ ಸ್ವಲ್ಪ ಮಳೆಯಾದರೂ ತಕ್ಕಷ್ಟು ನೀರು ನದಿಗೆ ಬರುತ್ತದೆ. ಮೇಲಿನ

CC-0. Jangamwadi Math Collection, Varanasi. An eGangotri Initiative

| ನದಿ | ಸ್ಥಳ | ಜಲಾನಯನ ಭೂಮಿ (ಚದರಮೈಲಿ) | ಕೆರೆಯ ಚೈತನ್ಯ (ಕೋಟಿ ಸಲ ಅಡಿ) | ವಿಶೇಷ ವಿಷಯ |
|---|---|---|---|---|
| ಪಿನಾಕಿನಿ | (೧) ಹೊಸಕೋಟೆ ಕೆರೆ | ೫೦೯ | ೭೦.೫ | ಪಾತ್ರ ಬಹಳ ಅಗಲ; ಆಳ ಕಮ್ಮಿ |
| | (೨) ಎಲೆಮಲ್ಲಪ್ಪನ ಕೆರೆ | ೧೧೨ | ೭.೦ | ಬಹಳ ಚಿಕ್ಕದು |
| ವೃಷಭಾವತಿ | (೩) ಶೇಷಗಿರಿಹಳ್ಳಿ | ೧೬೦ | ೧೦೦೦.೦ | ಚಿಕ್ಕದು |
| ಅರ್ಕಾವತಿ | (೪) ಹೇಸರಘಟ್ಟ | ೨೧೨ | ೬೨.೭ | ಸ್ವತಂತ್ರವಾಗಿ ಸಾಕಷ್ಟು ಚೈತನ್ಯವಿಲ್ಲ |
| | (೫) ಗವಿಪಾಳ್ಯ | ೨೯೦ | ೨೦೫.೦ | ಹೇಸರಘಟ್ಟದ ಕೆರೆ ಬತ್ತಿದಾಗ ಇದೂ ಬತ್ತಬಹುದು |
| | (೬) ಗಿಡ್ಡನಹಳ್ಳಿ | ೪೨೧ | ೨೧೩.೦ | ಹೇಸರಘಟ್ಟದ ಕೆರೆಯ ಜೊತೆಯಲ್ಲಿದ್ದರೆ ಆಗಬಹುದು |
| | (೭) ತಿಪ್ಪಗೊಂಡನಹಳ್ಳಿ | ೫೩೨ | ೩೦೪.೦ | ಸಮರ್ಪಕವಾಗಿದೆ |
| | (೮) ಹಾಗಲಹಳ್ಳಿ | | | ಬೆಂಗಳೂರಿಂದ ದೂರ ಹೆಚ್ಚು, ಖರ್ಚು ಬಹಳ |
| | (೯) ಹಳ್ಳಿಮಾಲ | | | (ಮೇಲಿನ ಸಾಲಿನಂತೆ) |

CC-0. Jangamwadi Math Collection, Varanasi. An eGangotri Initiative

ಕೆರೆಗಳನ್ನೂ ಸೇರಿಸಿಕೊಂಡರೆ ಒಟ್ಟು ೫೩.೨ ಚದರ ಮೈಲಿಗಳ ಮೇಲೆ ಬೀಳುವ ನೀರಿನ ಆಧಾರವಿದೆ.

ಈ ಪ್ರದೇಶದಲ್ಲಿ ಗುಡ್ಡದ ಸಾಲುಗಳ ನಡುವೆ ಇಕ್ಕಟ್ಟಾದ ಹಳ್ಳದಲ್ಲಿ ಉತ್ತರದಿಂದ ದಕ್ಷಿಣಕ್ಕೆ ನದಿಯು ಹರಿಯುತ್ತದೆ. ಎಡದಡವು ಬಹಳ ಕಡಿದಾಗಿ ನದಿಯ ಮಟ್ಟಕ್ಕಿಂತ ೨೫೦ ಅಡಿ ಎತ್ತರದ ವರೆಗೂ ಏರುತ್ತದೆ. ಬಲಗಡೆ ೧೫೦ ಅಡಿ ಎತ್ತರವಾದ ದಿಣ್ಣೆಯೊಂದಿದೆ. ಈ ದಿಣ್ಣೆಗೆ ಅಡ್ಡಲಾಗಿ—ಎಂದರೆ ಪೂರ್ವ ಪಶ್ಚಿಮವಾಗಿ—ಮಾಗಡಿಗೆ ಹೋಗುತ್ತಿದ್ದ ಹಳೆಯ ರಸ್ತೆಯ ನೇರದಲ್ಲಿ ತಗ್ಗಾದ ಮತ್ತೊಂದು ನೀರುನೆತ್ತಿಯಿದೆ. ಅಲ್ಲಿ ಹುಟ್ಟಿ ದಕ್ಷಿಣಕ್ಕೆ ಒಂದು ಸಣ್ಣ ಹಳ್ಳ ಹರಿದು ನದಿಯನ್ನು ಸೇರುತ್ತದೆ. ಉತ್ತರಕ್ಕೂ ಇನ್ನೊಂದು ಹಳ್ಳ ನದಿಗೆ ಹೋಗುತ್ತದೆ. ಈ ನೀರುನೆತ್ತಿಯ ಬಲಭಾಗದಲ್ಲಿ ತಿರುಗಿ ಎತ್ತರವಾದ ಗುಡ್ಡಗಳ ಪಂಕ್ತಿಯು ನದಿಯ ಎಡದಲ್ಲಿರುವಂತೆಯೇ ಎದ್ದಿದೆ. ಮಧ್ಯೆ ಇರುವ ದಿಬ್ಬವು ಕುದುರೆಯ ತಡಿಯ (Saddle) ಹಾಗಿರುವುದರಿಂದ ಇಲ್ಲಿ ಕಟ್ಟೆಯ ಕೋಡಿಯನ್ನು ಇಡಲು ಅನುಕೂಲವಾಗಿದೆ. ಹೆಚ್ಚಾದ ಪ್ರವಾಹ ಬಂದಾಗ ಕಟ್ಟೆಯ ಮೇಲೆ ಅದರ ರಭಸ ಕಡಮೆಯಾಗಿ ಪ್ರತ್ಯೇಕವಾದ ಹಳ್ಳದಲ್ಲಿ ನೀರು ಹರಿದು ತಿರುಗಿ ನದಿಯನ್ನು ಸೇರುತ್ತದೆ. ಈ ವಿಧವಾದ ಅನುಕೂಲವು ಮಾರೀಕಣಿವೆಯಲ್ಲೂ ಇದೆ. ಕನ್ನಂಬಾಡಿಯಲ್ಲಿ ಕಟ್ಟೆಯ ಗೋಡೆಯೊಳಗೇ ಬಂದೋಬಸ್ತಾದ ಬಾಗಿಲುಗಳನ್ನಿಟ್ಟು ಕೋಡಿಯನ್ನು ಕಟ್ಟಿದ್ದಾರೆ.

ಹೊಸ ಕಟ್ಟೆಯು ಬೆಂಗಳೂರು-ಮಾಗಡಿ ರಸ್ತೆಯ ಕೆಳಗಡೆ ಇದೆ. ಅದರಿಂದ ಈ ರಸ್ತೆಯು ೧೮ನೆಯ ಮೈಲಿಯಿಂದ ೨೧ನೆಯ ಮೈಲಿಗಳ ವರೆಗೂ ಮುಳುಗಡೆಯಾಯಿತು. ಬೇರೆ ರಸ್ತೆಯೊಂದನ್ನು ಗುಡ್ಡಗಳ ನಡುವೆ ಬಳಸಾಗಿ ಕಟ್ಟೆಯ ನೀರಿನ ಅಂಚಿಗೆ ಹತ್ತಿರವಾಗಿ ತೆಗೆದುಕೊಂಡು ಹೋಗಿ ಕೋಡಿಹಳ್ಳವು ನದಿಯನ್ನು ಕೂಡುವ ಜಾಗದ ಕೆಳಗೆ ನದಿಗೆ ಅಡ್ಡವಾಗಿ ಹೊಸದೊಂದು ಕಲ್ಲಿನ ಸೇತುವೆಯನ್ನು ಕಟ್ಟಿದ್ದಾರೆ. ಮತ್ತೆ ಹೊಸ ರಸ್ತೆಯು ಗುಡ್ಡದ ತಪ್ಪಲಲ್ಲಿಯೇ ಸರಿದು ಹಳೆಯ ರಸ್ತೆಯನ್ನು ಕೂಡುವ ವೇಳೆಗೆ ಈ ದಾರಿಯು ೨½ ಮೈಲಿ ಹೆಚ್ಚಾಗಿ ಬಳಸಾಗುತ್ತದೆ. ಹಳೆಯ ರಸ್ತೆಗೆ ಅಡ್ಡಲಾಗಿ ೧೮೬೨ ರಲ್ಲಿ ಕಟ್ಟಿದ್ದ ಏಳು ಕಮಾನಿನ ಇಟ್ಟಿಗೆಯ ಸೇತುವೆಯು ೭೦ ವರ್ಷಗಳು ದುಡಿದು ೧೯೩೨ನೆಯ ಆಗಸ್ಟ್ ೧೫ನೆಯ ತಾರೀಖಿನ ದಿನ ನೀರಿನಲ್ಲಿ ಮುಳುಗಿಹೋಯಿತು.

ಈ ಸೇತುವೆ ಕಟ್ಟೆಗಳನ್ನು ಕಟ್ಟುವ ಶಿಲ್ಪಿಯ ಕೆಲಸ ಸೌಂದರ್ಯ ನಿರ್ಮಾಣವಲ್ಲ. ಅವನ ಗುರಿ ಮನುಷ್ಯನ ದಿನದಿನದ ಜೀವನವು ಸುಗಮವಾಗುವಂತೆ ಸಾಧನಗಳನ್ನು ಕಲ್ಪಿಸುವುದು ಮಾತ್ರ. ಆದರೆ ಕೇವಲ ಉಪಯೋಗ ಕೃತಿಯಾಗಿರುವುದು ಕೆಲವು

CC-0. Jangamwadi Math Collection, Varanasi. An eGangotri Initiative

ಸನ್ನಿವೇಶಗಳಲ್ಲಿ ಕಲಾಕೃತಿಯೂ ಆಗಬಹುದು. ತಿಪ್ಪಗೊಂಡನಹಳ್ಳಿಯ ಕಟ್ಟೆಯು ಒಂದು ದೃಷ್ಟಿಯಲ್ಲಿ ಬರಿಯ ಜಲಾಶಯ. ಆದರೆ ಇದಕ್ಕಾಗಿ ಆರಿಸಿದ ಪ್ರದೇಶದ ಪ್ರಕೃತಿ ಸೌಂದರ್ಯವು ಮಾನವನ ಶಿಲ್ಪಚಾತುರ್ಯವನ್ನು ಮರೆಸುವಂತಿದೆ. ಹತ್ತಿರದಲ್ಲಿಯೇ ಅರ್ಕಾವತೀ ಮತ್ತು ಕುಮುದ್ವತೀ ನದಿಗಳ ಸಂಗಮ. ಸಾಮಾನ್ಯವಾಗಿ ಎರಡು ನದಿಗಳು ಸೇರುವ ಪ್ರದೇಶವು ಮನೋಹರವಾದುದು; ಅದು ವನದೇವಿಯ ಕ್ರೀಡಾಗಾರ. ಇಲ್ಲಿನ ಗಿರಿನದಿಗಳ ಅಪೂರ್ವವಾದ ರಮ್ಯತೆಯು ಮಾನವನಿಗೆ ಭಾವೋತ್ಕರ್ಷವನ್ನೊದಗಿಸುತ್ತದೆ. ಇಂಥ ಪ್ರದೇಶಗಳಲ್ಲಿ ಸಾಧಾರಣವಾಗಿ ದೇವಾಲಯಗಳನ್ನು ಕಟ್ಟಿರುವುದು ಕಾಣಬಹುದು. ಇಲ್ಲಿಯೂ ಸಂಗಮೇಶ್ವರನ ನಿವಾಸವೊಂದಿದೆ. ಧರ್ಮಮೂಲವಾದ ಭಾರತ ಸಂಸ್ಕೃತಿಯು "ಇಷ್ಟಂ ಧರ್ಮೇಣ ಯೋಜಯೇತ್" ಎಂಬುದನ್ನು ರೂಢಿಗೆ ತರುವುದಕ್ಕೆ ಕಲ್ಪಿಸಿರುವ ಸನ್ನಿವೇಶಗಳಲ್ಲಿ ಇದೂ ಒಂದು. ಜನ ಬಂದು ಪ್ರಕೃತಿಯ ಸೊಬಗನ್ನು ನೋಡಿ ನಲಿದು ದೈವಪ್ರಸಾದವನ್ನು ಹೊಂದಲಿ ಎಂಬುದಾಗಿ ನಿರ್ಮಿಸಿದ ಅನುಕೂಲತೆಗಳಲ್ಲಿ ಶ್ರೇಷ್ಠವಾದುದು. ಸಂಗಮೇಶ್ವರನ ಸ್ಥಾಪನೆಯಾದುದು ಜನಮೇಜಯರಾಯನ ಕಾಲದಲ್ಲಂತೆ. ಈಚೆಗೆ ಕುಮುದ್ವತಿಯ ತವರು ಮನೆಯಾದ ಶಿವಗಂಗೆಯಲ್ಲಿರುವ ಮಠದ ಯಾಜಮಾನ್ಯದಲ್ಲಿ ದೇವಾಲಯವನ್ನು ಲಕ್ಷಣವಾಗಿ ಕಟ್ಟಿಸಿದ್ದರು. ಈ ದೇವಸ್ಥಾನಕ್ಕೆ ಈಗ ಜಲಾಧಿವಾಸಯೋಗ ಬಂದಿದೆ. ಆದರೆ ಸಂಗಮವು ಮಾತ್ರ ಕಟ್ಟೆಯಲ್ಲಿ ನೀರು ನಿಂತ ಹಾಗೆಲ್ಲಾ ವಿಶಾಲವಾಗಿ ಅದರ ರಮಣೀಯತೆಯು ಹೆಚ್ಚುವುದರಿಂದ ಇನ್ನೂ ಎತ್ತರವಾದ ಪ್ರದೇಶದಲ್ಲಿ ಹೊಸ ದೇವಾಲಯವನ್ನು ಕಟ್ಟಿ ದೇವತಾಸ್ಥಾಪನೆ ಮಾಡಬೇಕೆಂದು ಎಲ್ಲರೂ ಮನಸ್ಸು ಮಾಡಿದರು. ಕಲ್ಲಿನಲ್ಲಿ ದೇವಾಲಯವನ್ನೂ ಕಟ್ಟಿದರು. ಹಳೆಯ ದೇವಸ್ಥಾನವು ಮುಳುಗಿಹೋದುದಕ್ಕೋಸ್ಕರ ಪರಿಹಾರವಾಗಿ ಸರ್ಕಾರದವರು ಶಿವಗಂಗಾಮಠಕ್ಕೆ ಕೊಟ್ಟ ೬,೭೦೦ ರೂಪಾಯಿಗಳನ್ನು ಸ್ವಾಮಿಗಳವರು ಹೊಸ ದೇವಸ್ಥಾನದ ನಿತ್ಯಾರಾಧನೆಗಾಗಿ ಕೊಟ್ಟು ೧೯೩೩ನೆಯ ಮಾರ್ಚಿ ೬ನೆಯ ತಾರೀಖಿನ ದಿನ ದೇವತಾಪ್ರತಿಷ್ಠೆಯನ್ನು ಸ್ವಹಸ್ತದಿಂದ ನೆರವೇರಿಸಿದರು.

ಹೊಸ ದೇವಸ್ಥಾನದ ಎದುರಾಗಿ ನದಿಯ ಎಡಗಡೆಯ ಗುಡ್ಡವೊಂದರ ಮೇಲೆ ಒಂದು ಬಂಗಲೆಯನ್ನು ಪ್ರಯಾಣಿಕರ ಮತ್ತು ಕಾರ್ಯಾರ್ಥವಾಗಿ ಬರುವ ನೌಕರರ ಅನುಕೂಲಕ್ಕಾಗಿ ಕಟ್ಟಿದ್ದಾರೆ. ಮನೆಯು ಇಬ್ಬರು ಪ್ರತ್ಯೇಕವಾಗಿ ಇಳಿದುಕೊಳ್ಳುವುದಕ್ಕೆ ಸರಿಯಾಗಿ ಅಚ್ಚುಕಟ್ಟಾಗಿದೆ. ಮುಂಭಾಗದ ಪಡಸಾಲೆ ಬಹಳ ಅಗಲವಾಗಿದ್ದು ಅಲ್ಲಿಂದ ಕಾಣಬರುವ ದೃಶ್ಯವು ಅತಿರಮಣೀಯವಾಗಿದೆ. ಮುಂದುಗಡೆ ಅರ್ಕಾವತೀ ಕುಮುದ್ವತೀ ನದಿಗಳ ಸಂಗಮ, ಗುಡ್ಡಗಳ ಮಾಲೆಗಳು,

CC-0. Jangamwadi Math Collection, Varanasi. An eGangotri Initiative

CC-0. Jangamwadi Math Collection, Varanasi. An eGangotri Initiative



ಹೊಸಬಂಗಲೆ—ತಿಪ್ಪಗೊಂಡನಹಳ್ಳಿ

CC-0. Jangamwadi Math Collection, Varanasi. An eGangotri Initiative

ಶಿವಗಂಗೆಯ ಶಿಖರ; ಎಡಗಡೆ ತುಂಬಿದ ಜಲಾಶಯ, ಕಟ್ಟೆ ಮತ್ತು ಗುಡ್ಡದ ಸಾಲು, ಸಾವನದುರ್ಗ. ಈ ನೋಟಕ್ಕಾಗಿಯೂ ಇಲ್ಲಿನ ಅನುಕೂಲತೆಗಳಿಗಾಗಿಯೂ ಜನರು ಇಲ್ಲಿಗೆ ಬರುತ್ತಲೇ ಇರುತ್ತಾರೆ.

ಬಂಗಲೆಯಿಂದ ಕಟ್ಟೆಯ ಮೇಲಕ್ಕೆ ನಡೆದುಬರುವುದಕ್ಕೆ ಸುಗಮವಾದ ದಾರಿಯಿದೆ.

ಎಚ್. ಸಿ. ಕಪಿನೀಪತಿಭಟ್ಟ.

(ಮುಂದುವರಿಯುವುದು)



CC-0. Jangamwadi Math Collection, Varanasi. An eGangotri Initiative

# ಹೊಲ ಕಾಯುವ ಚದುರೆ

ಅರೆಗಳಿಗೆಯಾದರೂ ಮರೆಯಾಗಳಿಲ್ಲಿಂದ
    ನನ್ನ ಚಿತ್ತ್ರದ ಹೊಲವ ಕಾವ ಚದುರೆ ;
ಎರಗಬಹುದನ್ಯಚಿಂತೆಗಳ್ ಗಿಳಿವಿಂಡೆಂದು
    ಬೇಲಿಯಿಂದಾಚೆ ದೂರಕೆ ಸರಿಯಳು ;
ನೆನಸೊ ಕನಸೋ ಕಣಸೊ—ಮನಸದೆಂತಿದ್ದರೂ
    ಆದರೊಡತಿಯಿವಳ ಕಾವಲು ಸಡಿಲದು :
ಒನಪಿನಿಂದಡಿಯಿಡುತ, ಕಂಕಣವನಲುಗಿಸುತ,
    ಮಿಂಚುನೋಟದ ಕವಣೆಯನು ಕೆದರುತ,
ಬಳಲುಮುಡಿಸಂಪಗೆಯ ಚಿರುಗಂಪನೆರಚುತ್ತ,
    ಅಣಕನಗೆಯನು ತುಟಿಯೊಳಾಡಿಸುತ್ತ,
ಸುಳಿವ ಹಕ್ಕಿಯನೆಲ್ಲ ದೂರದೊಳೆ ಬೆದರಟ್ಟಿ
    ತನ್ನ ಹೊಲದೊಳಗಲೆಯುವಳು ಮೋಹನೆ—
    ನನ್ನೊಳಿನ್ನೂ ಕನಿಕರಿಸದ ಕಠಿಣೆ!

ತೀ. ನಂ. ಶ್ರೀ.

CC-0. Jangamwadi Math Collection, Varanasi. An eGangotri Initiative

# ನ್ಯಾಯವಾದ ಸಂಪಾದನೆ

(ಒಂದು ಸಣ್ಣ ಕಥೆ)

೧

ದುಡ್ಡಿಗೆ ಮಾತ್ರ ಬೆಲೆಕಟ್ಟುವ ನಾವು ಕಾಲಕ್ಕೂ ಬೆಲೆಕಟ್ಟಬೇಕು. ಕಾಲವೇ ದುಡ್ಡು ಎಂದು ಹೇಳುವುದು ಸುಳ್ಳಲ್ಲ. ಆದ್ದರಿಂದ ನಾನು ಸಮಯ ಸಿಕ್ಕಿದಾಗ, ನಾಲ್ಕು ಕಾಸು ಸಂಪಾದಿಸುವ ಮಾರ್ಗವನ್ನು ಹಿಡಿದು, ಒಬ್ಬರಿಗೂ ತೊಂದರೆ ಕೊಡದೆ ಒಬ್ಬರನ್ನೂ ಹಿಂಸಿಸದೆ, ನನ್ನ ಯುಕ್ತಿಯಿಂದ ಇತರರಿಗೆ ಕೈಲಾದ ಸಹಾಯಮಾಡಿ ಅವರು ಮೆಚ್ಚಿಕೊಟ್ಟದ್ದನ್ನು ಸ್ವೀಕರಿಸಿ ಅಷ್ಟಷ್ಟಾಗಿ ನನ್ನ ದುಡಿಮೆಯನ್ನು ಹೆಚ್ಚಿಸಿಕೊಂಡೆ. ದೊಡ್ಡ ಕುಳಗಳು ಸಂತೋಷದಿಂದ ಕೊಟ್ಟದ್ದನ್ನು ಬಿಡಲಿಲ್ಲ. ಹಾಗೆಂದು ನನ್ನ ಘನತೆಯನ್ನೇನೂ ಕಳೆದುಕೊಳ್ಳಲಿಲ್ಲ. ಎಲ್ಲರಂತೆ ಮನುಷ್ಯನಾಗಿ, ನನ್ನನ್ನೇ ನಂಬಿಕೊಂಡಿರುವ ಸಂಸಾರಕ್ಕೂ ಮಕ್ಕಳಿಗೂ ನಿರ್ವಂಚನೆಯಿಂದ ನನ್ನಿಂದಾದಷ್ಟು ನೆರವಾಗಿ ಬಾಳಿದೆ. ಹೀಗೆ ಬಾಳುವುದರಲ್ಲಿ ಶುದ್ಧಾಂಗವಾಗಿ ಅನ್ಯಾಯವನ್ನು ಮಾಡುವುದೇ ಇಲ್ಲ, ಅಸತ್ಯವನ್ನು ಆಡುವುದೇ ಇಲ್ಲ, ಅಂತ ಹೇಳುವುದಕ್ಕಾಗುವುದಿಲ್ಲ. ನಮಗೆ ಗೊತ್ತಾಗದಂತೆ ಎಷ್ಟೋ ಅನ್ಯಾಯವನ್ನು ಮಾಡಿರಬಹುದು, ಎಷ್ಟೋ ಅಸತ್ಯವನ್ನು ವ್ಯವಹಾರದಲ್ಲಿ ಹೂಡಿರಬಹುದು. ಇದು ಅನಿವಾರ್ಯ. ಆದರೆ ಮುಖ್ಯವಾಗಿ, ನಾವು ಮಾಡತಕ್ಕ ಕೆಲಸಗಳಲ್ಲಿ, ಆಡತಕ್ಕ ಮಾತುಗಳಲ್ಲಿ, ಇತರರ ಅಂತಃಕರಣಕ್ಕೆ ನೋವಾಗದಂತೆ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು, ಅಷ್ಟೆ. ತಾನು ಕೆಡಬಾರದು, ಪರರಿಗೆ ಕೇಡನ್ನು ಬಗೆಯಬಾರದು. ಇದೇ ಧರ್ಮಸೂಕ್ಷ್ಮ. ಹೀಗೆ ನಾನು ಸಂಪಾದನೆಮಾಡಿದ ಒಂದೆರಡು ಸಂದರ್ಭಗಳನ್ನು ಮುಂದೆ ತಿಳಿಸಿದ್ದೇನೆ.

ಒಂದುಸಲ ಡಿ.ಸಿ.ಯವರ ಕ್ಯಾಂಪಿನ ಸಂಗಡ ಸರ್ಕೀಟಿಗೆ ಹೋಗಿದ್ದೆ. ನಮ್ಮ ಸಾಹೇಬರು ಮಲಗುವ ಕೊಠಡಿಯ ಹತ್ತಿರವಿದ್ದ ಗುಮಾಸ್ತರ ಕೋಣೆಯಲ್ಲಿ ನಾನು ಬರೆಯುತ್ತಾ ಕುಳಿತಿದ್ದೆ. ಒಳಗೆ ಸಾಹೇಬರ ಹೆಂಡತಿ ಆಡುವ ಮಾತು ಕೇಳಿಸಿತು: "ನಾಳೆ ಕ್ರಿಸ್‌ಮಸ್ ಹಬ್ಬ. ಈ ಹಳ್ಳಿಗೆ ಬಂದು ಮೊಕ್ಕಾಂ ಮಾಡಿಬಿಟ್ಟಿರಿ. ಈ ಕೊಂಪೆಯಲ್ಲಿ ಎರಡು ಒಳ್ಳೆಯ ಮೀನು ಸಹ ಸಿಗುವ ಹಾಗಿಲ್ಲ." ಈ ಮಾತು ಕಿವಿಗೆ ಬಿದ್ದಕೂಡಲೆ ನಾನು ಬರವಣಿಗೆಯನ್ನು ಬಿಟ್ಟೆದ್ದೆ. ನಮ್ಮ

CC-0. Jangamwadi Math Collection, Varanasi. An eGangotri Initiative

ಮೇಲಿನ ಅಧಿಕಾರಿಗಳ ದಯಾದೃಷ್ಟಿಯನ್ನು ನಮ್ಮ ಕಡೆಗೆ ತಿರುಗಿಸಿಕೊಳ್ಳಬೇಕಾದರೆ ಕಣ್ಣೂ ಕಿವಿಯೂ ತಲೆಗೆ ಸಹಾಯವಾಗಿರಬೇಕು. ಬರಿಯ ಕೈಯಿನ ಕೆಲಸದಿಂದಲೆ ಸಾಧ್ಯವಿಲ್ಲ. ಆದ್ದರಿಂದ ಕೂಡಲೆ ಹೊರಗೆ ಬಂದು ಆಳನ್ನು ಕರೆದು ಈಡಿಗನೊಬ್ಬನನ್ನು ಹಿಡಿತರಿಸಿ ನಾಲ್ಕು ದೊಡ್ಡ ದೊಡ್ಡ ಮೀನು ಹಿಡಿದುಕೊಂಡುಬಂದರೆ ಒಳ್ಳೆಯ ಇನಾಂ ಕೊಡುತ್ತೇನೆಂದು ಹೇಳಿದೆ. ಹಾಗೆಯೇ ಅವನಿಂದ ಬಂದ ಮೀನನ್ನು ಏನೂ ಅರಿಯದವನಂತೆ ಸಾಹೇಬರ ಹೊಸ ವರುಷದ ಹಬ್ಬದ ಹೊತ್ತಿಗೆ ತೆಗೆಸಿಕೊಂಡು ಹೋಗಿ ಕೊಟ್ಟೆ. ನನ್ನ ಕೈಯಿಂದ ಆ ಕೆಲಸಕ್ಕೆ ಎರಡು ರೂಪಾಯಿ ಖರ್ಚೇನೋ ಆಗಿತ್ತು. ಆದರೆ ಅದು ಬೀಜದ ರೂಪಾಯಿ. ಅದನ್ನು ಬಿತ್ತಿ ಒಳ್ಳೆಯ ಫಸಲನ್ನೇ ತೆಗೆದೆ.

ಮರುದಿನವೆ ಸಾಹೇಬರ ಹೆಂಡತಿ ಮೀನು ಹಿಡಿದವನಿಗೆಂದು ಇಪ್ಪತ್ತು ರೂಪಾಯಿಗಳನ್ನು ನನ್ನ ಕಡೆಗೆ ಕಳುಹಿಸಿದರು. ಮೀನು ಹಿಡಿದವನಿಗೆ ನಾನೇ ಅಲ್ಪಸ್ವಲ್ಪ ಇನಾಂ ಕೊಟ್ಟಿರುವೆನೆಂದೂ ಅದಕ್ಕಾಗಿ ಇನ್ನೇನೂ ಕೊಡುವುದು ಉಳಿದಿಲ್ಲವೆಂದೂ ಹೇಳಿ ಆ ಹಣವನ್ನು ವಾಪಸು ಕಳುಹಿಸಿದೆ. ಹಬ್ಬದ ಬಹುಮಾನವಾಗಿ ನಾನೇ ಆ ಹಣವನ್ನು ತೆಗೆದುಕೊಳ್ಳಬಹುದೆಂದು ಅಮ್ಮಾವರಿಂದ ಅಪ್ಪಣೆ ಬಂತು. ಆಗಲೂ ನಾನು, ಹಿಂದುಗಳಿಗೆ ಕ್ರಿಸ್‌ಮಸ್ ಹಬ್ಬವಿಲ್ಲವೆಂದೂ ನನಗೆ ದುಡ್ಡಿನ ಅಗತ್ಯ ಸದ್ಯಕ್ಕೆ ಇಲ್ಲವೆಂದೂ ಹೇಳಿದೆ. ಅದಕ್ಕೆ ಮತ್ತೆ ಉತ್ತರವಾಗಿ, ಸಾವಿರ ರೂಪಾಯಿ ಸಂಬಳ ಬರುವ ನಮಗೇ ಎಷ್ಟೋವೇಳೆ ದುಡ್ಡು ಸಾಲದೆ ಹೋಗುವಾಗ ಇಪ್ಪತ್ತೈದು ರೂಪಾಯಿ ಸಂಬಳದ ನೀನು ಸಂಸಾರದವರೂ ಮಕ್ಕಳೂ ಕೇಳಿದುದನ್ನು ಒದಗಿಸಿ ಕುಟುಂಬ ರಕ್ಷಣೆಮಾಡುವುದು ಹೇಗೆ? ಮಕ್ಕಳಿಗೆ ಅವು ಆಶೆಯಿಂದ ಕೇಳಿದ್ದನ್ನು ತಂದುಕೊಡು—ಎಂದು ಹೇಳಿ ಅಮ್ಮಾವರು ಆ ಹಣವನ್ನು ಕೊನೆಗೂ ನನಗೆ ಕೊಟ್ಟರು. "ಬಡತನ ಅನ್ನುವುದು ಕಷ್ಟವೇನೋ ಹೌದು. ನಮ್ಮ ಸಂಪಾದನೆಗೆ ತಕ್ಕಷ್ಟು ನಮ್ಮ ಆಶೆಯೂ ಆವಶ್ಯಕತೆಯೂ ಸರಿತೂಗಬೇಕು. ಈಗ ತಾವೇನೊ ಈ ಸಣ್ಣ ವಿಷಯಕ್ಕೆ ನನಗೆ ಸಹಾನುಭೂತಿ ತೋರಿಸುವಂತಹ ಈ ದೊಡ್ಡ ಯೋಚನೆ ಮಾಡಿದಿರಿ. ತಮ್ಮ ಮಾತನ್ನು ತೆಗೆದುಹಾಕಲೂ ಬಾರದಾಗಿದೆ. ಯತ್ನವಿಲ್ಲ ತಮ್ಮ ಚಿತ್ತ" ಎಂದು ನನ್ನ ಚಿತ್ತವನ್ನು ಮುಚ್ಚಿಟ್ಟುಕೊಂಡು ದುಡ್ಡನ್ನೇನೋ ತೆಗೆದುಕೊಂಡು ಪೆಟ್ಟಿಗೆಯಲ್ಲಿ ಇಟ್ಟೆ.

೨

ಹೀಗೆಯೇ ಇನ್ನೊಂದು ಸಂದರ್ಭ. ನಾವು ಒಂದುಕಡೆ ಜಮಾಬಂದಿಗೆ ಹೋಗಿದ್ದೆವು. ಅಲ್ಲಿ ಬರಿಯ ಈಚಲುಮರದ ಕಾಡಿನಿಂದ ತುಂಬಿದ್ದ ನಾನೂರು ಎಕರೆ

CC-0. Jangamwadi Math Collection, Varanasi. An eGangotri Initiative

ಜಮೀನು ಹಾಳುಬಿದ್ದಿತ್ತು. ಈಡಿಗರಿಂದ ಸಾಗುವಳಿ ಮಾಡಿಸಲು ನೋಡಿ ಸರ್ಕಾರದವರು ಆಗದೆ ಕೈಬಿಟ್ಟಿದ್ದರು. ಕೆಲವು ರೈತರು ಅದನ್ನು ಹರಾಜಿನಲ್ಲಿ ಕೊಡಿಸಿಕೊಟ್ಟರೆ ತಮಗೆ ಅನುಕೂಲವಾಗುವುದೆಂದು ಕೇಳಿಕೊಂಡಿದ್ದರು. ಸಾಹೇಬರಾದರೊ ಹರಾಜಿಗಿಡದೆ ಸರ್ಕಾರಕ್ಕೆ ಸೇರಿಸಿಕೊಂಡರೆ ಒಳ್ಳೆಯದೆಂದು ಮೇಲಕ್ಕೆ ತಿಳಿಸಿದ್ದರು. ಒಂದೆರಡು ವರುಷಗಳಾದ ಮೇಲೆ ಸರ್ಕಾರಕ್ಕೆ ಯಾವ ಲಾಭವೂ ಇಲ್ಲದ್ದರಿಂದ ಪುನಃ ಅದನ್ನು ಗ್ರಾಮಸ್ಥರ ಅಪೇಕ್ಷೆಯಂತೆ ಹರಾಜುಮಾಡಬಹುದೆಂದು ಆರ್ಡರು ಬಂತು.

ಹರಾಜಿನ ದಿನ ರೈತರಲ್ಲಿ ಕೆಲವರು ಕಾರಣಾಂತರಗಳಿಂದ ಬರಲಿಲ್ಲ. ಬಂದವರ ಕೈಲಿ ದುಡ್ಡಿರಲಿಲ್ಲ. ಹಾಗೂ ಹೀಗೂ ನನ್ನ ಹೆಸರಿಗೆ ಆ ಜಮೀನು ನಿಂತಿತು. ನಮ್ಮ ಸಾಹೇಬರ ಕೃಪಾದೃಷ್ಟಿಯಿಂದ ಮುಂದೆ ಒಳ್ಳೆಯ ಸಮಯದಲ್ಲಿ ಆ ಜಮೀನಿನಿಂದ ನನಗೆ ಒಂದಕ್ಕೆ ಹತ್ತರಷ್ಟು ಸಫೆ ಸಿಕ್ಕಿ ಗ್ರಾಮಸ್ಥರಿಗೆ ಜಮೀನನ್ನು ಕೊಟ್ಟೆ. ಅವರೆಲ್ಲ ತಮ್ಮನ್ನು ಉದ್ಧಾರಮಾಡಿದ ಧಣಿಯೆಂದು ತಿಳಿದುಕೊಂಡು ನಾನು ಸರ್ಕಾರದ ಕೆಲಸಕ್ಕೆಂದು ಹೋದಾಗಲೆಲ್ಲ ನಾನಾತರದಲ್ಲಿ ಸಹಾಯಮಾಡುತ್ತಿದ್ದರು.

೩

ನಮ್ಮ ಸರ್ಕೀಟಿನ ಸರಹದ್ದಿನಲ್ಲಿ ಒಬ್ಬ ಗಣ್ಯರಾದ ಮನುಷ್ಯರಿದ್ದರು. ಅವರು ಹತ್ತೆಂಟು ಹಳ್ಳಿಗಳ ಪಟೇಲರು ಬೇರೆ! ಅದರಿಂದ ಬರುವ ಪೋಟಿಗೆ ಹಣವಾದ ನೂರಿಪ್ಪತ್ತು ರೂಪಾಯಿಗಳಿಗೆ ತಾವು ಬಾಧ್ಯರಾಗಿ ಕೆಲಸಕ್ಕೆ ಮಾತ್ರ ಇನ್ನೊಬ್ಬರನ್ನು ಗುರಿಮಾಡಿ ಅವರಿಂದ ಪಟೇಲಿ ಕೆಲಸ ಬಿಟ್ಟಿ ದುಡಿಸಿ ತಾವು ಘನ ವ್ಯಕ್ತಿಗಳಂತೆ—ಸಾಹೇಬರ ಸಮಾನಸ್ಕಂಧರಂತೆ—ಜಮಾಬಂದಿ ಕಾಲದಲ್ಲಿ ಕುರ್ಚಿಮೇಲೆ ಕುಳಿತುಕೊಂಡು ಮೆರೆಯುತ್ತಿದ್ದರು. ಉಳಿದ ಪಟೇಲರೆಲ್ಲ ಕೈಕಟ್ಟಿಕೊಂಡು ನಿಂತಿರುವಾಗ, ಸಾಹೇಬರ ಮುಂದೆ ಇವನದೇನು ಪ್ರತಿಷ್ಠೆ ಎಂದು ನನಗೆ ಸ್ವಲ್ಪ ಅಸಮಾಧಾನವಾಯಿತು. ಈ ವಿಷಯವನ್ನಲ್ಲೆ ಸಮಯ ಕಾದು ಸಾಹೇಬರಿಗೆ ಸೂಚಿಸಿದೆ. ಇದರಿಂದ ಆ ವ್ಯಕ್ತಿಗೆ ಮಾನಹೋದಂತಾಯಿತು. ಅವರು ಕಟ್ಟೇಕಾಂತದಲ್ಲಿ ನನ್ನನ್ನು ಕರೆದು "ಹೀಗೆ ಹತ್ತು ಜನ ಸೇರಿದ ಕಡೆ ನನ್ನ ಮರ್ಯಾದೆ ಕಳೆಯಬೇಡ. ನಿನಗೇನಾದರೂ ಬೇಕಾಗಿದ್ದರೆ ತೆಗೆದುಕೊ. ಸಂಪ್ರದಾಯವಾಗಿ ಸಲ್ಲಬೇಕಾದದ್ದನ್ನು ಹಿಡಿ" ಎಂದು ಒಂದು ಇಡಿ ನೋಟನ್ನು ನನ್ನ ಕೈಯಲ್ಲಿಟ್ಟರು. ಅದನ್ನು ನಾನು ಯಾಕೆ ಬಿಡಬೇಕು? ಯಾರುಯಾರೋ ಆತನಿಂದ ಎಷ್ಟೆಷ್ಟೊ ಅನ್ಯಾಯದ ಕೆಲಸಕ್ಕೆಲ್ಲ ದುಡ್ಡೆಳೆಯುತ್ತಿರುವಾಗ ಕೊಬ್ಬಿದ ಕುಳ ನನ್ನ ಬಾಯಿಗೂ ತೆರುವಷ್ಟು

CC-0. Jangamwadi Math Collection, Varanasi. An eGangotri Initiative

ತೆರಲಿ ಅಂತ ತೆಗೆದುಕೊಂಡೆ. ಇದರಿಂದ ಅವನಿಗೇನೂ ನಷ್ಟವಿಲ್ಲ. ನಾನು ಆ ದುಡ್ಡಿನಿಂದ ನನ್ನ ಮನೆಯಲ್ಲಿರುವ ಹಸಿದ ಮಕ್ಕಳ ಹೊಟ್ಟೆಬಟ್ಟೆ ನಡೆಸಿದರೆ ಏನು ಅನ್ಯಾಯ?

ಇದು ಇಷ್ಟಕ್ಕೇ ಮುಗಿಯಲಿಲ್ಲ. ನಾನು ಆ ದೊಡ್ಡ ಮನುಷ್ಯರನ್ನು ಕುರಿತು, "ಈ ಪಟೇಲಿಕೆಯಲ್ಲಿ ಬರುವುದು ಅಷ್ಟರಲ್ಲೇ ಇದೆ! ಇದು ತಮ್ಮಂಥವರಿಗೆ ಮರ್ಯಾದೆಕೊಡುವ ಕೆಲಸವೆ ಅಲ್ಲ. ತಾವು ಅಂದರೆ ಸಾಹೇಬರ ಸರಿಸಮಾನರು" ಎಂದು ಮುಂತಾಗಿ ಉಬ್ಬಿಸಿ ಅವರ ಮನೆಯಲ್ಲಿದ್ದ ಯೋಗ್ಯನಾದ ಬಡಹಾರುವ ನೊಬ್ಬನಿಗೆ ಆ ಪಟೇಲಿ ಕೊಡಿಸಿದೆ. ಆ ಹಾರುವಯ್ಯನಿಂದಲೂ ಇದಕ್ಕೆ ಬದಲಾಗಿ ಯಾವುಯಾವುದೋ ರೀತಿಯಿಂದ ಪ್ರತ್ಯುಪಕಾರ ಹೊಂದಿದೆ.

೪

ಇನ್ನೊಂದು ತರದ ಸಂಪಾದನೆ. ಮಲೆನಾಡಿನ ಒಬ್ಬ ಗೌಡ ಪ್ರಾಣಬಿಟ್ಟ, ಅವನು ಅಪುತ್ರವಂತ. ಅವನು ಬರೆದ ಮರಣಶಾಸನವನ್ನು ದಾಯಾದಿಗಳು ತಿದ್ದಿ ಬಿಟ್ಟಿದ್ದರು. ಇನ್ನೇನು ಅವರ ಅನುಕೂಲದಂತೆ ಉಯಿಲು ಜಾರಿಗೆ ಬರಬೇಕು ಎನ್ನು ವಷ್ಟರಲ್ಲಿ ಅವರು ಬದಲಾಯಿಸಿದ ವಿಚಾರವೆಲ್ಲ ಸೂಕ್ಷ್ಮವಾಗಿ ನನ್ನ ಕಣ್ಣಿಗೆ ಬಿತ್ತು. ನನ್ನ ಕಣ್ಣಿಗೆ ಬಿದ್ದುದನ್ನು ಸರ್ಕಾರದ ಕಣ್ಣಿಗೂ ಬೀಳಿಸುವುದು ನ್ಯಾಯವಲ್ಲವೆ?

ಈ ಸಂದರ್ಭದಲ್ಲಿ ಆ ದಾಯಾದಿಗಳನ್ನು ಹಿಡಿತದಲ್ಲಿಟ್ಟುಕೊಂಡು ಅವರಿಗೆ ಇದ್ದ ಸಂಗತಿ ತಿಳಿಸಿ ಅದರಿಂದ ಮುಂದೆ ಆಗಬಹುದಾದ ಶಿಕ್ಷೆಗಳೆಲ್ಲವನ್ನೂ ವಿವರಿಸಿದೆ. ಆದರೆ ಆ ಜನಗಳು ಶಿಕ್ಷೆಗೆ ಹೆದರಿ ಹಿಂತೆಗೆಯುವವರಾಗಿರಲಿಲ್ಲ. ಸಮಯಬಿದ್ದರೆ ಹಣವನ್ನು ನೀರಿನಂತೆ ಚೆಲ್ಲಿ ತಮ್ಮ ಹಟವನ್ನೇ ಹಿಡಿದು ಗೆಲ್ಲುವವರಾಗಿದ್ದರು. ಸಂದರ್ಭ ಹೀಗಿರುವಾಗ ಇಂತಹರೊಂದಿಗೆ ನಮ್ಮ ಬುದ್ಧಿವಂತಿಕೆ ನಡೆಯದೆಂದು ಸುಮ್ಮನಿದ್ದುಬಿಟ್ಟೆ. ಮುಂದೆ ವ್ಯಾಜ್ಯ ಹೂಡಿದಾಗ ಆ ಜನಗಳಿಗೆ ಅನುಕೂಲ ವಾಗಿಯೇ ತೀರ್ಪು ದೊರೆಯಿತು. ಆಗ ಅವರೆಲ್ಲರೂ "ನಾನು ಯಾವುದೋ ರೀತಿಯಲ್ಲಿ ಸಹಾಯ ಮಾಡಿದುದರಿಂದಲೇ ಕೇಸು ತಮ್ಮಂತೆ ತೀರ್ಮಾನವಾಯಿತು. ಅದಿಲ್ಲ ದಿದ್ದರೆ ತಮಗೆ ಮರಣದಂಡನೆಯೇ ಆಗಬೇಕಿತ್ತು" ಎಂದು ಬಗೆದು ಮರಣದಂಡನೆ ಯನ್ನು ತಪ್ಪಿಸಿದ ಮಹಾನುಭಾವನೆಂದು ನನ್ನಲ್ಲಿಗೆ ಬಂದು ಅವರಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಪಾಲಿಗೆ ಅನಾಯಾಸವಾಗಿ ಬಂದ ಆಸ್ತಿಯಲ್ಲಿ ಇನ್ನೂರು ರೂಪಾಯಿ ನನಗೆ ಕಾಣಿಕೆಯಾಗಿ ಕೊಡಬಂದರು. ಹೀಗೆ ನನಗೂ ಅನಾಯಾಸವಾಗಿ ಒದಗಿದ ಲಕ್ಷ್ಮೀಪ್ರಸಾದವನ್ನು ಒಲ್ಲೆನೆನ್ನದಿರುವುದು ಬುದ್ಧಿವಂತಿಕೆಯೊ ಅಥವಾ ಮಹಾ ನ್ಯಾಯಮಾರ್ಗದಲ್ಲಿ ನಡೆಯುವವನಂತೆ ಆ ಕಾಡುಜನರೊಂದಿಗೆ ಹೋರಾಡಿ ದ್ವೇಷ

CC-0. Jangamwadi Math Collection, Varanasi. An eGangotri Initiative

ಕಟ್ಟಿಕೊಂಡು ಹಲಸಿನಮರಕ್ಕೆ ನೇಣುಹಾಕಿಸಿಕೊಂಡೋ ಹಾಳುಬಾವಿಬಿದ್ದೋ ಪ್ರಾಣತ್ಯಾಗಮಾಡುವುದು ಬುದ್ಧಿವಂತಿಕೆಯೊ? ನಾನೇನೋ ಮೊದಲಿನ ಮಾರ್ಗವನ್ನೇ ಹಿಡಿದು ಬದುಕಿದೆ; ಬುದ್ಧಿವಂತನಾದೆ. ದಾಯಾದಿಗಳನ್ನು ಕರೆದು, "ಇಂತಹ ಕೆಲಸವನ್ನು ಮುಂದೆ ಮಾಡಬೇಡಿ, ನಾನು ಆಗುವ ಹೊತ್ತಿಗೆ ನಿಮ್ಮ ತಲೆ ಉಳಿಸಿದೆ. ಬೇರೆ ಯಾರಾದರೂ ನಿಮ್ಮ ಕೆಲಸ ಕಂಡು ಹಿಡಿದಿದ್ದರೆ ಏನೇನು ಆಗುತ್ತಿತ್ತೊ!" ಎಂದು ಹೆದರಿಸಿದೆ. ಅವರೂ ಕೂಡ "ಏನೋ ಸ್ವಾಮಿ, ದುರಾಸೆ ಬಂದು ಹೀಗೆ ಮಾಡಿದೆವು. ಇನ್ನು ತಮ್ಮ ಪಾದಸಾಕ್ಷಿಯಾಗಿಯೂ ಮುಂದೆ ಈ ಕೆಲಸ ಮಾಡೋದಿಲ್ಲ" ಎಂದರು. ನಾನು ಬಂದದ್ದನ್ನು ಬಗಲಿಗೆ ಹಾಕಿಕೊಂಡು ಹೊರಟು ಬಂದೆ.

ಹೀಗೇ ಹಣದ ಸಂಪಾದನೆಗೆ ಹಲವು ಮಾರ್ಗ. ತೀರ ಸತ್ಯವಾದಿ ನ್ಯಾಯಪರ ಎಂದರೆ ನಡೆಯುವುದಿಲ್ಲ. ತಾನೂ ಬದುಕಿ ಇನ್ನೊಬ್ಬರನ್ನೂ ಬದುಕಿಸಿ ಬಾಳಬೇಕು. ಜನಸಂಪಾದನೆ ಧನಸಂಪಾದನೆ ಎರಡೂ ಮಾಡಬೇಕು. ಅಣ್ಣತಮ್ಮಂದಿರ ವ್ಯಾಜ್ಯ, ಗಂಡಹೆಂಡಿರ ಮನಸ್ತಾಪ, ಅತ್ತೆಸೊಸೆಯರ ಜಗಳ, ದಾಯಾದಿಗಳ ಆಸ್ತಿವಿಭಾಗ, ಊರಪಂಚಾಯಿತಿ, ಜೀವನಾಂಶಕ್ಕೆ ದಾವ, ಎಲ್ಲವೂ ಕೋರ್ಟು ಕಛೇರಿಗೆ ಹೋಗುವುದಕ್ಕೆ ಮುಂಚೆ ನನ್ನ ಹತ್ತಿರ ಬರುವುದಕ್ಕೆ ಮೊದಲಾಯಿತು. ಎರಡು ಪಕ್ಷದವರಿಗೂ ಒಪ್ಪುವ ಹಾಗೆ ಮಾತನಾಡಿ, ಅನ್ಯಾಯವಾಗಿ ದುಡ್ಡು ಹೊರಗೆ ಹತ್ತಾರು ಜನರ ಬಾಯಿಗೆ ಬೀಳದ ಹಾಗೆ ಬಂದವರಿಗೆಲ್ಲಾ ಬುದ್ಧಿ ಹೇಳಿ, ಅವರವರಲ್ಲೇ ರಾಜಿ ಮಾಡಿಸಿ ಅನ್ಯೋನ್ಯವಾಗಿರುವಂತೆ ಏರ್ಪಡಿಸುತ್ತಾ ಬಂದೆ. ಇದರಲ್ಲಿಯೂ ಉಪಕಾರ ಹೊಂದಿದವರು ನಾನಾತರದಲ್ಲಿ ಸಹಾಯಮಾಡಿದರು. ಹತ್ತಾರು ಲಕ್ಷ ರೂಪಾಯಿನ ಆಸ್ತಿ ಕಡಿದಾಟವಿಲ್ಲದೆ ಬಡಿದಾಟವಿಲ್ಲದೆ ವೈರ ವೈಮನಸ್ಸು ಇಲ್ಲದೆ ಇತ್ಯರ್ಥವಾದರೆ ನನಗೆ ಅವರೂ ನಾಲ್ಕಾರುಸಾವಿರ ಕೊಡುತ್ತಿದ್ದರು. ಹೀಗೆ ಸ್ವೀಕರಿಸುವುದು ನ್ಯಾಯವೊ ಅನ್ಯಾಯವೊ? ನ್ಯಾಯವೆಂದೇ ನನ್ನ ಭಾವನೆ.

ಹೀಗೆ ಸಂಪಾದಿಸಿದ ಹಣವೆಲ್ಲವನ್ನೂ ಕೂಡಿಟ್ಟಿದ್ದರೆ ನಾನೀಗ ಊರ ಮನೆಗಳನ್ನೆಲ್ಲಾ ಕೊಂಡುಕೊಂಡು ಜಾಗೀರುದಾರನಾಗಿ ಮೆರೆಯಬಹುದಾಗಿತ್ತು ಎಂಬುದು ಕೆಲವರ ಭಾವನೆ. ಆದರೆ ಅದು ನಿಜವಲ್ಲ. ನನ್ನಲ್ಲಿರುವುದು ನನಗೆ ಸಾಲದು. ಕಾಲಿಗೆ ಬಂದರೆ ಕೈಗಿಲ್ಲ, ಕೈಗೆ ಬಂದರೆ ಕಾಲಿಗಿಲ್ಲ. ಆದರೂ, ಒಳಗೆ ಎಷ್ಟು ಕಷ್ಟವಿರಲಿ, ಹೊರಗೆ ನಗುಮುಖದಿಂದಿದ್ದು, ಒಟ್ಟಿನಲ್ಲಿ ದೇಹಿ ಎಂದು ಒಬ್ಬರನ್ನು ಯಾಚಿಸದೆ, ಕೊಟ್ಟು ಹೋಗು ಎಂದು ಒಬ್ಬನಿಂದ ಹೇಳಿಸಿಕೊಳ್ಳದೆ ಮಾನವಾಗಿ ಬಾಳುತ್ತಿದ್ದೇನೆ. ತೃಪ್ತಿಯುತವಾದ ಬಡತನದ ಬಾಳುವೆಯಿಂದ ದೊರೆಯುವ ಸುಖಶಾಂತಿಗಳು ಅತೃಪ್ತಿಕರವಾದ ಸಿರಿತನದ ಬಾಳುವೆಯಿಂದ ದೊರೆಯಲಾರವು. ನಮ್ಮ ಮಕ್ಕಳಲ್ಲಿ

CC-0. Jangamwadi Math Collection, Varanasi. An eGangotri Initiative

"ನಮಗಿಂತ ಧನಿಕರಿಲ್ಲ" ಎಂಬ ಅಹಂಭಾವನೆಯ ಬುದ್ಧಿಯನ್ನು ಬೆಳಸಿ ಅದರಿಂದ ಕೊನೆಗೆ ಅವರು ನಾವು ಮಾಡಿಟ್ಟ ಆಸ್ತಿಯನ್ನು ದುರ್ವ್ಯಯಮಾಡಲು ಅವಕಾಶ ವೀಯುವುದಕ್ಕೆ ಬದಲು ನಾವು ಇದ್ದಷ್ಟು ದಿನವೂ ಮಡದಿಮಕ್ಕಳಿಗೆ ಹೊಟ್ಟೆತುಂಬ ಊಟ, ಮೈತುಂಬ ಬಟ್ಟೆ ಹಾಕಿ ಮಾನವಂತರಾಗಿ ಬಾಳುವುದನ್ನು ಕಲಿಸಬೇಕು. ನಮ್ಮ ನಡೆ ನುಡಿ ಸಂಪಾದನೆ ಸಾಧನೆ ಎಲ್ಲವೂ ಮಕ್ಕಳಿಗೆ ಮೇಲ್ಪಂಕ್ತಿಯಾಗಿರಬೇಕು. ಅಷ್ಟಾದರೆ ಬದುಕಿದ್ದು ಸಾಕು! ಸಂಪಾದಿಸಿದ್ದು ಸಾರ್ಥಕ. ನಾವೂ ಧನ್ಯ ನಮ್ಮ ಮಕ್ಕಳೂ ಧನ್ಯ.

ಜಯಲಕ್ಷ್ಮಮ್ಮ.

---

CC-0. Jangamwadi Math Collection, Varanasi. An eGangotri Initiative

# ಪ್ಟೋಲೆಮಿಯ 'ಹಿಪ್ಪೊಕೂರ' (Hippokoura)

## (ತಿದ್ದುಪಡಿ)

[ಇದೇ ಪತ್ರಿಕೆಯ ಕಳೆದ (ವಿನಾಯಕನ) ಸಂಚಿಕೆಯಲ್ಲಿ ಪ್ರಕಟವಾದ ಈ ಲೇಖದ ೮೯ನೆಯ ಪುಟದಲ್ಲಿ—ಗ್ರೀಕಿನಲ್ಲಿ ದೊಡ್ಡಕ್ಕರಗಳಿಂದಲೇ ಆರಂಭಿಸಬೇಕಾದ ಅಂಕಿತನಾಮಗಳಲ್ಲಿ ಸ್ವರಾದಿಯಾದವುಗಳ ಆದ್ಯ ಸ್ವರಗಳು ಅಲ್ಪಪ್ರಾಣವಾಗಿರಲಿ ಅಥವಾ ಮಹಾಪ್ರಾಣವಾಗಿರಲಿ, ಅವಕ್ಕೆ ಮಾತ್ರ ಆಯಾ ಪ್ರಾಣಚಿಹ್ನೆಗಳು ಸರ್ವಥಾ ಹಚ್ಚಲ್ಪಡವು—ಎಂಬಲ್ಲಿ ಆ ಸ್ವರಾದಿಯಾದ ಅಂಕಿತನಾಮಗಳು ಆದ್ಯಂತವಾಗಿ ದೊಡ್ಡಕ್ಕರಗಳಿಂದಲೇ ಬರೆಯಲ್ಪಡುವಲ್ಲಿ ಮಾತ್ರ ಅನ್ವಯಿಸತಕ್ಕ ಆ ಚಿಹ್ನೆಗಳ ಪ್ರಯೋಗವನ್ನು ಹೇಳಿರುವೆನಲ್ಲದೆ, ಆದ್ಯಕ್ಷರವನ್ನು ಮಾತ್ರ ದೊಡ್ಡಕ್ಕರದಲ್ಲಿ ಬರೆದು ಮಿಕ್ಕವನ್ನು ಸಣ್ಣಕ್ಕರಗಳಲ್ಲಿ ಬರೆದ ಸ್ವರಾದಿಯಾದ ಅಂಕಿತನಾಮಗಳಿಗೆ ಅನ್ವಯಿಸತಕ್ಕ ಪ್ರಯೋಗಾಂತರವನ್ನು ಹೇಳಿಲ್ಲ. ಕೇವಲ ಅನವೇಕ್ಷೆಯಿಂದಾದ ಆ ಸ್ಖಲಿತದ ಬಗ್ಗೆ ವಾಚಕರ ಹಾಗೂ ಸಂಪಾದಕರ ಕ್ಷಮಾಪಣೆಯನ್ನು ಯಾಚಿಸಿ, ಆ ಲೇಖದಲ್ಲಿ ಅಲ್ಲಲ್ಲಿ ಸೇರಿಸಲೆಂದು ಕೆಲವು ಕುಂಟುಪಂಕ್ತಿಗಳನ್ನಷ್ಟೇ ಈ ತಿದ್ದುಪಡಿಯಲ್ಲಿ ಕೊಟ್ಟು ಆ ತಪ್ಪನ್ನು ನೇರ್ವಡಿಸಲಾಗದ ಕಾರಣ, ಆ ಲೇಖದ ೮೮ನೆಯ ಪುಟದ ೨೩ನೆಯ ಪಂಕ್ತಿಯಿಂದ ೯೦ನೆಯ ಪುಟದ ೧೯ನೆಯ ಪಂಕ್ತಿಯ ವರೆಗಣ ಅವೆರಡೂ ಅಧಿಕರಣಗಳನ್ನು ಸ್ಪಷ್ಟತರವಾಗಿ ಇಲ್ಲಿ ಮರಳಿ ಬರೆದಿರುತ್ತೇನೆ.]

---

(೫) ಇವೆಲ್ಲಕ್ಕೂ ಮೇಲಾಗಿ ಪ್ರಸ್ತುತ ವಿಚಾರಕ್ಕೆ ಬೇಕಾದ ಹ-ಕಾರದ ಮಹಾಪ್ರಾಣವು ಗ್ರೀಕ್ ಭಾಷೆಯಲ್ಲಿ ಉಚ್ಚಾರದಲ್ಲಿ ಮಾತ್ರ ಇತ್ತಲ್ಲದೆ, ಹ-ಕಾರಕ್ಕೆ ನಿಯತವಾದ ಪ್ರತ್ಯೇಕ ವರ್ಣವಿದ್ದಿಲ್ಲದುದರಿಂದ, ಆ ಮಹಾಪ್ರಾಣವನ್ನು (spiritus asper) ಹೊಂದಿದ ವರ್ಣಗಳ ತಲೆಗಡೆಯಲ್ಲಿ ಬಲಮುರಿಯಾಗಿ (') ಬರೆದ ಇಂಗ್ಲೀಷು ಅಲ್ಪವಿರಾಮದ (comma) ಚಿಹ್ನೆಯನ್ನು ಹಚ್ಚಿ ಅದನ್ನು ಸೂಚಿಸುತ್ತಿದ್ದರು. ಸ್ವರಾದಿಯಾದ ಗ್ರೀಕ್ ಶಬ್ದಗಳ ಆದ್ಯ ಸ್ವರಗಳು (vowels) ಮಹಾಪ್ರಾಣವೊ (ಅಂದರೆ ಹ-ಕಾರಯುಕ್ತವಾದ ವ್ಯಂಜನವೊ) ಅಥವಾ ಅಲ್ಪಪ್ರಾಣವೊ (ಅಂದರೆ ಹ-ಕಾರಯುಕ್ತವಾಗಿರದ ಕೇವಲ ಸ್ವರವೊ) ಎಂದು ಸೂಚಿಸಲೇಬೇಕಾದ ಕಾರಣ, ಉಚ್ಚಾರದಲ್ಲಿ ಮಹಾಪ್ರಾಣವಾದ ಆದ್ಯ ಸ್ವರಗಳಿಗೆ ಮಹಾಪ್ರಾಣದ ಸಂಜ್ಞೆಯನ್ನೂ ಅಲ್ಪಪ್ರಾಣವಾದ (spiritus lenis) ಆದ್ಯ ಸ್ವರಗಳಿಗೆ ಇಂಗ್ಲೀಷು ಅಲ್ಪವಿರಾಮದ ಚಿಹ್ನೆಯಂತಿರುವ (') ಅಲ್ಪಪ್ರಾಣದ ಸಂಜ್ಞೆಯನ್ನೂ ಹಚ್ಚಲೇಬೇಕು; ಉದಾ.—'ornis (ಉಚ್ಚಾರ ornis) = ಪಕ್ಷಿ (ಇಲ್ಲಿ ಆದ್ಯ o-ಕಾರವು

CC-0. Jangamwadi Math Collection, Varanasi. An eGangotri Initiative

ಅಲ್ಪಪ್ರಾಣ), 'ippos (ಉಚ್ಚಾರ hippos) = ಕುದುರೆ (ಇಲ್ಲಿ ಆದ್ಯ i-ಕಾರವು ಮಹಾಪ್ರಾಣ). ಈ ಚಿಹ್ನೆಗಳು ಹೀಗೆ ಈಷನ್ಮಾತ್ರವೇ ಭಿನ್ನವಾಗಿರುವುದರಿಂದ, ಅಲ್ಪಪ್ರಾಣದ ಚಿಹ್ನೆಯನ್ನು ಬಲಮುರಿಯಾಗಿ ಬರೆದರೆ ಮಹಾಪ್ರಾಣವೂ, ಮಹಾ ಪ್ರಾಣದ ಚಿಹ್ನೆಯನ್ನು ಎಡಮುರಿಯಾಗಿ ಬರೆದರೆ ಅಲ್ಪಪ್ರಾಣವೂ ಸುಲಭವಾಗಿ ಆಗುತ್ತದೆಂದು ಬೇರೆ ಹೇಳಬೇಕೆಂದಿಲ್ಲ.

ಇಂಗ್ಲೀಷಿನಲ್ಲಿರುವಂತೆ ಗ್ರೀಕ್ ವರ್ಣಮಾಲೆಯಲ್ಲಿಯೂ ದೊಡ್ಡಕ್ಷರಗಳೂ (capital letters) ಸಣ್ಣಕ್ಷರಗಳೂ (small letters) ಎಂದು ಎರಡು ಭೇದಗಳಿದ್ದು, ಇಂಗ್ಲೀಷಿನಂತೆಯೇ ಗ್ರೀಕಿನಲ್ಲಿಯೂ ಅಂಕಿತನಾಮಗಳು ದೊಡ್ಡಕ್ಷರಗಳಿಂದಲೇ ಆರಂಭಿಸಬೇಕು. ಇಂಗ್ಲೀಷಿನಲ್ಲಿ ಬರೆವಂತೆ ಆದ್ಯಕ್ಷರವನ್ನು ಮಾತ್ರ ದೊಡ್ಡಕ್ಷರ ದಲ್ಲಿ ಬರೆದು ಮಿಕ್ಕವನ್ನು ಸಣ್ಣಕ್ಷರಗಳಲ್ಲಿ ಬರೆದ ಸ್ವರಾದಿಯಾದ ಅಂಕಿತನಾಮಗಳ ಆದ್ಯಸ್ವರಗಳಿಗೆ ಹೇಗೂ ಆಯಾ ಪ್ರಾಣಚಿಹ್ನೆಯನ್ನು ಹಚ್ಚಬೇಕು; ಉದಾ.— 'Alexandros (ಉಚ್ಚಾರ Alexandros) = ಮಕೆದೋನ್ಯದ (Macedonia) ಅರಸ ನಾದ Alexander ; 'Ermaios (ಉಚ್ಚಾರ Hermaios) = ಬಾಹ್ಲಿಕ (Bactria) ದೇಶದ ಅರಸನಾದ Hermaios ;[1] 'Athenai (ಉಚ್ಚಾರ Athenai) = ಗ್ರೀಕ್ ದೇಶದ ರಾಜಧಾನಿಯಾದ Athens; 'Ellas (ಉಚ್ಚಾರ Hellas) = ಗ್ರೀಕ್ ದೇಶದ ಹಳೆಯ ಹೆಸರು, Hellas. ಆದರೆ ಗ್ರೀಕ್ ದೇವತೆಗಳ ಹಾಗೂ ಮಹಾಪುರುಷರ ಪ್ರತಿಮೆಗಳಲ್ಲಿಯೂ, ಗ್ರೀಕ್ ನಾಣ್ಯಗಳ ಒಕ್ಕಣೆಗಳಲ್ಲಿಯೂ, ಗ್ರೀಕ್ ಗ್ರಂಥಗಳ ಬಹಳ ಹಳೆಯ ಹಸ್ತಪ್ರತಿಗಳಲ್ಲಿಯೂ ಆದ್ಯಂತವಾಗಿ ದೊಡ್ಡಕ್ಷರಗಳಿಂದಲೇ ಬರೆಯ ಲ್ಪಡುವ ಅಂಕಿತನಾಮಗಳಲ್ಲಿ ಸ್ವರಾದಿಯಾದವುಗಳ ಆದ್ಯಸ್ವರಗಳಿಗೆ ಯಾವ ಪ್ರಾಣ ಚಿಹ್ನೆಯೂ ಹಚ್ಚಲ್ಪಡದು; ಉದಾ—ಮಕೆದೋನ್ಯದ ಅರಸನಾದ Alexander ನ ಪ್ರತಿಮೆಯಲ್ಲಿ[2] ALEXANDROS (ಉಚ್ಚಾರ Alexandros); ಬಾಹ್ಲಿಕ ದೇಶದ ಅರಸನಾದ Hermaiosನ ನಾಣ್ಯಗಳ ಮುಂಬದಿಯಲ್ಲಿ[3] ERMAIOU (ಉಚ್ಚಾರ Hermaiou). ಆದಕಾರಣ ಪ್ಟೋಲೆಮಿಯ ಗ್ರೀಕ್ ಭಾಷೆಯ ಮೂಲ

---

[1] ಈ ಗ್ರೀಕ್ ಹೆಸರನ್ನು ಇಂಗ್ಲೀಷಿನಲ್ಲಿ ಹೆಚ್ಚಾಗಿ ಅದರ ಲಾತೀನ್ (Latin) ರೂಪದಲ್ಲಿ Hermaeus ಎಂದು ಬರೆಯುತ್ತಾರೆ.

[2] Vincent Smith: *Early History of India* (1924), 114 ನೆಯ ಪುಟದ ಎದುರ್ಗಡೆಯ ಚಿತ್ರಪಟ.

[3] *Cambridge History of India*, Vol. I, ಪು. 591 ಮತ್ತು ಚಿತ್ರಪಟ VII, ನಂ 37. (Hermaiou ಎಂಬುದು ಆತನ Hermaios ಎಂಬ ಗ್ರೀಕ್ ಹೆಸರಿನ ಷಷ್ಠೀವಿಭಕ್ತಿಯ ಏಕವಚನ).

CC-0. Jangamwadi Math Collection, Varanasi. An eGangotri Initiative

ಗ್ರಂಥದಲ್ಲಿ Baleokouros ಎಂಬ ವಾಸಿಷ್ಠೀಪುತ್ರ ವಿಳಿವಾಯಕುರನ ರಾಜಧಾನಿಯ ಹೆಸರನ್ನು Hippokoura ಎಂದು ಓದಿದ ವಿದ್ವಾಂಸರು ಕಂಡಿರುವ ಅದರ ಹಸ್ತಪ್ರತಿಯಲ್ಲಿ ಆ ಹೆಸರು ಆದ್ಯಂತವಾಗಿ ದೊಡ್ಡಕ್ಕರಗಳಲ್ಲಿದ್ದರೆ ಅದು ಯಾವ ಪ್ರಾಣಚಿಹ್ನೆಯನ್ನೂ ಕೊಳ್ಳದೆ IPPOKOURA ಎಂದೂ ಅದರ ಆದ್ಯಕ್ಷರ ಮಾತ್ರ ದೊಡ್ಡಕ್ಕರವಾಗಿದ್ದು ಮಿಕ್ಕವು ಸಣ್ಣಕ್ಕರಗಳಾಗಿದ್ದರೆ ಅದು ಮಹಾಪ್ರಾಣಯುಕ್ತವಾದ I-ಕಾರಾದಿಯಾಗಿ 'Ippokoura ಎಂದೂ ಬರೆಯಲ್ಪಟ್ಟಿರಬೇಕಲ್ಲದೆ ಸರ್ವಥಾ Hippokoura ಎಂದಲ್ಲ.

ಈ ಮುಂದೆಯೇ ತಿಳಿಸಿಂತೆ, ಪ್ತೊಲೆಮಿಯ ಕಾಲದಲ್ಲಿ ಹಿಪ್ಪೊಕೂ(ಕು)ರ ಎಂಬ ಊರಿದ್ದ ಪ್ರದೇಶದ ನಾಡನುಡಿಯಾದ ಕನ್ನಡದಲ್ಲಿ ಹ-ಕಾರವು ಹೇಗೂ ಇದ್ದಿಲ್ಲವಷ್ಟೆ,[1] ಆಕಾರಣ ಸಂಸ್ಕೃತ ಹ-ಕಾರವನ್ನಾದರೂ ಆಗಣ ಆ ನಾಡವರು ಅಲ್ಪಪ್ರಾಣವಾಗಿ ತಾನೆ ಉಚ್ಚರಿಸುತ್ತಿರಬೇಕಾದುದರಿಂದ, ಆ ನಾಡನುಡಿಯಲ್ಲಿ ಆ ಊರಿನ ಹೆಸರು ಇಪ್ಪೊಕೂರ (ಇಪ್ಪೊಕುರ) ಎಂದೇ ಇದ್ದಿರಲೂ ಬೇಕು, ಆ ನಾಡವರಿಂದ ತಾನೆ ಆ ಊರಿನ ಹೆಸರನ್ನು ಅರಿತುಕೊಂಡು ಆತನಿಗೆ ಅರುಹಿರಬೇಕಾದ (ಆತನಿದ್ದ ಐಗುಪ್ತ ದೇಶದಿಂದ ಇಲ್ಲಿಗೆ ಬಂದು ಹೋಗುತ್ತಿದ್ದ) ಆ ಅಶಿಕ್ಷಿತರಾದ ನಾವಿಕರೂ ಪ್ರವಾಸಿಗಳೂ ಆ ಹೆಸರನ್ನು ಆತನಿಗೆ ಇಪ್ಪೊಕೂ(ಕು)ರ ('Ippokoura) ಎಂದೇ ಹೇಳಿರಲೂ ಬೇಕು. ಆದಕಾರಣ ಮೇಲೆ ಕಂಡಿರುವಂತೆ ಹ-ಕಾರದ ಮಟ್ಟಿಗೆ ಗ್ರೀಕ್ ಭಾಷೆಯಲ್ಲಿ ಅಷ್ಟು ಕೊರತೆ ಇರುವುದರಿಂದಲೂ, ಮೇಲಣ ಆಯಾ ಪ್ರಾಣಚಿಹ್ನೆಯನ್ನು ಹಿಂದುಮುಂದಾಗಿ ಬರೆದರೆ ಅಲ್ಪಪ್ರಾಣವಾದ

---

[1] ಡಾ|| ಎ. ಎನ್. ನರಸಿಂಹಯ್ಯನವರ '*History of p in Kanarese*' (Bulletin of the School of Oriental Studies, University of London, Vol. VIII, ಪು. 673—680).

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಸಿಸುವಿನಹಳ್ಳಿ ಎಂಬಲ್ಲಿಯ ಶಾ. ಶ. ೭೯೩ ಖರ ಸಂ| ಫಾಲ್ಗುಣ (ಶುದ್ಧ ಅಲ್ಲ) ಬಹುಳ ೧ ಬುಧವಾರ ಹಸ್ತಾ ನಕ್ಷತ್ರ ಚಂದ್ರಗ್ರಹಣ, ಅಂದರೆ ಕ್ರಿ. ಶ. 872 ಫೆಬ್ರವರಿ 26ನೆಯ ತಾರೀಕು ಮಂಗಳವಾರ ಹುಣ್ಣಿಮೆಯ ಚಂದ್ರಗ್ರಹಣದ ಮಾರನೆಯ ಫೆಬ್ರವರಿ 27ನೆಯ ತಾರೀಕು ಬುಧವಾರದಂದಿನ ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಆಳಿಕೆಯ (ಕ್ರಿ. ಶ. 814—877) ಶಿಲಾಲೇಖದಲ್ಲಿ (*Annual Report on South Indian Epigraphy*, 1929, Appendix E, ಪು. 57, ನಂ. 246), ಆ ಊರನ್ನು ಸಿಸುಳಹಾಟು ಎಂದಿರುವಲ್ಲಿಯ ಕನ್ನಡ ಹ-ಕಾರವೇ ನಾನು ಕಂಡಿರುವ ಮಟ್ಟಿಗೆ ಪೂರ್ವತಮವಾದ ಕನ್ನಡ ಹ-ಕಾರವೆಂದು ತೋರುತ್ತದೆ. ಆದರೆ ಅದೇ ನೃಪತುಂಗನ ಕವಿರಾಜಮಾರ್ಗದಲ್ಲಿಯೂ ಪಂಪನ (ಕ್ರಿ. ಶ. 942) ಭಾರತದಲ್ಲಿಯೂ ಕನ್ನಡ ಹ-ಕಾರವಿಲ್ಲ.

CC-0. Jangamwadi Math Collection, Varanasi. An eGangotri Initiative

ಆದ್ಯಸ್ವರವು ಮಹಾಪ್ರಾಣವೂ ಮಹಾಪ್ರಾಣವಾದ ಆದ್ಯಸ್ವರವು ಅಲ್ಪಪ್ರಾಣವೂ ಆಗುವುದರಿಂದಲೂ, ಗ್ರೀಕರ ಬಳಕೆಯಲ್ಲಿರುವ ಅಚ್ಚ ಗ್ರೀಕ್ ಹೆಸರುಗಳ ಮಟ್ಟಿಗೆ ಆ ಚಿಹ್ನೆಗಳು ಒಂದಕ್ಕೊಂದು ಎಡಹಿ ಬೀಳಲಾರವಾದರೂ, ಅವರಿಗೆ ನೂತನವೂ ತೀರ ಅಪರಿಚಿತವೂ ಆದ ಅನ್ಯದೇಶೀಯ ಹೆಸರುಗಳಲ್ಲಿ ಅವು ಸಾಹಜಿಕವಾಗಿ ಅಲ್ಲಲ್ಲಿ ತಪ್ಪಾಗಿ ಬರೆಯಲ್ಪಡಬಾರದೆಂದಿಲ್ಲ ಎಂಬುದರಿಂದಲೂ, ಭಾರತವರ್ಷದ ಸ್ಥಳನಾಮಗಳ ಶುದ್ಧರೂಪಗಳನ್ನು ನೇರಾಗಿ ಅರಿತಿಲ್ಲದ ಪ್ತೊಲೆಮಿಯಲ್ಲಿ ಹಿಮವತ್ ಪರ್ವತವನ್ನು Imaos (ಪು. 35; 342) ಹಾಗೂ ಭಾವನಗರದ ಒಳಿಯ ಈಗಣ ಹಾಥಬ (Hathab) ಎಂಬ ಹಳೆಯ ಹಸ್ತಕವಪ್ರ ಎಂಬ ಊರನ್ನು Astakapra (ಪು. 150) ಎಂದಿರುವಲ್ಲಿ ಪ್ರತ್ಯಕ್ಷತಃ ಮಹಾಪ್ರಾಣದ ಚಿಹ್ನೆಯನ್ನೇ ಹಚ್ಚಬೇಕಾದ ಆದ್ಯಕ್ಷರಗಳಿಗೆ ಅಲ್ಪ ಪ್ರಾಣದ ಚಿಹ್ನೆಯನ್ನು ತಪ್ಪಾಗಿ ಹಚ್ಚಿರುವಂತೆ, Ippokoura ಎಂಬುದರ ಆದ್ಯಸ್ವರಕ್ಕೆ ಅಲ್ಪಪ್ರಾಣದ ಚಿಹ್ನೆಯನ್ನು ('Ippokoura) ಹಚ್ಚಬೇಕಾದಲ್ಲಿ ಎಡಹಿ ಮಹಾಪ್ರಾಣದ ಚಿಹ್ನೆಯನ್ನು ('Ippokoura) ಹಚ್ಚಿರಬೇಕೆಂದು ಸಹೇತುಕವಾಗಿ ನಿಶ್ಚಯಿಸಬಹುದು. ಅತಏವ ಪ್ತೊಲೆಮಿಯ ಗ್ರಂಥದಲ್ಲ ಹಿಪ್ಪೊಕೂರ ಎಂದು ಓದಿರುವ ಪಾಠವನ್ನು ಒತ್ತಟ್ಟಿಗಿಟ್ಟು, ಅದರ ನ್ಯಾಯ್ಯವಾದ ಪಾಠವೆನಿಸುವ ಇಪ್ಪೊಕೂ(ಕು)ರ ಎಂಬುದನ್ನೇ ಕೈಕೊಂಡು, ಪ್ತೊಲೆಮಿಯಲ್ಲಿ ಆ ಊರಿನೊಂದಿಗೆ ಹೇಳಿರುವ ಮಿಕ್ಕ ಊರುಗಳನ್ನು ಗುರುತಿಸಲಾಗುತ್ತದೊ ಎಂದು ಶೋಧಿಸಿ ಅವುಗಳ ಒಳಿಯಲ್ಲಿ ಅಥವಾ ಸಾಕಷ್ಟು ದೂರವಾದರೂ ಇಪ್ಪೊಕೂ(ಕು)ರ ಎಂಬ ಹೆಸರಿಗೆ ಸರಿಹೋಗತಕ್ಕ ಊರು ಇದೆಯೊ ಎಂದು ಗೊತ್ತುಹಚ್ಚಲಿಕ್ಕೆ ಪ್ರಯತ್ನಿಸಬೇಕು.

ಗೋವಿಂದ ಪೈ.

CC-0. Jangamwadi Math Collection, Varanasi. An eGangotri Initiative

# ವರ ಪರೀಕ್ಷೆ

(ಒಂದು ಸಾಮಾಜಿಕ ಪ್ರಹಸನ)

ಬರೆದವರು

**ನಾ. ಕಸ್ತೂರಿ, ಎಂ.ಎ., ಬಿ.ಎಲ್.**

ಮಹಾರಾಜರವರ ಕಾಲೇಜು, ಮೈಸೂರು

ಈ ನಾಟಕವನ್ನು ಮೊದಲು ಮಹಾರಾಜರವರ ಕಾಲೇಜಿನಲ್ಲೂ ಅನಂತರ
ಶಿವಮೊಗ್ಗ ಕರ್ಣಾಟಕ ಸಂಘದಲ್ಲೂ ಅಭಿನಯಿಸಿದೆ

೧೯೪೧

CC-0. Jangamwadi Math Collection, Varanasi. An eGangotri Initiative

# ಪಾತ್ರವಿವರ

೧. ಸಂಜಪ್ಪ .... ಮುದ್ದೂರು ಲೇಟ್ ಶ್ರೀ ಓವರ್ಸಿ ತಾಯಮ್ಮನವರ ಪತಿ

೨. ಶ್ರೀಕಂಠಯ್ಯ .... ಅದೇ ಊರಿನ ಒಂದು ಮನೆಯ ಅಳಿಯ ; ಸಂಜಪ್ಪ ನವರ ಸ್ನೇಹಿತ

೩. ಜೋಯಿಸರು .... ಊರಿನ ಶುಭಾಶುಭಕ್ಕೆಲ್ಲ ಏಕಮಾತ್ರಪುರೋಹಿತರು

೪. ಅಣ್ಣಯ್ಯ .... ಸಂಜಪ್ಪನವರ ತಮ್ಮನ ಮಗ; ಮದುವೆಯಾಗಿ ಮುದ್ದೂರಿಗೆ ಬಂದಿರುವ ಯುವಕ

೫. ಗುಂಡ .... ಸಂಜಪ್ಪನವರ ಮಗ, ವರ

೬. ಶಿರಸ್ತೆ ರಂಗಮ್ಮನವರು .... ವಧುವಿನ ತಾಯಿ

೭. ಕಪನೀಪತಯ್ಯ .... ಅವರ ಸಹಧರ್ಮಿಣಿ

೮. ನಾಗರತ್ನ .... ವಧು

೯. ರಾಮು ....
೧೦. ಸೋಮು ....
} ಮದುವೆಯಾಗಿ ಮಾವನಮನೆ ಸೇರಿಕೊಂಡಿರುವ ಇಬ್ಬರು ಯುವಕರು ; ವರನ ಗೆಳೆಯರು

೧೧. ಸೀತಾಪತಿ .... "ಮಹಸೀಯ ಸೇವಾಸಮಾಜ"ದ ಕಾರ್ಯದರ್ಶಿ ; ಸತಿಯೇ ತೊರೆದಿರುವ ಸುಮಂಗಳ.

೧೨. ನಾರಾಯಣ .... ಅಡಿಗೆ ಆಚಾರರ ಅಣ್ಣ

೧೩. ಶಿವರಾಮು .... ಜೋಯಿಸರ ಕುಲದೀಪ

ಇನ್ನೂ ಹಲಕೆಲವರು

---

## ಪಾತ್ರ ವಹಿಸಿದವರ ವಿವರ

ಸಂಜಪ್ಪ .... ನಾ. ಕಸ್ತೂರಿ, ಎಂ.ಎ., ಬಿ.ಎಲ್.

ಶ್ರೀಕಂಠಯ್ಯ .... ಎ. ಸಿ. ನಾರಾಯಣಮೂರ್ತಿ, ಬಿ.ಎ., ಬಿ.ಟಿ.

ಜೋಯಿಸರು .... ಬಿ. ಹರಿನಾರಾಯಣ, ಬಿ.ಎ.

ಅಣ್ಣಯ್ಯ .... ಎಸ್. ಮುರುಘೇಂದ್ರಸ್ವಾಮಿ, ಎಂ.ಎ.

ಗುಂಡ .... ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.

ಶಿರಸ್ತೆ ರಂಗಮ್ಮನವರು .... ಸಿ. ಬಿ. ಜಯರಾವ್, ಬಿ.ಎ., ಬಿ.ಟಿ.

ಕಪನೀಪತಯ್ಯ .... ಎಚ್. ಕೆ. ರಾಜಾರಾವ್, ಎಂ.ಎ.

ನಾಗರತ್ನ .... ಎಂ. ವಿ. ರಾಜಗೋಪಾಲ್, ಬಿ.ಎ. (ಆನರ್ಸ್)

ಸೀತಾಪತಿ .... ಎಲ್. ಕರಿಯಪ್ಪಗೌಡ, ಬಿ.ಎ.

ನಾರಾಯಣ .... ಎಸ್. ವಿ. ಕೃಷ್ಣಮೂರ್ತಿ, ಬಿ.ಎಸ್‌ಸಿ., ಎಲ್‌ಎಲ್.ಬಿ.

CC-0. Jangamwadi Math Collection, Varanasi. An eGangotri Initiative

# ವರ ಪರೀಕ್ಷೆ

## ದೃಶ್ಯ ೧

ಮುದ್ದೂರಿನ ಒಂದು ಬೀದಿ; ಸಂಜೆ ೬-೩೦ ಗಂಟೆ

(ನಂಜಪ್ಪನವರೂ ಶ್ರೀಕಂಠಯ್ಯನವರೂ ಮಾತನಾಡುತ್ತಿರುವರು; ಶ್ರೀಕಂಠಯ್ಯನವರ ಕೈಯಲ್ಲಿ ಎರಡು ಹಾರಗಳು, ಎರಡು ತೆಂಗಿನಕಾಯಿ, ವೀಳ್ಯದೆಲೆ.)

ನಂಜಪ್ಪ (ವ್ಯಸನದಿಂದ)—ನನ್ನ ಹೊಟ್ಟೆ ಉರಿಸಬೇಕು ಅಂತ ಎಲ್ಲಾ ದಾರೀನೂ ಬಿಟ್ಟು ಮನೆಮುಂದಿನ ದಾರಿಯಲ್ಲೇ ಬರುತ್ತಾ ಇದಿಯಲ್ಲಾ, ಶ್ರೀಕಂಠಯ್ಯ! ಹೂವು ಕಾಯಿ ಕಂಡರೆ ನನಗೆ ಕರುಳು ಕಿವುಚಿದಹಾಗಾಗುವುದಿಲ್ಲವೆ? ನಿನಗೆ ಗೊತ್ತಿಲ್ಲವೆ? . . . ಅಯ್ಯೋ, ನನ್ನ ದುರಾದೃಷ್ಟಕ್ಕೆ ಯಾರು ಪರಿಹಾರ ಹೇಳುತ್ತಾರೆ? ದೇವಲೋಕವೇ ಕಿವುಡುಹಿಡಿದು ಕೂತಿರುವಾಗ. . . .

ಶ್ರೀಕಂಠಯ್ಯ—ಅಲ್ಲಾ, ನಂಜಪ್ಪನವರೇ! ತಿಮ್ಮಪ್ಪಯ್ಯನ ಮಗನ ಮದುವೆಗೆ ನಾನು ಹೋದದ್ದೇ ತಪ್ಪೇ? ಅಲ್ಲಿಂದ ಇದನ್ನೆಲ್ಲಾ ತಂದದ್ದೇ ತಪ್ಪೇ?

ನಂಜಪ್ಪ—ಹಾಗೆಂದನೆ ನಾನು? ಮದುವೆ ಮನೆ ಅಂದಾಗ ನನ್ನ ಮನೆ ಮೂಲೆಯಲ್ಲಿ ಒಂದು ಕೂಸು ಕೊರಗುತ್ತಿದೆಯಲ್ಲಾ, ಅದರ ನೆನಪು ಬಂತು, ಅಷ್ಟೆ . . . ಅದರ ಗತಿಯೇನು, ಹೇಳು . . . ಕದನ್ನವೇ? ಕಾವಿ ಬಟ್ಟೆಯೇ? ಕಾರಂಜಿ ಕೆರೆಯೇ? . . .

ಶ್ರೀಕಂಠಯ್ಯ—ಬಿಡ್ತು ಅನ್ನಿ, ನಂಜಪ್ಪನವರೇ! ಅವನ ವಿಷಯದಲ್ಲಿ ಅಮಂಗಳ ನುಡಿಯಬೇಡಿ.

ನಂಜಪ್ಪ—ಮತ್ತೆ ನಾನೇನು ನುಡಿಯಲಿ? ವಿಘ್ನೇಶ್ವರನ ಮದುವೇಗೇನೆ ನೂರೆಂಟು ವಿಘ್ನ ಬಂತು ಅಂತಾರಲ್ಲ, ಹಾಗೆಯೇ ಕಲ್ಲುಗುಂಡಿನ ಹಾಗಿರೋ ನಮ್ಮ ಗುಂಡನನ್ನೇ, "ಕಪ್ಪಗಿದಾನೆ, ಬೇಡ," "ಕುಳ್ಳಗಿದಾನೆ, ಒಲ್ಲೆ," ಅಂತ ಈ ಹಾಳು ವಧುಗಳೆಲ್ಲರೂ . . . .

ಶ್ರೀಕಂಠಯ್ಯ—ನಂಜಪ್ಪನವರೇ! ತಮಗೆ ಗೊತ್ತಿಲ್ಲದೆ ಏನು? ಗಂಡು ಅಂತ ಹುಟ್ಟಿಸಿದ ದೇವರು ಅದಕ್ಕಾಗಿ ಹೆಣ್ಣು ಅಂತ ಮತ್ತೊಂದನ್ನ ಸೃಷ್ಟಿ ಮಾಡೇ ಇರುತ್ತಾನೆ . . . "ತ್ವಂ ಕುಮಾರ, ಉತವಾ ಕುಮಾರಿ" ಅಂತ ಹೇಳೋದಿಲ್ಲವೆ? ಆಕೆ ಎಲ್ಲಿದಾಳೆ ಅಂತ ಪತ್ತೆಯಾಗದೆ ತಡಕಾಡುತ್ತಿದೀರಿ, ಅಷ್ಟೆ.

CC-0. Jangamwadi Math Collection, Varanasi. An eGangotri Initiative

ಇಂದಲ್ಲ ನಾಳೆ ಬಂದೇ ಬರುತ್ತಾಳೆ, ಆತುರ ಏಸು? ಗುಂಡನಿಗೆ ವಯಸ್ಸೆಷ್ಟು ಮಹಾ?

ನಂಜಪ್ಪ—ಪೂರ್ವದಿಂದಲೂ ನನ್ನ ಮೇಲೆ ವಿಶ್ವಾಸವಿರುವವನಾದ್ದರಿಂದ ನಿನಗೆ ಮಾತ್ರ ಹೇಳುತ್ತೇನೆ . . . ಹೊರಗೆ ಬಿಡಬೇಡ . . . (ಹತ್ತಿರಹೋಗಿ) ಚೈತ್ರಬಹುಳ ತದಿಗೆಗೆ . . . ಹಾಳಿಪ್ಪತ್ತು ತುಂಬಿತು.

ಶ್ರೀಕಂಠಯ್ಯ (ಬೆಚ್ಚಿಬಿದ್ದು)—ತ್ಸು . . . ತ್ಸು . . . ತ್ಸು, "ಹದಿನೆಂಟಕ್ಕೆ ಹಳೇಗಂಡು" ಅಂತ ಗಾದೆ ಇದೆಯಲ್ಲಾ, ಸ್ವಾಮಿ! ಬಹಿಷ್ಕಾರ ಹಾಕಿ ಬಿಡುತ್ತಾರಲ್ಲಾ ಊರಿನವರೆಲ್ಲ ಸೇರಿ. . .

ನಂಜಪ್ಪ (ರೇಗಿ)—ಊರಿನವರಿಗೆ ಹೆದರಿಕೊಂಡು ಹೆತ್ತ ಮಗನನ್ನ ಯಾವಳೋ ಲಂಕಿಣಿಗೆ ಲಗ್ನಮಾಡಿಬಿಡೋದೇ? ಅಲ್ಲ ಕಣಯ್ಯ! ನಾನೂ ಊರು ಕೇರಿ ತಿರುಗಿ ಯಾರು ಯಾರನ್ನೋ ಕಾಲುಕಟ್ಟಿದೆ. . , .

ಶ್ರೀಕಂಠಯ್ಯ—ಮೊನ್ನೆ ಚಿತ್ರದುರ್ಗದಿಂದ ಯಾರೋ ಬಂದಿರಲಿಲ್ಲವೆ?

ನಂಜಪ್ಪ—ಅಯ್ಯೋ! ನನ್ನನ್ನ ಕೆರಳಿಸಬೇಡ ನೀನು! ಅಂಥಾದ್ದು ಇದುವರೆಗೆ ನೂರೆಂಟಾಯಿತು. . . . ಚಿತ್ರದುರ್ಗ ಚಿಂತಾಮಣಿ ಚೀಮನಹಳ್ಳಿ . . . . ಆ ಹೆಣ್ಣುಮಕ್ಕಳಿಗೂ ಅವರ ತಾಯಂದಿರಿಗೂ ಜೊತೆಗೆ ಬರುವ ಇತರೇ ಜನಕ್ಕೂ ರೆಯಿಲು ಛಾರ್ಜು, ಕೇಸರಿಭಾತ್, ಕಾಬೂಲ್ ದ್ರಾಕ್ಷಿ . . . . ಕೊಟ್ಟು ಕೊಟ್ಟು ಅಂಗಡಿ ಸಾಲೆಲ್ಲ ಸಾಲ. . . .

ಶ್ರೀಕಂಠಯ್ಯ—ಇನ್ನು ಮೇಲೆ ಫೋಟೋ ಕಳುಹಿಸಿದರೆ ಸಾಕು, ಸಂಜಪ್ಪನವರೇ! ತಿಮ್ಮಪ್ಪಯ್ಯನ ಹೆಂಡತಿ ಹಾಗೆಯೇ ಮಾಡಿದರಂತೆ. . . .

ನಂಜಪ್ಪ—ಅದಕ್ಕೇ ಅವರು ಅನುಭವಿಸಿದ್ದು; ನೀನು ಕೇಳಿಲ್ಲವೇನು? ವಧೂಪೂಜೆ ಮೆರವಣಿಗೆ ಹೇಗೋ ನಡೆಯಿತು. ಆ ಮೇಲೆ, ಬೆಳಗಾಗುವ ಮೊದಲೇ ಅಳಿಯನ ಕುರುಡು ತಿಳಿದೇಬಿಟ್ಟಿತು. ಒಕ್ಕಣ್ಣಿನವನು ಬೇಡ ಅಂತ ಹುಡುಗೀನೂ ಬೀಗರೂ ರೆಯಿಲು ಸ್ಟೇಷನಿಗೆ ಹೊರಟೇಬಿಟ್ಟರು. ಠಣ್ ಠಣ್ ಅಂತ ಐನೂರೆಣಿಸಿದ ಮೇಲೆ ಹಿಂದಕ್ಕೆ ಬಂದರು!

ಶ್ರೀಕಂಠಯ್ಯ—ಹಾಗೋ ಸಮಾಚಾರ? ಫೋಟೋ ತೆಗೆದನಲ್ಲಾ, ರಾಮಶೇಷು ಅವನು ನನಗೆ ಹೇಳಿದ. . . .

ನಂಜಪ್ಪ—ಆ ರಾಮಶೇಷು ಹತ್ತಿರ ಹೋಗಿ 'ತಿದ್ದು' 'ತಿದ್ದು' ಅಂತ ಗೋಗರೆಯುವುದು ಯಾಕೆ? ಆ ಮೇಲೆ ಪೇಚಾಡುವುದು ಯಾಕೆ? . . . . ಇಲ್ಲಿ ನೋಡು, ಶ್ರೀಕಂಠಯ್ಯ! ನೀನೇನೋ ಪುಣ್ಯವಂತ; ಒಂದೇ ಒಂದು

CC-0. Jangamwadi Math Collection, Varanasi. An eGangotri Initiative

ಗಂಡುಮಗು . . . . ನಮ್ಮ ಮನೆಯಲ್ಲಿ ಮೂರನೆಯವನಿಗೇನೇ ಅವರು ಸಾಕಪ್ಪ ಅಂತ ಹೆಸರಿಟ್ಟರು; ದೇವರೊಪ್ಪಲಿಲ್ಲ. ನಾಲ್ಕಾಯಿತು, ಐದಾಯಿತು, ಆರಾಯಿತು. ಏಳನೆಯವನೇ ಗುಂಡ! ಹೆಣ್ಣು ಹಡೆದವರ ಮನೆ ತಣ್ಣಗೆ, ಗಂಡು ಹಡೆದವರ ಮನೆ ಸುಣ್ಣಗೆ, ಅಂತಾರಲ್ಲಾ, ಹಾಗಾಯಿತು ನನಗೆ. ಮಿಕ್ಕವರನ್ನು ಕೊಡು ವುದಕ್ಕೆ ಇಷ್ಟು ಕಷ್ಟಪಡಲಿಲ್ಲ ನಾವು. ಅವರು ಬೇರೆ ಇದ್ದರು ಆಗ. . . . ಏನುಮಾಡುವುದು ಹೇಳು? (ಅಳುವನ್ನು ತಡೆದು) ಕೆಸರಿನಲ್ಲಿ ಕೈ ಬಿಟ್ಟುಬಿಟ್ಟರು ಅವರು. . . . ಒಬ್ಬಂಟಿಗ ನಾನು. . . . ಒಬ್ಬರಹತ್ತಿರ ಮುಖ ಎತ್ತಿ ಮಾತನಾಡಿ ಕೂಡ ಅಭ್ಯಾಸವಿಲ್ಲ ನನಗೆ. . . .

ಶ್ರೀಕಂಠಯ್ಯ—ಸುಧಾರಿಸಿಕೊಳ್ಳಿ, ಸಂಜಪ್ಪನವರೇ! ನೀವು ಹೀಗೆ ತಳಮಳಿಸಿ ಬಿಟ್ಟರೆ ನಿಮ್ಮ ಮಗು ಗತಿ ಏನು? ಗುಂಡನಿಗೆ ಧೈರ್ಯ ಹೇಳಿ. . . . ಎಲ್ಲಕ್ಕೂ ಕಾಲ ಒದಗಬೇಕು. . . . ನೀವು ತಾನೇ ಏನುಮಾಡುತ್ತೀರಿ, ಪಾಪ. . . . ಹೇರನೊಪ್ಪಿಸಿದ ಮೇಲೆ ಸುಂಕ ಬೇರೆ ಕೇಳುತ್ತಿದ್ದಾರೆ ಈಗ . . . . ವಧೂ ದಕ್ಷಿಣೆ ಕನ್ಯೋಪಚಾರ ಅಂತ ಬಾಯಿತುಂಬ ಕೇಳಿಬಿಡುತ್ತಾರಲ್ಲಾ! ನಾಚಿಕೆ ಇಲ್ಲದೆ. . . .

ನಂಜಪ್ಪ—ಹೌದು, ಶ್ರೀಕಂಠಯ್ಯ! ಆದರೆ ಈಚೆಗೆ ನಾನೂ ಕೂಡ ಆ ಬಾಬಿನಲ್ಲಿ ಕಡಿಮೆ ಏನೂ ಹೇಳುತ್ತಿಲ್ಲ . . . . ಕೈತುಂಬ ಕೊಡುವುದಕ್ಕೆ ಸಿದ್ಧನಾಗಿದೇನೆ . . . . ಒಬ್ಬಿಬ್ಬರು ಎಂಟುನೂರಕ್ಕೇ ಒಪ್ಪಿದ್ದರು . . . . ಹೇಳುತ್ತೇನೆ ಕೇಳು! ಈ ಊರಲ್ಲಿ ಕರಟಕರಿಗೂ ದಮನಕರಿಗೂ ಏನೂ ಕಡಿಮೆ ಇಲ್ಲ. . . . ಯಾವನಾದರೂ ಒಬ್ಬ ನಾರದ ಹೋಗಿ ಅವರ ಕಿವಿಗೆ ಚಾಡಿ ತುಂಬಿಸುವುದು, ಅವರು "ಹುಡುಗನನ್ನ ಒಂದು ಕಣ್ಣು ನೋಡಿ ಮುಂದಿನ ಮಾತು" ಅಂತ ರಾಗ ಎಳೆಯು ವುದು, ಹೀಗಾಗಿ ಬಿಟ್ಟಿದೆ. . . . ಸರಿ. . . . ಇನ್ನೇನು? ಆ ಪುಣ್ಯಾತಿಗಿತ್ತಿ ಬಂದರೆ ಈ ಶುಂಠನನ್ನ ಎದುರಿಗೆ ನಿಲ್ಲಿಸದೆ ವಿಧಿಯೇ ಇಲ್ಲ. . . .

ಶ್ರೀಕಂಠಯ್ಯ (ಕನಿಕರದಿಂದ)—ಪಾಪ! ಪಾಪ! . . . . ಹಾಗನ್ನಬೇಡಿ. . . . ನಿಮ್ಮ ಗುಂಡ ಹೀಗಾದದ್ದು ಕೇವಲ ಈಚೀಚೆಗೆ. . . .

ನಂಜಪ್ಪ—ನಿನಗೆ ಗೊತ್ತಿಲ್ಲವೆ? ಮೊನ್ನೆ ಮೊನ್ನೆವರೆಗೂ ಅವನನ್ನ ಎಲ್ಲರೂ ಮುದ್ದುಗುಂಡೂ ಅಂತ ಕರೆಯುತ್ತಿದ್ದರು. . . . ಏನು ಮಾಡುವುದು? ಅವನ ಮೇಡಂಗಳು ಎಲ್ಲರೂ ಸೇರಿಕೊಂಡು ತೇಜೋವಧೆ ಮಾಡಿ ಮಾಡಿ ಅವನನ್ನ ಈ ರೂಪಕ್ಕಿಳಿಸಿದರು. . . . ಅದೂ ಅಲ್ಲದೆ, ಪಾಪ, ಅವನ ಜೊತೆ ಹುಡುಗ ರೆಲ್ಲರಿಗೂ ಆಗಲೇ ಮದುವೆಯಾಗಿಬಿಟ್ಟಿದೆ. ಕೆಲವಂತೂ ಈ ಊರಲ್ಲೇ ಇವೆ.

7

CC-0. Jangamwadi Math Collection, Varanasi. An eGangotri Initiative

ನೀರು ತರುವುದಕ್ಕೆ ಬಾವಿ ಹತ್ತಿರ ಹೋದಾಗ ಅವು ಇವನನ್ನ ಹಾಸ್ಯ ಮಾಡುತ್ತವೆ. ಯಜಮಾನಗಿತ್ತಿಯರ ಸಂಗಡ ವಾಕಿಂಗ್ ಹೋಗುವಾಗ ಗುಂಡನನ್ನ ಕಂಡರೆ ಜಂಬದಿಂದ ಉತ್ತರೀಯದ ಮರೆಯಲ್ಲೇ ನಗುತ್ತವೆ. . . . ಕೊರಗಿ ಕೊರಗಿ ಹುಡುಗ ಹೇಗಾಗಿ ಬಿಟ್ಟಿದಾನೆ ಅಂತೀಯಾ? ಅಯ್ಯೋ, ಯಾವ ಗಳಿಗೆಯಲ್ಲಿ ಏನುಮಾಡಿ ಬಿಡುತ್ತಾನೋ ಅಂತ. . . . ನಾನು. . . . ಮೊನ್ನೆ. . . . ಹಿತ್ತಲ ಬಾವಿ ಮುಚ್ಚಿಸಿದೆ (ಉಕ್ಕಿ ಬರುವ ಅಳುವನ್ನು ತಡೆಯುವರು).

ಶ್ರೀಕಂಠಯ್ಯ—ಯೋಚಿಸಬೇಡಿ, ಸಂಜಪ್ಪನವರೇ! ತಿಮ್ಮಪ್ಪಯ್ಯನ ಶುಕ್ರಾಚಾರಿಗಿಂತ ನಿಮ್ಮ ಗುಂಡ ಎಷ್ಟೋ ವಾಸಿ. . . .

ನಂಜಪ್ಪ—ಅಲ್ಲ ಕಣಯ್ಯ! ನೀನೂ ನಾನೂ ನಡುರಸ್ತೆಯಲ್ಲಿ ನಿಂತು ಗುಂಡನ ಗುಣಗಾನ ಮಾಡಿದರೆ ಏನಾಯಿತು? ಮಾರುದ್ದ ಮಾತಾಡಿದರೆ ಮದುವೆ ಆಗುತ್ತದೆಯೇ? ಹೆಣ್ಣು ಹೆತ್ತವರು ಅಂತ ಹೆಮ್ಮೆ ಪಡುತ್ತಾರಲ್ಲಾ ಪುಣ್ಯಾತ್ಮರು ಅವರಲ್ಲೊಬ್ಬರ ಮನಸ್ಸಿಗೆ ಅಂಟಿದರೆ ತಾನೆ? . . . . (ವ್ಯಸನದಿಂದ) ಅಥವಾ ಅವರನ್ನು ಬೈದೇನು ಫಲ? ಮುಖ್ಯ ನನ್ನ ಪಾಪಶೇಷ. . . . ಹೇಳಿಕೊಳ್ಳುವುದಕ್ಕೆ ನಾಚಿಕೆ ಏನು? ಹೊಟ್ಟೆತುಂಬ ಅನ್ನ, ಕಣ್ಣುತುಂಬ ನಿದ್ದೆ ಕಂಡು ಆರು ತಿಂಗಳಾಯಿತು. . . .

ಶ್ರೀಕಂಠಯ್ಯ—ಸಂದೇಹವೇನು? ಪುಟ್ಟಶೀನು ಪಾಡೇನು, ಅವನನ್ನ ಎಲ್ಲಿಗೆ ಸೇರಿಸುವುದು ಅಂತ ನನಗೆ ಆಗಲೇ ಯೋಚನೆ ಹತ್ತಿದೆ. . . .

ನಂಜಪ್ಪ—ಚೆನ್ನಾಗಿ ಹೇಳಿದೆ! ಆನೆ ಹತ್ತಿರ ಆಡು ಹೋಗಿ ಕಾಲೂದಿಕೊಂಡಿದೆ ಅಂತ ಕಷ್ಟ ಹೇಳಿಕೊಂಡಿತಂತೆ! ಹಾಗಾಯಿತು ನಿನ್ನ ಮಾತು. ಪುಟ್ಟಶೀನುವಿಗಿನ್ನೂ ಒಂಬತ್ತು ತುಂಬಿಲ್ಲ. . . . ಅವರು ಬೇರೆ ಇದಾರೆ ರಾಣಿಯ ಹಾಗೆ ಮನೆಯಲ್ಲಿ . . . . ನಿನಗೇನಯ್ಯ ಕೇಡು?

ಶ್ರೀಕಂಠಯ್ಯ (ಥಟಕ್ಕನೆ)—ಓ! ಮರೆತೇ ನಂಜಪ್ಪನವರೇ! ಅವರಿಗೆ ಬಂದ ಹೂವು ಕಾಯಿ ನನ್ನ ಕೈಗೆ ಕೊಟ್ಟುಬಿಟ್ಟು ಅವರಿನ್ನೆಲ್ಲಿಗೋ ಹೊರಟರು. . . . ಇಷ್ಟುಹೊತ್ತಿಗೆ ಮನೆಗೆ ಬಂದಿರುತ್ತಾರೆ (ಹೊರಡುವನು. . . .)

ನಂಜಪ್ಪ (ಕೈ ಹಿಡಿದು ನಿಲ್ಲಿಸಿ)—ಹೊರಟುಬಿಡಪ್ಪ, ಅದಕ್ಕೇನು? ಆದರೆ, ಒಂದೇ ಒಂದು ಪ್ರಶ್ನೆ . . . ನಿನ್ನನ್ನೂ ಕೇಳಿಬಿಡುತ್ತೇನೆ . . . ಕೆಂಗಾರೆಯುವರಂತಲ್ಲಾ . . . ಶಿರಸ್ತೆ ರಂಗಮ್ಮನವರು ಅಂತ . . . ಕೇಳಿದ್ದಿಯಾ ನೀನು? . . . ಯಾರು? . . ಎತ್ತ? . . . ಎಂಥ ಜನ ಅಂತ . . . ನಿನ್ನ ಹಳ್ಳೀನೂ ಕೆಂಗಾರೆ ಹತ್ತಿರ ಅಲ್ಲವೆ?

CC-0. Jangamwadi Math Collection, Varanasi. An eGangotri Initiative

ಶ್ರೀಕಂಠಯ್ಯ—ಅವರ ಮಗಳ ಜಾತಕ ಅನುಕೂಲವಾಗುತ್ತದೆಯೇ ?

ನಂಜಪ್ಪ—ಅನುಕೂಲವಾಗದೆ ಏನಯ್ಯಾ ? ನವಗ್ರಹಗಳೂ ನಮ್ಮ ಜೋಯಿಸರ ಹಿಡಿತದಲ್ಲಿರುವಾಗ ಯಾವುದಾದರೂ ಒಂದು ಗ್ರಹ ಈ ಕಡೆ ನೋಡುತ್ತಿದ್ದರೆ ಆ ಕಡೆಗೆ ತಿರುಗಿಸಿದರಾಯಿತು! ಆದಕ್ಕಲ್ಲ . . . ಅವರ ಮಗಳು ಬರುತ್ತಾರೆ ನಾಳೆ ಸಾಯಂಕಾಲ, ಗಂಡು ನೋಡುವುದಕ್ಕೆ. . . .

ಶ್ರೀಕಂಠಯ್ಯ—ಶಿರಸ್ತೆಗಿರಸ್ತೆ ಅಂದರೆ ನನಗೆಲ್ಲಿ ತಿಳಿಯುತ್ತೆ, ನಂಜಪ್ಪನವರೇ ? ಇವರ ಮನೆ ಸೇರಿದ ಮೇಲೆ (ಅಳುತ್ತಾ) ಒಂದುಸಲವಾದರೂ ಹಳ್ಳಿಗೆ ಕಳುಹಿಸಿಯೇ ಇಲ್ಲವಲ್ಲಾ . . . ಅಯ್ಯೋ ! . . . ಗಿಣಿಹಾಗೆ ಸಾಕಿದರು ನನ್ನನ್ನ. . . .

ನಂಜಪ್ಪ—ಚಿಂತೆ ಇಲ್ಲ, ಬಿಡು ! ನಿನಗೆ ಗೊತ್ತಿರಬಹುದು ಅಂತ ವಿಚಾರಿಸಿದೆ. ಯಾವತ್ತಿನ ಹಾಗೆ ಈ ಹೊತ್ತೂ ಆಗದೆ ಗುಂಡನ ತಾರಾಬಲ ಚೆನ್ನಾಗಿದ್ದು ಈಕೆ ಅವನನ್ನ ಪಾಣಿಗ್ರಹಣಮಾಡಲೊಪ್ಪಿದರೆ, ಅವನಿಗೆ ಅನ್ನೋದಕ ಸಿಕ್ಕಿತು, ನನ್ನ ತಾಪತ್ರಯವೂ ತೀರಿತು. ಕಡೇ ವರದಾನ ಮಾಡಿಬಿಟ್ಟು ಇನ್ನು ಜನ್ಮ ಜನ್ಮಕ್ಕೂ ಕುಮಾರಸಂಭವವೇ ಬೇಡಪ್ಪ ಅಂತ ಚಾಮುಂಡೇಶ್ವರಿಯನ್ನ ಬೇಡಿಕೊಳ್ಳುತ್ತೇನೆ! . . . ಹಾಗಾಗದೆ ಈಕೆಯೂ ಕೂಡ ಇವನ ಮೂತಿ ನೋಡಿ ಮುಖ ಸೊಟ್ಟುಮಾಡಿಕೊಂಡಳೋ, ನೀನೂ ಒಬ್ಬ ಆಂಜನೇಯ, ಅಂತ ಗುಂಡನಿಗೆ ಹೇಳಿಬಿಡುತ್ತೇನೆ. . . .

ಶ್ರೀಕಂಠಯ್ಯ—ಹಾಗೆಲ್ಲ ಬೈಯಬೇಡಿ, ನಂಜಪ್ಪನವರೇ! ಎಂಥದ್ದಾದರೇನು? ಹೆತ್ತವರಿಗೆ ಮುದ್ದಲ್ಲವೆ? ಅಕೋ, ಕಛೇರಿ ಬಾಗಿಲಲ್ಲಿ ಘಂಟಾಘೋಷ! ಏಳು ಹೊಡೆಯುತ್ತಾ ಇದಾನೆ! ಏಳನೆಯ ಮಗ! ಹಿರಿಯರ ಆಶೀರ್ವಾದದಿಂದ ಅವನೂ ಎದ್ದುಬಿಡುತ್ತಾನೆ ಅಂತ ಸೂಚನೆ . . . ಅಕೋ ನೋಡಿ . . . ಜೋಯಿಸರು ಬೇರೆ ಬರುತ್ತಾ ಇದಾರೆ . . . ನನಗೆ ಹೊತ್ತಾಯಿತು . . . ನಾನು ಹೊರಡುತ್ತೇನೆ (ಹೊರಡುವನು).

(ಜೋಯಿಸರ ಪ್ರವೇಶ)

ನಂಜಪ್ಪ—ನಮಸ್ಕಾರ, ಜೋಯಿಸರೇ ! . . .

ಜೋಯಿಸರು (ಅವಸರವವಸರವಾಗಿ ಮುಂದೆ ನಡೆಯುತ್ತಾ)—ನನ್ನನ್ನ ನಿಲ್ಲಿಸಬೇಡ ಈಗ ! ಆ ಮೇಲೆ ಬೇಕಾದರೆ ಮನೆಗೆ ಬರುತ್ತೇನೆ. . . .

ನಂಜಪ್ಪ (ತಡೆದು)—ಎಲ್ಲಿಗೆ, ಜೋಯಿಸರೆ, ಇಷ್ಟು ಭರಾಟೆಯಿಂದ ? ಕೊಂಚ ತಾಳಬಾರದೆ ?

CC-0. Jangamwadi Math Collection, Varanasi. An eGangotri Initiative

ಜೋಯಿಸರು—ಎಲ್ಲಿಗೂ ಇಲ್ಲ ಕಣಯ್ಯ, ತಿಮ್ಮಪ್ಪಯ್ಯನ ಮನೆಗೆ, ಬೀಗರೇನೋ ಮತ್ತೆ ಮುನಿಸಿಕೊಂಡು ಹೊರಟುಹೋಗಿದಾರಂತೆ. ವಸಿಷ್ಠದರ್ಶನ ಮಾಡಿಸಿಬಿಡು ಅಂತ ಶಿವರಾಮುವನ್ನ ಕಳುಹಿಸಿದ್ದೆ . . ಅಷ್ಟರಲ್ಲೇ ಏನೋ ಅವಾಂತರ !

ನಂಜಪ್ಪ—ಇನ್ನೂ ಒಂದಿಷ್ಟು ರೊಕ್ಕ ಕೀಳುವುದಕ್ಕೆ ಮಾರ್ಗವೋ ಏನೋ?

ಜೋಯಿಸರು—ಹುಡುಗನನ್ನ ನಡೆಸಿಕೊಂಡು ಸಪ್ತಪದಿ ಸುತ್ತಾಯಿತಲ್ಲಾ ಹೆಣ್ಣು ! ಇನ್ನು ಭಯವಿಲ್ಲ . . . ಅಲ್ಲಾ, ನಂಜಪ್ಪನವರೇ ! ಇಷ್ಟು ಗಲಾಟೆಗೂ ಕಾರಣವೇನು ಗೊತ್ತೆ ?

ನಂಜಪ್ಪ—ನನಗೆ ಹೇಗೆ ಗೊತ್ತಾಗಬೇಕು ?

ಜೋಯಿಸರು—ಚಿಳ್ಳೆಪಿಳ್ಳೆ ಎಲ್ಲಾ ಸೇರಿಕೊಂಡು ಹೆಂಡತಿ ಹೆಸರು ಹೇಳೋ ಅಂತ ಹುಡುಗನನ್ನ ಅಡ್ಡಕಟ್ಟಿದರಂತೆ. ಅವನೇನು ಅಂಥ ಹೆಣ್ಣುಬೀರನಲ್ಲ; ಹೊಸದು; ಲಜ್ಜೆ. . . .

ನಂಜಪ್ಪ—ಪಾಪ !

ಜೋಯಿಸರು—ನೀನೇನೋ ಪಾಪ ಅಂತೀಯಾ ! ಆದರೆ, ಸೊಸೆಗೆ ರೇಗಿಬಿಟ್ಟಿತು. ತನ್ನ ಹೆಸರನ್ನ ಹೇಳಲೇ ಇಲ್ಲ ಅಂತ ಅದನ್ನೇ ನೆಪಮಾಡಿಕೊಂಡು ಹೊರಟೇ ಹೋದಳಂತೆ ಬೀಗರನ್ನಿಳಿಸಿದ್ದ ಮನೆಗೆ. . . . ನಾನು ಬರುತ್ತೇನೆ, ನಂಜಪ್ಪ. . . .

ನಂಜಪ್ಪ—ನಿಮ್ಮನ್ನ ಒಂದು ಸಮಾಚಾರ ವಿಚಾರಿಸಬೇಕಾಗಿತ್ತು. . . .

ಜೋಯಿಸರು (ಹೊರಡುತ್ತಾ)—ಈಗಾಗೋದಿಲ್ಲಪ್ಪ . . . . ಬೇಗ ಬಂದುಬಿಡುತ್ತೇನೆ. . . . ಇನ್ನೇನೂ ಇಲ್ಲ. . . . "ಪರಹಸ್ತಗತಂ ಸುತಂ". "ಅವರ ಪದಾರ್ಥ ಅವರ ಹತ್ತಿರವಿರಲಿ, ಹುಡುಗನನ್ನ ಕರೆದುಕೊಂಡು ಹೋಗಿ ಅಲ್ಲೇ ಬಿಟ್ಟು ಬಂದುಬಿಡು" ಅಂತ ತಿಮ್ಮಪ್ಪಯ್ಯನಿಗೆ ಹೇಳುವುದು; ಬರುವುದು; ಅಷ್ಟೇ ಕೆಲಸ. . . .

ನಂಜಪ್ಪ (ಅಡ್ಡನಿಂತು)—ಒಂದೇ ಒಂದು ನಿಮಿಷ. . . . ಹೆಚ್ಚು ನಿಲ್ಲಿಸುವುದಿಲ್ಲ. . . .

ಜೋಯಿಸರು (ಸೋತು)—ಏನಪ್ಪಾ ಅದು ? ಹೇಳು. . . . ಬೇಗ ಹೇಳು. . . .

ನಂಜಪ್ಪ—ನಾಳೆ ಗಂಡನನ್ನ ನೋಡುವುದಕ್ಕೆ ಒಬ್ಬರು ಬರುತ್ತಾರೆ. . . .

ಜೋಯಿಸರು (ತಾತ್ಸಾರದಿಂದ)—ಬರುತ್ತಾರೆ. . . . ಅವರಿಗೇನು ? ನೀನು ಕಾಸುಕೊಟ್ಟು ಕರೆಸಿದರೆ ಬರದೆ ಇರುತ್ತಾರೆಯೇ ? . . . .

CC-0. Jangamwadi Math Collection, Varanasi. An eGangotri Initiative

ನಂಜಪ್ಪ—ಇಲ್ಲಿ ಕೇಳಿ ಜೋಯಿಸರೇ! ಶಿರಸ್ತೆ ರಂಗಮ್ಮನವರು ಅಂತ ಅವರ ಹೆಸರು. . . . ಕೆಂಗಾರೆಯವರು. . . . ಅವರ ವಿಷಯ ಏನಾದರೂ. . . .

ಜೋಯಿಸರು—ಯಾರಾದರೇನಪ್ಪ! ನಿನ್ನ ಮಗನ ಪ್ರಾಪ್ತ ಹೇಗಿದೆಯೋ? . . . ನಂಜಪ್ಪ, ಬೆಳಗ್ಗೆ ಅವನನ್ನ ಮನೆಗೆ ಕಳುಹಿಸು. ಅಥವಾ, ನೀನೇ ಬಾ! ಒಂದಿಷ್ಟು ನಾದು ಕೊಡುತ್ತೇನೆ. . . . ಗುಂಡನ ಹಣೆಗೆ ಒಂದು ಬೊಟ್ಟು ಹಾಕಿರು. . . . ಹಣ್ಣೋ ಕಾಯೋ ಅಂತ ಆಮೇಲೆ ಹೇಳಿ ಕಳುಹಿಸು. . . . (ಹೊರಡುವರು).

ನಂಜಪ್ಪ (ಹೊರಡುತ್ತಾ ಸ್ವಗತಂ)—ಜಗದಂಬಿಕೆ! ನೀನೇ ಕಾಪಾಡಬೇಕು. . . .

(ತೆರೆ)

---

## ದೃಶ್ಯ ೨

### ನಂಜಪ್ಪನವರ ಮನೆ, ಮರುದಿನ ಸಂಜೆ ೬-೩೦ ಗಂಟೆ

(ಬಲಗಡೆ ಒಂದು ಮೇಜು; ಅದಕ್ಕೆ ಅಂದವಾದ ಹೊದಿಕೆ; ಹೂವಿನ ಜಾಡಿ; ಅದರ ಮೇಲೆ ಹಲ ಕೆಲವು ಬೆಳ್ಳಿ ಬಟ್ಟಲುಗಳು, ಮೇಜಿನ ಪಕ್ಕದಲ್ಲಿ ಎರಡು ಕುರ್ಚಿಗಳು. ಒಂದು ಚಿಕ್ಕ ಬೆಂಚು. ಅಣ್ಣಯ್ಯ ಪ್ರವೇಶಿಸಿ ಛತ್ರಿಯನ್ನು ಮೂಲೆಗೊರಗಿಸುವಾಗ, ನಂಜಪ್ಪ ನವರು ಬಗ್ಗಿ ಜಮಖಾನೆಯನ್ನು ಎಳೆದು ಸರಿಪಡಿಸುವಾಗ, ತೆರೆ.)

ನಂಜಪ್ಪ—ಏನಾದರೂ ಒಂದು ಪಾತ್ರೆ ಪದಾರ್ಥ ಸರ್‍ರಂತ ತರಬೇಕಾಯಿತು, ಗಂಡಸರಿಗೆ ಒಂದಿಷ್ಟು ಗಂಧಾಕ್ಷತೆ ಕೊಡಬೇಕಾಯಿತು, ಯಾರೂ ಇಲ್ಲವಲ್ಲಾ ಅಂತ ನಿನ್ನನ್ನ ಕರೆಸಿದೆ, ಅಷ್ಟೆ! ಅವರು ಊರಲ್ಲಿದಾರೇನು?

ಅಣ್ಣಯ್ಯ—ಇದ್ದಿದ್ದರೆ ಹೊಸಲು ದಾಟುವುದಕ್ಕಾಗುತ್ತಿತ್ತೆ, ಚಿಕ್ಕಪ್ಪ?

ನಂಜಪ್ಪ—ನ್ಯಾಯ, ನ್ಯಾಯ! ಅಂತು ಬಂದೆಯಲ್ಲಾ, ಅದೇ ನನಗೆ ಸಂತೋಷ . . . ಅಣ್ಣಯ್ಯ! ಈಗ ಬರುವವರು ಇದ್ದದ್ದರಲ್ಲಿ ದೊಡ್ಡಮನು ಷ್ಯರು ಅಂತ ಕಾಣುತ್ತದೆ . . . ನಿನ್ನ ಮದುವೆಯಲ್ಲಿ ಬಂತಲ್ಲಾ . . . ಆ ಜರೀ ಅಂಗವಸ್ತ್ರ . . . ಅದನ್ನ ಸುತ್ತಿಕೊಂಡು ಬರಬಾರದಾಗಿತ್ತೆ ಕೊರಳಿಗೆ? . . .

ಅಣ್ಣಯ್ಯ (ನಾಚಿಕೆಯನ್ನು ಸೂಚಿಸಿ)—ಹೇಳಲೇಬೇಕೆ ನಾನು ಸಂಸಾರದ ಗುಟ್ಟನ್ನ? ಅವರ ಜೊತೆಯಲ್ಲಿ ಯಾರಮನೆಗಾದರೂ ಹೋದರೆ ಮಾತ್ರ ಹೊರಗೆ ತೆಗಿಯುವುದಂತೆ ಅದನ್ನ!

ನಂಜಪ್ಪ—ಹಾಗಾದರೆ ಬಿಡಪ್ಪ! ಅಂತು ಕೈ ಹಿಡಿದವಳು ಗೀಚಿದ ಗೆರೆಯಿಂದ ಆಚೆ ಈಚೆ ಕದಲದೆ ಒಳ್ಳೇ ಗರತರಾಗಿ ಬಾಳಿರಪ್ಪ, ಅದೇ ಭೂಷಣ! ಶ್ರೇಯ ಸ್ಸಿಗೂ ಪ್ರೇಯಸ್ಸಿಗೂ ಅದೊಂದೇ ಉಪಾಯ. . . . ಒಳಗೆ ಹೋಗಿ ಎಲೆ

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamwadi Math, VARANASI.
CC-0. Jangamwadi Math Collection, Varanasi. An eGangotri Initiative

ಅಡಿಕೆ ಹೂವು ಹಣ್ಣು ಎಲ್ಲಾ ತೆಗೆದಿಡು . . . ಆ ಗುಂಡಸಿಗೆ ಅಂಗಾರ ಸಿಂಗಾರ ಮಾಡಿ ತಲೆಗಿಲೆ ಬಾಚಿ. . . .

(ಗುಂಡನ ಪ್ರವೇಶ)

ಇಕೋ ಅವನೇ ಬಂದ . . . ಯಾಕೋ ? ಅವನಿನ್ನೂ ಆ ಧರ್ಮಾವರದ ಕೋಟನ್ನ ಹೊಲೆದುತರಲಿಲ್ಲವೆ? ಅವನಿಗೇನು ದರದು ? ನೀನು ಹೋಗಿ ಅವನ ಅಂಗಡಿ ಬಾಗಲಲ್ಲಿ ಸತ್ಯಾಗ್ರಹ ಮಾಡಿ ತರಬೇಕಾಯಿತು . . . ನಿನಗೂ ಬೇಜಾರಾಗಿ ಹೋಗಿದೆ. ಪಾಪ! . . . ಆದರೂ, ನೋಡು, ಅಣ್ಣಯ್ಯ ! ಅವನೋ ಅವನ ಲಕ್ಷಣವೋ ? ಅವರು ಇವತ್ತು ನಿನ್ನನ್ನು ಹಳ್ಳಿ ಗುಗ್ಗು ಅಂತ ಹಾಸ್ಯಮಾಡಿ. . . .

ಗುಂಡ (ಗೊಣಗುತ್ತಾ)—ಹೌದಣ್ಣ, ನಾನು ಗುಗ್ಗೂನೇ! ಅಲ್ಲ ಅಂದವರು ಯಾರು? ನಾನು ಹೀಗೆಯೇ ಇರುತ್ತೇನೆ . . . ನನ್ನನ್ನು ಯಾರೂ ಮದುವೆ ಮಾಡಿಕೊಳ್ಳಬೇಕಾಗಿಲ್ಲ. . . .

ಅಣ್ಣಯ್ಯ (ಗುಂಡನ ತಲೆಯನ್ನು ಮೆಲ್ಲನೆ ಸವರುತ್ತಾ)—ಹಾಗೆ ಹೇಳಬಾರದು, ಗುಂಡಾ! ನಿನ್ನ ಕ್ಷೇಮಕ್ಕೆ ಏನುಬೇಕು, ಏನುಬೇಡ, ಅಂಬೋದು ನಿನಗಿಂತ ಚೆನ್ನಾಗಿ ನಿನ್ನ ತಂದೆಗೆ ಗೊತ್ತಿದೆ, ನೀನು ಸುಮ್ಮನಿರು. . .

ಗುಂಡ (ದೂರ ಸರಿಯುತ್ತಾ)—ನೀನು ವಕೀಲಿ ವಹಿಸಿಕೊಂಡು ಬರಬೇಡ (ಕೊಡವುತ್ತಾ) ಹೋಗು !

ನಂಜಪ್ಪ—ಕೈ ಬೀಸಿಕೊಂಡು ರೇಗಾಡುವುದು ನೋಡು ! ಗಂಡಂತೆ ಗಂಡು ! ಮಾನ ಮರ್ಯಾದೆ ಲಜ್ಜೆ ಲಾವಣ್ಯ ಎಳ್ಳಷ್ಟೂ ಇಲ್ಲ. . . .

ಗುಂಡ (ರೇಗಿ)—ಇವತ್ತು ನಾನು ಹೊರಕ್ಕೆ ಬರುವುದೇ ಇಲ್ಲ. . . . ನನ್ನನ್ನ ಯಾರೂ ಒಪ್ಪಬೇಕಾಗಿಲ್ಲ. . . . (ಕ್ರಾಪನ್ನು ಕೆದರಿಕೊಳ್ಳುತ್ತಾ) ನಾನು ಗುಗ್ಗೂನೆ! ಕಾಡು ಕಪೀನೆ!

ನಂಜಪ್ಪ (ಅವನ ಕಡೆಗೆ ನುಗ್ಗಿ)—ಗಂಟಲು ನೋಡು, ಅವನ ಗಂಟಲನ್ನ ! ಒಳ್ಳೇ ಗೋವರ್ಧನದ ಹಾಗೆ! . . . (ಕಣ್ಣು ರುಳಿಸುತ್ತಾ) ಆಯಿತೋ ನಿನ್ನ ಆರ್ಭಟ? ಎಂಥೆಂಥ ಋಷಿಪತ್ನಿಗಳು ಬರೆದಿಟ್ಟ ಧರ್ಮಶಾಸ್ತ್ರಗಳನ್ನೆಲ್ಲಾ ಜಟಕಾಯಿಸಿಬಿಟ್ಟೆ ಯಲ್ಲಾ ಒಂದೇ ಮಾತಿನಲ್ಲಿ? ಮದುವೇನೆ ಬೇಡವಂತೆ ಮ್ಲೇಚ್ಛನಿಗೆ! ಮುಚ್ಚೋ!

ಅಣ್ಣಯ್ಯ—ಗಂಡಸು ತಿರುಗಿ ಕೆಟ್ಟ, ಹೆಂಗಸು ಕುಳಿತು ಕೆಟ್ಟಳು ಅಂತಾರಲ್ಲಾ, ಹಾಗೆ, ನೀನು ಇದುವರೆಗೂ ಇವನಿಗೆ ಕೊಂಚ ಸ್ವಾತಂತ್ರ್ಯ ಕೊಟ್ಟದ್ದೇ ತಪ್ಪಾ ಯಿತು, ಚಿಕ್ಕಪ್ಪ ! (ಒಳಗೆ ಹೋಗಿ ಹಣ್ಣಿನ ತಟ್ಟೆಯನ್ನು ತಂದು ಮೇಜಿನಮೇಲಿಡುವನು.)

CC-0. Jangamwadi Math Collection, Varanasi. An eGangotri Initiative

ನಂಜಪ್ಪ—ಏನೋ, ತಾಯಿ ಇಲ್ಲದ ಮಗು ಅಂತ. . . . ಲೋ! ಗುಂಡಾ! ಬಾರೋ ಇಲ್ಲಿ! ಜಾಣ. . . . ನೋಡು ಹೋದಸಲ ಮಾಡಿದ ಹಾಗೆ ಕಾಫಿ ಬಟ್ಟಲು ಕೆಡವ ಬೇಡಪ್ಪ. . . . ಪುಟ್ಟಪುಟ್ಟ ಹೆಜ್ಜೆ ಹಾಕಿಕೊಂಡು ಬಂದು ಮೆಲ್ಲಗೆ ಮೇಜಿನ ಮೇಲೆ ತಂದಿರಿಸಿಬಿಡು. . . . ನೋಡು. . . . ಕಣ್ಣುಹಿಸುಕ ಬಾರದು. . . . ಅಳುಮೋರೆ ಇರಕೂಡದು. . . . ಉಂಗುಷ್ಠದಿಂದ ನೆಲಕೆರೆಯ ಬಾರದು. . . . ಹೋಗು! ತಲೆ ಬಾಚಿಕೊ. . . . ಅವರೇನಾದರೂ ಇವತ್ತು ಹುಂ ಅಂದರೆ, ಮದುವೆಗೆ ಮುಂಚೆ ನಿನಗೆ. . . .

ಗುಂಡ (ಮೋರೆ ತಿರುಗಿಸುತ್ತ)—ಹೋಗಣ್ಣ! ಹಾಗೆಲ್ಲ ಮಾತನಾಡಬೇಡ ನನ್ನ ಹತ್ತಿರ. . . .

ನಂಜಪ್ಪ (ಮುದ್ದಾಗಿ)—ಕೇಳೋ ಇಲ್ಲಿ! ಮದುವೆಗೆ ಮುಂಚೆ ನಿನಗೆ ಒಂದು ಸೈಗಲ್ ಕೋಟು, ಅಶೋಕ್ ಕುಮಾರ್ ಷರ್ಟು. . . . ಓ! ಮರೆತೇ ಬಿಟ್ಟೆಯಾ? ಈ ಸಾರಿ ನಿನ್ನ ನೋಟುಪುಸ್ತಕ ತೋರಿಸಕೂಡದು, ಶಂಕರು ಪುಸ್ತಕ ತೋರಿಸೋಣ ಅಂದೆನಲ್ಲಾ, ಅವನ ಹತ್ತಿರ ಹೋಗಿ ತಂದೆಯಾ, ಗುಂಡಾ!

ಗುಂಡ—ಅವನೇನೋ ಬೈದ ಅಣ್ಣ. . . .

ನಂಜಪ್ಪ—ಬೈದರೆ ಬೈಯಲಿ! ಅಂತು ಕೊಟ್ಟನೋ ಕೊನೆಗೆ?

ಗುಂಡ—ಒಂದು ಇಂಗ್ಲೀಷು, ಒಂದು ಕನ್ನಡ, ಒಂದು ಹಿಂದಿ, ಮೂರು ಕೊಟ್ಟ. . . .

ನಂಜಪ್ಪ (ಗುಂಡನ ತಲೆ ಸವರುತ್ತಾ)—ಏನೋ ಅಪ್ಪ! ಅವನ ಹಸ್ತಗುಣದಿಂದ ಲಾದರೂ ರಂಗಮ್ಮನವರ ಮಗಳು ನಿನ್ನನ್ನ ಒಪ್ಪುತ್ತಾಳೋ ನೋಡೋಣ. . . .

ಗುಂಡ—ಒಪ್ಪದೆ ಇದ್ದರೆ ನಷ್ಟವೇನು? ಜೀತಮಾಡುವುದೇ ತಪ್ಪುತ್ತೆ. . . .

ನಂಜಪ್ಪ (ರೇಗಿ)—ತೆಗಿದೆನಲ್ಲಾ ಮತ್ತೆ ತುಂಟತನಾನ? ಹೆಂಗಸರನ್ನ ಗೌರವಿಸ ಬೇಕು, ಗೃಹಸ್ಥಾಶ್ರಮದ ವಿಷಯ ಲಘುವಾಗಿ ಮಾತನಾಡಬಾರದು ಅಂತ ಇನ್ನೂ ತಿಳಿದುಕೊಂಡಿಲ್ಲವಲ್ಲಾ, ಈ ಗಯ್ಯಾಳಿ! ಲೋ! ಒಳಗೆ ಹೋಗಿ ಜೋಯಿಸರು ಕೊಟ್ಟ ಸಾದು ತೆಗಿದು ಹಣೆಗಿಟ್ಟುಕೊ, ಕೊಂಚ. . . .

ಗುಂಡ (ಎದರುಬೀಳುತ್ತಾ)—ಈ ಸಾರಿ ನಾಸು ಯಾವುದನ್ನೂ ಹಣೆಗೆ ಹೊಸ ದಾಗಿ ಬಳಿಯುವುದಿಲ್ಲಣ್ಣ! ಅಲ್ಲಿ ಬರೆದಿರುವಂತೆಯೇ ಆಗಲಿ. . . .

ನಂಜಪ್ಪ (ಕೋಪದಿಂದ)—ಹೋಗೋ, ಮುಟ್ಠಾಳ! ಹೇಳಿದ ಹಾಗೆ ಕೇಳು ವುದಕ್ಕೆ ಕಲಿತುಕೊ! ಆಗ ನಿನ್ನ ಗುಣಕ್ಕಾದರೂ ಮೆಚ್ಚಿ ಯಾರಾದರೂ ಮದುವೆಮಾಡಿಕೊಂಡಾರು. . . .

CC-0. Jangamwadi Math Collection, Varanasi. An eGangotri Initiative

ಗುಂಡ—ಈ ಸಾದು, ಈ ಮೋಸ, ಈ ತಂತ್ರ, ಇವೆಲ್ಲಾ ಯಾಕಣ್ಣಾ ಸುಮ್ಮನೆ?

ನಂಜಪ್ಪ—ಲೋ, ಗುಂಡಾ! ನಿನ್ನ ಕೆಲಸ ನೀನು ಮಾಡು. ಉಪ್ಪು ತಿಂದವರು ನೀರು ಕುಡಿಯುತ್ತಾರೆ . . . ನಿನ್ನ ಸರ್ಟಿಫಿಕೆಟುಗಳು, ಕಸೂತಿ ಸಾಮಾನುಗಳು, ಗಾಜಿನಕೋಳವೆ ತೋರಣಗಳು, ಎಲ್ಲಾನೂ ತೆಗೆದಿಡು . . . ಇದನ್ನೆಲ್ಲಾ ಸಲಸಲಕ್ಕೂ ನಾನೇ ಜ್ಞಾಪಿಸಬೇಕೆ? 'ನಾವೇ ಬೊಗಳಬೇಕಾದರೆ ನಾಯಿ ಸಾಕುವುದೇಕೆ?' ಅಂತಾರಲ್ಲಾ ಹಾಗಾಯಿತು. ಇವೆಲ್ಲ ರೂಢಿ ಆಗಿಲ್ಲವೇನೋ ನಿನಗಿನ್ನೂ?

ಅಣ್ಣಯ್ಯ (ವೀಳ್ಯದೆಲೆ ಅಡಿಕೆಗಳನ್ನು ಬೆಳ್ಳಿತಟ್ಟೆಯಲ್ಲಿರಿಸುತ್ತಾ)—ಅವೆಲ್ಲ ಹಾಗೆಯೇ ಇವೆ, ಚಿಕ್ಕಪ್ಪ . . . ಹೋದಸಾರಿ ಹೊರಕ್ಕೆ ತೆಗೆದದ್ದನ್ನ ಇನ್ನೂ ಪೆಟ್ಟಿಗೆಯಲ್ಲಿಟ್ಟಿಲ್ಲ. . .

ನಂಜಪ್ಪ—ಸರಿ! ಇನ್ನೇನು? . . . ಹಾರ್ಮೋನಿಯಂ! . . . ನೋಡೋಣ. ಅದನ್ನ ಅವರು ಕೇಳದೆ ಇರುವ ಹಾಗೆ ಉಪಾಯ ಹೂಡುತ್ತೇನೆ. . .

ಗುಂಡ—ನೀನು ಕರೆದಾಗ ನಾನು ಯಾವ ಬಾಗಿಲಿಂದ ಬರಲಣ್ಣಾ?

ನಂಜಪ್ಪ—ಹಾಗೆ! ತಿಳಿಯದೆ ಇದ್ದದ್ದನ್ನ ಕೇಳಿ ತಿಳಿದುಕೊಂಡರೆ ಅವಮಾನವೇನು? ನೋಡು, ಅವರಿಬ್ಬರನ್ನೂ ಅಲ್ಲಿ . . . ಕುರ್ಚಿಮೇಲೆ ಕೂರಿಸಿರುತ್ತೇನೆ. ಗಂಡಸರು ಬೆಂಚಿನ ಮೇಲೆ ಕೂತುಕೊಳ್ಳುತ್ತಾರೋ ಅಥವಾ ನಿಂತೇ ಇರುತ್ತಾರೋ, ಹೇಳುವುದಕ್ಕಾಗುವುದಿಲ್ಲ. . . . ನೋಡೋ ಇಲ್ಲಿ . . . ನೀನು ಹಾಗೆ ಬಂದು. . .

ಗುಂಡ—ಕಾಫಿ ಬಟ್ಟಲು ಬೇಡಣ್ಣಾ, ಕೈ ನಡುಗುತ್ತೆ. . .

ನಂಜಪ್ಪ—ಬೇಡ . . . ಅಣ್ಣಯ್ಯನೇ ತರುತ್ತಾನೆ . . . ನನಗೂ ಅನುಕೂಲವೇ . . . ಬೆಳ್ಳಿಬಟ್ಟಲು ಜಜ್ಜಿಹೋದರೆ ಅನಂತಯ್ಯಂಗಾರಿ ರಿಪೇರಿ ಮಾಡಿದರೊಪ್ಪುವುದಿಲ್ಲ . . . ಹೊಸದೇ ಬೇಕು ಅಂತ ಹಠ ಹಿಡಿಯುತ್ತಾನೆ. . . ನೋಡು! ನಾನು ಇಲ್ಲಿ ನಿಂತಿರುತ್ತೇನೆ . . . ನೀನು ಹಾಗೆ ಬಂದು ಸರಕ್ಕನೆ ನನ್ನ ಪಕ್ಕಕ್ಕೆ ಸೇರಿಬಿಡು . . . ಧೈರ್ಯವಾಗಿರು . . . ಯಾಕೆ? . . . ಏನು? . . . ತಲೆಕಡಿದು ಹಾಕುತ್ತಾರೇನು? . . . ಹೋಗು, ನನ್ನ ಚಿನ್ನ . . . ಒಳಗೆ ಕಾಫಿ ಇದೆ . . . ಒಂದು ಬಟ್ಟಲು ಬಸಿದುಕೊಂಡು ಕುಡಿ . . . ಈಸಿಚೇರ್ ಮೇಲೆ ವಿಶ್ರಮಿಸಿಕೊಂಡಿರು . . . ಬೀಸಣಿಗೆ ಅಲ್ಲೇ ಇದೆ. . .

(ಹೊರಗಡೆ ಹಾರ್ನ್ ಶಬ್ದ! ಗುಂಡ ಥಟಕ್ಕನೆ ಮಾಯವಾಗುವನು. ನಂಜಪ್ಪನವರೂ ಅಣ್ಣಯ್ಯನೂ ಛಂಗೆಂದು ನೆಗೆದು ಅಂಗಿ ಅಂಗವಸ್ತ್ರ ರುಮಾಲು ಸರಿಪಡಿಸಿಕೊಂಡು ಹೊರಕ್ಕೆ

CC-0. Jangamwadi Math Collection, Varanasi. An eGangotri Initiative

ಹಾಯುವರು. . . . ತಕ್ಷಣವೇ ಇಬ್ಬರೂ ನಗುತ್ತಾ ಒಳಕ್ಕೆ ಪ್ರವೇಶಿಸುವರು.) ಹೆಂಡದ ಲಾರಿಗೆ ಇಷ್ಟೊಂದು ಗಡಿಬಿಡಿ ಮಾಡಿದೆಯಲ್ಲಾ, ಅಣ್ಣಯ್ಯ! ಅಷ್ಟು ಗೊತ್ತಾಗುವುದಿಲ್ಲವೇ ?

ಅಣ್ಣಯ್ಯ—ಚೆನ್ನಾಯಿತು! ನೀನಲ್ಲವೆ, ಚಿಕ್ಕಪ್ಪ, ಮೊದಲು ಮುಂದಕ್ಕೆ ಹಾರಿದ್ದು? ನಾನೇನು ನಿನ್ನ ಹಿಂದೆ ಬಂದೆ ಅಷ್ಟೆ. . .

(ಪುನಃ ಹಾರ್ನ್ ಶಬ್ದ . . . ಇಬ್ಬರೂ ಹಿಂದಿನಂತೆಯೇ ಹೊರಕ್ಕೆ ಹಾರುವರು; ಅರ್ಧ ನಿಮಿಷ ಕಳೆದ ಮೇಲೆ ಕ್ರಮವಾಗಿ ನಂಜಪ್ಪ, ಶಿರಸ್ತೆ ರಂಗಮ್ಮನವರು, ನಾಗರತ್ನ, ಕಪನೀಪತಯ್ಯ, ಅಣ್ಣಯ್ಯ . . . ಹೀಗೆ ಒಬ್ಬರಹಿಂದೊಬ್ಬರಾಗಿ ಪ್ರವೇಶ ಮಾಡುವರು . . . ತಾಯಿ ಮಗಳಿಬ್ಬರನ್ನೂ ಕುರ್ಚಿಗಳ ಮೇಲೆ ಕೂರಿಸಿ, ನಂಜಪ್ಪನವರು ಕಪನೀಪತಯ್ಯನಿಗೆ ಬೆಂಚು ತೋರಿಸುವರು. ಆತ ಅಲ್ಲೇ ಅದರ ಅಂಚಿನಲ್ಲೇ ಕೂರುವರು. . . .)

ರಂಗಮ್ಮ—ನಾವು ರೆಯಿಲಿನಲ್ಲೇ ಬರಬಹುದಾಗಿತ್ತು, ನಂಜಪ್ಪನವರೇ!

ನಂಜಪ್ಪ—ಸುಖವಾಗಿ ಬರಬಹುದಾಗಿತ್ತು. . . . ಅದಕ್ಕೇನು? . . . . ಆದರೆ, ಸ್ವಂತ ಕಾರಿರುವಾಗ ಅವರಿವರ ಹಂಗೇನು? ಹ್ಹ . . . . ಹ್ಹ . . . . ಹ್ಹ . . . .

ರಂಗಮ್ಮ—ಸ್ವಂತ ಅಲ್ಲ ಅದು! ಟ್ಯಾಕ್ಸಿ! . . . . ನಮ್ಮ ನಾಗರತ್ನಳಿಗೆ ಕಾರು ಅಂದರೆ ಖುಷಿ . . . . ಅದಕ್ಕೋಸ್ಕರ ಅವಳು ಹೇಳಿದಳು. . . . ಅಮ್ಮಾ ಕಾರಲ್ಲೇ ಹೋಗೋಣ ಅಂತ . . . . ಬೆಂಗಳೂರಿಂದ ಒಂದು ಟ್ಯಾಕ್ಸಿ ತರಿಸಿದೆ . . . . ಹೋಗ ಬರ ಇಪ್ಪತ್ತು ರೂಪಾಯಿ ಅಂದ. . . .

ನಂಜಪ್ಪ—ಅನ್ನಲಿ, ನಿಮಗೇನು? ನಾನು ಕೊಡುತ್ತೇನೆ. . . . ಇಷ್ಟು ವಿಶ್ವಾಸದಿಂದ ತಾವು ನನ್ನ ಗುಡಿಸಲಿಗೆ ದಯಮಾಡಿದ್ದು ಹೆಚ್ಚೋ. . . .

ನಾಗರತ್ನ—ಅಮ್ಮಾ! ನಾನು ಹೇಳಿದ್ದನ್ನ ಮೊದಲು ತಿಳಿಸಿಬಿಡು ಇವರಿಗೆ. . . .

ರಂಗಮ್ಮ—ಹೇಳುತ್ತೇನಮ್ಮ. . . . ಕೋಪಿಸಿಕೊಳ್ಳಬೇಡ . . . . ನಂಜಪ್ಪನವರೇ! ನಮ್ಮ ನಾಗರತ್ನಳಿಗೆ ನಾಳೆ ಮೈಸೂರಿನಲ್ಲಿ ಒಂದು ಟೆನ್ನಿಸ್ ಟೂರ್ನಮೆಂಟಿದೆ. . . . ಅವಳೂ ಆಡುತ್ತಾಳೆ ಅದರಲ್ಲಿ. . . . ಅವಳ ಕಾಲೇಜಿಗೂ ಮೈಸೂರು ಕಾಲೇಜಿಗೂ ಮ್ಯಾಚಂತೆ . . . . ಅಲ್ಲವೇನೆ? . . . . ನನಗೂ ಹೋಗಿ ನೋಡಬೇಕು ಅಂತ ಆಸೆ. . . . ಅವಳ ತಂದೆ ಕೂಡ, ಪಾಪ, ಅವಳ ಟೆನ್ನಿಸ್‌ನ ಇದುವರೆಗೂ ನೋಡಿದ್ದೇ ಇಲ್ಲ. . . . ಮನೆಯಿಂದ ಹೊರಗೆ ಹೊರಡುವುದಕ್ಕೆ ಅವರಿಗೆ ಅವಕಾಶವೆಲ್ಲಿ?

ನಂಜಪ್ಪ—ಅದಕ್ಕೇನು? ಇದೇ ಕಾರಿನಲ್ಲೇ ಮೈಸೂರಿಗೆ ಹೋಗಿ ಅಲ್ಲೆಲ್ಲ

CC-0. Jangamwadi Math Collection, Varanasi. An eGangotri Initiative

ನೋಡಿಕೊಂಡು ಕೆಂಗಾರೆಗೆ ಹೋಗಿ . . . . ಕಾಸು ಕೊಡುವುದಕ್ಕೆ ನಾನಿರುವಾಗ ನಿಮಗೆ ಅನುಮಾನ ಯಾಕೆ? . . . . ಆಗಬಹುದು. . . .

ರಂಗಮ್ಮ—ಆದರೂ ನಿಮಗೊಂದು ಮಾತು ಹೇಳಿರೋಣ ಅಂತ, ಅಷ್ಟೆ! . . . . ಅದೂ ಅಲ್ಲದೆ, ನಾವು ಎಷ್ಟು ಬೇಗ ಇಲ್ಲಿಂದ ಹೊರಡುತ್ತೇವೋ ಅಷ್ಟು ಒಳ್ಳೆಯದು. . . .

ನಂಜಪ್ಪ—ಅಣ್ಣಯ್ಯ! ಕಾಫಿ ತೆಗೆದುಕೊಂಡು ಬಾ. . . . (ಅಣ್ಣಯ್ಯ ಒಳಕ್ಕೆ ಹೋಗುವನು) ಏನುಮಾಡುವುದು? ಬರೀ ಗಂಡುಗಂಡಸರೇ ನಾವು ಈ ಮನೆಯಲ್ಲಿ . . . . ಅದರಲ್ಲಿ ನಾನೊಬ್ಬ ವಿಧುರ ಬೇರೆ, . . . (ಅಣ್ಣಯ್ಯ ಕಾಫಿ ಸಮೇತ ಕಾಣಿಸಿಕೊಳ್ಳುವನು.)

ರಂಗಮ್ಮ—ಬೇಡಿ, ಬೇಡಿ, ಕಾಫಿ ತಿಂಡಿ ಯಾವುದೂ ಬೇಡಿ. . . . ನಾವು ಬರುವಾಗ ರೆಯಿಲು ಸ್ಟೇಷನ್ ಹೋಟಲಿನಲ್ಲಿಳಿದು ಬಂದೆವು. . . . ನಾಗರತ್ನಾ! ಆ ಬಿಲ್ಲೆಲ್ಲಿ? . . . . ಅವರ ಕೈಗೆ ಕೊಟ್ಟುಬಿಡು. . . . ತಮ್ಮ ಹುಡುಗ ಎಲ್ಲಿ? (ಅಣ್ಣಯ್ಯ ಒಳಕ್ಕೆ ಹೋಗುವನು.)

ನಂಜಪ್ಪ (ಬಿಲ್ಲನ್ನು ತೆಗೆದುಕೊಳ್ಳುತ್ತಾ)—ಇದಾನೆ, ಇದಾನೆ. . . .

ರಂಗಮ್ಮ—ಕರೆಸಿ ಮತ್ತೆ . . . . ಬಂದ ಕೆಲಸ ಮೊದಲು ನಡೆದು ಹೋಗಲಿ. . . .

ನಂಜಪ್ಪ—ಆಗಲಿ . . . . ಅದಕ್ಕೇನು? ಅಣ್ಣಯ್ಯ. . . . ಆ ನೋಟು ಬುಕ್ಕು, ಕಸೂತಿ, ತೋರಣ, ಹಪ್ಪಳ . . . . ಎಲ್ಲಾನೂ ತೆಗೆದುಕೊಂಡು ಬಾ. . . .

ನಾಗರತ್ನ—ಅದನ್ನೆಲ್ಲಾ ಆ ಮೇಲೆ ನಿಧಾನವಾಗಿ ನೋಡೋಣ. . . .

ಕಪನೀಪತಯ್ಯ—ಹುಡುಗನನ್ನ ಕರೆಯುವುದಕ್ಕೆ ಹೇಳಬಾರದೆ ಅಂತೀನಿ. . . .

ರಂಗಮ್ಮ—ನಮಗೆ ಗೊತ್ತಿದೆ. . . , ಅದನ್ನೇ ಮರೆತುಬಿಡುತ್ತೇವೆ ಅಂತ ಹೆದರಿಕೊಂಡಿರಾ? . . . . ನಂಜಪ್ಪನವರೇ! ನಿಮ್ಮ ಮಗ ಬರಲಿ ಈಚೆಗೆ. . . .

ನಂಜಪ್ಪ—ಆ ವಿಷಯದಲ್ಲಿ ತಾವೇನೂ ಅನುಮಾನಪಡಬೇಕಾದ್ದಿಲ್ಲ. . . . ಬರುತ್ತಾನೆ ಈಚೆಗೆ. . . . ತುಂಬಾ ಯೋಗ್ಯ. . . . ನಮ್ಮ ಮನೆ ಹುಡುಗರಿಗೆ ಮೊದಲಿಂದಲೂ ನಾವು ಹೇಳುತ್ತಿರುವುದೇ ಅದು: ಲ್ರೋ! ನಿಮ್ಮ ನಡತೆ ತಿದ್ದಿಕೊಳ್ಳಿರೋ! ಲ್ರೋ, ನೀವು ವಿನಯ ಕಲಿತುಕೊಳ್ಳಿರೋ! ಅತ್ತೆ ಮಾವಂದರಿ ಗಂಜಿಕೊಂಡು. . . . ಸತಿಯೇ ಸಂಸಾರದ ಸರ್ವಸ್ವ. . ಅಂತ ನಂಬಿ, ಸ್ತ್ರೀಣಾಂಚಚಿತ್ತಂ ಪುರುಷಸ್ಯಭಾಗ್ಯಂ, ಅಂತ. . . .

CC-0. Jangamwadi Math Collection, Varanasi. An eGangotri Initiative

ರಂಗಮ್ಮ—ನಿಮ್ಮದೇನು ವಿಶೇಷ? ಎಲ್ಲರ ಮನೆಯಲ್ಲೂ ಹಾಗೆಯೇ! ಗಂಡು ಮಕ್ಕಳು ಅಂದರೆ ಸಾಕಬೇಕಾದ ರೀತಿಯೇ ಅದು. . . . ಹುಡುಗನನ್ನ ಕರೆಯಿರಿ. . . . ಹೊತ್ತಾಯಿತು. . . . ನಾಗರತ್ನಾ! ಪೇಪರು ಪೆನ್ನು ತೆಗೆದುಕೊ, ನಂಬರು ಹಾಕಬೇಕಲ್ಲ. . . .

ನಂಜಪ್ಪ—ಕರೆಸಿಬಿಡುತ್ತೇನೆ, ಅದೆಷ್ಟು ಹೊತ್ತು? ದೇವರು ನಮಗೆ ಒಂದಲ್ಲ ಎರಡಲ್ಲ ಏಳು ಗಂಡುಮಕ್ಕಳನ್ನ ಕೊಟ್ಟ. . . . ಆರು ಜನ ಆಗಲೇ ಅವರವರ ಮಾವನ ಮನೆ ಸೇರಿದಾರೆ. "ಘಟಾಸು ಘಟಿಕೋ ಲೋಕಃ" ಅಂತಾರಲ್ಲಾ, ಅವರು. ಇವನಂತು ಅಂಥ ಪುಂಡರಲ್ಲ "ಸಪ್ತಮಂ ತಪ್ತ ಕಾಂಚನಂ" ಅಂತಾರಲ್ಲ, ಹಾಗೆ! ಪುಟವಿಟ್ಟ ಚಿನ್ನ. . . . ಅಪರಂಜಿ. . . . ಪಾಪ (ಅಳುವನ್ನು ತಡೆಯುತ್ತಾ) ಅವನ ಮೂರನೆಯ ವಯಸ್ಸಿನಲ್ಲೇ ನನ್ನ ಮಡಿಲಲ್ಲಿ ಹಾಕಿಬಿಟ್ಟು ಅವರು ತಪ್ಪಿಸಿಕೊಂಡುಬಿಟ್ಟರು. . . .

ರಂಗಮ್ಮ—ನಿಮ್ಮ. . ನಮ್ಮ. . ಸಂಸಾರದ ಸಂಕಟಗಳನ್ನೆಲ್ಲಾ . . . . ಆಮೇಲೆ ನಿಧಾನವಾಗಿ ಹೇಳೋಣ. . . . ಒಂದು ಪೆನ್ಸಿಲಿದ್ದರೆ ಕೊಡಿ ನಂಜಪ್ಪನವರೇ!

ನಂಜಪ್ಪ—ಕರೆಸಿಬಿಡುತ್ತೇನೆ. . . . 'ಗುಂಡಾ' ಅಂದರೆ ಬಂದುಬಿಡುತ್ತಾನೆ. . . . (ಪೆನ್ಸಿಲನ್ನು ಕೊಡುತ್ತಾ) ಆದರೆ, ಪಾಪ. . . . ಮೂರು ನಾಲ್ಕು ದಿನಗಳಿಂದ ಕೊಂಚ ನೆಗಡಿ ಹಿಡಿದಿದೆ. . . . ಆದ್ದರಿಂದ ಚಟುವಟಿಕೆ ಕಡಿಮೆ; ಲವಲವಿಕೆ ಸಾಲದು; ಮುಖ ಕೊಂಚ ಬಾಡಿದ ಹಾಗೆ ಕಾಣುತ್ತದೆ. . . . ಶಾರೀರವಂತೂ ಮುಂಚಿನ ಕಂಚು ಅಲ್ಲವೇ ಅಲ್ಲ. . . . ಬೆಳಗ್ಗೆ ಸಂಗೀತಸಾಧನೆ ಮಾಡು ತ್ತಿದ್ದಾಗ ಎದುರು ಮನೆಯವರು ಬಂದು ನಿಲ್ಲಿಸೋ ಅಂತ ಕಾಲಿಗೆ ಬಿದ್ದು ಕೇಳಿ ಕೊಂಡರು. . .

ನಾಗರತ್ನ (ರೇಗಿ)—ಅಮ್ಮಾ! ಈ ನೋಡಾಟ ಮುಗಿಸಿ ನಾವು ಮೈಸೂರಿಗೆ ಹೊರಡುವುದು ಯಾವಾಗ? (ಕಾಗದ, ಪೆನ್ನು ಹಿಡಿದುಕೊಂಡು ನಂಬರು ಹಾಕಲು ಸಿದ್ಧಳಾಗುವಳು).

ನಂಜಪ್ಪ—ಇಕೋ, ಕರೆಸಿಬಿಡುತ್ತೇನೆ (ಸ್ವಗತಂ) ಜಗದಂಬಿಕೆ, ಕಾಪಾಡು ಕಾಪಾಡು (ಗಟ್ಟಿಯಾಗಿ) ಗುಂಡಾ! ಗುಂಡಾ! (ಗುಂಡನ ಪ್ರವೇಶ) ಬಾ. . . . ಬಾ. . . . (ಗೋಡೆ ಅಂಚಿನಲ್ಲೇ ಹರಿದು ಬಂದು ಸರಕ್ಕನೆ ನಂಜಪ್ಪನವರ ನೆರಳಿನಲ್ಲಿ ತಲೆ ಬಗ್ಗಿಸಿಕೊಂಡು ನಿಲ್ಲುವನು) ಬಾ. . . . ಲಜ್ಜೆ. . . . ತಗ್ಗಿಸಿದ ತಲೆ ತಗ್ಗಿದ ಹಾಗೆಯೇ ಇರುತ್ತದೆ. . . . ಅತಿವಿನಯ. . . . ಅತಿವಿನಯ. . . . ಗುಂಡಾ!

CC-0. Jangamwadi Math Collection, Varanasi. An eGangotri Initiative

"ಯತ್ರ ನಾರ್ಯಸ್ತು ಪೂಜ್ಯಂ ತೇ" . . . ಆ ಮೇಲೆ. . . . ಏನು ? ಹೇಳು. . . . (ಗುಂಡ ಹಾಗೆಯೇ ನಿಂತಿರುವುದನ್ನು ನೋಡಿ) "ರಮಂತೆ ತತ್ರ ದೇವತಾಃ" ಅಲ್ಲವೇನೋ ? (ಗುಂಡ ಹೌದೆಂದು ತಲೆ ಅಲ್ಲಾಡಿಸುವನು) ನೋಡಿದಿರಾ! ಮಹಾ ಸಾಧು, ನಮ್ಮ ಹುಡುಗ. . . . ಗುಂಡಾ! . . . ಬಾ ಇಲ್ಲಿ, ಅತ್ತೆಯವರಿಗೆ ಒಂದು ಸಾಷ್ಟಾಂಗ ಹಾಕು. . . . (ಗುಂಡ ಗಾಬರಿಯಿಂದ ನಾಗರತ್ನಳೆದುರು ದಂಡ ಪ್ರಣಾಮ ಮಾಡುವನು) . . . ಚಿಂತೆ ಇಲ್ಲ. . . . ಶುಭಸೂಚನೆ, ಅಷ್ಟೆ. . . . ದೇವರೊಳ್ಳೆಯದು ಮಾಡಲಿ . . . ಈಗ ಅವರಿಗೂ ಸರಿಯಾಗಿ ಒಂದು ನಮಸ್ಕಾರ (ಗುಂಡ ರಂಗಮ್ಮನವರಿಗೆ ನಮಸ್ಕಾರಮಾಡುವನು) ಹಾಗೆ . . . ಹಾಗೆ . . . ಜಾಣ . . . (ರಂಗಮ್ಮನವರನ್ನು ಸಂಬೋಧಿಸಿ) ಪಾಪ . . . ಮೈಯೆಲ್ಲ ನಡುಗುತ್ತಿದೆ . . . ಸುಸ್ತು . . . (ಗುಂಡನಿಗೆ) ಲೋ . . . ಈಗ . . . ಅತ್ತಲಾಗೆ . . . ಮಾವನವರಿಗೆ ಕೈಮುಗಿ (ಗುಂಡ ಕೈ ಮುಗಿಯುವನು), ಆಯಿತೋ ? . . . ಅಣ್ಣಯ್ಯ! ಬಾ ಇವನನ್ನ ಕೊಂಚ ಹಿಡಿದುಕೊ . . . ಒಳಕ್ಕೆ ಕರೆದುಕೊಂಡು ಹೋಗಿ ಕೊಂಚ ಕಾಫಿ ಕುಡಿಸು (ಗೋಡೆ ಅಂಚಿನಲ್ಲೇ ಹೋಗುವರು.)

ನಂಜಪ್ಪ (ನೋಟುಬುಕ್ಕುಗಳನ್ನು ನಾಗರತ್ನಳ ಕೈಗೆ ಕೊಡುತ್ತಾ)—ನೋಡಿ . . . ಇದೇ ಗುಂಡನ ಹಸ್ತಲಿಖಿತ . . . (ಮೊದಲ ಹಾಳೆಯಲ್ಲಿ ಶಂಕರು ಹೆಸರಿರುವುದನ್ನು ಕಂಡು ಬೆಚ್ಚಿಬಿದ್ದು, ಪುಸ್ತಕಗಳನ್ನು ಥಟಕ್ಕನೆ ಕಿತ್ತುಕೊಂಡು, ಆ ಹಾಳೆಗಳನ್ನು ಹರಿದು ಬಿಸಾಕಿದ ಮೇಲೆ ಮತ್ತೆ ನಾಗರತ್ನಳಿಗೆ ಕೊಡುವರು) ಬಹಳ ಚೆನ್ನಾಗಿ ಬರೆಯುತ್ತಾನೆ . . . ಕನ್ನಡ ಇಂಗ್ಲೀಷು ಹಿಂದೀ ಎಲ್ಲವೂ ಅಷ್ಟೆ . . . ಒಂದೇಸಮ ಸಾಲುಸಾಲಾಗಿ ಸರಪಳಿ ಎಳೆದ ಹಾಗೆ. . . .

ನಾಗರತ್ನ (ಹಾಳೆಗಳನ್ನು ಮಗುಚುತ್ತಾ)—ಏನಿದು ? ಹತ್ತಕ್ಕೆ ಎರಡೂ ಕಾಲೇನೇ ನಂಬರು ?

ನಂಜಪ್ಪ—ಅಯ್ಯೋ ! ಅದು ಏನು ಹೇಳುತ್ತೀರಿ ! ಯಾರೋ ಒಬ್ಬರು ಹೊಸ ಮೇಡಂ ಬಂದಿದಾರಂತೆ. ನಂಬರು ಅಂದರೆ ಅವರ ಅಜ್ಜಿಯ ಆಸ್ತಿ ಅಂತ ತಿಳಿದುಕೊಂಡಿದಾರೆ ಅವರು . . . ವಿಪರೀತ ಹಿಡಿತ . . . ಅದೂ ಅಲ್ಲದೆ ಅವರಿಗೆ ಈ ಗಂಡು ಹುಡುಗರನ್ನ ಕಂಡರೆ ದ್ವೇಷವಂತೆ . . . ಒಂದೊಂದು ಕ್ಲಾಸಿನಲ್ಲಿ ಇಬ್ಬರು ಮೂವರು ಇರುತ್ತಾರೆ ಇವರು . . . ಇದೇ ಬೀದಿಯಲ್ಲೇ ಶಂಕರು ಅಂತ ಒಬ್ಬನಿದಾನೆ; ತುಂಬಾ ಬುದ್ಧಿವಂತ . . . ಅವನಿಗೂ ಎರಡೂ ಕಾಲು, ಗುಂಡನಿಗೂ ಎರಡೂ ಕಾಲು. . . .

ರಂಗಮ್ಮ—ಎಷ್ಟು ಓದಿಸಿದ್ದೀರಿ ನಿಮ್ಮ ಹುಡುಗನನ್ನ ?

CC-0. Jangamwadi Math Collection, Varanasi. An eGangotri Initiative

ನಂಜಪ್ಪ—ಏನೋ ! ನನ್ನ ಶಕ್ತಿ ಅವನ ಶಕ್ತಿ ಸೇರಿ ಎಸ್.ಎಸ್.ಎಲ್.ಸಿ. ತನಕ ಹತ್ತಿದ . . . ಆದರೆ ಕೆಲವು ತರಲೆ ಹುಡುಗರ ಹಾಗೆ ನಮ್ಮ ಗುಂಡ ದುಡುಕುವುದಿಲ್ಲ. ತುಂಬಾ ನಿಧಾನದ ಪ್ರಕೃತಿ . . . ಈ ಪಾಠ ಕಲಿಯಲೇ ಬೇಕು, ಇಂಥ ಅಂಗಿಯನ್ನೇ ತೊಡಬೇಕು, ಈ ದೇಶದ ಭೂಪಟವನ್ನ ಹೀಗೆಯೇ ಬರೆಯಬೇಕು, ಈ ಪ್ರಶ್ನೆಗೆ ಇದೇ ಉತ್ತರ, ಎಂಬ ಹಠಮಾರತನವೇ ಇಲ್ಲ ಅವನಲ್ಲಿ; ವ್ಯಾಕರಣದವರ ಹಾಗೆ ಅವನು ' ನಾನು ಅಂದರೆ ಉತ್ತಮ ಪುರುಷ, ನೀನು ಅಂದರೆ ಮಧ್ಯಮ ಪುರುಷ ' ಅಂತ ತಲೆಹರಟೆ ತೆಗೆಯುವುದೇ ಇಲ್ಲ . . . ಪರಮ ಸಾಧು . . . ಗಂಡಿಗಿರಬೇಕಾದ ಗುಣ ಅಂದರೆ ಅದಲ್ಲವೆ ?

ನಾಗರತ್ನ (ರಂಗಮ್ಮನವರ ಕಡೆ ತಿರುಗಿ)—ನಾವು ಮುಂದಕ್ಕೆ ಓದಿಸಬಹುದೆ, ಹುಡುಗನಿಗೆ ಓದುವ ಅಭಿಲಾಷೆ ಇದೆಯೋ ಅಂತ ವಿಚಾರಿಸಮ್ಮ. . . .

ರಂಗಮ್ಮ (ನಂಜಪ್ಪನವರಿಗೆ)—ಮುಂದಕ್ಕೆ ಓದುತ್ತಾನೋ ಏನೋ ಅಂತ ಕೇಳಿ ಅವನನ್ನ. . . .

ನಂಜಪ್ಪ—ಅವನನ್ನೇನು ಕೇಳೋದು ? ತಮ್ಮ ವಶಕ್ಕೊಪ್ಪಿಸಿದ ಮೇಲೆ ತಾವು ಏತಿ ಅಂದರೆ ಅವನೂ ಏತಿ ಅನ್ನಬೇಕು. ಪಕ್ಕದಮನೆ ಗಂಡಸರೊಂದಿಗೆ ಕಾಡುಹರಟೆಯಲ್ಲಿ ಕಾಲಹರಣಮಾಡುವುದಕ್ಕಿಂತ ಓದಲಿ . . . ಪ್ರೈವೆಟ್ಟಾಗಿ ಮೆಟ್ರಿಕ್ಸ್ ಯೂನಿವರ್ಸಿಟಿ ಪರೀಕ್ಷೆಗಳಿಗೆ ಕಟ್ಟಿಸಿ. (ಅಣ್ಣಯ್ಯ ಗುಂಡನನ್ನು ಕರೆತಂದು ನಂಜಪ್ಪನವರ ಹತ್ತಿರ ಬಿಡುವನು).

ನಾಗರತ್ನ—ಹಿಂದಿ ಬರುತ್ತದೋ ?

ನಂಜಪ್ಪ—ಕಾಪಿ ತೋರಿಸಿದೆನಲ್ಲಾ, ಆಗಲೇ ? ಮನೆ ಗಂಡಸರಿಗೆ ಎಷ್ಟು ಹಿಂದಿ ಬೇಕೋ ಅಷ್ಟು ಬರುತ್ತದೆ. . . . ಉತ್ತರದೇಶದಿಂದ ಬರುವ ಭಿಕ್ಷುಕರನ್ನು ಓಡಿಸುತ್ತಾನೆ ; ಕಲಾಯಿಗೆ ಕೂಲಿ ಗೊತ್ತುಮಾಡುತ್ತಾನೆ. ಇನ್ನೇನಾಗಬೇಕು ಹಿಂದಿಯಿಂದ ?

ನಾಗರತ್ನ—ಇವರನ್ನೂ ಆ ವಿಷಯ ಕೇಳಿ ಬಿಡುತ್ತೇನಮ್ಮ . . . . ಆಮೇಲೆ ಗ್ರಹಚಾರ ! . . . . ನಿಮ್ಮ ಹುಡುಗ . . . . ಕನ್ನಡ ಪದ್ಯಗಿದ್ಯ ಬರೆಯುವು ದುಂಟೋ ?

ನಂಜಪ್ಪ—ಛೆ . . . . ಛೆ . . . . ಅಂಥ ದುರಭ್ಯಾಸ ಯಾವುದೂ ಇಲ್ಲ . . . . ನನಗೆ ಗೊತ್ತಿಲ್ಲವೆ ? ಮೂರು ಹೊತ್ತೂ ಇವನು ಇಂಪು ಕಂಪು ಪೆಂಪು ಅಂತ ಬೆಳದಿಂಗಳಲ್ಲೇ ಓಡಾಡುತ್ತಿದ್ದರೆ ಸಂಸಾರ ಸಾಗುವುದು ಹೇಗೆ ? ಹಕ್ಕಿ ಹಾರುತಿದೆ ನೋಡಿದಿರಾ ಅಂದರೆ ಹೊಟ್ಟೆ ಹಸಿವು ತಡೆದೀತೆ ?

CC-0. Jangamwadi Math Collection, Varanasi. An eGangotri Initiative

ರಂಗಮ್ಮ—ಎಲೊಕ್ಯೂಷನ್ ಕಾಂಪಿಟಿಷನ್ ವಿಷಯ ಕೇಳುತ್ತಿದ್ದೆಯಲ್ಲಾ ಆ ಹುಡುಗರನ್ನೆಲ್ಲಾ . . . . ಇಲ್ಲೂ ವಿಚಾರಿಸಿಬಿಡು. . . .

ನಂಜಪ್ಪ—ಓಹೋ ! ಪ್ರಪಂಚಜ್ಞಾನ ನಮ್ಮ ಗುಂಡನಿಗೆ ಅಷ್ಟು ಕಡಿಮೆ ಯೇನೂ ಇಲ್ಲ. . . . (ಗುಂಡನಿಗೆ) ಎಲೆಕ್ಷನ್ ಕಾಂಪಿಟಿಷನ್ ಅಂದರೆ ಏನು ಅಂತ ಗೊತ್ತಿಲ್ಲವೇನೋ ? (ಗುಂಡ ಗೊತ್ತು ಅಂತ ತಲೆ ಅಲ್ಲಾಡಿಸುವನು) . . . . ಗುಂಡಾ ! . . . . ನಿಮ್ಮ ವೋಟು ಯಾರಿಗೆ ?

ಗುಂಡ—ಇಂಡಿಪೆಂ . . . . ಡೆಂಟಿಗೆ.

ನಂಜಪ್ಪ—ಕೇಳಿದಿರಾ ! ಎಲೆಕ್ಷನ್ ಕಾಂಪಿಟಿಷನ್ ಕೂಗು. . . .

ರಂಗಮ್ಮ—ನಂಜಪ್ಪನವರೇ ! ನಾಗರತ್ನ ಕೇಳಿದ್ದು ಅದನ್ನಲ್ಲ. . . .

ನಾಗರತ್ನ—ಸುಮ್ಮನಿರಮ್ಮ ! ಇಷ್ಟರಿಂದಲೇ ಗೊತ್ತಾಗುತ್ತದಲ್ಲಾ, ಇನ್ನೇನು? . . . . ಸ್ಕೂಲಲ್ಲಿ ಆಟಗಳು . . . . ಗೀಟಗಳು. . . .

ನಂಜಪ್ಪ—ಯಥಾಪ್ರಕಾರ ಸ್ಕಿಪ್ಪಿಂಗ್, ಬ್ಯಾಡ್‌ಮಿಂಟನ್, ಕೇರಂ ಇವೆಲ್ಲಾ ಬರುತ್ತೆ. . . . ಟೆನ್ನಿಸ್‌ಗಿನ್ನಿಸ್ ಅಂದರೆ ಮೈಗೊಳ್ಳೆಯದಲ್ಲ, ಅಂತ ಅವರ ಡ್ರಿಲ್ ಮೇಡಂ ಹೇಳಿಬಿಟ್ಟರಂತೆ.

ಕಪನೀಪತಯ್ಯ—ಇವರನ್ನ ಸಿನಿಮಾ ವಿಷಯ ಕೇಳಲೇ ಇಲ್ಲವಲ್ಲಾ . . . . ಅಂತೀನಿ. . . .

ರಂಗಮ್ಮ—ಕೇಳೋಣ . . . ಕೇಳೋಣ . . . ಜ್ಞಾಪಕ ಇದೆ ನಮಗೂವೆ . . .

ನಂಜಪ್ಪ—ಸಿನಿಮಾ ಅಂದರೆ ಗುಂಡನಿಗೆ ಪ್ರಾಣ. . . . ಅದರಲ್ಲೂ ಪುರಾಣದ ಪಿಕ್ಚರೆಂದರೆ ತುಂಬಾ ಉತ್ಸಾಹ . . ಆ 'ಪತ್ನೀಭಕ್ತಿ' ಚಿತ್ರಕ್ಕೆ ಇಪ್ಪತ್ತುಸಲ ಹೋಗಿದಾನೆ. . . . ನೀವು ಯಾವ ಕ್ಲಾಸಲ್ಲಾದರೂ ಕೂಡಿ . . . ಅವನು ತುಟಿಪಿಟಕೆನ್ನದೆ 'ಪುರುಷರಿಗೆ ಪ್ರತ್ಯೇಕ' ಅಂಬೋ ಕ್ಲಾಸಿನಲ್ಲಿ ಕೂತಿರುತ್ತಾನೆ. . .

ಕಪನೀಪತಯ್ಯ—ಸಿನಿಮಾ ಹಾಡುಗಳು ಬರುವುದಿಲ್ಲವೋ ಅಂತ ಕೇಳ ಬಾರದೆ, ಅಂತೀನಿ. . . .

ರಂಗಮ್ಮ—ಎಲ್ಲಾನೂ ಗುರುತುಹಾಕಿಕೊಂಡಿದೇವೆ. . . . ನೀವು ಸುಮ್ಮ ನಿರಿ, ಸದ್ಯ. . . .

ನಂಜಪ್ಪ—ಮೊದಲೇ ಅರಿಕೆಮಾಡಿಕೊಂಡೆ. . . . ಅವನ ಶಾರೀರ ಮೊನ್ನೆ ಯಿಂದ ಕೊಂಚ ಕಠೋರವಾಗಿದೆ ಅಂತ. . . . ಅದೂ ಅಲ್ಲದೆ, ಅಣ್ಣಯ್ಯನಿಗೆ ಗೊತ್ತಿದೆ. ಇವನೂ ಇವನ ಅಣ್ಣ ಇಬ್ಬರೂ ಜೊತೆಯಾಗಿ ಕೂತು ಸಂಗೀತದ ಮೇಡಂ ಹತ್ತಿರ ಹಾಡು ಕಲಿಯುತ್ತಿದ್ದರು. . . . ಜೋಡಿ ವಾಲಗ ಇದ್ದಹಾಗೆ

CC-0. Jangamwadi Math Collection, Varanasi. An eGangotri Initiative

CC-0. Jangamwadi Math Collection, Varanasi. An eGangotri Initiative



ಚಲ್ ಚಲ್‌ರೆ ನೌ ಜವಾನ್ . . . . [ಪುಟ ೧೧೧.

ಇರುವುದು ನಾದ. . . . ಹೋದ ತಿಂಗಳು ಆ ಇನ್ನೊಬ್ಬನನ್ನ ಹುಣಸೂರಿಗೆ ಅವನ ಮಾವನವರು ಬಂದು ಕರೆದುಕೊಂಡು ಹೋಗಿಬಿಟ್ಟರು. . . . ಈಗ, ಪಾಪ, ಒಂಟಿ ಗಂಟಲು . . . ಅವನೊಬ್ಬನೇ ಹಾಡಿದರೆ ಕಳೆಕಟ್ಟುತ್ತದೋ ಏನೋ . . . (ಗುಂಡನಿಗೆ) ಹಾಡುತ್ತೀಯೇನೋ ? (ಆಗುವುದಿಲ್ಲವೆಂದು ಗುಂಡ ತಲೆ ಅಲ್ಲಾಡಿಸುವನು). ನೋಡಿದಿರಾ . . . ಹೆದರಿಕೆ ಹುಡುಗನಿಗೆ. . . .

ನಾಗರತ್ನ—ಪರವಾಗಿಲ್ಲ . . . ಯಾವುದಾದರೂ ಈಗಿನಕಾಲದ್ದು ಒಳ್ಳೆಯದೊಂದು ಹಾಡು ಹೇಳಲಿ. . . .

ನಂಜಪ್ಪ (ಮೆಲ್ಲಗೆ)—ಗುಂಡಾ ! ಮಹಾತಾಯಿ ಕಾಪಾಡುತ್ತಾಳೆ, ಧೈರ್ಯವಾಗಿರು ! (ನಾಗರತ್ನಳ ಕಡೆ ತಿರುಗಿ) ಆಗಬಹುದು. . . ಅದಕ್ಕೇನು ? . . ನನ್ನನ್ನೂ ಅವನು ಅಣ್ಣಾ ಅಂತಲೇ ಕರೆಯುತ್ತಿದಾನೆ . . ನಾನೂ ಅವನೂ ಸೇರಿಕೊಂಡು ಒಂದಿಷ್ಟು ಅಂದುಬಿಡುತ್ತೇವೆ. . . . ಕೇಳುವುದಕ್ಕೆ ಸಿದ್ಧಮಾಡಿಕೊಳ್ಳಿ . . . (ಮೆಲ್ಲಗೆ) ಗುಂಡಾ ! ಗಂಟಲು ಸರಿಪಡಿಸಿಕೊ . . . (ಇಬ್ಬರೂ ಸೇರಿ) ಚಲ್ ಚಲ್‌ರೆ ನೌಜವಾನ್, ಚಲ್ ಚಲ್‌ರೆ ನೌಜವಾನ್ . . . ಕಹನ ಮೇರಾ ಮಾನ್ ಮಾನ್ ಚಲ್‌ರೆ ನೌಜವಾನ್, ಚಲ್ ಚಲ್‌ರೆ ನೌಜವಾನ್ . . . ಸಾಕು . . . ಅಣ್ಣಯ್ಯ ! ಇವನನ್ನ ಕರೆದುಕೊಂಡು ಹೋಗಿ ಕೊಂಚ ಹಾಲು ಕುಡಿಸು . . . (ಗುಂಡನೂ ಅಣ್ಣಯ್ಯನೂ ಹೊರಡುವರು) (ರಂಗಮ್ಮನವರಿಗೆ) ತಾಯಿ ! ಒಂದೇ ಒಂದು ಮಾತು ಹೇಳಿಬಿಡುತ್ತೇನೆ, ಹೆಚ್ಚಾಗಿಲ್ಲ . . . ಇವೆಲ್ಲ ಬರೀ ಸಂಪ್ರದಾಯ . . . ಈ ಅರೆಗಳಿಗೆಯಲ್ಲಿ ಏನುತಾನೆ ಗೊತ್ತಾಗುತ್ತದೆ ? ಆದರೆ ನಮ್ಮ ಮನೆ ಹುಡುಗರು ಎಂಥ ನಿಜಾಚಾರವಿಹಿತರು ಅಂತ ತಿಳಿಯಬೇಕಾದರೆ ಇವನ ಅಣ್ಣಂದಿರು ಹೇಗೆ ಬಾಳುತ್ತಿದಾರೆ ಅಂತ ಕಂಡುಕೊಳ್ಳಬೇಕು ನೀವು . . . ತಲೆಕಾಡಿನಲ್ಲಿ ಒಬ್ಬ ಇದಾನೆ; ಅಲ್ಲಿಂದಾಚೆ ಎಳಂದೂರಿಗೆ ಒಬ್ಬನನ್ನ ಕೊಟ್ಟಿದೇನೆ; ಪಾವಗಡದಲ್ಲಿ ಗುಮಾಸ್ತೆ ಗುಂಡಮ್ಮನವರ ಮನೆಯಲ್ಲೊಬ್ಬನಿದಾನೆ. . . ಅವನನ್ನ ನೋಡಿ . . . ನಿರ್ವಂಚನೆಯಿಂದ ಇತರೇ ನಾಲ್ಕು ಓರಗದವರೊಂದಿಗೆ ಹೊಂದಿಕೊಂಡು . . .

ರಂಗಮ್ಮ—ಹೌದು ಸಂಜಪ್ಪನವರೇ ! ಹೊಕ್ಕಮನೆ ಚಿಕ್ಕಮನೆ ಮಾಡದೆ ಬಾಳಬೇಕಾದದ್ದು ತಾನೆ ಗಂಡುಮಕ್ಕಳ ಧರ್ಮ . . .

ನಂಜಪ್ಪ—ಹೌದು . . . ಹೌದು . . . ಅವನ ಮಾವನೋ ವೀರಭದ್ರನ ಅಪರಾವತಾರ ! ಅವರಿಗೂ ವಿಧೇಯನಾಗಿ ಅಂಗಳ ಸಾರಿಸಿ ಗಂಗಾಳ ತೊಳೆದು ಬಟ್ಟೆ ಒಗೆದು ಮಕ್ಕಳ ಜುಟ್ಟಿಗೆ ಮಲ್ಲಿಗೆ ಹೂಮುಡಿಸಿ . . . ಯಜಮಾನಿಗಿತ್ತಿ ಎಷ್ಟು ಹೊತ್ತಿಗೆ ಬಂದರೂ ಅವರಿಗೆ ಅನ್ನಹಾಕಿ ಅಲ್ಲದೆ ಒಂದು ಉದ್ಧರಣೆ

CC-0. Jangamwadi Math Collection, Varanasi. An eGangotri Initiative

ಕೂಡ ಬಾಯಿಗೆ ಹಾಕದೆ . . . ಅಯ್ಯೋ ಅಯ್ಯೋ ಅಯ್ಯೋ . . . ಪುರಾಣದಲ್ಲಿ ಹೇಳುತ್ತಾರಲ್ಲ ಸಾತಿವ್ರತ್ಯ ಚೂಡಾಮಣಿಗಳು ಅಂತ, ಹಾಗಿದಾನೆ. . . . ಅವನು ಮಾತ್ರ ಈಗ ಅಂತರಿಕ್ಷ ನೋಡಿ ಮಳೆ ಬೀಳಲಿ ಅಂದರೆ ಬಿದ್ದೇ ಬೀಳುತ್ತದೆ ಖಂಡಿತ, ನನ್ನ ಮಾತು . . . ಹುಣಸೂರಿಗೆ ಹೋಗಿರುವವನೂ ಅಷ್ಟೆ. . . . ಮನೆಗೆ ಒಂದು ಕಾಗದ ಬರೆದರೆ ತನ್ನ ಹೆಂಡತಿಗೆ ತೋರಿಸಿ ತಿದ್ದಿಸುತ್ತಾನೆ; ಮಾವನ ರುಜು ಬೇರೆ ಮೂಲೆಯಲ್ಲಿ ಹಾಕಿಸುತ್ತಾನೆ. . . . ಇದನ್ನೆಲ್ಲಾ ತಾವು ನಿಧಾನವಾಗಿ ಯೋಚಿಸಬೇಕು . . . ನನ್ನನ್ನ ಉದ್ಧಾರಮಾಡಬೇಕು . . . (ಮೆಲ್ಲಗೆ ಒಳಕ್ಕೆ ಹೊರಟುಹೋಗುವರು.)

ರಂಗಮ್ಮ (ನಂಜಪ್ಪನವರನ್ನೇ ನೋಡುತ್ತಾ ಇದ್ದು, ಅವರು ಕಣ್ಮರೆಯಾದ ಮೇಲೆ)— ನಾಗರತ್ನಾ ! ಎಲ್ಲಿ ನೋಡೋಣ ! ನೀನು ಕೊಟ್ಟಿರುವ ನಂಬರೆಷ್ಟು ?

ನಾಗರತ್ನ—ಆ ಮೊಳಕಾಲುಮುರು ಹುಡುಗನಿಗಿಂತ ಮೂರು ನಂಬರು ಹೆಚ್ಚು. . . .

ರಂಗಮ್ಮ (ಗಂಡನ ಕಡೆ ತಿರುಗಿ)—ಇದು ವರೆಗೂ ನೋಡಿದ ಹುಡುಗರ ಲಿಸ್ಟೆಲ್ಲಿ ?

ಕಪನೀಪತಯ್ಯ (ಬೆಚ್ಚಿಬಿದ್ದು)—ಯಾವುದು ? ವರರ ಪಟ್ಟಿಯೇ ? ತರಲಿಲ್ಲ . . . ಮರೆತುಬಿಟ್ಟೆ . . .

ರಂಗಮ್ಮ (ರೇಗಿ)—ನಿಮ್ಮ ಮರೆವೆಗೆ . . . ಬೇಡ . . . ಈಗ ಬೇಡ . . . ಮನೆಗೆ ಹೋದ ಮೇಲೆ ಆಗಲಿ. . . .

ನಾಗರತ್ನ—ನನ್ನ ಹತ್ತಿರವಿದೆ ಅಮ್ಮ ಅದು ; ಅಪ್ಪನನ್ನ ಬೈಯಬೇಡ. . . .

ರಂಗಮ್ಮ—ಹೋಗಲಿ ಸದ್ಯ . . . (ಗಂಡನಿಗೆ) ನೀವೇನಾದರೂ ನಂಬರು ಗಿಂಬರು ಹಾಕಿದೀರಾ ? ಅಥವಾ ಸುಮ್ಮನೆ ಆಟ ನೋಡುತ್ತಾ ಹಾಡು ಕೇಳುತ್ತಾ ದೊರೆಯ ಹಾಗೆ ಕೂತುಬಿಟ್ಟರೋ ?

ಕಪನೀಪತಯ್ಯ—ನಾನು ಹಾಕಿದ ನಂಬರಿಗೆ ಯಾರು ಇದುವರೆಗೂ ಬೆಲೆ ಕೊಟ್ಟಿದ್ದು ? ನಾಳೆ ಅಳಿಯನ ಸಂಗಡ ಏಗೋದೆಲ್ಲ ನಾನು. ನನ್ನ ಮಾತು ಯಾರಿಗೆ ಬೇಕಾಗಿದೆ ? ಹುಂ . . . ತಾಯಿ ಮಗಳು ಸೇರಿಕೊಂಡು 'ಅಳಿಯನಿಗೆ ಗೃಹಪ್ರವೇಶ ಮಾವನಿಗೆ ಪರವಾಸ' ಅಂತ ಮಾಡಿಬಿಡಿ.

ರಂಗಮ್ಮ (ರೇಗಿ)—ಕಂಡವರ ಮನೆಯಲ್ಲಿ ನಿಮ್ಮ ಕಾಗುಣಿತ ತೆಗಿಯಬೇಡಿ . . . ಗಂಭೀರವಾಗಿ ಗೂಡು ಸೇರೋಣ. . . . ಆಮೇಲೆ ಇದ್ದೇ ಇದೆ ಗೋಳು. . . . ನಾಗರತ್ನಾ ! ನಾನು ೪೮ ಕೊಟ್ಟಿದೇನೆ . . . ನೀನು ?

ನಾಗರತ್ನ—ಹಾಗಾದರೆ ನಮ್ಮಿಬ್ಬರದೂ ಸೇರಿ ೨೦೦ಕ್ಕೆ ೯೭ ಬಂದಿದೆ.

CC-0. Jangamwadi Math Collection, Varanasi. An eGangotri Initiative

ರಂಗಮ್ಮ—ಅಷ್ಟು ಬಂದರೆ ಸಾಲದಲ್ಲೇ ? ಅರ್ಥವಾದರೂ ತೆಗಿಯಬೇಡವೇನೆ ಇತ್ಯರ್ಥಮಾಡುವುದಕ್ಕೆ ?

ನಾಗರತ್ನ—ಅಮ್ಮಾ! ಮೊದಲು ನನಗೇ ನಮಸ್ಕಾರ ಮಾಡಿದ; ಆದ ಕ್ಕೊಂದು ಮೂರು ನಂಬರು ಹೆಚ್ಚಾಗಿ ಕೊಡುತ್ತೇನೆ. . . . ಆಗ ಸರಿ ಹೋಗುತ್ತೆ. . .

ರಂಗಮ್ಮ—ಹಾಗಾದರೆ ಅವರನ್ನ ಕರೆಸಿ ಮುಂದಿನ ಮಾತು ಆಡಿ ಬಿಡೋಣವೇ?

ನಾಗರತ್ನ—ನಿನ್ನಿಷ್ಟ, ಅಮ್ಮ . . .

ರಂಗಮ್ಮ (ಗಂಡನ ಕಡೆ ತಿರುಗಿ)—ಏನು ? . . . ಮಾತಾಡಬಾರದೇನು ?

ಕಪನೀ ಪತಯ್ಯ (ನಿರುತ್ಸಾಹದಿಂದ)— . . . ಯಾವ ಮಾತಾಡಬೇಕು ?

ರಂಗಮ್ಮ—ನಂಜಪ್ಪನವರನ್ನು ಕರೆಸಿ ಮುಂದಿನ ಚರ್ಚೆ ಪ್ರಾರಂಭ ಮಾಡೋಣವೇನು ?

ಕಪನೀ ಪತಯ್ಯ—ಮಹಾರಾಣಿಯ ಹಾಗೆ ಮಾಡಿ . . . ನನ್ನನ್ನೇನು ಕೇಳು ವುದು ?

ರಂಗಮ್ಮ—ಆಮೇಲೆ ಮನೆಯೊಳಗೆ ಗಂಡಸರಲ್ಲಿ ತಂಟೆತಕರಾರು ಯಾವುದೂ ಪ್ರಾರಂಭವಾಗುವುದಿಲ್ಲ ತಾನೆ ?

ಕಪನೀ ಪತಯ್ಯ—ಅವರಿಬ್ಬರೂ ಸುಖವಾಗಿ ಸಂತೋಷವಾಗಿ ಸಂಸಾರ ನಡೆಸುವುದು ಮುಖ್ಯ. ಅದಕ್ಕೇನೇನಾಗಬೇಕು ಅಂತ ನಿಮಗೆ ಗೊತ್ತಿದೆ. . . . ನಮಗೇನು ತಿಳಿಯುತ್ತೆ ? ಈ ಹುಡುಗನಾದರೇನು, ಆ ಹುಡುಗನಾದರೇನು, ಪಳಗಿಸುವುದೇ ನಮ್ಮ ಹಣೇಬರಹ. . . .

ರಂಗಮ್ಮ—ಸರಿ . . . ಹಾಗಾದರೆ . . . ನಾಗರತ್ನಾ ! ನಿನ್ನ ತಂದೆಯೂ ಕೂಡ ಒಪ್ಪಿದ ಹಾಗಾಯಿತಲ್ಲಾ . . . (ಎದ್ದು) (ಕಪನೀ ಪತಯ್ಯನೂ ಏಳುವನು) ನಂಜಪ್ಪನವರೇ ! . . . ಎಲ್ಲಿ ನಂಜಪ್ಪನವರು ?

ನಂಜಪ್ಪ (ಒಳಗಿಂದ ಬರುತ್ತಾ)—ಇಲ್ಲೇ ಇದೇನೆ. . . . ಗುಂಡನಿಗೆ ಅವನ ಬಾಯ್ ಗೈಡ್‌ಲೀಡರು ಜೋಗುಳ ಹಾಡುವುದಕ್ಕೂ ಗುಗ್ಗರಿ ಮಾಡುವುದಕ್ಕೂ ಒಂದೊಂದು ಸರ್ಟಿಫಿಕೆಟ್ಟನ್ನು ಕೊಟ್ಟಿದ್ದರು . . . ಎಲ್ಲಿ ಅಂತ ಹುಡುಕುತ್ತಿದ್ದೆ. . . ಎದ್ದುಬಿಟ್ಟಿರಲ್ಲಾ . . . ಕೂತುಕೊಳ್ಳಿ.

ರಂಗಮ್ಮ—ಅದಿರಲಿ ! ಲಗ್ನ ಯಾವಾಗ ಅಂತ ನಿಷ್ಕರ್ಷೆಮಾಡುವುದಕ್ಕೋ ಸ್ಕರವೇ ನಾನು ನಿಮ್ಮನ್ನ ಕರೆದದ್ದು !

ನಂಜಪ್ಪ (ಆನಂದಪರವಶರಾಗಿ)—ಈ ಹೊತ್ತು ನೀವು ನನ್ನನ್ನ ಬದುಕಿಸಿದಿರಿ. . .

8

CC-0. Jangamwadi Math Collection, Varanasi. An eGangotri Initiative

ಗುಂಡನಿಗೂ ಗಂಡುಜನ್ಮ ಸಾರ್ಥಕವಾಯಿತು. . . . (ಅಳುತ್ತಾ) ಅಯ್ಯೋ! ಅವನ ತಾಯಿ ಇದ್ದಿದ್ದರೆ ಸೊಸೆಯನ್ನು ನೋಡಿ ಎಷ್ಟು ಸಂತೋಷಪಡುತ್ತಿದ್ದರೋ ?

ನಾಗರತ್ನ (ಸಸುಕೋಪದಿಂದ)—ಅಮ್ಮಾ ! ಇಲ್ಲೇ ಹೊತ್ತು ಕಳೆದರೆ ಹೇಗೆ . . . ಮೈಸೂರಿಗೆ ಇಲ್ಲಿಂದ ನಲವತ್ತುಮೈಲಿ . . . ಜ್ಞಾಪಕ ಇದೆಯೋ ?

ರಂಗಮ್ಮ (ಸಮಾಧಾನಪಡಿಸುತ್ತಾ)—ಚೇತರಿಸಿಕೊಳ್ಳಿ, ನಂಜಪ್ಪನವರೇ ! ಇಲ್ಲಿ ಕೇಳಿ ಇದನ್ನ . . . ನಮ್ಮ ನಮ್ಮ ಅಂತಃಕರಣ ಎಷ್ಟು ಬೇಡ ಅಂದರೂ ಕೂಡ ಲೋಕ ಒಪ್ಪುವ ಹಾಗೆ ವಧೂದಕ್ಷಿಣೆ ಅಂತ ಕೊಂಚವಾದರೂ ತಮ್ಮಿಂದ. . . .

ನಂಜಪ್ಪ (ಕಣ್ಣೊರಸಿಕೊಳ್ಳುತ್ತಾ)—ಅಯ್ಯೋ ! ಹಣವೇನಮ್ಮ ? ಇವತ್ತು ಬರುತ್ತದೆ; ನಾಳೆ ಬರೀಕೈ. ಒಬ್ಬರಿಂದ ತಂದು ತುಂಬಿಕೊಂಡರೆ ಎಷ್ಟು ಕಾಲ ಉಳಿದೀತು ?

ರಂಗಮ್ಮ (ಕೋಪದಿಂದ)—ಆ ವೇದಾಂತವೆಲ್ಲ ಈಗ ಬೇಡಿ . . ಎರಡು ಖರ್ಚನ್ನೂ. . . .

ನಂಜಪ್ಪ—ನಾನೇ ವಹಿಸಿಕೊಳ್ಳುತ್ತೇನೆ . . ಅದಕ್ಕಿಂತ ಹೆಚ್ಚು ಭಾರ ಬಿದ್ದರೆ ನನ್ನ ಬೆನ್ನು ಹೊರಲಾರದು. . .

ರಂಗಮ್ಮ (ಹೊರಡುತ್ತಾ)—ಹಾಗಾದರೆ ಬಿಡಿ . . . ಬಾ, ನಾಗರತ್ನ, ಬನ್ನಿ, ಹೋಗೋಣ . . ಟ್ಯಾಕ್ಸಿಯವನ ಕಾಸು ಕೊಟ್ಟುಬಿಡಿ. . . ಅಲ್ರಿ ! ಶಿರಸ್ತೆ ರಂಗಮ್ಮನವರು ಕನ್ಯಾದಕ್ಷಿಣೆಯಿಲ್ಲದೆ ಗಂಡು ತಂದುಕೊಂಡರು ಅಂತ ಕೇಳಿದರೆ ಊರೂರೇ ನಗುತ್ತಾರೆ. . . ನನ್ನ ಸೀಮಂತ ಪುತ್ರಿ ಸೀತು ಮೊದಲುಗೊಂಡು ಪ್ರತಿಯೊಬ್ಬಳಿಗೂ ಎರಡು ಸಾವಿರಕ್ಕೆ ಕಡಿಮೆ ಕೈ ನೀಡಿದ್ದೇ ಇಲ್ಲ. . . ಗೊತ್ತೆ ನಿಮಗೆ ?

ನಂಜಪ್ಪ—ಹೇಳೇಬಿಡುತ್ತೇನೆ . . ಮುಚ್ಚುಮರೆ ಯಾಕೆ? ನನ್ನ ಹತ್ತಿರ ಈಗ ಆಕೆ ಇಟ್ಟುಹೋದ ಇನ್ಷೂರೆನ್ಸ್ ಹಣ ೧,೩೦೦ ರೂಪಾಯಿ ಇದೆ. . .

ರಂಗಮ್ಮ—ಈ ಮನೆ ?

ನಂಜಪ್ಪ—ಇದು ಸರಾಫ್ ಸುಬ್ಬಮ್ಮನವರದು . . . ಬಾಡಿಗೆ. . . .

ರಂಗಮ್ಮ—೧,೩೦೦! ತೀರ ಕಡಿಮೆ ಆಯಿತಲ್ಲಾ, ನಂಜಪ್ಪನವರೇ ! ನಾಗರತ್ನ ನಾಳೆ ಎಲ್.ಎಲ್.ಬಿ. ಗೆ ಅಂತ ಬೊಂಬಾಯಿಗೆ ಹೋದರೂ ಹೋಗಬಹುದು . . . ಗಂಡು ಕೊಟ್ಟಮೇಲೆ ಸೊಸೆಯನ್ನೋದಿಸುವುದು ನಿಮ್ಮ ಭಾರ ಅಲ್ಲವೇನ್ರಿ ?

ನಂಜಪ್ಪ—ಎಷ್ಟು ಭಾರ ತಡೆಯಬಲ್ಲೆ ಅಂತ ಆಗಲೇ ಅರಿಕೆಮಾಡಿಕೊಂಡಿದೇನೆ. . . .

CC-0. Jangamwadi Math Collection, Varanasi. An eGangotri Initiative

ರಂಗಮ್ಮ—೧,೩೦೦! ತೀರ ಕಡಿಮೆ . . . ಇದುವರೆಗೂ ಅವಳ ವಿದ್ಯಾಭ್ಯಾಸಕ್ಕೆ ಎಷ್ಟು ಖರ್ಚುಮಾಡಿದೇನೆ ಗೊತ್ತೇನ್ರಿ ನಿಮಗೆ? ಗಂಡುಹುಡುಗರಿಗಾದರೆ ಅರ್ಧ ಫ್ರೀಜು; ಹೆಚ್ಚು ಖರ್ಚಿಲ್ಲ . . . (ಗಂಡನ ಕಡೆ ತಿರುಗಿ) ಆ ಲೆಖ್ಖದ ಪುಸ್ತಕ ಎಲ್ಲಿ? ಅದನ್ನೂ ಮರೆತು ಬಿಟ್ಟಿರೇನು?

ಕಪನೀಪತಯ್ಯ—ಪುಸ್ತಕ ಯಾಕೆ? ಬಾಯಿಗೇ ಬರುತ್ತೆ . . . ೧,೮೦೫ ರೂಪಾಯಿ ೮ ಆಣೆ ೬ ಕಾಸು. . . .

ರಂಗಮ್ಮ—ಕೇಳಿದಿರಾ? ಅದಷ್ಟಾದರೂ ರೊಕ್ಕ ವಸೂಲಾಗಬೇಡವೇನ್ರಿ . . . ಇನ್ಷೂರೆನ್ಸಲ್ಲದೆ ನಿಮ್ಮ ಯಜಮಾನಗಿತ್ತಿ ಅದೇನೋ ತಿಂಗಳು ತಿಂಗಳಿಗೂ ಒಂದಿಷ್ಟು ಹಣ ಬರುವ ಹಾಗೆ. . . .

ನಂಜಪ್ಪ (ಆಶ್ಚರ್ಯಭರಿತರಾಗಿ)—ಅದು ಹೇಗೆ ಪತ್ತೆ ಆಯಿತು ನಿಮಗೆ? . . . (ಸ್ವಗತಂ) ಹಾಳು ಚಾಡಿಕೋರರಿಂದ ಉಳಿಗಾಲವೇ ಇಲ್ಲ. . . . (ರಂಗಮ್ಮನವರಿಗೆ) ಹುಂ . . . ತಿಂಗಳಿಗೆ ೩೦, ೩೨ ರೂಪಾಯಿ ಬರುತ್ತದೆ . . . ನನ್ನ ಅನ್ನ ಬಟ್ಟೆ ಖರ್ಚಿಗೆ . . .

ರಂಗಮ್ಮ—ಆ ೩೨ ರೂಪಾಯಲ್ಲಿ ನಾಗರತ್ನಳ ಹೆಸರಿಗೆ ತಿಂಗಳಿಗಿಪ್ಪತ್ತು ರೂಪಾಯಿ ಮನಿ ಆರ್ಡರ್ ಕಳುಹಿಸುತ್ತೀರಾ, ಹೇಳಿ! . . . ಹಾಗಾದರೆ, ಮುಂದಿನ ತಿಂಗಳು ೧೨ನೆಯ ತಾರೀಖಿನ ಲಗ್ನದಲ್ಲೇ ಮದುವೆ . . . ಯಾಕೆ? . . . ಏನು? . . . ಆಗುವುದಿಲ್ಲವೇನು? . . .

ನಂಜಪ್ಪ (ಉಕ್ಕಿಬರುವ ಸಂಕಟವನ್ನು ತಡೆಗಟ್ಟಿ)—ಈ ಗಂಡುಮಕ್ಕಳೆಲ್ಲರೂ ಗೂಡುಬಿಟ್ಟು ಹಾರಿ ಹೋದಮೇಲೆ ಧನುಷ್ಕೋಟಿ ಮರಳನ್ನು ತೆಗೆದುಕೊಂಡು ಹೋಗಿ ಗಂಗೆಗೆ ಹಾಕಿ ಅವರಿಗೆ ಸದ್ಗತಿ ದೊರೆಯಲಿ ಅಂತ ಕೊಂಚ ದಾನಧರ್ಮ ಮಾಡಿ ಮುಂದಿನ ಜನ್ಮದಲ್ಲಾದರೂ ಅವರು ಎದುರಿಗಿರುವಾಗಲೇ ಕಣ್ಣು ಮುಚ್ಚುವ ಪುಣ್ಯ ಪಡೆಯೋಣ ಅಂತಿದ್ದೆ . . . (ಧೈರ್ಯ ತಾಳುತ್ತಾ) ಸರಿ . . . ಬಿಡಿ . . . ನಾನು ಹೇಗೋ ತುತ್ತು ಬಾಳೋ ತೊತ್ತು ಬಾಳೋ ನಡೆಸಿಕೊಂಡು ಹೋಗುತ್ತೇನೆ . . . ನನ್ನ ಗುಂಡ ಸುಖವಾಗಿದ್ದರೆ ಸಾಕು . . . ಆಗಲಿ . . . ಸೊಸೆ ಹೆಸರಿಗೆ ತಿಂಗಳಿಗಿಪ್ಪತ್ತು ರವಾನಿಸಿಬಿಡುತ್ತೇನೆ . . . ಆಗಬಹುದು. . . .

ರಂಗಮ್ಮ—ಮುಂದಿನ ತಿಂಗಳು ೧೨ನೆಯ ತಾರೀಖು ನಿಮಗೆ ಅನುಕೂಲವೋ?

ನಂಜಪ್ಪ—ನನಗೇನು? ಶುಭಸ್ಯ ಶೀಘ್ರಂ. . . .

ನಾಗರತ್ನ—ಅಮ್ಮಾ! (ಆಕೆಯ ಕೈಹಿಡಿದುಕೊಂಡು) ಆ ದಿನ ನನ್ನ ಕಾಲೇಜು ಡೇ . . . ಓಲ್ಡ್ ಗರ್ಲ್ಸನ್ನ ನಾನೇ ಭಾಷಣ ಗೀಷಣ ಕೊಟ್ಟು ವೆಲ್ಕಂ ಮಾಡಬೇಕಮ್ಮ. . . .

CC-0. Jangamwadi Math Collection, Varanasi. An eGangotri Initiative

ರಂಗಮ್ಮ—ಹದಿನೈದನೆಯ ತಾರೀಖು ?

ನಂಜಪ್ಪ—ಆಗಬಹುದು . . . ನಮ್ಮ ಜೋಯಿಸರನ್ನ ಒಂದು ಮಾತು ಕೇಳಿ ಕಾಗದ ಬರೆಯುತ್ತೇನೆ. . .

ರಂಗಮ್ಮ—ಹಾಗಾದರೆ ಸರಿ . . . ನಾವಿನ್ನು ಹೊರಡುತ್ತೇವೆ . . . ಡ್ರೈವರಿಗೆ ಹಣ ಕೊಟ್ಟುಬಿಡಿ. . .

ನಾಗರತ್ನ—ಲಗ್ನಪತ್ರಿಕೆ ಅಚ್ಚು ಹಾಕಿಸಿ ನಮಗೊಂದು ಸಾವಿರ ಪ್ರತಿ ಕಳುಹಿಸಿಕೊಡಬೇಕು ಅಂತ ಹೇಳಮ್ಮ . . . ಇಲ್ಲದಿದ್ದರೆ ನಾನೇ ಹೇಳಿಬಿಡುತ್ತೇನೆ. . .

ನಂಜಪ್ಪ—ಅರ್ಥವಾಯಿತು . . . ಹೇಗೆ ಅಚ್ಚುಹಾಕಿಸುವುದು ? ಯಥಾ ಪ್ರಕಾರತಾನೆ ? . . . ಕೆಂಗಾರೆಯಲ್ಲಿರುವ ಶ್ರೀ ಶಿರಸ್ತೆ ರಂಗಮ್ಮನವರ ಪುತ್ರಿ ನಾಗರತ್ನ ಎಂಬ ವಧುವಿಗೆ. . .

ರಂಗಮ್ಮ—ಲೇಟ್ ಶ್ರೀ ಅಂತ ನಿಮ್ಮ ಯಜಮಾನಿಗಿತ್ತಿಯವರ ನಾಮಧೇಯ ಹಾಕಿ. . .

ನಂಜಪ್ಪ—ಆ ಮೇಲೆ ಗೊತ್ತೇ ಇದೆ . . . ವರನ ಹೆಸರು . . . ಗುಂಡನನ್ನು ಕೊಟ್ಟು. . .

ನಾಗರತ್ನ—ಆ ಹೆಸರು ಬೇಡಮ್ಮ . . ಮದುವೆಯಲ್ಲಿ ಹೇಗಿದ್ದರೂ ಬದಲಾಯಿಸಬೇಕು . . ಈಗಲೇ ಬದಲಾಯಿಸಿ ಬಿಡೋಣ. . .

ನಂಜಪ್ಪ—ತಾವು ಯಾವ ನಾಮ ಬೇಕಾದರೂ ಹಾಕಿ. . .

ರಂಗಮ್ಮ—ನೀನು ನಾಗರತ್ನ . . . ಅವನಿಗೆ ಗಾನರತ್ನ ಅಂತ ಹೆಸರಿಡೋಣವೇ ?

ನಾಗರತ್ನ—ಥೂ ! ಬಾಯಿಬಿಟ್ಟರೆ ಬಣ್ಣಗೇಡು . . ರಾಗ ಅಂದರೆ ದ್ವೇಷ ! . . . ತಾಳಮ್ಮ . . ನಾನು ಹೇಳುತ್ತೇನೆ. . .

ಕಪನೀಪತಯ್ಯ—ಪಶುಪತಿ ಅಂತ ಇಡೋಣವೇ ? ಅಂತೀನಿ. . .

ರಂಗಮ್ಮ—ಸುಮ್ಮನಿರಿ, ನೀವು . . ನಾಗರತ್ನ ಯೋಚನೆ ಮಾಡುತ್ತಿದಾಳೆ. . .

ನಾಗರತ್ನ—ಹಾ ! . . . "ಶಿಶುಪಾಲ !" . . . ಶಿಶುಪಾಲ ಅಂತಿರಲಿ. . .

ನಂಜಪ್ಪ—ನ್ಯಾಯವಾದ ಹೆಸರು ! ಸರಿ, ಅದೇ ಇರಲಿ . . "ಶಿಶುಪಾಲನನ್ನು ಕೊಟ್ಟು" ಅಂತ ಹಾಕಿಸುತ್ತೇನೆ . . ಆ ಮೇಲೆ. . . ಸಪ್ತಮಾತೃಗಳ ಪ್ರೇರಣೆಯಿಂದ . . . ಇತ್ಯಾದಿ . . ಗೊತ್ತೇ ಇದೆ . . ಸಗಂಡಸಪರಿವಾರ . . . ಎರಡು ದಿನ ಮುಂಚಿತವಾಗಿಯೇ ಬಂದು. . .

CC-0. Jangamwadi Math Collection, Varanasi. An eGangotri Initiative

ಕಪಸೀಪತಯ್ಯ—ನಾಲ್ಕು ದಿನ ಮುಂಚಿತವಾಗಿಯೇ ಬರಲಿ, ಹಾಗೆ ಅಚ್ಚು ಹಾಕಿಸಬಾರದೆ. ಅಂತೀನಿ. . .

ನಂಜಪ್ಪ—ಆಗಲಿ! ಅದಕ್ಕೇನು? ನಾಲ್ಕು ಅಂತಲೇ ಹಾಕಿಸುತ್ತೇನೆ . . ಅಷ್ಟೆತಾನೆ?

ರಂಗಮ್ಮ (ಹೊರಡುತ್ತಾ)—ಹಾಗಾದರೆ ನಾವು ಬರುತ್ತೇವೆ; ಇನ್ನು ಯಾವು ದಿದ್ದರೂ ಕಾಗದದ ಮೂಲಕ . . . ನಮಗೆ ಹೊತ್ತಾಯಿತು . . ಹೊತ್ತಿಗೆ ಮುಂಚೆ ಮೈಸೂರು ಸೇರೋಣ. . .

ನಂಜಪ್ಪ—ಅಣ್ಣಯ್ಯ! ಕಪಸೀಪತಯ್ಯನವರಿಗೆ ಗಂಧಾಕ್ಷತೆ ಕೊಡು . . . (ಅಣ್ಣಯ್ಯ ಗಂಧಾಕ್ಷತೆ ಬಟ್ಟಲುಗಳನ್ನು ತೋರಿಸುವನು. ಕಪಸೀಪತಯ್ಯನು ಇಟ್ಟುಕೊಳ್ಳು ವನು) ನನ್ನ ಅಣ್ಣನ ಮಗ. . . ಈ ಊರಿಗೇ ಕೊಟ್ಟಿದೆ . . ಇದಕ್ಕಾಗಿಯೇ ಕರೆಸಿದ್ದೆ . . . ಲೋ . . ಆ ತಾಂಬೂಲದ ತಟ್ಟೆಯನ್ನ ಹಾಗಿಡು (ರಂಗಮ್ಮನವರ ಮುಂದಿಡುವನು) ದಯವಿಟ್ಟು ತೆಗೆದುಕೊಳ್ಳಬೇಕು . . (ತೆಗೆದುಕೊಳ್ಳುವರು)

ರಂಗಮ್ಮ—ಹಾಗಾದರೆ ನಾವು ಬರುತ್ತೇವೆ . . ಡ್ರೈವರಿಗೆ ರೂಪಾಯಿ? . .

ನಂಜಪ್ಪ—ಬಂದೆ . . ಇಕೊ ಕೊಟ್ಟೆ. . . (ಅವರ ಹಿಂದೆಯೇ ಹೊರಕ್ಕೆ ಹೊರಡು ವನು. . . ಅಣ್ಣಯ್ಯ ಒಳಗೆ ಹೋಗಿ ಗುಂಡನನ್ನು ಕರೆದು ತರುವನು. . ಅಷ್ಟುಹೊತ್ತಿಗೆ ನಂಜಪ್ಪನವರೂ ಹಸನ್ಮುಖಿಗಳಾಗಿ ಪ್ರವೇಶಿಸುವರು. ಘಟಕ್ಕನೆ ಮಗನನ್ನು ತಬ್ಬಿಕೊಳ್ಳುವರು) ಗುಂಡಾ! ಗೆದ್ದೆ ಕಣೋ ನೀನು. ಅಂತು ಒಳ್ಳೇ ಜಾಗಕ್ಕೆ ಸೇರಿದ ಹಾಗಾಯಿತು, ಹುಡುಗಿ ಕೂಡ ಅಷ್ಟೇನೂ ಅವಲಕ್ಷಣವಾಗಿಲ್ಲ ಅಲ್ಲವೇನೋ?

ಗುಂಡ (ಅಳುತ್ತಾ)—ನನಗೆ ಮದುವೇನೇ ಬೇಡ ಅಣ್ಣಾ . . . ಅವರನ್ನ ಕಂಡರೆ ನನಗೆ ಭಯವಾಗುತ್ತದಣ್ಣಾ!

ನಂಜಪ್ಪ—ಸಾಕು, ಸುಮ್ಮನಿರೋ! ಅಧಿಕಪ್ರಸಂಗಿ! ನಿನ್ನ ಯೋಗ್ಯತೆಗೆ ಏನಾರಿಯೇ ಚೆನ್ನಾಗಿದ್ದಾಳೆ. ನಿನ್ನಂಥ ಮುರುಕಲು ಮನ್ಮಥನಿಗೆ ಬೇರೆ ಯಾವ ರತಿ ಸಿಕ್ಕುತ್ತಾಳೋ? ತಿಮ್ಮಪ್ಪಯ್ಯನ ಸೊಸೆಗಿಂತ ಎಷ್ಟೋ ವಾಸಿ . . ನಿನಗೇನೋ? ಸ್ವರ್ಗಲೋಕದಂಥ ಮಾವನಮನೆ; ಇನ್ನೂ ಇಬ್ಬರು ಅಳಿಯಂದಿರಿದ್ದಾರೆ; ಗೃಹ ಕೃತ್ಯದ ಹೊರೆ ನಿನ್ನ ಮೇಲೆ ಅಷ್ಟು ಬೀಳುವುದಿಲ್ಲ; ಹೊಟ್ಟೆಗೂ ಬಟ್ಟೆಗೂ ಆತಂಕ ವಿಲ್ಲ; ಕುಲ ಗೋತ್ರ ಚೆನ್ನಾಗಿದೆ; ತಂದೆಮನೆಗೆ ಹತ್ತಿರವೇ ಮಾವನಮನೆ, ಅಂಥ ದೂರವೇನೂ ಇಲ್ಲ. ಪಾವಗಡಕ್ಕಿಂತ ಹತ್ತಿರವಲ್ಲವೇನೋ ಕೆಂಗಾರೆ? ಇಷ್ಟು ಅನುಕೂಲ ಸಾಲದೇನೋ? ಬೇರೊಬ್ಬರಾದರೆ ಕುಣಿದಾಡಿಬಿಡುತ್ತಿದ್ದರು. . . .

ಅಣ್ಣಯ್ಯ—ಸಂದೇಹವೇನು? ಇದ್ದದ್ದರಲ್ಲಿ ನೀನೇ ಅದೃಷ್ಟವಂತ ಗುಂಡ. ಇಷ್ಟುದಿನ ಕಾದರೂ ಕಡೆಗೆ ಪ್ರಶಸ್ತವಾದ ಜಾಗಕ್ಕೆ ಹೋಗುತ್ತೀಯ.

CC-0. Jangamwadi Math Collection, Varanasi. An eGangotri Initiative

(ಗುಂಡಾ, ಗುಂಡಾ ಅಂತ ಯಾರೋ ಇಬ್ಬರು ಹೊರಗಡೆ ಕೂಗುವರು. . . .)

ನಂಜಪ್ಪ—ಅಣ್ಣಯ್ಯ . . . ಯಾರದು ನೋಡು. . . . (ಅಣ್ಣಯ್ಯ ಹೊರಡುವನು; ಅಷ್ಟರೊಳಗೆ ರಾಮು, ಸೋಮು ಇಬ್ಬರೂ ಒಳಕ್ಕೆ ಬರುವರು; ಗುಂಡ ಒಳಕ್ಕೆ ಹೋಗುವನು) ಓ! ಬನ್ನಿರಪ್ಪ . . . ಕೂತುಕೊಳ್ಳಿ . . . ಕೂತುಕೊಳ್ಳಬಾರದೆ? ಅಂಥ ಅವಸರ ಏನು (ಅವರಿಬ್ಬರೂ ಬೆಂಚಿನ ಮೇಲೆ ಕೂರುವರು) ಒಳ್ಳೇ ಸಮಯಕ್ಕೆ ಬಂದಿರಿ . . . ಅಣ್ಣಯ್ಯ! ಅವರಿಬ್ಬರಿಗೂ ಗಂಧಾಕ್ಷತೆ ಕೊಡು . . . ಇರು . . . ಒಳಗಿಂದ ಒಂದೊಂದು ತೆಂಗಿನಕಾಯಿ ತಂದು ಅದನ್ನೂ ವೀಳ್ಯವನ್ನೂ ತಟ್ಟೆಯಲ್ಲಿಟ್ಟು ಕೊಡು. . . .

(ಅಣ್ಣಯ್ಯ ಒಳಕ್ಕೆ ಹೋಗುವನು)

ರಾಮು—ಏನಿದು, ನಂಜಪ್ಪನವರೇ! ಎಂದೂ ಇಲ್ಲದ ನಡಗರ?

ಸೋಮು—ಗುಂಡನ ಮದುವೆ ನಿಶ್ಚಯವಾಯಿತು ಅಂತ ಕಾಣುತ್ತದೆ. . . .

ನಂಜಪ್ಪ—ಸೋಮು ಹೇಳಿದ್ದು ಸರಿ. . . . ಗುಂಡಾ, ಬಾರೋ, ಹೊರಕ್ಕೆ ಬಾರೋ. . . . ಎಲ್ಲೋ ಅವಿತುಕೊಂಡಿದೆಯಲ್ಲಾ . . . (ಅಣ್ಣಯ್ಯ ಫಲ ಗಂಧಾಕ್ಷತೆಗಳನ್ನು ಕೊಡುವನು) ಗುಂಡಾ . . .

(ಗುಂಡನ ಪ್ರವೇಶ . . . ಇನ್ನೂ ಅಳುತ್ತಲೇ ಇರುವನು)

ಗುಂಡ—ನನಗೆ ಮದುವೆ ಬೇಡ, ಅಣ್ಣ. . . . ಇದುವರೆಗೂ ಯಾರೂ ಒಪ್ಪದೇ ಇದ್ದದ್ದೇ ಚೆನ್ನಾಗಿತ್ತು. . . . ಅವರ ಮನೆಗೆ ನಾನು ಖಂಡಿತವಾಗಿಯೂ ಹೋಗುವುದಿಲ್ಲ ಅಣ್ಣ!

ನಂಜಪ್ಪ—ಹೇಗೋ ಒಂಟಿ ತೋಳಿಗೆ ಜೋಡಿ ಜನಿವಾರ ಬೀಳುತ್ತಲ್ಲಾ . . . ಅದಕ್ಕೆ ಸಂತೋಷಪಡುವುದನ್ನ ಬಿಟ್ಟು, ಹೆದರಿಕೊಂಡು ಸಾಯುತ್ತಾನೆ. . . . (ರಾಮು ಸೋಮುಗಳ ಕಡೆ ತಿರುಗಿ) ಲ್ರೋ! ನಿಮ್ಮಿಬ್ಬರಿಗೂ ಈಗ ಏನು ಕೊರತೆ? ನೀವಾದರೂ ಇವನನ್ನ ದಾರಿಗೆ ತರಬಾರದೆ? ಕೈಹಿಡಿದವರ ನೆರಳಿನಲ್ಲಿ ಬಾಳುವುದೇ ಧರ್ಮ, ದಶರಥ ಮಹರಾಯನ ಹಾಗೆ ಪ್ರಾಣ ತೆತ್ತರೂ ಹೆಂಡತಿಯ ಮಾತನ್ನುಳಿಸಬೇಕು ಅಂತ ಎಲ್ಲಾ ಕೊಂಚ ಹೇಳಿರೋ ಇವನಿಗೆ. . . . ನೀವೆಲ್ಲಿಗೆ ಹೊರಟಿರಿ, ಈಗ. . . .

ರಾಮು—ದುರ್ಗಿಗುಡಿಗೆ.

ನಂಜಪ್ಪ—ಲೋ! ಗುಂಡಾ! ನೀನೂ ಹೋಗೋ. ಗುಡಿಗೆ ಹೋಗಿ ಎಲ್ಲವೂ ನಿರ್ವಿಘ್ನವಾಗಿ ನಡೆಯಲಿ ಅಂತ ಹರಸಿಕೊ, ಹೋಗು . . . ಕರೆದು

CC-0. Jangamwadi Math Collection, Varanasi. An eGangotri Initiative

ಕೊಂಡು ಹೋಗಿರಪ್ಪ ನಿಮ್ಮ ಸ್ನೇಹಿತನನ್ನ . . . (ಅವರಿಬ್ಬರೂ ಎದ್ದು ಗುಂಡನನ್ನು ಜೊತೆಮಾಡಿಕೊಂಡು ಹೊರಡಲುದ್ಯುಕ್ತರಾಗುವರು) ಗುಂಡಾ, ಹೇಳಿದ ಹಾಗೆ ಕೇಳ್ಕೋ, ನಿನ್ನ ತಾಯಿವಂಶದ ಹೆಸರನ್ನುಳಿಸೋ . . .

(ರಾಮು ಸೋಮು ಗುಂಡ ಎಲ್ಲರೂ ಹೊರಡುವರು)

ಅಣ್ಣಯ್ಯ (ಮೂಲೆಯಲ್ಲಿದ್ದ ಛತ್ರಿಯನ್ನು ಕೊಂಕುಳಿಗೇರಿಸುತ್ತಾ)—ನಾನೂ ಬರುತ್ತೇನೆ ಚಿಕ್ಕಪ್ಪ . . . ಇನ್ನೇನು? ಕಡೆಗೂ ಶುಭದಲ್ಲೇ ಪರ್ಯವಸಾನವಾಯಿತಲ್ಲ. . . .

ನಂಜಪ್ಪ—ಹೋಗಿಬಿಟ್ಟು ಬಾ . . . ಗುಂಡನಿಗೆ ನೀನೂ ಕೊಂಚ ಬುದ್ಧಿವಾದ ಹೇಳು. . . . ಕೆರೆ ಬಾವಿ ಹತ್ತಿರ ನೀರಿಗೆ ಬಂದಾಗ . . . (ಅಣ್ಣಯ್ಯ ಹೊರಡುವನು).

(ತೆರೆ)

---

## ದೃಶ್ಯ ೩

ಮುದ್ದೂರಿನ ಮತ್ತೊಂದು ಬೀದಿ . . . ರಾತ್ರಿ ೭-೩೦

(ರಾಮು ಸೋಮು ಗುಂಡ ಮೂವರೂ ಮಾತನಾಡುತ್ತ ಹೋಗುತ್ತಿರುವರು)

ಗುಂಡ—ಸರಿಯಾದ ಬಡಕಲು ಪೆಡಂಭೂತದ ಹಾಗಿದ್ದಾಳವಳು . . . ನನ್ನ ಜೀವನ ನಡೆಸುವುದಕ್ಕೆ ನನಗೆ ಅವಳ ನೆರಳು ಬೇಕಿಲ್ಲ, ರಾಮು . . . .

ಸೋಮು—ನೋಡು ಗುಂಡ! ಇವೆಲ್ಲ ನಮ್ಮ ಕರ್ಮ ಕಣೊ . . . ನಮಗೆ ಬೇಕಾದವರು ನಮ್ಮನ್ನೊಪ್ಪುವುದಿಲ್ಲ; ಒಪ್ಪಿದವರು ನಮಗೆ ಬೇಕಾಗುವುದಿಲ್ಲ . . . ಹೀಗೆಯೇ ನೋಡು ಪ್ರಪಂಚ. . . .

ರಾಮು—ನಮ್ಮ ಅಕ್ಕತಂಗಿಯರಿಗಿರುವ ಸ್ವಾತಂತ್ರ್ಯ ನಮಗೆಲ್ಲಿದೆ ಗುಂಡಾ!

ಸೋಮು—ಲೋಕದ ಸೊಟ್ಟನ್ನು ತಿದ್ದಲು ಗಂಡುಗಂಡಸರಿಂದ ಸಾಧ್ಯವೇ? ಅನೂಚಾನವಾಗಿ ಬಂದದ್ದಲ್ಲವೇ, ಈ ಆಚಾರಗಳೂ ಪದ್ಧತಿಗಳೂ?

ಗುಂಡ—ಆದರೂ ಶುದ್ಧ ಅನ್ಯಾಯ! ಹೋತಗಳನ್ನು ಸಂತೆಗೆ ತರುವಹಾಗೆ ನಮಗೆ ಅಲಂಕಾರಮಾಡಿ ಸಿನಿಮಾ ಹಾಡು ಕಲಿಸಿ ಎರವಲಂಗಿ ತೊಡಿಸಿ ಇಂದ್ರ ಚಂದ್ರ ಅಂತ ಹೊಗಳಿ. . . .

ರಾಮು—ಈಗ ನೀನು ಮದುವೆಗೆ ಒಪ್ಪಿಕೊಳ್ಳದೇ ಹೋದರೆ ನಿನ್ನನ್ನ ಸುಮ್ಮನೆ ಇರಗೊಡಿಸುತ್ತಾರೆಯೇ? ಮನೆ ಹೊರಗೆ ತಲೆಹಾಕುವ ಹಾಗಿಲ್ಲ

CC-0. Jangamwadi Math Collection, Varanasi. An eGangotri Initiative

ನೀನು. ನೀನು ಎದುರು ಬಂದರೆ ಅಪಶಕುನ ಅಂತ ಶಪಿಸುತ್ತಾರೆ. ದುರ್ಗಿ ಗುಡಿಯಲ್ಲಿ ತೀರ್ಥ ಕೊಡುವುದಿಲ್ಲ, . . .

ಗುಂಡ—ಪ್ರಾಣ ಕಳೆದುಕೊಂಡುಬಿಡುತ್ತೇನೆ, ಅಷ್ಟೆ. . . .

ಸೋಮು—ಅಯ್ಯೋ! ಅಂಥ ಬೆದರಿಕೆಗಳಿಗೆಲ್ಲ ಈ ಜನ ಜಗ್ಗುವುದಿಲ್ಲಪ್ಪ . . . ನಾನೂ ಹೀಗೆಯೇ ಹೆದರಿಸಿದೆ, ಗುಂಡಾ! ಕತ್ತಿಗೆ ಹಗ್ಗ ಸುತ್ತಿಕೊಂಡು ಸುಮ್ಮ ಸುಮ್ಮನೆ ಬಾಯಿ ಬಡಿದುಕೊಂಡೆ. . . . ಮದುವೆಯಾಗದೆ ಮನೆಯಲ್ಲಿರುವುದಕ್ಕಿಂತ ಸಾಯುವುದೇ ಮೇಲು ಅಂತ ಎಲ್ಲರೂ ತೆಪ್ಪಗಿದ್ದುಬಿಟ್ಟರು . . . ಕಡೆಗೆ ನಾನೇ ಸೋತೆ . . .

ರಾಮು—ಅಯ್ಯೋ! ಆತ್ಮಹತ್ಯಮಾಡಿಕೊಂಡರೆ ಸಲಸಲಕ್ಕೂ ಗಂಡುಜನ್ಮ ತಪ್ಪಿದ್ದೇ ಅಲ್ಲ ಅಂತ ಮೊನ್ನೆ ನಮ್ಮ ಮನೆಯವರು ಹೇಳುತ್ತಿದ್ದರು. . . . ಯಾವುದೋ ಪುರಾಣದಲ್ಲಿದೆಯಂತೆ . . . . ಇಕೊ! ಜೋಯಿಸರು ಬಂದರು. ಅವರನ್ನೇ ಕೇಳು, ನಿನಗೆ ಅನುಮಾನವಿದ್ದರೆ. . . . (ಜೋಯಿಸರ ಪ್ರವೇಶ)

ಸೋಮು—ಜೋಯಿಸರೇ! ಗುಂಡನಿಗೆ ಮದುವೆ . . . ನಿಷ್ಕರ್ಷೆ ಆಗಿಬಿಟ್ಟಿದೆ. . . .

ಜೋಯಿಸರು—ಲ್ರೋ! ಯಾಕ್ರೋ ಅವನನ್ನ ಗೋಳಾಡಿಸುತ್ತೀರಾ? ಹಾಗೆಲ್ಲ ಹಾಸ್ಯಮಾಡಿಬೇಡಿರಪ್ಪ. . . .

ರಾಮು—ನಿಜ! ಜೋಯಿಸರೆ! ತಮಾಷೆ ಅಲ್ಲ . . . ಶಿರಸ್ತೆ ರಂಗಮ್ಮನವರಂತಲ್ಲಾ. . . .

ಸೋಮು—ಅವರೆಲ್ಲರೂ ಬಂದಿದ್ದರಂತೆ . . .

ರಾಮು—ಕಾಸು ಪೂರ ಕೇಳಿದರಂತೆ. . . .

ಸೋಮು—ಅಂತು ಆಗಲಿ ಅಂತ ಒಪ್ಪಿಕೊಂಡು ಹೋಗಿದಾರಂತೆ. . . .

ಜೋಯಿಸರು—ಯಾರು ಬಂದಿದ್ದರು, ಎಷ್ಟು ಹಣ ಕೇಳಿದರು, ಅವೆಲ್ಲ ಮುಖ್ಯವಲ್ಲ. . . . ಗುಂಡನನ್ನ ನೋಡಿದರೋ, ಅವನನ್ನೊಪ್ಪಿದರೋ . . . ಅದು ಮುಖ್ಯ. . . .

ರಾಮು—ಈಗ ತಾನೇ ಲಗ್ನಕ್ಕೆ ದಿನ ಗೊತ್ತುಮಾಡಿಕೊಂಡು ಹೊರಟು ಹೋದರು ಮೈಸೂರು ಕಡೆ . . . ನೋಡಿ . . . ಅವರ ಮನೆಯಲ್ಲಿ ನಮಗೆ ಗಂಧಾಕ್ಷತೆ ತೆಂಗಿನಕಾಯಿ ಕೊಟ್ಟಿದಾರೆ. . .

ಜೋಯಿಸರು—ನಿಜವೋ, ಹಾಗಾದರೆ! ಗುಂಡಾ! ನಮಸ್ಕಾರ ಮಾಡೋ ನನಗೆ . . . ನಡುರಸ್ತೆಯಾದರೂ ಪರವಾಗಿಲ್ಲ . . . ನನ್ನ ಸಾಧಿಸ ಸಾಮರ್ಥ್ಯಕಣೋ ಅದು. . .

CC-0. Jangamwadi Math Collection, Varanasi. An eGangotri Initiative

ಗುಂಡ (ರೇಗಿ)—ಅಲ್ಲ ಜೋಯಿಸರೇ! ನಿಮ್ಮ ಸಾದನ್ನ ನಾನು ಹೊರಕ್ಕೆ ತೆಗೆಯಲೇ ಇಲ್ಲ . . . (ಗುಡಿಯಕಡೆ ಹೊರಡುವರು)

ಜೋಯಿಸರು—ಹೋಗೋ! ಹೋಗೋ! ದೊಡ್ಡವರ ಆಶೀರ್ವಾದ ಇಲ್ಲದೆ ಹೇಗೋ ಅವರೊಪ್ಪಿದರು ನಿನ್ನನ್ನ? . . . ಬೇಗ ಹೋಗಿ, ಗುಡಿಗೆ . . . ನಾನು ನಂಜಪ್ಪನ ಮನೆಗೆ ನುಗ್ಗಿಬಿಟ್ಟು ಮುಂದಕ್ಕೆ ಹೋಗುತ್ತೇನೆ. (ಹೊರಡುವರು)

(ತೆರೆ)

---

## ದೃಶ್ಯ ೪

ನಂಜಪ್ಪನವರ ಮನೆ, ಮರುದಿನ ಸಂಜೆ ೮ ಗಂಟೆ

(ನಂಜಪ್ಪನವರೂ ಜೋಯಿಸರೂ ಮಾತನಾಡುತ್ತಿರುವರು. . .)

ಜೋಯಿಸರು—ಕನಿಷ್ಠ ಪುತ್ರ ಅಂತ ಗುಂಡನ ಮದುವೆಯನ್ನ ನೀನು ಕಡೆಗಾಣಿಸಬಾರದು, ನಂಜಪ್ಪ. . .

ನಂಜಪ್ಪ—"ಗಂಡು ಕೊಟ್ಟೆಯೋ, ಗಂಟು ಕೊಟ್ಟೆಯೋ?" ಅಂತಾರಲ್ಲಾ ಹಾಗೆ ಅವರು ಗಳಿಸಿಟ್ಟ ಆಸ್ತಿಯನ್ನೆಲ್ಲಾ ಕೊಟ್ಟೆ. ನನ್ನ ಹೊಟ್ಟೆ ಮೇಲೆ ಹೊಡೆದು ತಿಂಗಳಿಗಿಪ್ಪತ್ತು ಬೇರೆ ಕಿತ್ತುಕೊಂಡರು. ಇನ್ನು ನಾನು ಯಾರ ಮನೆಗೆ ಕನ್ನ ಹಾಕಲಿ, ಸಂಗೀತಕ್ಕೆ, ಸಂತರ್ಪಣೆಗೆ, ಸಾರೋಟಿಗೆ? . . . ನಾನೇನು ಮಾಡಲಿ? ವಾಲಗದವನಿಗೇನೋ ಹೇಳಿ ಕಳುಹಿಸಿದೇನೆ. . .

ಜೋಯಿಸರು—ನಿಜ, ನಿಜ. . . . ಮಂತ್ರಲೋಪ ತಂತ್ರಲೋಪವಿಲ್ಲದೆ ಶಾಸ್ತ್ರೋಕ್ತವಾಗಿ ನಡೆದರೆ ಅದೇ ಮುಖ್ಯ.

ನಂಜಪ್ಪ—ಮಂತ್ರ ಹೇಳುವ ಮಹರಾಯಗಿತ್ತಿ ಅಲ್ಲ ಅಂತ ಕಾಣುತ್ತದೆ, ಆಕೆ . . . ನಿಮ್ಮ ಹೋಮ, ನಿಮ್ಮ ಹೊಗೆ ಯಾವುದೂ ಅವರಿಗೆ ಬೇಕಾಗಿರುವುದಿಲ್ಲ, ಹುಡುಗಿ ಕೊಂಚ ಷೋಕಿ . . . ಹೇಗೋ ಅಂತು ಆಯಿತು, ಅನ್ನಿಸಿಬಿಡಿ, ಜೋಯಿಸರೆ . . . ಅಗ್ನಿಸಾಕ್ಷಿಯಾಗಿ ಒಂದು ಜನಿವಾರ ಹಾಕಿಸಿಬಿಡಿ, ಅಷ್ಟೆ. . . . ಹೆಚ್ಚು ತಂಟೆಗೆ ಹೋಗಬೇಡಿ . . . ನಿಮ್ಮ ಕೈಗೆ ಇಪ್ಪತ್ತು ರೂಪಾಯಿ ಕೊಟ್ಟುಬಿಡುತ್ತೇನೆ . . . ಬೆಲ್ಲದ ಗಣೇಶನಿಗೆ ಅಲ್ಲೇ ನೈವೇದ್ಯ ಅಂತಾರಲ್ಲಾ ಹಾಗೆ ಅದಕ್ಕೂ ಇದಕ್ಕೂ ಯಾವುದಕ್ಕೂ ಅದನ್ನೇ ಬಳಸಿಕೊಳ್ಳಿ. . . . ಗಳಿಗೆ ಗಳಿಗೆಗೂ ಹಿರಣ್ಯಗರ್ಭ ಹೇಮಬೀಜ ಅಂತ ನನ್ನನ್ನ

CC-0. Jangamwadi Math Collection, Varanasi. An eGangotri Initiative

ಹೀಯಾಳಿಸಬೇಡಿ (ಅಣ್ಣಯ್ಯನ ಪ್ರವೇಶ) ಸಿಕ್ಕಿದನೇ ವಾಲಗದವನು? ಏನು ಹೇಳಿದ?

ಅಣ್ಣಯ್ಯ—ಗುಂಡನ ಮದುವೆಯ ದಿನ ಇನ್ನೂ ನಾಲ್ಕೈದು ಲಗ್ನಗಳಿವೆಯಂತೆ ಈ ಊರಲ್ಲೇ . . ಎದುರುಮನೆ ಎಂಕಮ್ಮ ಭಟ್ಟರು ಆಗಲೇ ಗೊತ್ತುಮಾಡಿದಾರಂತೆ . . ಅವನು ಹೇಳುತ್ತಾನೆ, ಚಿಕ್ಕಪ್ಪ, ಎರಡು ಮನೆಗಳಿಗೂ ನಡುವೆ, ರಸ್ತೆಯಲ್ಲೇ ನಿಂತು ಬಾರಿಸುತ್ತೇನೆ . . ಇಬ್ಬರಿಗೂ ಆಯಿತು. . . ಒಬ್ಬರೇ ೨೪ ರೂಪಾಯಿ ಕೊಡುವುದಕ್ಕಿಂತ ಇಬ್ಬರೂ ಹಂಚಿಕೊಂಡು ೩೨ ಕೊಡಿ ಅಂತ . .

ನಂಜಪ್ಪ—ಇಬ್ಬರು ಜೊತೆಯಾದರೆ ಮೂರನೆಯವನಿಗೆ ಲಾಭ! ಹೋಗಲಿ! ಅದೂ ಒಂದು ಅನುಕೂಲವೇ. . . ಜಗುಲಿಯಮೇಲೆ ಜಾಗ ಬೇರೆ ಉಳಿಯಿತು. . . ಕೂತರೇನು, ನಿಂತರೇನು, ಊದಿದ್ದು ಕಿವಿಗೆ ಬೀಳುವುದು ಮುಖ್ಯ . . ಎಂಕಮ್ಮ ಭಟ್ಟರೊಪ್ಪುತ್ತಾರೋ?

ಅಣ್ಣಯ್ಯ—ಅವರನ್ನ ಅವನೇ ಒಪ್ಪಿಸುತ್ತಾನಂತೆ. . .

ನಂಜಪ್ಪ—ಹಾಗಾದರೆ ಗುಡಿಗೆ ಹೋದಾಗ ಅಲ್ಲೇ ಅವನಿಗೆ ಆಗಲಿ ಅಂತ ಹೇಳಿಬಿಡು. . (ಒಳಗೆ ಯಾರೋ 'ನಂಜಪ್ಪನವರೇ' ಅಂತ ಕೂಗುವರು) ಯಾರು, ನೋಡು, ಅಣ್ಣಯ್ಯ. . .

ಜೋಯಿಸರು—ನಾನಿನ್ನು ಹೊರಡುತ್ತೇನೆ, ನಂಜಪ್ಪ . . ಇಪ್ಪತ್ತು ರೂಪಾಯಿ ಕೊಡುತ್ತೇನೆ ಅಂದೆಯಲ್ಲಾ, ಅದರಲ್ಲೇ ಖರ್ಚೆಲ್ಲ ನಿಭಾಯಿಸುತ್ತೇನೆ . . ಕೊನೆಯ ದಿವಸ ಮಾತ್ರ ನನಗೆ ಅಂತ ಎಂಟು ರೂಪಾಯಿ ಸಂಭಾವನೆ ಕೊಟ್ಟು ಬಿಡು. . .

ನಂಜಪ್ಪ—ವಾಲಗದಲ್ಲಿ ಉಳಿದದ್ದನ್ನ ಈ ರೀತಿ ಹೊಡೆದುಕೊಂಡು ಹೋಗುತ್ತೀರೋ? . . . ಆಗಲಿ . . . ಅಷ್ಟೇತಾನೆ? (ಜೋಯಿಸರು ಹೊರಡುವರು; ಸೀತಾಪತಿಯನ್ನೂ ಕರೆದುಕೊಂಡು ಅಣ್ಣಯ್ಯನ ಪ್ರವೇಶ) ಓ! ಬಾರಯ್ಯ! ಸೀತಾಪತಿ! ನಿನ್ನ "ಮಹನೀಯ ಸೇವಾಸಮಾಜ" ಚೆನ್ನಾಗಿ ನಡೆಯುತ್ತಾ ಇದೆಯೋ? ಗಂಡು ಹುಡುಗರಿಗೆ ಚಿಕ್ಕಂದಿನಲ್ಲಿಯೇ ಮದುವೆಮಾಡದೆ ಹೋದರೆ ಬಹಿಷ್ಕಾರ ಹಾಕುತ್ತಾರಲ್ಲಾ, ಅದಕ್ಕೆ ನೀನೊಂದು ಚಳುವಳಿ ಹೂಡಬೇಕು. . .

ಸೀತಾಪತಿ—ನಿಮಗೆ ಯಾಕೆ ಆ ಯೋಚನೆ? ಗುಂಡನಿಗೆ ಮದುವೆಯಂತಲ್ಲಾ . . . ಅದನ್ನ ಕೇಳಿಯೇ ಬಂದೆ ನಾನೀಗ. . . .

ನಂಜಪ್ಪ—ಲಗ್ನದ ದಿನ ನಿನ್ನ ಸಮಾಜದ ಫಂಡಿಗೆ ಏನಾದರೂ ಕೊಡಬೇಕು ಅಂತಲೇ? . . .

CC-0. Jangamwadi Math Collection, Varanasi. An eGangotri Initiative

ಸೀತಾಪತಿ—ಅದೂ ಅಲ್ಲದೆ, ನಾವು ಈಗ ತಮ್ಮಹಾಗೆ ಅಸಹಾಯರಾಗಿ ಗಂಡುಗಂಡಸರೇ ಇರುವ ಮನೆಗಳಲ್ಲಿ ಹಬ್ಬ ಹರಿದಿನ ಮದುವೆ ಮುಂಜಿಗಳಾದರೆ ನಮ್ಮ ಕೈಲಾದ ಸೇವೆ ಮಾಡಬೇಕು ಅಂತ ತೀರ್ಮಾನಮಾಡಿದೇವೆ . . . ಸೇವಾಸಮಾಜ, ನೋಡಿ. ನಮ್ಮದು. . .

ನಂಜಪ್ಪ—ಅಯ್ಯೋ ! ಅಯ್ಯೋ ! ಅದೆಲ್ಲ ಬೇಡಪ್ಪ . .

ಸೀತಾಪತಿ—ಛೆ . . ಛೆ . . ಮಾಫಲೇಷು ಕದಾಚನ ! . . . ನಮಗೆ ಒಂದು ಮಾವಿನ ಹಣ್ಣೂ ಕೂಡ ನೀವು ಕೊಡಬೇಡಿ. . .

ನಂಜಪ್ಪ—ಆದರೂ ನಿಮ್ಮ ಸಮಾಜದ ಮೆಂಬರುಗಳೆಲ್ಲ ನಾಲ್ಕು ದಿನ ಮುಂಚಿತವಾಗಿಯೇ ಬಂದು. . .

ಸೀತಾಪತಿ—ಬೇಡಿ, ಬೇಡಿ . . . ನಾನೊಬ್ಬನೇ ಬರುತ್ತೇನೆ, ಅವರೆಲ್ಲರ ಪರವಾಗಿ, ಆಗಬಹುದೋ? ಯಾವ ಸಹಾಯ ಬೇಕಾದರೂ ಮಾಡುತ್ತೇನೆ. . . . ಉರುಟಣೆಗೆ ಹಾಡುತ್ತೇನೆ. . . . ಉಪ್ಪಿನಕಾಯಿ ಬಡಿಸುತ್ತೇನೆ. . . .

ನಂಜಪ್ಪ—ಆಗಬಹುದಪ್ಪ . . . ಅಣ್ಣಯ್ಯ ! ನಿನ್ನ ಸಹಾಯಕ್ಕೆ ಸೀತಾಪತೀನೂ ಇರುತ್ತಾನೆ. ಅದಿರಲಿ, ನಿನ್ನ ಹೆಂಡತಿ ಸಮಾಚಾರ ಏನೂ ಇಲ್ಲವೇನಯ್ಯಾ, ಸೀತಾಪತಿ ? ಇನ್ನೂ ಕಾಶಿಯಲ್ಲಿ ಜೀವಂತರಾಗಿದಾರೆ ತಾನೆ ?

ಸೀತಾಪತಿ—ಹಾಗಿಲ್ಲದಿದ್ದರೆ ನಾನು ಮದುವೆ ಮನೆಯೊಳಗೆ ಕಾಲಿಡುವುದಕ್ಕಾಗುತ್ತದೆಯೇ ? ಮೊನ್ನೆ ಕಮಲಮ್ಮನವರು ಗಂಡನನ್ನೂ ಮಕ್ಕಳನ್ನೂ ಕರೆದುಕೊಂಡು ಕಾಶಿಗೆ ಹೋಗಿರಲಿಲ್ಲವೆ ? ಅಲ್ಲಿ ಕಂಡಿದ್ದರಂತೆ. . . .

ನಂಜಪ್ಪ—ಏನೋ ಅಪ್ಪ ! ನಿನ್ನ ಎರಡನೇ ಜನಿವಾರ ಗಟ್ಟಿಯಾಗಿರಲಿ. . . . ಕಾಶಿಯೋ ರಾಮೇಶ್ವರವೋ ಎಲ್ಲಾದರೇನು, ಇಲ್ಲಿ ನಿನಗೆ ಶನೀಶ್ವರ ವಕ್ರಿಸದೆ ಇರಲಿ. . . . ಅಂತು ನೀನು ಈ ಸಮಾಜ ಪ್ರಾರಂಭಿಸಿದ್ದರಿಂದ ನೋಡು, ಸತಿ ಬಿಟ್ಟುಹೋದ ಪತಿಯರು ಗೌರವವಾಗಿ ಬಾಳುವುದಕ್ಕೆ ಎಷ್ಟೋ ಸಹಾಯವಾಯಿತು. . . .

ಸೀತಾಪತಿ—ಈಗ ಹೇಳಿದರಲ್ಲಾ, ಅದನ್ನ ಕೊಂಚ ತಾವು ಬರೆದು ಪೇಪರಿಗೆ ಕಳುಹಿಸಿದರೆ ಎಷ್ಟೋ ಉಪಕಾರವಾದೀತು. . . .

ನಂಜಪ್ಪ—ಆಗಲಪ್ಪ ! ಮದುವೆ ನಾಲ್ಕುದಿನ ಕೊಂಚ ಅಣ್ಣಯ್ಯನ ಸಂಗಡ ಓಡಾಡು. . . . ಮೂರು ಪುಟ ಬರೆದು ಹಾಕುತ್ತೇನೆ. ಬೇಕಾದರೆ . . . ನಮ್ಮ ತಾಯಿ ನನ್ನನ್ನ ಕೊಂಚ ಓದಿಸಿದ್ದರಿಂದ ಅಷ್ಟು ಧೈರ್ಯ ಹೇಳಬಲ್ಲೆ. . . .

(ಒಳಗೆ 'ಸ್ವಾಮಿ', 'ಸ್ವಾಮಿ' . . . . ಎಂಬ ಕೂಗು . . . ).

CC-0. Jangamwadi Math Collection, Varanasi. An eGangotri Initiative

(ಹಾಗೆಯೇ ಅಡಿಗೆ ನಾರಾಯಣನ ಪ್ರವೇಶ . . . )

ಅಣ್ಣಯ್ಯ (ಹೊರಡುತ್ತಾ)—ನಾನು ಬರುತ್ತೇನೆ, ಚಿಕ್ಕಪ್ಪ. . . .

ನಂಜಪ್ಪ—ಹುಂ . . . ಹೋಗಿಬಿಟ್ಟು ಬಾ . . . (ಅಣ್ಣಯ್ಯ ಹೊರಡುವನು).

ನಾರಾಯಣ—ನನ್ನ ತಮ್ಮ . . . ತಮ್ಮನ್ನ . . .

ನಂಜಪ್ಪ—ನೀವು ಯಾರು ಅಂತ ಹೇಳಿ ಮೊದಲು . . . ಆ ಮೇಲೆ ನಿಮ್ಮ ತಮ್ಮನ ವಿಷಯ . . .

ನಾರಾಯಣ—ಅಡಿಗೆಯವರು . . . ನನ್ನ ತಮ್ಮ ಎಂಕಮ್ಮ ಭಟ್ಟರ ಮನೆಯಲ್ಲಿ ಒಪ್ಪಿಕೊಂಡಿದಾನೆ. . . . ಆದ್ದರಿಂದ ನನ್ನನ್ನ ಇಲ್ಲಿಗೆ ಕಳುಹಿಸಿದಾನೆ. . . .

ನಂಜಪ್ಪ—ಅಡಿಗೆ ಕೆಲಸ ನಿಮಗೆ ಚೆನ್ನಾಗಿ ಬರುತ್ತದೆಯೇನ್ರಿ ?

ನಾರಾಯಣ—ನನ್ನ ತಮ್ಮನ ಅಣ್ಣ ನಾನು ಅಂದರೆ ಗೊತ್ತಾಗುವುದಿಲ್ಲವೆ ತಮಗೆ? ಕೊಡುವ ಪದಾರ್ಥ, ಕೂಡುವ ಜನ, ಇವಕ್ಕೆ ತಕ್ಕಹಾಗೆ ಮಾಡುತ್ತೇನೆ. . . .

ನಂಜಪ್ಪ—ಕೊಂಚ ಇಲ್ಲೇ ಇರಿ . . . ಆಮೇಲೆ ನಿಧಾನವಾಗಿ ಮಾತನಾಡೋಣ . . . ಸೀತಾಪತಿ ! ನೀನು ಸಮಾಜ ಅಂದಾಗ ಜ್ಞಾಪಕಕ್ಕೆ ಬಂತು. . . . ಸಂಗೀತ ಹೇಳುವವರು ಯಾರಾದರೂ ಸಿಕ್ಕುತ್ತಾರೇನೋ ನಿಮ್ಮ ಸಮಾಜದಲ್ಲಿ. . .

ಸೀತಾಪತಿ—ಅಯ್ಯೋ ! ಅಯ್ಯೋ ! ಹೆಂಗಸರು ತುಂಬಿರುವ ಸಭೆಯಲ್ಲಿ ಧೈರ್ಯವಾಗಿ ಹಾಡುವಷ್ಟು ಇನ್ನೂ ಗಂಡಸರು ಮುಂದುವರಿದಿದಾರೆಯೇ ಈ ಊರಲ್ಲಿ . . . ತ್ಸ . . . ತ್ಸ . . . ತ್ಸ . . . ಅದಕ್ಕಿನ್ನೂ ಎಷ್ಟು ಕಾಲವಾಗಬೇಕೋ. . . . (ನಿಟ್ಟುಸಿರು)

ನಾರಾಯಣ (ಮುಂದೆ ಬಂದು)—ಅಪ್ಪಣೆಯಾದರೆ ನಾನೇ ಎರಡು ಕೆಲಸಗಳನ್ನೂ ನಿರ್ವಹಿಸಿಕೊಡುತ್ತೇನೆ . . . ನನಗೆ ಅಂಥ ಗಾಬರಿ ಏನೂ ಇಲ್ಲ. . . . ಅದಕ್ಕಾಗಿ ನೀವು ಪ್ರತ್ಯೇಕ ಹಣ ಕೊಡಬೇಕಾಗಿಯೂ ಇಲ್ಲ. . . .

ನಂಜಪ್ಪ (ಆಶ್ಚರ್ಯದಿಂದ)—ಹಾ ! . . . . ಸಾಧ್ಯವೇ ? . . . . ಮಾಡುತ್ತೀರಾ? . . . ಧೈರ್ಯವಾಗಿ ? . . . ಸಂಗೀತ ಅಭ್ಯಾಸವಿದೆಯೇ ನಿಮಗೆ? . . . ಸಾಧನೆ ಮಾಡಿದೀರಾ ? . . .

ನಾರಾಯಣ—ಓಹೋ ! ನಾನೂ ಕೆಲವು ದಿನ ಉಡುಪಿ, ತಿರುಕೋವಿಕಾವಲ್, ಅರಿಯಕ್ಕುಡಿ, ಪಾಲಕ್ಕಾಡು, ತಿರುಗಿದೇನೆ. . . . ನಾನು ಕೂತು ಹಾಡಿದರೆ ಜನರು ನಿಂತು ಕೇಳುತ್ತಾರೆ.

ನಂಜಪ್ಪ (ಅನುಮಾನದಿಂದ)—ಎಲ್ಲಿ? ಈಗ ಕೊಂಚ ಹಾಡನ್ನಿ . . . ಕೇಳೋಣ. .

CC-0. Jangamwadi Math Collection, Varanasi. An eGangotri Initiative

ನಾರಾಯಣ (ಗಂಟಲನ್ನು ಸರಿಪಡಿಸಿಕೊಳ್ಳುತ್ತಾ ಎಡಗೈಯಿಂದ ಎಡಕಿವಿಯನ್ನು ಮುಚ್ಚಿಕೊಳ್ಳುತ್ತಾ, ಕರ್ಕಶಧ್ವನಿಯಲ್ಲಿ)—ಏನು ಸುಖಾ . . . ಇದು . . . ಏನು ಸುಖಾ . . . ಆ . . . ಆ . . . ಆ . . . ಆ . . .

ನಂಜಪ್ಪ (ಗಟ್ಟಿಯಾಗಿ)—ಆಚಾರ್ರೆ! ಆಚಾರ್ರೇ! ಏನೂ ಸುಖವಿಲ್ಲ . . . ನೀವು ಅಡಿಗೆಯನ್ನೇ ಮಾಡಿ . . . ಸಂಗೀತದ ತಂಟೆಗೆ ಹೋಗಬೇಡಿ . . . ಅದನ್ನ ಬಿಟ್ಟುಬಿಡಿ . . . ಅದು ಬದುಕಿಕೊಳ್ಳಲಿ, ಪಾಪ . . . ನಿಮ್ಮ ಅಡಿಗೆ ಕೂಡ ಹೇಗಿರುತ್ತದೆ ಅಂತ ನಾಳೆ ಸ್ಯಾಂಪಿಲ್ ನೋಡಬೇಕಾಗಿದೆ . . . (ರಾಮು, ಸೋಮು, ಗುಂಡ, ಎಲ್ಲರೂ ಬರುವರು) ಸೀತಾಪತಿ! ಆಚಾರರನ್ನ ಅಡಿಗೆ ಮನೆ ಕಡೆ ಕರೆದುಕೊಂಡು ಹೋಗು . . . ಒಲೆ, ಒರಳುಕಲ್ಲು ಎಲ್ಲಾನೂ ನೋಡಲಿ . . . (ಅವರಿಬ್ಬರೂ ಒಳಕ್ಕೆ ಹೋಗುವರು) ಏನ್ರಪ್ಪಾ! ದೇವಸ್ಥಾನದಲ್ಲಿ ಇಷ್ಟು ಹೊತ್ತಾಯಿತೆ? ಅಂತು, ಗುಂಡಾ! ಇನ್ನುಮೇಲೆ ಹೇಳಿದ ಹಾಗೆ ಕೇಳಿಕೊಂಡು ವಿಧೇಯನಾಗಿರುತ್ತೀಯಾ? . . . ಬುದ್ಧಿವಾದ ಹೇಳಿದರೇನಪ್ಪ?

ರಾಮು—ಅವನ ಹಠ ಅವನು ಬಿಟ್ಟಿಲ್ಲ, ನಂಜಪ್ಪನವರೇ! ಆ ಕೆಂಗಾರೆಯ ವರು ಚೆನ್ನಾಗಿಲ್ಲವಂತೆ . . . ಕಪಿಮೂತಿಯಂತೆ. . .

ನಂಜಪ್ಪ—ಪಾಲಿಗೆ ಬಂದದ್ದು ಪರಮಾನ್ನ ಅಂತ ಅವರ ಪಾದಸೇವೆ ಮಾಡು ವುದು ಬಿಟ್ಟು ರೂಪುಗೀಪು ಟೀಕೆಮಾಡುವುದಕ್ಕೆ ಗಂಡಾಗಿ ಹುಟ್ಟಿದವನಿಗೆ ಎಲ್ಲಿದೆಯೋ ಹಕ್ಕು? ಯಾವಶಾಸ್ತ್ರದಲ್ಲಿ ಹೇಳಿದೆ ಹಾಗೆ ಮಾಡಬಹುದು ಅಂತ! ಮುಟ್ಠಾಳ!

ಗುಂಡ (ಅಳುತ್ತಾ)—ನನಗೆ ಮದುವೇನೆ ಬೇಡ ಅಣ್ಣ, ಹಾಗಾದರೆ. . .

ನಂಜಪ್ಪ—ತಿರುಗಿ ಅದೇ ಮಾತನ್ನೇ ತೆಗೆದೆಯಾ! (ನುಗ್ಗುತ್ತಾ) ಕೊಟ್ಟೆ ಅಂದರೆ ಕಪಾಳಕ್ಕೆ, ಹಲ್ಲೆಲ್ಲ ಉದುರಿಹೋಗುತ್ತೆ ನೋಡು!

(ತೆರೆ)

---

## ದೃಶ್ಯ ೫

(ನಂಜಪ್ಪನವರ ಮನೆ. ಮದುವೆಮಂಟಪ; ದೂರದಲ್ಲಿ ವಾಲಗದ ಶಬ್ದ . . . ನಾಗರತ್ನ ಕುಳಿತಿದ್ದಾಳೆ . . . ಪಕ್ಕದಲ್ಲೇ ಕಪನೀಪತಯ್ಯ . . . ರಂಗಮ್ಮನವರು ಕೋಪದಿಂದ ಕಣ್ಣು ರುಳಿಸುತ್ತಿದ್ದಾರೆ . . . ನಂಜಪ್ಪನವರೂ ಇತರ ಹಲವು ಗಂಡಸರೂ ಒಂದೆಡೆ ನಿಂತಿದಾರೆ . . . ಶ್ರೀಕಂಠಯ್ಯ ಆಗತಾನೆ ಪ್ರವೇಶಿಸಿ ಕುಳಿತುಕೊಳ್ಳುತ್ತಿರುವನು.)

CC-0. Jangamwadi Math Collection, Varanasi. An eGangotri Initiative

ರಂಗಮ್ಮ—ನಂಜಪ್ಪನವರೇ! ಇಷ್ಟುಹೊತ್ತು ಒಂದೇ ಸಮ ಮಣೆಯ ಮೇಲೆ ಕೂತು ಅಭ್ಯಾಸವೇ ಇಲ್ಲ ನಮ್ಮ ನಾಗರತ್ನಳಿಗೆ. ಎಷ್ಟು ತಡಮಾಡುತ್ತಿದಾರೆ ನಿಮ್ಮ ಪುರೋಹಿತರು! . . .

ನಂಜಪ್ಪ (ಒಂದು ಪಕ್ಕಕ್ಕೆ ಓಡಿ ಅಣ್ಣಯ್ಯ! ಅಣ್ಣಯ್ಯ! ಸೀತಾಪತಿ! ಎಂದು ಕೂಗಿ ಹಿಂದಕ್ಕೆ ಬಂದು)—ಈಗ ಬಂದುಬಿಡುತ್ತಾರೆ . . . ಕರೆದುಕೊಂಡು ಬರುತ್ತಾ ಇದಾರೆ . . . (ಕೂಗುತ್ತಾ) ಜೋಯಿಸರೇ! ಎಷ್ಟು ಹೇಳಿದರೂ ಹೀಗೆ ತಡ ಮಾಡುತ್ತಿದೀರಲ್ಲಾ. . .

ಜೋಯಿಸರು (ಪ್ರವೇಶಿಸಿ)—ಇನ್ನೇನು ಮುಗಿಯಿತು . . . ಗಣೇಶನ ಪೂಜೆ ಮಾಡಿಸಿಬಿಟ್ಟು ಗಂಡನ್ನ ಕರೆದುಕೊಂಡು ಬಂದುಬಿಡುತ್ತೇನೆ. . .

ರಂಗಮ್ಮ—ಇನ್ನೂ ನಿಮ್ಮ ಪೂಜೆ ಪ್ರಾರಂಭ ಮಾಡಿಲ್ಲವೆ? ಸರಿಹೋಯ್ತು! ಹಾಗಾದರೆ ಈಗಲೇ ಯಾಕೆ ನಾಗರತ್ನಳನ್ನ ಕೂರಿಸಿದಿರಿ? . . .

ಜೋಯಿಸರು—ಕೋಪಿಸಿಕೊಳ್ಳಬೇಡಿರಮ್ಮ! ಗಣೇಶನ ಪೂಜೆಯನ್ನ ಆಮೇಲೆ ಮಾಡಿದರಾಯಿತು . . . ಉಪವೀತಧಾರಣವಾಗಿ ಬಿಡಲಿ, ಈಗ . . . ಅದಕ್ಕೇನು? . . . ಶಿವರಾಮು! ಶಿವರಾಮು! ವಧುವನ್ನ ಕರೆದುಕೊಂಡು ಬಾ . . . (ಗುಂಡ—ಅಲ್ಲ—ಶಿಶುಪಾಲನ ಪ್ರವೇಶ . . . ಸಾಲಂಕೃತ ಕುಮಾರ . . . ತಗ್ಗಿದ ತಲೆ . . . . . ಅಳುಮೋರೆ . . . ಅಳಿಯನ ಹಿಂದೆಯೇ ರಾಮು ಸೋಮು ಎಂಬ ಗೆಳೆಯರು . . . ಶಿವರಾಮು ಕೈ ಹಿಡಿದು ಕರೆತರುವನು. . .) ಹಾಗೆ . . ಅಲ್ಲಿ ನಿಲ್ಲಿಸು. . ಅಣ್ಣಯ್ಯ! ಆ ವಾಲಗದವನಿಗೆ ದಡಬಡಾಯಿಸಿ ಬಾರಿಸುವುದಕ್ಕೆ ಹೇಳು. . . (ಅಣ್ಣಯ್ಯನ ನಿರ್ಗಮನ . . . ಢಂಢಂಢಂಢಂ ಸದ್ದು. . .) ಏಳಿ, ತಾಯಿ! . . . (ನಾಗರತ್ನ ಎದ್ದು ಬರುವಳು) ಈ ಜನಿವಾರವನ್ನು ಹಾಗೆ ಹಿಡಿದುಕೊಳ್ಳಿ . . . (ಘಂಟಾರವ ಮಾಡುವರು.)

ನಂಜಪ್ಪ—ಅಣ್ಣಯ್ಯ! ಜನಿವಾರಕ್ಕೆ ಗಂಧ ಹಚ್ಚಾಯಿತೆ? . . .

ಅಣ್ಣಯ್ಯ—ಹುಂ . . .

ನಂಜಪ್ಪ—ಸುವಾಸಿನಿ ಸುವಾಸನೆಯವರಿಗೆಲ್ಲಾ ತೋರಿಸಿ ಅಕ್ಷತೆ ಹಾಕಿಸಿದೆಯಾ ಅದಕ್ಕೆ?

ಶಿವರಾಮು—ಓಹೋ! ಆಗಲೇ ಹಾಕಿಸಿದ್ದಾಯಿತು. . .

ಜೋಯಿಸರು (ಘಂಟಾರವದ ನಡುವೆ)—ಓಂ ಶಾಂ ತಿಶ್ಶಾಂ ತಿಶ್ಶಾಂ ತಿಹಿ . . ಗುಂಡಾ! ಹತ್ತಿರ ಬಾ. . . (ಅವನನ್ನ ಎಳೆದು ಮುಂದೆ ನಿಲ್ಲಿಸುವರು. . .) ಗಂಧಾಕ್ಷತೆ ಹಚ್ಚಿಬಿಟ್ಟು ಜನಿವಾರ ಹಾಕಿ ಅಮ್ಮ . . .

(ಗುಂಡ ಬಾಯನ್ನು ವಿಕಾರವಾಗಿ ಕೊಂಕಿಸಿ, ಕೈಗಳನ್ನು ಸೆಳೆಯುತ್ತಾ, ಕೆಳಕ್ಕೆ ಕುಸಿದುಬಿದ್ದು, ಕಾಲು ಬಡಿಯುವನು)

CC-0. Jangamwadi Math Collection, Varanasi. An eGangotri Initiative

CC-0. Jangamwadi Math Collection, Varanasi. An eGangotri Initiative

ಅಯ್ಯೋ! ಗುಂಡಾ! . . .

[ಪುಟ ೧೨೭.

CC-0. Jangamwadi Math Collection, Varanasi. An eGangotri Initiative

ನಂಜಪ್ಪ (ದಿಗ್ಭ್ರಾಂತನಾಗಿ)—ಅಯ್ಯೋ! ಗುಂಡಾ. . .

ಅಣ್ಣಯ್ಯ (ಪಕ್ಕದಲ್ಲೇ ಮಂಡಿಯೂರಿ ಕುಳಿತು)—ಏನಾಯಿತೋ, ಗುಂಡಾ?

ರಾಮು—ಚಾಮುಂಡೇಶ್ವರಿಯೇ ಕಾಪಾಡಬೇಕು. . .

ಸೋಮು (ಗಾಳಿ ಬೀಸುತ್ತಾ)—ಗುಂಡಾ . . ಗುಂಡಾ. . .

ಶ್ರೀಕಂಠಯ್ಯ—ಕೊಂಚ ಹಾಲು ತೆಗೆದುಕೊಂಡು ಬನ್ನಿ, ನಂಜಪ್ಪನವರೇ!

ಜೋಯಿಸರು (ಪರದಾಡುತ್ತಾ)—ಪಂಚಪಾತ್ರೆ ಉದ್ಧರಣೆ . . ಶಿವರಾಮು . . ಪಂಚಪಾತ್ರೆ. . .

ರಂಗಮ್ಮ (ಕೋಪದ ಉದ್ವೇಗದಿಂದ)—ಏನ್ರಿ ಇದು? ನಂಜಪ್ಪನವರೇ!

ನಾಗರತ್ನ—ಪೆರಾಲಿಸಿಸ್ ಇರಬೇಕಮ್ಮ . . . (ಗುಂಡನಿಗೆ ಕೈ ಸೆಳೆತ.)

ರಂಗಮ್ಮ—ಹುಂ . . . ವಿಪರೀತ ಪೆರಾಲಿಸಿಸ್ ಆಗಿದೆಯಲ್ರೀ ನಿಮ್ಮ ಹುಡುಗನಿಗೆ?

ನಂಜಪ್ಪ—ಅಂಥಾದ್ದೇನೂ ಇಲ್ಲ, ಅಮ್ಮ. ಮೂರು ನಾಲ್ಕು ದಿನಗಳಿಂದ ಮನೆಯಲ್ಲಿ ಹೊತ್ತುಗೊತ್ತಿಗೆ ಊಟವಿಲ್ಲ . . . ಅದಕ್ಕೆ . . . (ಜೋಯಿಸರು ಗುಂಡನ ಬಾಯಿಗೆ ಉದ್ಧರಣೆಯಿಂದ ನೀರು ಹಾಕುವರು.)

ರಂಗಮ್ಮ—ಒಂದೆರಡು ದಿನ ಊಟ ಅವ್ಯವಸ್ಥೆಯಾದರೆ ಹೀಗೆ ಬಿದ್ದೊದ್ದಾಡಿದರೆ ನಾವು ಹೇಗ್ರಿ ಇವನನ್ನ ನಮ್ಮ ಮನೆಗೆ ತಂದುಕೊಳ್ಳುವುದು? ಚೆನ್ನಾಗಿದೆ . . . ಯೋಗ್ಯರು ಸಭ್ಯರು ಅಂತ ನಾವು ಬಂದರೆ, ಪೆರಾಲಿಸಿಸ್ ಅಂತ ಹೇಳಲೇಬೇಡವೆ ನೀವು? . . . ಹಾ! (ಗುಂಡನ ಕಾಲುಬಡಿತ ಹೆಚ್ಚಾಗುವುದು.)

ನಾಗರತ್ನ—ಶುದ್ಧ ಮೋಸ ಅಮ್ಮ! ಇವರ ಮೇಲೆ ಕೇಸುಹಾಕಿ ಇವರನ್ನೆಲ್ಲ ಕೋರ್ಟಿಗೆಳೆದು. . . . (ಅಲ್ಲಿದ್ದ ಅನಾಮಧೇಯ ಗಂಡಸರೆಲ್ಲರೂ ಮುಂದೆ ಮಾತಿನ ನಡುವೆ ಒಬ್ಬೊಬ್ಬರಾಗಿ ಹೊರಟುಬಿಡುವರು )

ಜೋಯಿಸರು—ನನ್ನ ಮಾತು ಕೇಳಿ! ಹುಡುಗನಿಗೇನೂ ಇಲ್ಲ. ಅಷ್ಟಮದಲ್ಲಿ ಶನಿ ಬಂದು ಕೂತುಬಿಟ್ಟಿದಾನೆ . . . ಶನಿಮಂತ್ರ ಜಪಿಸಿ ಕೈಗೊಂದು ಕಂಕಣ ಕಟ್ಟಿಬಿಡುತ್ತೇನೆ . . . ನೋಡಿ . . . ಗುಂಡುಕಲ್ಲಿನ ಹಾಗೆ ಎದ್ದು ನಿಗಿನಿಗಿನಿಗಿ ಅಂತ ಓಡಾಡುತ್ತಾನೆ (ಸೆಳೆತಬಡಿತಗಳು ಹೆಚ್ಚಾಗುವುವು. . .)

ರಂಗಮ್ಮ—ನೀವು ಕಂಕಣವಾದರೂ ಕಟ್ಟಿ, ಕೊಂಕಣವಾದರೂ ಸುತ್ತಿ . . . ನಾವಿಲ್ಲಿರುವುದಿಲ್ಲ . . . ನಿಮ್ಮಗಳ ಸಹವಾಸವೇ ಬೇಡ . . . (ಹೊರಡುವರು)

ನಂಜಪ್ಪ (ತಡೆದು)—ಅಯ್ಯೋ! ಗ್ರಹಚಾರವೇ! ನಿಲ್ಲಿ ಅಂದರೆ . . . (ಕಪನೀಪತಯ್ಯನ ಕೈ ಹಿಡಿದೆಳೆಯುವವನು) ನೀವಾದರೂ ಕೊಂಚ ಹೇಳಿ ಅಂದರೆ . . .

CC-0. Jangamwadi Math Collection, Varanasi. An eGangotri Initiative

ಕಪನೀಪತಯ್ಯ—ನನ್ನ ಹತ್ತಿರ ಹೇಳಿ ಏನು ಪ್ರಯೋಜನ? ಅವರುಂಟು ನೀವುಂಟು.

ನಂಜಪ್ಪ (ಗುಂಡನ ಸಮೀಪಕ್ಕೆ ಬಂದು)—ಗುಂಡಾ! ಗುಂಡಾ! (ಅಳುತ್ತಾ) ಅಮ್ಮಾ! ಕೊಂಚ ದೊಡ್ಡ ಮನಸ್ಸು ಮಾಡಬೇಕು ನೀವು . . . ನಾನು ಅನಾಥ . . . ಅವರಿದ್ದಿದ್ದರೆ ಏನಾದರೊಂದು ಹೇಳಿಕೊಡುವರು . . . ನನಗೆ ಈಗ ಏನೂ ತೋಚುವುದಿಲ್ಲ . . . ತಲೆ ಸುತ್ತುತ್ತೆ . . . ಕೈಕಾಲು ನಡುಗುತ್ತೆ . . . (ಕೆಳಗೆ ಕುಳಿತು . . .) ಅಮ್ಮಾ . . .

ನಾಗರತ್ನ—ಈ ನಾಟಕಕ್ಕೆಲ್ಲ ಸೋಲಬಾರದಮ್ಮ ನೀನು! ಮೂರ್ಛೆರೋಗ ಅಂದರೆ ಸಾಮಾನ್ಯವೆ? ಹಾಳು ಖಾಯಿಲೆ . . . ಹೊಳೆಗೋ ಕೆರೆಗೋ ಎಳೆದು ಬಿಡುತ್ತದೆ . . . ತಲೆತಲಾಂತರಕ್ಕೂ ಜನ್ಮಕ್ಕಂಟಿಕೊಂಡು ಬರುತ್ತದೆ. . .

ರಂಗಮ್ಮ—ಹೌದು, ನಾಳೆ ಇವನು ಅಡಿಗೆ ಮಾಡುವಾಗ ಒಲೆ ಹತ್ತಿರ ಬಿದ್ದು ಮೈ ಸುಟ್ಟುಕೊಂಡರೆ ಏನುಗತಿ? ಇನ್ನೂ ಇಬ್ಬರು ಷಡ್ಡಕರಿದಾರೆ . . . ಅವರಿಗೆ ಗಾಬರಿ ಆಗುವುದಿಲ್ಲವೆ? (ಗುಂಡ ವಿಕಾರವಾಗಿ ಮೈ ಮುರಿಯುವನು.)

ನಂಜಪ್ಪ—ತಾಯಿ! ಇಂಥ ರೋಗ ಅವರ ವಂಶದಲ್ಲೂ ಇಲ್ಲ, ನನ್ನ ವಂಶದಲ್ಲೂ ಇಲ್ಲ . . . ನಮ್ಮ ಹುಡುಗರೆಲ್ಲರೂ ಹುಷಾರಾಗಿದಾರೆ . . . ಅವರ ಮಕ್ಕಳೂ ಕೂಡ ಹುಷಾರಾಗಿವೆ . . . ನೀವು ತಲಕಾಡಿಗೆ ಹೋಗಿ ಕೇಳಿ, ಹುಣಸೂರಿಗೆ ಬರೆಯಿರಿ, ಪಾವಗಡದಲ್ಲಿ ವಿಚಾರಿಸಿ. . .

ರಂಗಮ್ಮ—ಗಂಡಿಗೆ ಅಂಥ ಬರ ಬಂದಿದೆಯೇನ್ರಿ, ನಂಜಪ್ಪನವರೇ? ಊರೂರು ತಿರುಗಿ ನಿಮ್ಮ ಹುಡುಗನ ವಾಯು ವಿಚಾರಿಸುವುದಕ್ಕೆ? ನೆಲದ ಮೇಲೆ ಹೊರಳಾಡುವ ವರನನ್ನ ಯಾರ್ರೀ ವರಿಸುತ್ತಾರೆ? . . .

ಜೋಯಿಸರು—ಅಂಥ ಪ್ರಮಾದವೇನೂ ಇಲ್ಲ, ಅಮ್ಮ . . . ಶನಿಕಾಟ, ಅಷ್ಟೆ. . .

ಶ್ರೀಕಂಠಯ್ಯ—ಬಾಯಿಗೆ ಒಂದು ಬೀಗದ ಕೈ ತುರುಕಿದರಾಯಿತು . . . ನಂಜಪ್ಪನವರೇ! . . .

ನಾಗರತ್ನ—ನಿಮ್ಮ ಶನಿಕಾಟ ನಿಮ್ಮಲ್ಲೇ ಇರಲಿ! ನಾವು ಹೊರಡುತ್ತೀವೆ . . . ಬಾ ಅಮ್ಮ. . .

ರಂಗಮ್ಮ (ನಾಗರತ್ನಳಿಗೆ)—ಬಂದೆ . . . (ನಂಜಪ್ಪನವರಿಗೆ) ನಿಮ್ಮ ಹಣದಲ್ಲಿ ನಮ್ಮ ಖರ್ಚು ವೆಚ್ಚ ಕಳೆದು ಉಳಿದದ್ದನ್ನ . . . ಕೆಂಗಾರೆಗೆ ಬನ್ನಿ . . . ಅಲ್ಲಿ ಕೊಡುತ್ತೇನೆ . . . ಇಲ್ಲಿ ಈಗ ಅದರ ಚರ್ಚೆಗೆ ವ್ಯವಧಾನವಿಲ್ಲ . . . ಬಾ ನಾಗರತ್ನ

CC-0. Jangamwadi Math Collection, Varanasi. An eGangotri Initiative

(ಅಣ್ಣಯ್ಯನ ಹತ್ತಿರ ಮಾತನಾಡುತ್ತಿದ್ದ ಕಪಸೀಪತಯ್ಯನಿಗೆ) ಬನ್ನಿ . ಅಂದ್ರೆ . . . ಏನು ಮಾಡುತ್ತೀರಿ ಅಲ್ಲಿ? ಅವರ ಹತ್ತಿರ ಏನು ಕಾಡುಹರಟೆ . . . ಬನ್ನಿ ಇತ್ತಲಾಗೆ. . .

ನಂಜಪ್ಪ (ಅಂಗಲಾಚಿ)—ನಮ್ಮ ಜೋಯಿಸರು ಯಂತ್ರ ಹಾಕುವ ತನಕ ಐದು ನಿಮಿಷ ನಿಲ್ಲಿ! . . . ಗುಂಡಾ! . . . ಅಯ್ಯೋ, ಗುಂಡಾ! (ಗುಂಡನ ಸೆಳೆತ ಅಧಿಕವಾಗುವುದು) ಜಗದಂಬೆ! ಮಹಾತಾಯಿ!

ರಂಗಮ್ಮ (ಪತಿಪುತ್ರಿ ಸಮೇತರಾಗಿ ಹೊರಡುತ್ತಾ)—ಹೋಗ್ರಿ! ಹೋಗ್ರಿ! ಶುದ್ಧ ಸುಳ್ಳರೂ ಕಳ್ಳರೂ ಸೇರಿಕೊಂಡು ಮಾನಸ್ಥರ ಮರ್ಯಾದೆ ತೆಗೆಯುತ್ತೀರಾ . . .

ನಾಗರತ್ನ—ಕಾಲೇಜಿನಲ್ಲಿ ನನ್ನ ಗೆಳತಿಯರು ನನ್ನನ್ನು ಎಷ್ಟು ಹಾಸ್ಯ ಮಾಡುತ್ತಾರೆ, ಗೊತ್ತೆ . . . ಅದಕ್ಕೆಲ್ಲಾ ನೀನೇ ದಂಡ ತೆರಬೇಕು . . . (ಹೊರಡುವಳು.)

ನಂಜಪ್ಪ (ಗುಂಡನನ್ನೇ ನೋಡುತ್ತಾ)—ಗುಂಡಾ! ಏನಾಗಿದೆಯೋ ನಿನಗೆ? ಏಳುವುದಕ್ಕಾಗುವುದಿಲ್ಲವೇನೋ ಮಗೂ?

ನಾಗರತ್ನ (ಹಿಂದಕ್ಕೆ ಬಂದು)—ಬಾ ಅಮ್ಮ! ಈ ಹಾಳುಮನೆಯಲ್ಲಿ ಇವರ ತಮಾಷೆ ನೋಡುತ್ತಾ ನಿಂತಿರುವುದೇನು? . . . ಬಾ ಅಪ್ಪ (ಮೂವರೂ ಹೊರಡುವರು).

ಜೋಯಿಸರು (ಎದ್ದು ಅವರ ಹಿಂದೆಯೇ ಓಡುತ್ತಾ)—ತಡೆಯಿರಿ! ಕೊಂಚ ಶನಿ ಮಂತ್ರ . . . (ಹೊರಡುವರು).

ಶ್ರೀಕಂಠಯ್ಯ (ಹೋಗುತ್ತಾ)—ಹಲ್ಲುಸಂದಲ್ಲಿ ಒಂದು ಬೀಗದ ಕೈ ಇಟ್ಟರಾಯಿತು, ಜೋಯಿಸರೇ (ಹೊರಡುವರು).

ನಂಜಪ್ಪ (ಅವರ ಹಿಂದೆಯೇ ಓಡುತ್ತಾ)—ಕಾಲಿಗೆ ಬಿದ್ದು ಕೇಳಿಕೊಂಡರೂ ನಿಲ್ಲುವುದಿಲ್ಲವಲ್ಲಪ್ಪಾ. . . . (ಹೊರಡುವರು).

ಅಣ್ಣಯ್ಯ (ಅವರ ಹಿಂದೆ ಓಡುತ್ತಾ)—ಚಿಕ್ಕಪ್ಪ! ಹೋದರೆ ಹೋಗಲಿ, ಏನು ಮಹಾ! ಅಷ್ಟು ತಾಳ್ಮೆ ಇಲ್ಲದೆಹೋದರೆ. . . . (ಹೊರಡುವನು).

(ರಂಗಸ್ಥಳದಲ್ಲಿ ಗುಂಡ, ಅವನ ಪಕ್ಕದಲ್ಲೇ ಕುಳಿತು ಉಪಚಾರಮಾಡುತ್ತಿರುವ ರಾಮು, ಸೋಮು ಇಬ್ಬರು ಮಾತ್ರ ಉಳಿಯುವರು).

ಗುಂಡ (ಕಣ್ಣು ತೆರೆದು)—ರಾಮು! ರಾಮು!

ರಾಮು (ಆನಂದಪರವಶನಾಗಿ)—ಓ! ಗುಂಡನಿಗೆ ವಾಸಿ ಆಯ್ತು! ಸೋಮು! ನಂಜಪ್ಪನವರನ್ನ. . . .



CC-0. Jangamwadi Math Collection, Varanasi. An eGangotri Initiative

ಗುಂಡ—ಲೋ, ರಾಮು! ಬೇಡ! ಸೋಮು, ಇಲ್ಲೇ ಇರು. . . .

ಸೋಮು—ಯಾಕೆ?

ಗುಂಡ—ನನ್ನಾಣೆ ನೀನು ಇಲ್ಲೇ ಇರು . . . ಆ ಹೆಂಗಸಿನಿಂದ ತಪ್ಪಿಸಿಕೊಳ್ಳುವುದಕ್ಕೆ ನಾನು ಹೂಡಿದ ಉಪಾಯ ಕಣೋ ಇದು . . .

ರಾಮು—ಒಳ್ಳೇ ಉಪಾಯ! ನಿನಗೆ ಮೂರ್ಛೆ ಅಂತ ಊರೆಲ್ಲ ಹರಡಿಬಿಟ್ಟರೆ ಇನ್ನು ಮುಂದೆ ನಿನಗೆ ಮದುವೇನೇ ಆಗುವುದಿಲ್ಲವಲ್ಲೋ?

ಗುಂಡ—ಬದುಕಿದೆ, ಬಿಡು.

ಸೋಮು—ಮುಖ್ಯ ನೀನು ಕೇಳಿಕೊಂಡು ಬರಲಿಲ್ಲ!

ಗುಂಡ—ನಿಮ್ಮ ಧರ್ಮಕ್ಕೆ ಅಣ್ಣನಿಗೆ ಮಾತ್ರ ಹೇಳಬೇಡಿ. . . .

ರಾಮು—ಇಕೊ, ಬಂದರು ಅಂತ ಕಾಣುತ್ತದೆ. . . .

ಗುಂಡ—ಹಾಗೆಯೇ ಬಿದ್ದಿರುತ್ತೇನೆ, ಇನ್ನೂ ಕೊಂಚ. . . . (ಮಲಗುವನು).

(ಗೆಳೆಯರಿಬ್ಬರೂ ಗಾಳಿಬೀಸುವರು. . . . ಗಾಬರಿಗೊಂಡ ನಂಜಪ್ಪನವರ ಪ್ರವೇಶ . . .)

(ತೆರೆ.)

---

CC-0. Jangamwadi Math Collection, Varanasi. An eGangotri Initiative

CC-0. Jangamwadi Math Collection, Varanasi. An eGangotri Initiative



ಕದಂಬ ವೃಕ್ಷ

CC-0. Jangamwadi Math Collection, Varanasi. An eGangotri Initiative

# ಕದಂಬ

ಕದಂಬವೆಂದರೆ ಈಚಲುಮರವೆಂಬ ತಿಳಿವಳಿಕೆಯು ಅನೇಕರಲ್ಲಿ ಇದೆ; ಲೂಯಿ ರೈಸ್ ಅವರು ಪ್ರಕಾಶಪಡಿಸಿರುವ ಅಮರಕೋಶದಲ್ಲಿಯೂ ಕದಂಬಮರಕ್ಕೆ ಈಚಲು ಎಂದು ಅರ್ಥ ಬರೆಯಲಾಗಿದೆ. ಕದಂಬಮರಕ್ಕೆ ನಾಮಲಿಂಗಾನುಶಾಸನದಲ್ಲಿ ನೀಪ, ಪ್ರಿಯಕ, ಮತ್ತು ಹಲಿಪ್ರಿಯ ಎಂಬ ಹೆಸರುಗಳು ಉಕ್ತವಾಗಿವೆ. ರತ್ನಮಾಲಾ ಎಂಬ ವೈದ್ಯ ಗ್ರಂಥದಲ್ಲಿ ಷಟ್ಪದೇಷ್ಟ, ಪ್ರಾವೃಷೇಣ್ಯ, ಹರಿಪ್ರಿಯ ಎಂಬ ಹೆಸರುಗಳು ಸೂಚಿತವಾಗಿವೆ. ಕದಂಬಕ, ವೃತ್ತಪುಷ್ಪ, ಕೇಶರಾಢ್ಯ, ಪ್ರಬೇಣ, ನದೀಜ, ದಾಸವೃಕ್ಷ, ಶೀಧುಪುಷ್ಪ, ಪ್ರಿಯಕ ಎಂಬ ಪರ್ಯಾಯ ಪದಗಳೂ ಇರುವುವೆಂದು ಇತರ ಗ್ರಂಥಗಳಿಂದ ತಿಳಿದುಬರುತ್ತದೆ. ಕಡವಾಲ, ನೀರುಕಡವಾಲ, ಹೇಲ್ತ್ಯಾಗ ಎಂಬ ಹೆಸರುಗಳೂ ಕನ್ನಡನಾಡಿನ ಬೇರೆ ಬೇರೆ ಕಡೆಗಳಲ್ಲಿ ಈಗ ಪ್ರಚಾರದಲ್ಲಿವೆ.

ಕದಂಬವು ಪ್ರಪಂಚದ ವೈಜ್ಞಾನಿಕಕುಲಕ್ಕೆ ಆಂಥೊಸಿಫಲಸ್ ಕದಂಬ, (Anthocephalus cadamba), ನಾಕ್ಲಿಯ ಕದಂಬ (Nauclea cadamba) ಮತ್ತು ಸಾರ್ಕೊಸಿಫ಼ಲಸ್ ಕದಂಬ (Sarcocephalus cadamba) ಎಂಬ ಲ್ಯಾಟಿನ್ ಭಾಷೆಯ ಮೂರು ಪದಗಳಿಂದ ಪರಿಚಿತವಾಗಿದೆ. ಒಂದೇ ಮರಕ್ಕೆ ಒಂದಕ್ಕಿಂತಲೂ ಹೆಚ್ಚು ಹೆಸರುಗಳಿರುವುದು ಅನಾವಶ್ಯಕವೆಂದು Anthocephalus cadamba ಎಂಬ ಒಂದು ಹೆಸರನ್ನು ಮಾತ್ರ ಸಸ್ಯಶಾಸ್ತ್ರಜ್ಞರು ಈಚೀಚೆಗೆ ಉಪಯೋಗಿಸುತ್ತಿದ್ದಾರೆ.

ಕನ್ನಡದಲ್ಲಿಯೂ ಇತರ ದೇಶಭಾಷೆಗಳಲ್ಲಿಯೂ ಒಂದೇ ಒಂದು ಸಸ್ಯಕ್ಕೆ ಅನೇಕ ಹೆಸರುಗಳಿವೆ; ಕನ್ನಡ ದೇಶದ ಒಂದೊಂದು ಪ್ರಾಂತದಲ್ಲೂ ಬೇರೆ ಬೇರೆ ಹೆಸರುಗಳಿವೆ. ಬೇರೆ ಬೇರೆ ಮರಗಳಿಗೆ ಒಂದೇ ಹೆಸರಿರುವುದೂ ಅಪರೂಪವಲ್ಲ. ಈ ಪರ್ಯಾಯನಾಮಗಳ ಅನನುಕೂಲತೆಯನ್ನು ಆದಷ್ಟು ಕಡಮೆಮಾಡುವ ಸಲುವಾಗಿಯೇ ಪ್ರಪಂಚದ ಸಸ್ಯಶಾಸ್ತ್ರಜ್ಞರು ಒಂದು ಜಾತಿಯ ಸಸ್ಯಕ್ಕೆ ಒಂದೇ ಹೆಸರನ್ನು ಬಳಸಬೇಕೆಂದೂ ಆ ಪದವು ಲ್ಯಾಟಿನ್ ಭಾಷೆಯಲ್ಲಿರಬೇಕೆಂದೂ ಒಂದು ವೇಳೆ ಬೇರೆ ಭಾಷೆಯ ಪದವನ್ನೇ ಆ ಸಸ್ಯಕ್ಕೆ ಇಡಬೇಕಾದ ಸಂದರ್ಭ ಬಂದಾಗ, ಲ್ಯಾಟಿನ್ ಭಾಷೆಯ ವ್ಯಾಕರಣ ನಿಯಮವನ್ನನುಸರಿಸಿ, ಆ ಪದಕ್ಕೆ ಪ್ರತ್ಯಯ, ಉಪ ಪ್ರತ್ಯಯಗಳನ್ನು ಸೇರಿಸಿ, ಅದಕ್ಕೆ ಲ್ಯಾಟಿನ್ ಭಾಷೆಯಲ್ಲಿ ಒಂದು ಸ್ಥಾನಕಲ್ಪಿಸಿ ಕೊಡಬೇಕೆಂದೂ ಹದಿನೇಳನೆಯ ಶತಮಾನದಿಂದಲೂ ಪ್ರಯತ್ನಪಟ್ಟುಕೊಂಡು ಬಂದಿದ್ದಾರೆ; ಮತ್ತು ಇನ್ನು ಮುಂದೆಯೂ ಇದೇ ದಾರಿಯನ್ನು ಹಿಡಿಯುತ್ತಾರೆ.

CC-0. Jangamwadi Math Collection, Varanasi. An eGangotri Initiative

ಕನ್ನಡ ನಾಡಿನಲ್ಲಿ ಪರಿಚಿತವಾಗಿರುವ ಗಿಡಮರಗಳ ಕನ್ನಡ ಹೆಸರುಗಳಿಗೂ ಇದೇ ತೆರನಾದ ಒಂದು ಅನುಕರಣೆಯು ಪ್ರಚಾರಕ್ಕೆ ಬರುವುದು ಅಗತ್ಯವಾಗಿದೆ. ರೆ|| ಅಲೆಕ್ಸಾಂಡರ್ ಕಿಡ್ ನಾಯರ್ನ್ ಎಂಬವರು "ಪಶ್ಚಿಮ ಇಂಡಿಯದ ಹೂ ಬಿಡುವ ಸಸ್ಯಗಳು" ಎಂಬ ಗ್ರಂಥವನ್ನು ಬರೆದಿದ್ದಾರೆ. ಅದಕ್ಕೆ ಮುನ್ನುಡಿಯನ್ನು ಬರೆಯುತ್ತ "ಬಹು ಸಾಮಾನ್ಯವಾಗಿ ಪರಿಚಯವಾಗಿರುವ ಸಸ್ಯಗಳಿಗೆ ದೇಶಭಾಷೆಯಲ್ಲಿ ಕಡೆಯಪಕ್ಷ ಎರಡಾದರೂ ಪರ್ಯಾಯಪದಗಳಿರುತ್ತವೆ; ಮಿಕ್ಕ ಗಿಡಗಳಿಗೆ ಒಂದೊಂದು ಹಳ್ಳಿಯಲ್ಲೂ ಬೇರೆ ಬೇರೆ ಹೆಸರುಗಳಿರುತ್ತವೆ. ಒಂದೇ ಹೆಸರು ಅನೇಕ ಬಗೆಯ ಸಸ್ಯಗಳಿಗೂ, ಅನೇಕ ಬಗೆಯ ಸಸ್ಯಜಾತಿಗಳಿಗೆ ಒಂದೇ ಹೆಸರೂ ವಿವೇಚನೆಯಿಲ್ಲದೆ ಉಪಯೋಗಿಸಲ್ಪಡುತ್ತಿವೆ. ನನ್ನ ಅನುಭವದಲ್ಲಿ, ಎಲ್ಲಿಯೋ ಕೆಲವು ಗಿಡಗಳ ಹೆಸರುಗಳನ್ನು ತಿಳಿದುಕೊಂಡಿರುವವರೇ ಬಹು ಸ್ವಲ್ಪ ಮಂದಿ; ಮತ್ತು ಅವರು ತಮ್ಮ ಭಂಡಾರದಲ್ಲಿರುವ ಪದಗಳನ್ನೇ ನೂರಾರು, ಸಾವಿರಾರು, ಗಿಡಮರಗಳಿಗೆ ಅನ್ವಯಿಸುತ್ತಾರೆ. ಇಷ್ಟೇ ಅಲ್ಲ, ಒಬ್ಬನನ್ನು ಒಂದು ಮರದ ಹೆಸರನ್ನು ಕೇಳಿದಾಗ, ಅವನಿಗೆ ಆ ಮರದ ಹೆಸರು ಗೊತ್ತಿಲ್ಲದಿದ್ದರೂ, ನನಗೆ ಉಪಕಾರಿಯಾಗುವನೆಂಬ ಹೆಮ್ಮೆಯಿಂದಲೋ ಏನೋ, ಹೊಸ ಹೊಸ ಪದಗಳನ್ನು ಸೃಷ್ಟಿಸಿ ಹೇಳುತ್ತಿದ್ದ!" ಎಂದು ತಿಳಿಸುತ್ತಾರೆ.

ಕದಂಬಮರವು ನಮ್ಮ ದೇಶಕ್ಕೆ ಬಹುಕಾಲದಿಂದಲೂ ತಿಳಿದಿದೆ. ವಾಚಸ್ಪತ್ಯದಲ್ಲಿ "ಕದಂಬಗೋಲಕಸ್ಯ, ಗೋಲಾಕಾರಕದಂಬಸ್ಯ, ಸರ್ವಾವಯವೇಷು ಯಥಾ ಯುಗಪತ್ ಪುಷ್ಪೋದ್ಗಮಃ, ಏವಂ ಸರ್ವಪ್ರದೇಶೇಷು ಯುಗಪತ್ ಯತ್ರ ಪ್ರಸರಃ ತತ್ರಾಸ್ಯ ಪ್ರವೃತ್ತಿಃ" ಎಂದು ಕದಂಬದ ಹೂಗೊಂಚಲು ಉಪಮೇಯವಾಗಿ ಉಪಯೋಗಿಸಲ್ಪಟ್ಟಿದೆ. "ಕದಂಬಕೋರಕನ್ಯಾಯ" ಅಥವಾ "ಕದಂಬಮುಕುಲನ್ಯಾಯ" ಎಂಬ ನ್ಯಾಯವೂ ಇದರಿಂದಲೇ ರೂಪಗೊಂಡಿರಬಹುದು. ಈ ಸಂಸ್ಕೃತ ವಾಕ್ಯಗಳ ಅರ್ಥವನ್ನೂ ಸಮಂಜಸತೆಯನ್ನೂ ಕದಂಬದ ಹೂವಿನ ರಚನೆಯ ವಿಷಯವನ್ನು ಮುಂದೆ ವಿವರಿಸುವಾಗ ಅರಿಯಬಹುದು.

ಕದಂಬದ ಪ್ರಾಶಸ್ತ್ಯ ಇಷ್ಟಕ್ಕೇ ನಿಲ್ಲುವುದಿಲ್ಲ. ಪರಶುರಾಮನು ಹಾಯ್ಗ ಮತ್ತು ತುಳುವ ದೇಶಗಳನ್ನು ಸಮುದ್ರರಾಜನಿಂದ ವಶಪಡಿಸಿಕೊಂಡ ತರುವಾಯ ಶಿವನು ಪಾರ್ವತಿಯ ಸಮೇತನಾಗಿ ಆ ಸಾಹಸವನ್ನು ನೋಡಲು ಸಹ್ಯಾದ್ರಿಗೆ (ಈಗಿನ ಬಾಬಾಬುಡನ್ ಬೆಟ್ಟದ ಪ್ರದೇಶಕ್ಕೆ) ಬಂದನು. ಆ ಸುಂದರ ಪ್ರದೇಶದಲ್ಲಿ ಇಬ್ಬರೂ ಸರಸಸಲ್ಲಾಪಗಳಲ್ಲಿ ನಿರತರಾದರು. ಫಲಿತಾಂಶವಾಗಿ ಒಂದು ಕದಂಬಮರದ ಅಡಿಯಲ್ಲಿ ಪುತ್ರೋತ್ಸವವಾಯಿತಂತೆ. ಇದು ಕದಂಬರ ವಂಶದ ಹೆಸರಾಗುವುದಕ್ಕೆ

CC-0. Jangamwadi Math Collection, Varanasi. An eGangotri Initiative

CC-0. Jangamwadi Math Collection, Varanasi. An eGangotri Initiative



ಕದಂಬದ ಎಲೆ ಮತ್ತು ಹೂ

CC-0. Jangamwadi Math Collection, Varanasi. An eGangotri Initiative

ಕಾರಣವಾಯಿತಂತೆ. ಇನ್ನೊಂದು ಕತೆ ಹೀಗಿದೆ: ಶಿವನು ತ್ರಿಪುರಾಸುರನನ್ನು ಸಂಹಾರಮಾಡಿದುದರಿಂದ ಆಯಾಸವಾಗಿ ಕದಂಬಮರದ ನೆರಳಿಗೆ ವಿಶ್ರಾಂತಿಗಾಗಿ ಬಂದನು. ಆಯಾಸಗೊಂಡ ಶಿವನ ಹಣೆಯಿಂದ ಬೆವರು ಸುರಿದು ಕದಂಬಮರದ ಬೇರಿನ ಮೇಲೆ ಬಿದ್ದಿತು. ಈ ಬೆವರಿನ ಹನಿಗಳಿಂದ ಕದಂಬರ ಮೂಲಪುರುಷನು ಹುಟ್ಟಿದನಂತೆ; ಅವನ ಸಂತತಿಗೂ ಕದಂಬರೆಂದೇ ಹೆಸರಾಯಿತಂತೆ.

ಇವೆರಡಕ್ಕಿಂತಲೂ ಸ್ವೈಜವಾಗಿ ಕಾಣಬರುವ ಮತ್ತು ನಂಬಲರ್ಹವಾದ ಸಂಗತಿಯು ಶಾಂತಿವರ್ಮನ ತಾಳಗುಂದ ಶಾಸನದಲ್ಲಿ ಉಲ್ಲೇಖಿತವಾಗಿದೆ. ಇದಕ್ಕನುಸಾರವಾಗಿ ಅವರ ಮನೆಯ ಮುಂದೆ ಒಂದು ಕದಂಬಮರವಿದ್ದುದರಿಂದ ಆ ಮರದ ಹೆಸರೇ ಮನೆತನದ ಹೆಸರಾಗಿ ಉಳಿಯಿತು. ಕದಂಬರು ಈಶ್ವರನ ಆರಾಧಕರು. ಬನವಾಸಿಯ ಮಧುಕೇಶ್ವರನು ಅವರ ಮನೆದೇವರು. ಕದಂಬದ ಕತೆಯೊಂದಿಗೆ ಶಿವನ ಹೆಸರೂ ಸೇರಿದ್ದುದರಿಂದಲೋ ಏನೋ ಅದರ ಹೂ ಶಿವನಿಗೆ ಬಹು ಪ್ರಿಯವಾದದ್ದೆಂದು ಕದಂಬಮರಗಳನ್ನು ತಮ್ಮ ಮನೆಮನೆಗಳಲ್ಲೂ ಬೆಳೆಸಿದರು; ಕದಂಬದ ಹೂಗಳಿಂದ ಶಿವನನ್ನು ಪೂಜಿಸಿದರು. ಪಾರ್ವತಿಗೂ ಕದಂಬದ ಹೂ ಶ್ರೇಷ್ಠವಂತೆ. ಕಾಳಿದಾಸನು ರಚಿಸಿದುದೆಂದು ಹೇಳಲಾಗುತ್ತಿರುವ "ಶ್ಯಾಮಲಾದಂಡಕ"ದಲ್ಲಿ "ಕದಂಬವನವಾಸಿನಿ", "ಕಾದಂಬ ಕಾಂತಾರವಾಸಪ್ರಿಯೆ" ಮೊದಲಾದ ಪದಗಳು ದೊರಕುತ್ತವೆ.

ಈ ಮರವು ನೇಪಾಳ, ಬಂಗಾಳ, ಅಸ್ಸಾಂ, ಬರ್ಮ, ಪಶ್ಚಿಮಘಟ್ಟಗಳು ಮತ್ತು ಸಿಲೋನ್‌ಗಳಲ್ಲಿ ಸಾಧಾರಣವಾಗಿ ಬೆಳೆಯುತ್ತದೆ. ಮೈಸೂರು ದೇಶದ ಶಿವಮೊಗ್ಗ ಮತ್ತು ಕಡೂರು ಪ್ರದೇಶಗಳಲ್ಲಿ ಹರಿಯುವ ನದಿ ಕಾಲುವೆ ಮೊದಲಾದವುಗಳ ದಡಗಳಲ್ಲಿ ಕದಂಬಮರಗಳು ನದಿಯ ಕಾವಲುಗಾರರಂತೆ ಸಾಲುಸಾಲಾಗಿ ನಿಂತಿರುವುದು ಅಪರೂಪವಲ್ಲ. ಬಹುಶಃ, ನದೀಜ ಮತ್ತು ನೀರುಕಡವಾಲವೆಂಬ ಹೆಸರುಗಳಿಗೆ ಮೇಲಿನ ಸಂಗತಿಯು ಆಧಾರವಾಗಿರಬಹುದು. ಹೂವಿನ ಶ್ರೇಷ್ಠತೆಗಾಗಿ ಇದು ದಕ್ಷಿಣ ಇಂಡಿಯದ ಅನೇಕ ಮನೆ, ತೋಟ, ದೇವಾಲಯ ಮೊದಲಾದವುಗಳ ಆಶ್ರಯವನ್ನೂ ಪಡೆಯಿತು.

ಕದಂಬವು ಎತ್ತರವಾಗಿ, ವಿಶಾಲವಾಗಿ ಬೆಳೆಯುವ ಮರ. ಮೇಲ್ಗಡೆ ರೆಂಬೆ ಕೊಂಬೆಗಳು ಅಗಲವಾಗಿ ಹರಡಿಕೊಂಡಿರುತ್ತವೆ. ಎಳೆಯಮರದ ತೊಗಟೆ ನಯವಾಗಿರುತ್ತದೆ; ಬೆಳೆದು ಬಲಿತ ತೊಗಟೆ ಉದ್ದುದ್ದವಾದ ಕೊರಕಲುಗಳಿಂದ ಸೀಳುತ್ತದೆ. ಸೂರ್ಯಕಿರಣಗಳನ್ನು ಮುದ್ದಿಟ್ಟು ಥಳಥಳನೆ ಹೊಳೆಯುವ ದೊಡ್ಡ ದೊಡ್ಡ ಹಸುರೆಲೆಗಳು ಮರವನ್ನು ಮುಚ್ಚಿರುತ್ತವೆ. ಎಲೆಗಳ ಮೇಲೆ 'ನರ'ಗಳು, ಅಥವಾ ನೀರನ್ನು ಎಲೆಯ ಮೂಲೆ ಮೂಲೆಗೂ ಹಾಯಿಸುವ ನಾಳಗಳು, ಎದ್ದು ಕಾಣುತ್ತಿರುತ್ತವೆ.

CC-0. Jangamwadi Math Collection, Varanasi. An eGangotri Initiative

ಬೇಸಗೆಯಲ್ಲಿ ಎಲೆಗಳೆಲ್ಲವೂ ಹಣ್ಣಾಗಿ ಉದುರಿ, ಮರದ ಬರಿಯ ಕಾಂಡ, ಕೊಂಬೆಗಳು ಕಬಂಧನ ಬಾಹುಗಳಂತೆ ವಿಕಾರವಾಗಿ ನೀಡಿಕೊಂಡು ನಿಂತಿರುತ್ತವೆ.

ಕದಂಬದ ಒಣಗಿದ ಮರವು ಚೌಬೀನೆ ಕೆಲಸಗಳಿಗೆ ತಕ್ಕಮಟ್ಟಿಗೆ ಒಗ್ಗುತ್ತದೆ. ಇದರ ಬಣ್ಣ ಹಳದಿ ಮಿಶ್ರವಾದ ಬಿಳುಪು. ನಯ ಮತ್ತು ಹಗುರ. ಒಂದು ಘನ ಅಡಿಗೆ ೪೦ ಪೌಂಡು ತೂಕ. ಸಹಿಸಲಸಹ್ಯವಾದ ಒಂದು ಬಗೆಯ ದುರ್ಗಂಧವು ಚೌಬೀನೆ ಮರದಿಂದ ಹೊಮ್ಮುತ್ತಿರುತ್ತದೆ; ಈ ಕಾರಣದಿಂದ ಬಹುಶಃ ಇದು ಹೇಲ್ತ್ಯಾಗವೆಂಬ ಹೆಸರನ್ನು ಸಂಪಾದಿಸಿಕೊಂಡಿರಬಹುದು. ಅಸ್ಸಾಂ ಮತ್ತು ಡಾರ್ಜಿಲಿಂಗ್ ಪ್ರದೇಶ ಗಳಲ್ಲಿ ಈ ಮರದಿಂದ ಟೀ ಸೊಪ್ಪನ್ನು ಸಾಗಿಸುವ ಪೆಟ್ಟಿಗೆಗಳನ್ನು ಮಾಡುತ್ತಾರೆ. ಕೆಲವು ಕಡೆಗಳಲ್ಲಿ ವಾಸಕಾಲುಗಳಿಗೂ ತರಾಯಿಗಳಿಗೂ ದೂಲಗಳಿಗೂ ಉಪಯೋ ಗಿಸುತ್ತಾರೆ. ಇದು ಅಪಾಯಕರವಾದದ್ದು ; ಏಕೆಂದರೆ ಮರ ಪೆಡಸು ಮತ್ತು ಹಿಂದೆ ಹೇಳಿರುವಂತೆ ಹಗುರ; ಹೆಚ್ಚು ಭಾರವನ್ನು ತಡೆಯಲು ಅದಕ್ಕೆ ಶಕ್ತಿಯಿರುವುದಿಲ್ಲ. ಎಂದು ಬೇಕಾದರೂ ಕದಂಬಮರದ ತರಾಯಿಗಳ ಮೇಲೆ ಮಲಗಿರುವ ಮೇಲ್ಹೊ ವಣಿಯು ನೆಲಕ್ಕೆ ಕುಸಿದು ಬೀಳಬಹುದು. ಸ್ವಲ್ಪ ಒರಟಾದ ಕೆತ್ತನೆ ಕೆಲಸಗಳಿಗೂ ಕದಂಬಮರವನ್ನು ಉಪಯೋಗಿಸುವುದುಂಟು.

ಬೇಸಗೆಯಲ್ಲಿ ಕಬಂಧರಾಕ್ಷಸನ ಅವತಾರವನ್ನು ತಾಳಿದ್ದ ಕದಂಬಮರವು ಮಳೆಗಾಲದಲ್ಲಿ ಹೊಳೆಹೊಳೆಯುವ ಹಸರು ಎಲೆಗಳನ್ನು ತಳೆದು ಆ ರಾಕ್ಷಸ ಸ್ವರೂಪ ವನ್ನು ಮರೆಮಾಡಿಕೊಳ್ಳುತ್ತದೆ. ಎಲೆಗುತ್ತಿಗಳ ಕೊನೆಗಳಲ್ಲಿ ಕಿತ್ತಳೆ ಹಣ್ಣಿನ ಬಣ್ಣದ ಹೂ ಗೊಂಚಲನ್ನು ತಳೆಯುತ್ತದೆ. ಕದಂಬಮರದ ಸೊಬಗನ್ನು ಮನದಣಿಯೆ ಅನುಭವಿಸಬೇಕಾದರೆ ವರ್ಷಾಕಾಲದಲ್ಲಿ ಅದನ್ನು ನೋಡಬೇಕು.

ಕದಂಬವೆನ್ನುವುದಕ್ಕೆ ನಮ್ಮಲ್ಲಿ ಈಚಲು ಎಂಬ ಒಂದು ತಿಳಿವಳಿಕೆಯು ಇದೆ ಯೆಂದು ಹಿಂದೆಯೇ ಹೇಳಿದೆಯಷ್ಟೆ. ಈಚಲು ಮಳೆಗಾಲದಲ್ಲಿ ಹೂಬಿಡುವುದಿಲ್ಲ. ಆದುದರಿಂದ ಕದಂಬವು ಈಚಲಲ್ಲ. ಪ್ರಾವೃಷೇಣ್ಯ ಎಂಬ ಪರ್ಯಾಯ ನಾಮವೂ ಕದಂಬವು ಈಚಲಲ್ಲವೆಂಬುದನ್ನು ಸಮರ್ಥಿಸುತ್ತದೆ.

ಕದಂಬದ ಹೂವಿನಿಂದ ಒಂದು ಬಗೆಯ ಮದ್ಯವನ್ನು ಇಳಿಸಿ ಅದನ್ನು ಸೇವಿಸು ತ್ತಿದ್ದರಂತೆ. ಈ ಮದ್ಯವು ಕಾದಂಬರ ಎಂಬ ಹೆಸರಿನಿಂದ ಪ್ರಚುರವಾಗಿದೆ: "ನಿಷೇವ್ಯ ಮಧುಮಾಧವಾಃ ಸರಸಮತ್ರ ಕಾದಂಬರಂ." ಈ ಗುಣದಿಂದ ಕದಂಬಕ್ಕೆ ಶೀಧುಪುಷ್ಪ ಮತ್ತು ಕಾದಂಬರ್ಯ ಎಂಬ ಪರ್ಯಾಯ ಪದಗಳನ್ನು ಅನ್ವಯಿಸಿರ ಬಹುದು. ಈಚಲು ಮರದಿಂದಲೂ ಒಂದು ಬಗೆಯ ಹೆಂಡ ಇಳಿಯುತ್ತದೆ; ಈ ಹೆಂಡದ ಒಂದು ರೂಪವು ಕಾಕಂಬಿ ಎಂದು ಹೆಸರಾಗಿದೆ. ಈಚಲು ಮತ್ತು ಕದಂಬ ಮರಗಳೆರಡ

CC-0. Jangamwadi Math Collection, Varanasi. An eGangotri Initiative




ಬೆಂಗಳೂರಿನ ಲಾಲ್‌ಬಾಗ್ ಉದ್ಯಾನದಲ್ಲಿ ಕದಂಬದ ಒಂದು ಸಣ್ಣ ಗಿಡವನ್ನು ಬೆಳಸಿದ್ದಾರೆ. ಲಾಲ್‌ಬಾಗಿನ ಪಶ್ಚಿಮದ ಕಡೆಯ ಬಾಗಿಲಿಂದ ನೇರವಾಗಿ ಒಳಕ್ಕೆ ಹೋದರೆ ಎದುರಿಗೆ ಒಂದು ಅಶ್ವತ್ಥ ಮರವು ಸಿಕ್ಕುತ್ತದಷ್ಟೆ; ಅದಕ್ಕೆ ದಕ್ಷಿಣವಾಗಿ ಈ ಗಿಡವನ್ನು ನೋಡಬಹುದು. ಮೇಲಿನ ನಕ್ಷೆಯಲ್ಲಿ ಇದರ ಸ್ಥಳವನ್ನು ಸೂಚಿಸಿದೆ.

CC-0. Jangamwadi Math Collection, Varanasi. An eGangotri Initiative

CC-0. Jangamwadi Math Collection, Varanasi. An eGangotri Initiative

ಬಂದಲೂ ಮದ್ಯ ಇಳಿಯುವುದರಿಂದ ನಮ್ಮಲ್ಲಿ ಬಹುಶಃ ವಿವೇಚನಾ ಜ್ಞಾನ ಸಾಲದೆ, ಈ ಎರಡು ಮರಗಳಿಗೂ ಒಂದೇ ಹೆಸರನ್ನು ಉಪಯೋಗಿಸುವುದು ವಾಡಿಕೆಯಾಗಿ ಬಂದಿರಬಹುದು.

ಕದಂಬದ ಹೂಗೊಂಚಲಿನ ಆಕಾರ ಚೆಂಡಿನಂತೆ; ಗಾತ್ರ ನಿಂಬೆ ಹಣ್ಣಿನಷ್ಟು. "ಹೂ **ಗೊಂಚಲಿನ** ಆಕಾರ" ಎಂದು ಹೇಳಿರುವುದಕ್ಕೆ ಒಂದು ವಿಶೇಷವಿದೆ. ಒಂದು ಗೊಂಚಲಿನಲ್ಲಿ ಸುಮಾರು ಎಂಬತ್ತರಿಂದ ಹಿಡಿದು ನೂರರ ವರೆಗೂ ಬಿಡಿ ಹೂಗಳಿರುತ್ತವೆ (ಬಣ್ಣದ ಚಿತ್ರ ೨). ಈ ಬಿಡಿಹೂಗಳ ಸಮುದಾಯದ ಆಕಾರ ಚೆಂಡಿನಂತೆ (ಬಣ್ಣದ ಚಿತ್ರ ೧, ೨). ನಮ್ಮ ಪೂರ್ವಿಕರು "ವೃತ್ತಪುಷ್ಪ" ಎಂಬ ಪರ್ಯಾಯ ಪದವನ್ನು ಜೋಡಿಸಿದಾಗ ಆ ಹೂಗೊಂಚಲನ್ನೇ ಒಂದು ಹೂ ಎಂದು ತಪ್ಪು ತಿಳಿದುಕೊಂಡಿದ್ದರೆಂದು ಕಾಣುತ್ತದೆ. ಕದಂಬದ ಹೂ **ಗೊಂಚಲನ್ನು** ಮನಸ್ಸಿನಲ್ಲಿಟ್ಟುಕೊಂಡೇ ಕದಂಬ ಎಂಬ ಪದಕ್ಕೆ ಸಮೂಹ, ಗುಂಪು ಎಂಬ ಅರ್ಥಗಳನ್ನೂ ಕೊಟ್ಟಿರುವರೆಂದು ಕಾಣುತ್ತದೆ.

ಕದಂಬವು ಹೂಗಳಿಂದ ಅಲಂಕರಿಸಿಕೊಂಡು ದುಂಬಿಗಳನ್ನು ಆಕರ್ಷಿಸುತ್ತದೆ; ಅವಕ್ಕೆ ಹೂಗಳು ತಮ್ಮಲ್ಲಿರುವ ಮಧುವಾಟಿಕೆಯ ಬಾಗಿಲನ್ನು ತೆರೆಯುತ್ತವೆ. ಅತಿಥಿಗಳು ಹೂವಿನಿಂದ ಹೂವಿಗೆ ಹಾರುತ್ತ ಮಧುಪಾನಗೈಯುತ್ತ ಝೇಂಕರಿಸುತ್ತಿರುವ ಸುಮುಹೂರ್ತದಲ್ಲಿ ಕದಂಬದ ಸಂತಾನೋತ್ಪತ್ತಿಯೂ ನೆರವೇರುತ್ತದೆ. ದುಂಬಿಗಳು ಸಾಧಾರಣವಾಗಿ ಅನೇಕ ಇತರ ಜಾತಿಯ ಹೂಗಳಿಂದಲೂ ಬಂಡನ್ನು ಹೀರುತ್ತವೆಯಾದುದರಿಂದ ಕವಿಯು ಕದಂಬದ ಹೂವನ್ನು "ಷಟ್ಪದೇಷ್ಟ" ಎಂದು ಸಂಬೋಧಿಸಿರುವುದರಲ್ಲಿ ಅಷ್ಟು ಔಚಿತ್ಯ ಕಂಡುಬರುವುದಿಲ್ಲ.

ಕದಂಬದ ಹೂಗೊಂಚಲಿನ ತುದಿಯಲ್ಲಿರುವ ಮೊಗ್ಗು ಗೊಂಚಲಿನ ವಿಕಾಸದಲ್ಲಿ ಮೊಟ್ಟಮೊದಲು ಹುಟ್ಟಿದುದು. ಅನಂತರ ಅದರ ಕೆಳಗಡೆಯ ಮೊಗ್ಗುಗಳು ಕ್ರಮಾನುಗತವಾಗಿ ಹುಟ್ಟಿದವು. ಎಂದರೆ ಗೊಂಚಲಿನ ತುದಿಯ ಕಡೆ ಇರುವ ಮೊಗ್ಗುಗಳು ತಮ್ಮ ಕೆಳಗಡೆ ಇರುವ ಮೊಗ್ಗುಗಳಿಗಿಂತಲೂ ಹಿರಿಯ ವಯಸ್ಸಿನವು. ಆದುದರಿಂದ ಹಿರಿಯ ವಯಸ್ಸಿನ ಮೊಗ್ಗು ಮೊದಲು ಅರಳಿ ಹೂವಾಗುವುದು ಸ್ವಾಭಾವಿಕವಾಗಿಯೇ ಇದೆ. ಗೊಂಚಲಿನ ಮೇಲುತುದಿಯಲ್ಲಿರುವ, ಮೊಟ್ಟಮೊದಲು ಹುಟ್ಟಿದ, ಮೊಗ್ಗಿಗೂ ಕೆಳತುದಿಯಲ್ಲಿರುವ ಬಹು ಈಚೆಗೆ ಹುಟ್ಟಿದ ಮೊಗ್ಗಿಗೂ ಇರುವ ಕಾಲದ ಅಂತರವು ಬಹು ಕಿರಿದು. ಮೊಟ್ಟಮೊದಲು ಹುಟ್ಟಿದ ಮೊಗ್ಗು ಅರಳಿ ತನ್ನ ಸೌರಭವನ್ನು ಮಂದಾನಿಲದೊಂದಿಗೆ ಬೆರಸಿದೊಡನೆಯೇ ಗೊಂಚಲಿನ ಮಿಕ್ಕ ಮೊಗ್ಗುಗಳೂ ತಮ್ಮ ವಯಸ್ಸಿಗನುಗುಣವಾದ ಕ್ರಮವನ್ನನುಸರಿಸಿ ಅರಳಿ

CC-0. Jangamwadi Math Collection, Varanasi. An eGangotri Initiative

ಹೂವಾಗಿ ನಲಿಯುತ್ತವೆ. ಈ ನಿಜಾಂಶವೇ "ಕದಂಬಕೋರಕನ್ಯಾಯ"ದ ಉತ್ಪತ್ತಿಗೆ ಕಾರಣವಾಗಿದೆಯೆಂದು ಧಾರಾಳವಾಗಿ ಹೇಳಬಹುದು.

ಈಗ ಹೂಗೊಂಚಲಿನ ಒಂದು ಬಿಡಿಹೂವನ್ನು ಕಿತ್ತು ನೋಡೋಣ (ಬಣ್ಣದ ಚಿತ್ರ ೩, ೫). ಇದಕ್ಕೆ ಐದು ದಳಗಳು; ದಳಗಳು ಹೂವಿನ ಕೆಳಭಾಗದಲ್ಲಿ ಒಂದ ಕ್ಕೊಂದು ಅಂಟಿಕೊಂಡು ಒಂದು ನಾಳವಾಗಿದೆ; ನಾಳದ ಮೇಲ್ಭಾಗದಲ್ಲಿ ಐದು ದಳಗಳು ತುಟಿಗಳಂತೆ ನಾಳದ ಬಾಯನ್ನು ಸುತ್ತುವರೆದಿವೆ. ಈ ನಾಳದ ಒಳಗಡೆ ಐದು ಪರಾಗಕೋಶಗಳಿರುತ್ತವೆ (ಬಣ್ಣದ ಚಿತ್ರ ೩). ಇವೇ ಹೂವಿನ ಗಂಡು ಪ್ರಜನನಾಂಗಗಳು. ನಾಳದ ಕೆಳಭಾಗದಲ್ಲಿ ಹೂವಿನ ಹೆಣ್ಣು ಪ್ರಜನನಾಂಗವಿರು ತ್ತದೆ; ಈ ಅಂಗಕ್ಕೆ ಅಂಡಕೋಶವೆಂದು ಹೆಸರು. ಅಂಡಕೋಶದ ಸುತ್ತಲೂ ಒಂದು ಗ್ರಂಥಿಯಿದೆ; ಇದರ ಕೆಲಸ ಮಧುವನ್ನು ಸ್ರವಿಸುವುದು. ದುಂಬಿಯು ಮಧುವನ್ನು ಕುಡಿಯುವ ಆರ್ಭಟದಲ್ಲಿ ಅದರ ಮೈಗೆ ಪರಾಗಧೂಳಿಯು ಅಂಟಿಕೊಳ್ಳುತ್ತದೆ; ಆ ದುಂಬಿಯು ಇನ್ನೊಂದು ಹೂವಿಗೆ ಭೇಟಿಕೊಟ್ಟಾಗ ಈ ಪರಾಗಧೂಳಿಯು ಅಂಡ ಕೋಶಕ್ಕೆ ತಗಲುತ್ತದೆ; ಎಂದರೆ, ಗಂಡು ಹೆಣ್ಣು ಲಿಂಗಾಂಗಗಳ ಸಮಾಗಮ ವಾಯಿತು. ಹೀಗೆ ಪರಾಗಧೂಳಿಯು ಅಂಡವನ್ನು ಸೇರಿ, ಅದರೊಂದಿಗೆ ಒಂದಾಗು ತ್ತದೆ: ಮುಂದಿನ ಸಂತಾನದ ಮೊಳಕೆಯಾಗುತ್ತದೆ.

ಇನ್ನು ಕದಂಬದ ಗುಣಗಳನ್ನು ತಿಳಿದುಕೊಳ್ಳೋಣ: ಎಲೆಗಳನ್ನು ದನಕರುಗಳ ಮೇವಿಗೆ ಉಪಯೋಗಿಸುತ್ತಾರಂತೆ. ವ್ಯಾಟ್‌ರವರು ಮರದ ತೊಗಟೆಗೆ ಶಕ್ತಿವರ್ಧಕ ಗುಣವೂ ಜ್ವರಾಪಹಾರಿಗುಣವೂ ಇವೆಯೆಂದು ಬರೆದಿದ್ದಾರೆ. ಎಲೆಗಳ ಕಷಾಯ ವನ್ನು ಸರ್ವಸಾರ ಮುಖರೋಗ (Aphtæ) ಮತ್ತು ಮುಖಪಾಕ (Stomatitis) ರೋಗಿಗಳಿಗೆ ಬಾಯಿ ತೊಳೆದುಕೊಳ್ಳುವುದಕ್ಕೆ ಶಿಫಾರಸುಮಾಡಿದ್ದಾರೆ. ಈ ಅಭಿ ಪ್ರಾಯಗಳನ್ನು ಇನ್ನಾರೂ ಸಮರ್ಥಿಸಿಯೂ ಇಲ್ಲ, ಟೀಕಿಸಿಯೂ ಇಲ್ಲ.

ಶ್ರೀ ನಾಡಕರ್ಣಿಯವರು ತಮ್ಮ ವೈದ್ಯಕೀಯ ಗ್ರಂಥದಲ್ಲಿ ಕದಂಬದ ತೊಗಟೆ ಯಿಂದ ಆಗತಾನೆ ಇಳಿಸಿದ ರಸವು, ಎಳೆಯ ಮಕ್ಕಳ ಸುಳಿಯು ಕುಳಿಬಿದ್ದಾಗ ಆ ಎಡೆಯಲ್ಲಿ ಹಚ್ಚುವುದಕ್ಕೆ ಉತ್ತಮವಾದುದೆಂದು ಹೇಳಿದ್ದಾರೆ. ಕಣ್ಣಿನ ಊತ ತೋರಿಬಂದಾಗ ತೊಗಟೆಯ ರಸದೊಂದಿಗೆ ಅಷ್ಟೇ ಪ್ರಮಾಣದಲ್ಲಿ ನಿಂಬೆಹಣ್ಣಿನ ರಸವನ್ನೂ ಅಫೀಮು ಮತ್ತು ಸ್ಫಟಿಕಗಳನ್ನೂ ಮಿಶ್ರಮಾಡಿ, ಕಣ್ಣಿನ ಸುತ್ತಲೂ ಲೇಪಿಸಬಹುದೆಂದೂ ತಿಳಿಸಿದ್ದಾರೆ. ತೊಗಟೆಯ ಕಷಾಯವು ಜ್ವರಗಳಿಗೂ, ಎಲೆಯ ಕಷಾಯವು ಬಾಯಿ ತೊಳೆದುಕೊಳ್ಳುವುದಕ್ಕೂ ಯೋಗ್ಯವಾದುವೆಂದು ಅಭಿಪ್ರಾಯ ಪಟ್ಟಿದ್ದಾರೆ.

CC-0. Jangamwadi Math Collection, Varanasi. An eGangotri Initiative

ಇನ್ನು ಹೂವಿನ ಗುಣಗಳಿಗೆ ಬರೋಣ. ಇದರ ವಾಸನೆ ಕಹಿಮಿಶ್ರವಾದ ಖಾರ ಮತ್ತು ಒಗರು. ಇದಕ್ಕೆ ವಾತ, ಪಿತ್ತ, ಕಫ, ಸಂಕಟಗಳನ್ನು ನಾಶಮಾಡುವ ಗುಣಗಳಿವೆ. ಈ ಗುಣಗಳೆಲ್ಲವೂ ಕದಂಬ ಮದ್ಯದಲ್ಲೂ ಇರುತ್ತವೆ. ಮೇಲೆ ಹೇಳಿರುವ ಗುಣಗಳ ಜತೆಗೆ ಶೀತಲತ್ವವೂ ಶುಕ್ಲವರ್ಧಕತ್ವವೂ ಇವೆ.

'ಭಾವಪ್ರಕಾಶ' ಎಂಬ ವೈದ್ಯಗ್ರಂಥದ ಕರ್ತನು ಒಂದು ಶ್ಲೋಕದ ಮೊದಲನೆಯ ಪಾದದಲ್ಲಿ ಕದಂಬದ ಶೀತಲಗುಣವನ್ನು ಒಪ್ಪಿಕೊಂಡು, ಅದು ಮಧುರವಾಗಿದೆ ಎಂಬುದನ್ನೂ ಒಪ್ಪಿಕೊಂಡಿದ್ದಾನೆ. ಆದರೆ ಎರಡನೆಯ ಪಾದದಲ್ಲಿ ದೇಹದ ಕಾವನ್ನು ಹೆಚ್ಚುಮಾಡುವುದೆಂದು ಹೇಳಿದ್ದಾನೆ ಮತ್ತು ಕಫವನ್ನು ವೃದ್ಧಿಮಾಡುವುದೆಂದೂ ತಿಳಿಸಿದ್ದಾನೆ.

ಮೇಲೆ ಹೇಳಿರುವ ಅಭಿಪ್ರಾಯಗಳಲ್ಲಿ, ಕದಂಬದ ಹೂವಿಗೆ ಮತ್ತೇರಿಸುವ ಮದ್ಯದ ಗುಣವಿದೆಯೆಂದು ತಿಳಿಸಿದೆಯಷ್ಟೆ. ಮಮ್ಮಟಭಟ್ಟನ "ಕಾವ್ಯಪ್ರಕಾಶ" ದಲ್ಲಿರುವ ಒಂದು ಶ್ಲೋಕವು ಹೀಗಿದೆ :—

"ಯಃ ಕೌಮಾರಹರಃ ಸ ಏವ ಹಿ ವರಃ ತಾ ಏವ ಚೈತ್ರಕ್ಷಪಾಃ
ತೇ ಚೋನ್ಮೀಲಿತ ಮಾಲತೀಸುರಭಯಃ ಪ್ರೌಢಾಃ ಕದಂಬಾನಿಲಾಃ |"

ಈ ಪದ್ಯದಲ್ಲಿ ವರ್ಣಿತವಾಗಿರುವುದು ಬೇಸಗೆಯ ಕಾಲ. ಬೇಸಗೆಯಲ್ಲಿ ಕದಂಬವು ಹೂಬಿಡುವುದಿಲ್ಲವೆಂಬುದು ನಮಗೆ ಖಂಡಿತವಾಗಿಯೂ ಗೊತ್ತಿದೆ. ತಿಳಿಗಾಳಿಯು ಮಾಲತೀ ಸೌರಭದಿಂದ ನಿಬಿಡವಾಗಿ ಆ ಪ್ರದೇಶದಲ್ಲಿ ಸುಳಿದಾಡುತ್ತಿತ್ತು. ಅದ ರೆದುರಿಗೆ ಕದಂಬದ ಹೂವಿನ ವಾಸನೆಯು ಸೂರ್ಯನೆದುರಿಗಿರುವ ಹಣತೆಯಂತೆ. ಆದುದರಿಂದ ಕದಂಬದ ವಾಸನೆಯು ಗಾಳಿಯಲ್ಲಿ ಮಿಶ್ರವಾಗಿದ್ದಿತೆಂದು ಮಮ್ಮಟ ಭಟ್ಟನ ಅಭಿಪ್ರಾಯವಿದ್ದಿರಲಾರದು. ಮಾಲತೀ ಪುಷ್ಪದಮೇಲೆ ಸುಳಿಯುವುದರಿಂದ ಗಾಳಿಗೆ ಸುವಾಸನೆ ಲಭಿಸಿತು; ಅಲ್ಲಿಂದ ಕದಂಬಮರದಮೇಲೆ (ಮಮ್ಮಟಭಟ್ಟನು ಕದಂಬದ ಹೂ ಎಂದು ಹೇಳಿಲ್ಲ) ಬೀಸುವುದರಿಂದ ಅದಕ್ಕೆ ಇನ್ನೊಂದು ಅಗ್ಗಳಿಕೆಯು ಲಭಿಸಿತು. ಅದೇನೆಂದರೆ, ಪ್ರೌಢತೆ, ಮಾದಕತ್ವ. ಪದ್ಯದಲ್ಲಿ ವರ್ಣಿತವಾಗಿರುವ ಸನ್ನಿವೇಶಕ್ಕೆ ಇದು ಸಮಂಜಸವಾಗಿ ಹೊಂದಿಕೊಳ್ಳುವ ವಿಶೇಷಗುಣ. ಕದಂಬ ಮರದ ಬರಿಯ ಎಲೆಗಳ ಮೇಲೆ ಬೀಸಿದ ಗಾಳಿಗೇ ಮಾದಕತ್ವವಿತ್ತೆಂಬುದು ಕಾವ್ಯ ಪ್ರಕಾಶವನ್ನು ರಚಿಸಿದ ಕವಿಯ ಅಭಿಪ್ರಾಯವಾಗಿರುವಂತೆ ಕಾಣುತ್ತದೆ. ಆತನ ಅಭಿ ಪ್ರಾಯವು ಇದಲ್ಲವೆಂಬ ಪಕ್ಷಕ್ಕೆ ಆ ಉದ್ದಾಮ ಆಲಂಕಾರಿಕನು ಇಲ್ಲಿ ಕದಂಬಾನಿಲ ಎಂದು ಉಪಯೋಗಿಸಿರುವುದು ಸಾರ್ಥಕವಾಗಲಾರದು.

CC-0. Jangamwadi Math Collection, Varanasi. An eGangotri Initiative

ಮೇಲಿನ ಸಂಗತಿಗಳಿಂದ ಖಚಿತವಾಗಿ ಇಷ್ಟು ಹೇಳಬಹುದು: ಹೂವಿನ ವಾಸನೆ, ತೊಗಟೆಯ ಗುಣ ಇವುಗಳ ವಿಷಯದಲ್ಲಿ ಸ್ಥೂಲವಾಗಿ ಎಲ್ಲರಿಗೂ ಒಂದೇ ಅಭಿಪ್ರಾಯ ವಿರುವಂತೆ ಕಾಣುತ್ತದೆ. ಅದರ ಔಷಧೀಯ ಗುಣಗಳ ವಿಷಯವಾಗಿ ಭಿನ್ನಾಭಿಪ್ರಾಯ ಗಳಿವೆ. ಒಬ್ಬನ ಹೇಳಿಕೆಯನ್ನು ಇನ್ನೊಬ್ಬನು ಖಂಡಿಸಿದ್ದಾನೆ. ಇದುವರೆಗೆ ಹೇಳಿರುವ ಗುಣಗಳ ಪೈಕಿ ಯಾವನೊಬ್ಬನ ಅಭಿಪ್ರಾಯಕ್ಕೂ ವೈಜ್ಞಾನಿಕ ಸಂಶೋಧನೆಯ ಆಧಾರವಿಲ್ಲ.

ಈಚೆಗೆ ಬೆಂಗಳೂರಿನಲ್ಲಿ ಒಂದು ಅರಣ್ಯಸಂಶೋಧನಾಲಯವು ಸ್ಥಾಪಿತವಾಗಿದೆ. ಅದರ ಮೂಲಕ ಇನ್ನು ಸ್ವಲ್ಪ ಕಾಲದಲ್ಲಿ ಕದಂಬಮರವೊಂದರದೇ ಅಲ್ಲ, ಮೈಸೂರಿನ ಕಾಡುಗಣಿಗಳಲ್ಲಿ ಅಡಗಿರುವ ಇನ್ನೂ ನೂರಾರು ಅಮೂಲ್ಯವಾದ ಗಿಡ ಮೂಲಿಕೆಗಳ ಔಷಧೀಯ ಉಪಯೋಗಗಳು ಶಾಸ್ತ್ರೀಯವಾದ ಸಂಶೋಧನೆಗಳಲ್ಲಿ ಗೆದ್ದುಬಂದು ಜನತೆಗೆ ತಿಳಿವಳಿಕೆ ಕೊಡುತ್ತವೆಂದು ನಿರೀಕ್ಷಿಸಬಹುದಾಗಿದೆ.

## ವರ್ಣಚಿತ್ರದ ವಿವರಣೆ

೧. ಹೂ ಬಿಟ್ಟಿರುವ ಕದಂಬದ ಎಳೆಗುತ್ತಿ. ಇದರಲ್ಲಿ ಚೆಂಡಿನ ಆಕಾರದ ಎರಡು ಹೂ ಗೊಂಚಲುಗಳು ಇನ್ನೂ ಅರಳಿಲ್ಲ; ಮೊಗ್ಗಾಗಿಯೇ ಇವೆ. (ಸ್ವಾಭಾವಿಕ ಗಾತ್ರದಲ್ಲಿ ಅರ್ಧ.)

೨. ಕದಂಬದ ಅರಳಿರುವ ಹೂ ಗೊಂಚಲನ್ನು ತಳೆದಿರುವ ಸಣ್ಣ ಗುತ್ತಿ. (ಸ್ವಾಭಾವಿಕ ಗಾತ್ರ.)

೩. ಅರಳಿರುವ ಒಂದು ಬಿಡಿ ಹೂ. ಮೇಲ್ಗಡೆ ಹೂವನ್ನು ಪೂರ್ಣವಾಗಿರುವಂತೆಯೇ ಚಿತ್ರಿಸಿದೆ; ಕೆಳಗಡೆ ಅದೇ ಹೂವನ್ನು ಉದ್ದುದ್ದವಾಗಿ ಸೀಳಿ, ಹರಡಿದಾಗ ಕಾಣುವಂತೆ ಚಿತ್ರಿಸಿದೆ. ಮೇಲ್ಗಡೆಯ ಚಿತ್ರದಲ್ಲಿ ಹೂವಿನ ಐದು ದಳಗಳು ಒಂದು ನಾಳವಾಗಿರುವುದನ್ನೂ ಕೆಳಗಡೆಯ ಚಿತ್ರದಲ್ಲಿ ದಳಕ್ಕೆ ಅಂಟಿಕೊಂಡಿರುವಂತೆ ಐದು ಪರಾಗಕೋಶಗಳನ್ನೂ ಮತ್ತು ಹೂವಿನ ಹೆಣ್ಣು ಅಂಗವಾದ ಅಂಡಾಶಯವನ್ನೂ ಕಾಣಬಹುದು. (ಸ್ವಾಭಾವಿಕ ಗಾತ್ರಕ್ಕಿಂತ ಸುಮಾರು ಎರಡೂವರೆ ಯಷ್ಟು ದೊಡ್ಡದುಮಾಡಿದೆ.)

೪. ಎರಡನೆಯ ಚಿತ್ರದಲ್ಲಿರುವ ಒಂದು ಅರಳಿದ ಹೂಗೊಂಚಲನ್ನು ಉದ್ದುದ್ದವಾಗಿ ಕೊಯ್ದಾಗ ಕಾಣುವ ನೋಟ. (ಸ್ವಾಭಾವಿಕ ಗಾತ್ರ.)

೫. ಒಂದು ಬಿಡಿ ಮೊಗ್ಗು. (ಸ್ವಾಭಾವಿಕ ಗಾತ್ರಕ್ಕಿಂತ ಸುಮಾರು ಎರಡೂವರೆಯಷ್ಟು ದೊಡ್ಡದು.)

೬. ಕದಂಬದ ಕಾಯಿ ಉದ್ದುದ್ದವಾಗಿ ಸೀಳಿದಾಗ ಕಾಣುವಂತೆ. (ಸ್ವಾಭಾವಿಕ ಗಾತ್ರಕ್ಕಿಂತ ಸುಮಾರು ಎರಡೂವರೆಯಷ್ಟು ದೊಡ್ಡದು.)

ಬಿ. ಜಿ. ಎಲ್. ಸ್ವಾಮಿ.

---

CC-0. Jangamwadi Math Collection, Varanasi. An eGangotri Initiative

# ಕಾವ್ಯಾವಲೋಕನ

**ಕರ್ಣಪಾರ್ಯವಿರಚಿತಂ ನೇಮಿನಾಥ ಪುರಾಣಂ**—(ಮದ್ರಾಸ್ ಯೂನಿವರ್ಸಿಟಿ ಕರ್ಣಾಟಕ ಗ್ರಂಥಮಾಲಾ—ಸಂಖ್ಯೆ ೮); ಸಂಪಾದಕರು: ಶ್ರೀಮಾನ್ ಎಚ್. ಶೇಷಯ್ಯಂಗಾರ್; ರಾಯಲ್ ಅಷ್ಟ. 3 + Lii + 599; ಬೆಲೆ, ರೂ. ೫-೦-೦.

ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥನ ಚರಿತ್ರೆ ಅಥವಾ ಹರಿವಂಶ ಪುರಾಣವು ಕನ್ನಡ ಕವಿಗಳಿಗೆ ಬಹು ಪ್ರಿಯವಾದ ವಸ್ತು. ಒಂದನೆಯ ಗುಣವರ್ಮ, ಕರ್ಣಪಾರ್ಯ, ನೇಮಿಚಂದ್ರ, ಬಂಧುವರ್ಮರೇ ಮುಂತಾದ ಹಲವರು ಕವಿಗಳು ಈ ಕಥೆಯನ್ನು ನಿರೂಪಿಸಿದ್ದಾರೆ. ಮೊದಲನೆಯ ಗುಣವರ್ಮನ 'ಹರಿವಂಶ ಪುರಾಣ' ಇದುವರೆಗೂ ದೊರೆತಿಲ್ಲ. 'ಚಾವುಂಡರಾಯ ಪುರಾಣ' ದಲ್ಲಿ ನೇಮಿಯ ಚರಿತ್ರೆ ದೊರೆಯುತ್ತದೆಯಾದರೂ ಅದು ಸಂಕ್ಷಿಪ್ತ ಮತ್ತು ಗದ್ಯಾತ್ಮಕ; ಆದ್ದರಿಂದ ಕರ್ಣಪಾರ್ಯನ ಪ್ರಕೃತಗ್ರಂಥಕ್ಕೆ ವಿಶೇಷವಾದ ಬೆಲೆಯಿದೆ. ಇದುವರೆಗೆ ಸಿಕ್ಕಿರುವ ಕನ್ನಡ ನೇಮಿಚರಿತ್ರೆಗಳಲ್ಲಿ ಕರ್ಣಪಾರ್ಯನ ಕಾವ್ಯ ಅತಿ ಪ್ರಾಚೀನವಾದುದು; ಕವಿತೆಯ ದೃಷ್ಟಿಯಿಂದ ಬಹುಶಃ ಉತ್ತಮವಾದುದು. ನೇಮಿಚರಿತ್ರೆಗಳಲ್ಲಿ ಸಾಧಾರಣವಾಗಿ ಭಾಗವತಾಂತರ್ಗತವಾದ ಕೃಷ್ಣ ಚರಿತ್ರೆಯೂ ಮಹಾಭಾರತದ ಕಥೆಯೂ ಜೈನಮತಕ್ಕನುಸಾರವಾದ ರೂಪಾಂತರವನ್ನು ಪಡೆದು ಬರುತ್ತವೆ. ಈ ರೂಪಾಂತರದ ಪ್ರಥಮ ಪರಿಚಯವನ್ನು ಕನ್ನಡಿಗರಿಗೆ ಉಂಟುಮಾಡಿಕೊಡುವುದು ಪ್ರಕೃತಗ್ರಂಥದ ಕೆಲಸ. ಆದ್ದರಿಂದ ಇದು ನಮ್ಮ ಸಾಹಿತ್ಯದ ಚರಿತ್ರೆಯಲ್ಲಿ ಎಂಥ ಪ್ರಮುಖವಾದ ಸ್ಥಾನವನ್ನು ಪಡೆದಿದೆಯೆಂಬುದು ವೇದ್ಯವಾಗುತ್ತದೆ. ಇಷ್ಟು ಮಹತ್ವಪೂರ್ಣವಾದ ಈ ಗ್ರಂಥವನ್ನು ಶ್ರೀಮಂತ ಶೈಲಿಯಲ್ಲಿ ಮುದ್ರಿಸಿ ಪ್ರಕಟಿಸಿರುವ ಮದ್ರಾಸ್ ವಿಶ್ವವಿದ್ಯಾನಿಲಯವು ಕನ್ನಡಿಗರಿಗೆ ಮಹೋಪಕಾರಮಾಡಿದೆ. ಸಂಪಾದಕರಾದ ಶ್ರೀಮಾನ್ ಎಚ್. ಶೇಷಯ್ಯಂಗಾರ್ಯರ ಪರಿಶ್ರಮ ಪ್ರೌಢಿಮೆಗಳಿಂದ ಕಳೆಗೊಂಡು ಪರಿಷ್ಕರಣಕಾರ್ಯ ಸಮರ್ಪಕವಾಗಿ ನೆರವೇರಿದೆ. ಮುನ್ನುಡಿಯಿಂದಲೂ, ಪದ್ಯಗಳ ಅಕಾರಾದಿ, ಚಾವುಂಡರಾಯಪುರಾಣದ ನೇಮಿನಾಥ ಕಥಾಸಾರ, ಘ. ಪ್ರತಿಯ ಪಾಠಗಳು, ತ್ರಿಷಷ್ಟಿಶಲಾಕಾ ಪುರುಷರು ಮತ್ತು ಅವರ ಪರಿಗ್ರಹಗಳು, ತೀರ್ಥಂಕರರ ಭವಾವಳಿಗಳು, ಕಾವ್ಯಾಂತರ್ಗತವಾದ ವೃತ್ತಜಾತಿಗಳ ಸಂಖ್ಯೆ ಮುಂತಾದುವನ್ನು ಕುರಿತ ಪಂಚಪರಿಶಿಷ್ಟಗಳಿಂದಲೂ ಅಲಂಕಾರಯುಕ್ತವಾಗಿ ಪರಿಕರ ಸಹಿತವಾಗಿ ಈ ಗ್ರಂಥವನ್ನು ಸಂಪಾದಕರು ಹೊರಡಿಸಿದ್ದಾರೆ.

CC-0. Jangamwadi Math Collection, Varanasi. An eGangotri Initiative

'ಮುನ್ನುಡಿ' ಯಲ್ಲಿ ಕವಿಯ ವಿಷಯವಾಗಿ ತಿಳಿದುಬಂದಿರುವ ಸಂಗತಿಗಳನ್ನು ನಿರೂಪಿಸಿರುವುದೇ ಅಲ್ಲದೆ ಅವನ ಕಾಲವನ್ನು ಕುರಿತು ಚರ್ಚೆಮಾಡಿದೆ. "ಈ ಕರ್ಣಪಾರ್ಯನ ಕಾಲವು ೧೧೩೦ ರಿಂದ ೧೧೩೫ ಎಂದು ಹೇಳುವುದರಿಂದ ಎಲ್ಲಾ ವಿಷಯದಲ್ಲೂ ವಿಶೇಷವಾದ ಸಾಮಂಜಸ್ಯವುಂಟು" ಎಂಬ ನಿರ್ಣಯವನ್ನು ಸಂಪಾದಕರು ಮಂಡಿಸಿರುವರು. ಹೀಗೆ ಮಾಡುವಾಗ ಕವಿಚರಿತಕಾರರು ಕೊಟ್ಟಿರುವ ಆಧಾರಗಳನ್ನೂ, ಅವುಗಳನ್ನು ಖಂಡಿಸಿ ಕರ್ಣಪಾರ್ಯ ಕವಿ ೧೧೭೩–೭೪ರಲ್ಲಿ ತನ್ನ ಗ್ರಂಥವನ್ನು ಬರೆದನೆಂದಿರುವ ಡಾ|| ವೆಂಕಟಸುಬ್ಬಯ್ಯನವರ ನಿರ್ಣಯಕ್ಕೆ ಆಧಾರಗಳನ್ನೂ ಅವರವರ ಮಾತುಗಳನ್ನೇ ಉದ್ಧರಿಸಿ ಸಂಪಾದಕರು ಸಂಗ್ರಹಿಸಿ ಹೇಳಿದ್ದಾರೆ. ಈ ವಿಷಯದಲ್ಲಿ ಡಾ|| ವೆಂಕಟಸುಬ್ಬಯ್ಯನವರ ನಿರ್ಣಯವೇ ಸಾರತರವಾದುದೆಂಬುದರಲ್ಲಿ ಸಂದೇಹವಿಲ್ಲ. ಇದನ್ನು ಕವಿಚರಿತಕಾರರೇ ಮೂಲತಃ ಒಪ್ಪಿಕೊಂಡಿದ್ದಾರೆ. ಕರ್ಣಪಾರ್ಯನ ಕಾಲದಲ್ಲಿ ರಾಜ್ಯವಾಳುತ್ತಿದ್ದವನು ಕರಹಾಟದ ಶಿಲಾಹಾರ ವಂಶದ ವಿಜಯಾದಿತ್ಯ. ೧೧೪೩, ೧೧೫೩, ೧೧೭೫ನೆಯ ಇಸವಿಗಳಲ್ಲಿ ಲಿಖಿತವಾದ ಅವನ ಶಾಸನಗಳು ದೊರೆಯುತ್ತವೆ. ಅವನು ಯಾವಾಗ ರಾಜನಾದನೆಂಬ ಇಸವಿ ಮಾತ್ರ ಖಚಿತವಾಗಿ ತಿಳಿಯದು. ಅವನ ತಂದೆ ಗಂಡರಾದಿತ್ಯನು ೧೧೩೫ರಲ್ಲಿ ರಾಜ್ಯಭಾರ ಮಾಡುತ್ತಿದ್ದನು. ಆದ್ದರಿಂದ ವಿಜಯಾದಿತ್ಯನು ೧೧೩೫–೧೧೪೩ರ ಒಳಗೆ ಯಾವಾಗಲೋ ಪಟ್ಟಾಭಿಷಿಕ್ತನಾಗಿರಬೇಕು. ಅವನ ಆಳಿಕೆ ಮುಗಿದದ್ದು ಯಾವ ವರ್ಷವೆಂದೂ ತಿಳಿದಿಲ್ಲ. ಅವನ ಮಗ ಭೋಜನು ೧೧೯೦ರಲ್ಲಿ ರಾಜನಾಗಿದ್ದಂತೆ ಒಂದು ಶಾಸನ ಹೇಳುತ್ತದೆ. ಆದ್ದರಿಂದ ೧೧೭೫–೧೧೯೦ರ ಒಳಗೆ ಯಾವಾಗಲೋ ವಿಜಯಾದಿತ್ಯನ ಆಳಿಕೆ ಕೊನೆಗಂಡಿರಬೇಕು. ಅವನ ಆಳಿಕೆಯ ಕಾಲ ೧೧೪೦–೧೧೮೦ ಎಂದು ಸ್ಥೂಲವಾಗಿ ಹೇಳಬಹುದು. ಆದರೂ ಶ್ರೀಮಾರ್ ಎಚ್. ಶೇಷಯ್ಯಂಗಾರ್ಯರು ೧೧೩೦ರಿಂದ ೧೧೩೫ರ ವರೆಗೆ ಕರ್ಣಪಾರ್ಯನ ಕಾಲವೆಂದು ಹೇಳಿರುವುದಕ್ಕೆ ಕಾರಣವೇನು ?

ಕವಿಯ ಗುರುವಾದ ಕಲ್ಯಾಣಕೀರ್ತಿಯು ೧೧೩೦–೩೫ರಲ್ಲಿ ಕೀರ್ತಿವಂತನಾಗಿದ್ದನೆಂಬುದೂ, ಕರ್ಣಪಾರ್ಯನು 'ಅದ್ಯತನ' ಎಂದು ಕರೆಯುವ ನಾಗಚಂದ್ರ ೧೧೧೫ರಲ್ಲಿ ಪ್ರಸಿದ್ಧನಾಗಿದ್ದನೆಂಬುದೂ ಅವರ ಎರಡು ಕಾರಣಗಳು. ಕವಿಹೇಳುವ ಕಲ್ಯಾಣಕೀರ್ತಿ, ಮಲಧಾರಿ, ಶುಭಚಂದ್ರ ಎಂಬ ಗುರುಗಳಿಗೂ ಶ್ರ. ಬೆ. ೧೧೭ನೆಯ ಮತ್ತು ೬೯ನೆಯ ಶಾಸನಗಳಲ್ಲಿ ಉಕ್ತರಾದ ಅದೇ ಹೆಸರಿನ ಗುರುಗಳಿಗೂ ಯಾವ ಸಂಬಂಧವೂ ಇಲ್ಲವೆಂಬಂಶವನ್ನು ಡಾ|| ವೆಂಕಟಸುಬ್ಬಯ್ಯನವರು ಸ್ಪಷ್ಟಪಡಿಸಿದ್ದಾರೆ: "ನಾನು ಮಾಡಿರುವ ಸಮೀಕರಣವು ಸರಿಯುಲ್ಲವೆಂದು ಮೊದಲೇ

CC-0. Jangamwadi Math Collection, Varanasi. An eGangotri Initiative

ಒಪ್ಪಿಕೊಳ್ಳುತ್ತೇನೆ'' ಎಂದು ಕವಿಚರಿತಕಾರರೂ ಮುಕ್ತಕಂಠರಾಗಿ ಹೇಳಿದ್ದಾರೆ. ಆದ್ದರಿಂದ ಈ ಆಧಾರ ಬಿದ್ದುಹೋಗುತ್ತದೆ. ಇನ್ನು ಎರಡನೆಯದು :

ಅದ್ಯತನನಾಗಿಯುಂ ನೆಗ| ಪ್ದಾದ್ಯರ ದೊರೆಯೆನಿಸಿ ಮೆಱೆದು ಸಾಹಿತ್ಯಕಳಾ
ಹೃದ್ಯತೆಯಿನೆಸೆದನಾ ನಿರ| ವದ್ಯಗುಣಂ ಸಂದ ನಾಗಚಂದ್ರ ಕವೀಂದ್ರಂ||

ಎಂಬ ಕರ್ಣಪಾರ್ಯನ ಪದ್ಯ ನಾಗಚಂದ್ರನು ಅದ್ಯತನನಾಗಿದ್ದರೂ ಆದ್ಯರಿಗೆ ಸಮನೆಂದು ಹೇಳುತ್ತದೆ. ನಾಗಚಂದ್ರನ ಕಾಲ ಇನ್ನೂ ನಿರ್ಣಯವಾಗಿಲ್ಲ. 'ಅದ್ಯತನ' ಎಂದರೆ ಈಗಿನವನು; ಇಷ್ಟರಿಂದ ಕಾಲನಿರ್ಣಯ ಸಾಧ್ಯವಿಲ್ಲ. ಕರ್ಣಪಾರ್ಯನು ನಾಗಚಂದ್ರನಿಗಿಂತ "ಒಂದು ತಲೆ ಈಚೆಯವನಾಗಿದ್ದಿರಬಹುದು" ಎಂದಾಗಲಿ "ತನ್ನ ಸಮಕಾಲದವನು ಅಥವಾ ತನಗಿಂತ ಹತ್ತಾರು ವರ್ಷಗಳ ಕಾಲ ಹಿಂದಣವನು" ಎಂದಾಗಲಿ ಈ ಪದವೊಂದರಿಂದಲೇ ಹೇಗೆ ನಿಶ್ಚಯಿಸುವುದು? ಇಲ್ಲಿ 'ಅದ್ಯತನ' ಎಂಬ ಪದ 'ಆದ್ಯ' ಎಂಬುದಕ್ಕೆ ಪ್ರತಿಕಕ್ಷಿಯಾಗಿ ಬಳಸಿದೆ. 'ಆದ್ಯ'ರಷ್ಟು ಪ್ರಾಚೀನನಲ್ಲ, ಅವರಾದ ಅನಂತರ ಬಂದವನು ನಾಗಚಂದ್ರ ಎಂದೂ, ಹೀಗಿದ್ದರೂ ಅವನು ಸಾಹಿತ್ಯಕಲೆಯಲ್ಲಿ ಅವರಿಗೆ ಸಮಾನನಾದನೆಂದೂ ವಾದಿಸ ಬಹುದು. ವಾಸ್ತವವಾಗಿ ಇಲ್ಲಿ ನಾಗಚಂದ್ರನ ಮಾತುಗಳನ್ನೇ ಕರ್ಣಪಾರ್ಯನು ಅನುವದಿಸಿರುವನು—"ನಾಗಚಂದ್ರವಿಬುಧಂ ಪೇೞ್ದಂದದಿಂದಾದ್ಯರದ್ಯತನಂ ಪೇೞ್ದಭಿ ರಾಮ ರಾಮಕಥೆಯಂ ಸೈಪಿಂಗಡಪರ್ಾಗನೇ''. ತನ್ನನ್ನು 'ಅದ್ಯತನ' ಎಂದು ಕರೆದುಕೊಂಡು ಆದ್ಯರ್ ಪೇೞ್ದಂದದಿಂ ಅಭಿರಾಮ ರಾಮಕಥೆಯಂ ಪೇೞ್ದ ಪುಣ್ಯಶಾಲಿಯಾದೆನೆಂದು ನಾಗಚಂದ್ರನ ಮೇಲಿನ ಹೇಳಿಕೆ. ಪಂಪ ರನ್ನ ನಾಗಚಂದ್ರರ ಅನೇಕ ಪದ್ಯಗಳನ್ನು ಅನುವದಿಸಿರುವ ಕರ್ಣಪಾರ್ಯ ತನ್ನ ಈ ಪದ್ಯವನ್ನು ಬರೆಯುವಾಗಲೂ ನಾಗಚಂದ್ರನನ್ನು ಅನುವದಿಸಿದ್ದಾನೆ. ಇಷ್ಟೇ ಹೊರತು ಇದರಲ್ಲಿ ಬೇರೇನೂ ವಿಶೇಷವಾದ ಅರ್ಥವಿಲ್ಲ. ನಾಗಚಂದ್ರನು ಕರ್ಣಪಾರ್ಯನಿಗಿಂತ ಹಿಂದಿ ನವನು ಎಂದು ಹೇಳುವುದಕ್ಕೆ ಮಾತ್ರ ಇದು ಆಧಾರವಾಗಬಲ್ಲುದು. ಆದ್ದರಿಂದ ಸಂಪಾದಕರ ಈ ಕಾರಣ ಕೂಡ ನಿಲ್ಲುವುದಿಲ್ಲ. ವಿಜಯಾದಿತ್ಯನ ಆಳಿಕೆಯಲ್ಲಿ ಕರ್ಣಪಾರ್ಯನಿದ್ದು ತನ್ನ ಗ್ರಂಥವನ್ನು ರಚಿಸಿದನೆಂಬ ನಿರ್ಣಯ ಹೊರತಾಗಿ ಬೇರೆ ಯಾವ ತೀರ್ಮಾನವನ್ನೂ ಈಗ ದೊರೆತಿರುವ ಆಧಾರಗಳಿಂದ ಮಾಡಲು ಸಾಧ್ಯವಿಲ್ಲವಾಗಿದೆ. ಹಲವು ಸಲ ಗ್ರಂಥದಲ್ಲಿ ಹೊಸಗನ್ನಡದ ರೂಪಗಳು ದೊರೆಯು ವುದರಿಂದ ವಿಜಯಾದಿತ್ಯನ ಆಳಿಕೆಯ ಕೊನೆಕೊನೆಯಲ್ಲಿ ಅದು ರಚಿತವಾಗಿರಬೇಕೆಂದು ಕಾಣುತ್ತದೆ.

CC-0. Jangamwadi Math Collection, Varanasi. An eGangotri Initiative

ಪಾಠಪರಿಷ್ಕರಣವನ್ನು ಕ.ಖ.ಗ.ಘ. ಎಂಬ ಸಂಕೇತಗಳುಳ್ಳ ನಾಲ್ಕು ಪ್ರತಿಗಳ ಸಹಾಯದಿಂದ ಸಂಪಾದಕರು ಮಾಡಿದ್ದಾರೆ. ಈ ನಾಲ್ಕೂ ಓಲೆಯ ಪ್ರತಿಗಳು; ಎಲ್ಲದರಲ್ಲಿಯೂ ಱಕಾರ ಬಳಸಿದೆ; ಅದು ಬಳಸಿದೆಡೆಗಳಲ್ಲೆಲ್ಲ ಸರಿಯಾಗಿದೆಯೆಂದು ಹೇಳುವ ಹಾಗಿಲ್ಲ. ಈ ಗ್ರಂಥದ ಮೊದಲ ಹತ್ತು ಆಶ್ವಾಸಗಳು ಮುದ್ರಿತವಾದ ಮೇಲೆ ಘ. ಪ್ರತಿ ದೊರೆಯಿತೆಂದೂ ಆ ಆಶ್ವಾಸಗಳ ಪಾಠವನ್ನು ಪರಿಶಿಷ್ಟರೂಪವಾಗಿ ಕೊಟ್ಟಿದೆಯೆಂದೂ ಸಂಪಾದಕರು ತಿಳಿಸಿರುತ್ತಾರೆ. ಭಿನ್ನಪಾಠಗಳನ್ನು ಪ್ರತಿಯೊಂದು ಪುಟದಡಿಯಲ್ಲಿ ಕೊಟ್ಟಿರುವರಾದರೂ ಅವು ಯಾವ ಪ್ರತಿಗೆ ಸೇರಿದುವೆಂಬುದನ್ನು ಸಾಧಾರಣವಾಗಿ ಸೂಚಿಸಿಲ್ಲ; ಸೂಚಿಸಿದ್ದರೆ ಚೆನ್ನಾಗಿತ್ತು. ಪಾಠಶೋಧನೆಯನ್ನು ಶ್ರೀಮಾನ್ ಎಚ್. ಶೇಷಯ್ಯಂಗಾರ್ಯರು ಎಚ್ಚರಿಕೆಯಿಂದ ಮಾಡಿದ್ದಾರೆಂದು ಯಾರಾದರೂ ಒಪ್ಪಲೇಬೇಕು. ಆದರೆ ನಮಗೆ ಕಂಡುಬಂದ ಕೆಲವಂಶಗಳನ್ನು ಇಲ್ಲಿ ಹೇಳಿದರೆ ಅದು ಅನ್ಯಥಾಭಾವನೆಗೆ ಕಾರಣವಾಗುವುದಿಲ್ಲವೆಂದು ನಂಬಿ ಆ ಕೆಲಸಕ್ಕೆ ಕೈಹಾಕಿದೆ.

೧. ಱಳಕುಳರೇಫಗಳು. ಈ ಅಕ್ಷರಗಳಲ್ಲಿ ಯಾವಯಾವುದು ಯಾವ ಯಾವ ಪದಗಳಲ್ಲಿರಬೇಕೆಂಬ ವಿಷಯವನ್ನು ನಿರ್ಣಯಿಸುವುದು ಬಲುಮಟ್ಟಿಗೆ ಕ್ಲೇಶಕಾರಕವಾದ ಸಂಗತಿ. ಇದನ್ನು ನಿಶ್ಚಯಿಸುವಾಗ ಪದಗಳ ಅರ್ಥವನ್ನೂ ಪ್ರಕರಣವನ್ನೂ ಗಮನಿಸಬೇಕಾದದ್ದು ಮುಖ್ಯ. ಪ್ರಕೃತ ಸಂಪಾದಕರು ಈ ಕಾರ್ಯವನ್ನು ಯಶಸ್ವಿಯಾಗಿಯೇ ಸಾಧಿಸಿದ್ದರೂ ಅವರ ದೃಷ್ಟಿಯಿಂದ ತಪ್ಪಿಸಿಕೊಂಡೋ ಮುದ್ರಣದ ಸ್ಖಾಲಿತ್ಯದಿಂದಲೋ ಕೆಲವು ತಪ್ಪುಗಳು ತಲೆದೋರಿವೆ. 'ಶುದ್ಧಿಪತ್ರ'ದಲ್ಲಿ ಇಲ್ಲದೆ ಇರುವುವನ್ನು ಇಲ್ಲಿ ಕಾಣಿಸಿದೆ:

(i) ರೇಫವಿರಬೇಕಾದ ಪದಗಳು: ಮೂವಱುಂ (೨–೮೧, ೩–೬೧); ನೆಱಿಪಿ (೫–೪೧೧); ಒಡಱುಸು (೬–೧೪); ಪೆಸಱುಂ (೬–೨೩); ಅಱಿದಾ (೧೨–೨೭); ಅಱಿ (೩–೧೧೩); ಎಟ್ಟಱಿ (೫–೬೬೧).

(ii) ಱಕಾರ: ಎಚ್ಚರಿಸಲ್ (೩–೧೬೬೧); ಪರಿ (೬–೩೨೧); ಆರದೆ (೬–೧೨೭); ಪೊರಮಡು (೧೨–೩೬); ಕರಂಗಿ (೧೩–೨೦೧); ಮಾರಾಂತ (೭–೪೫೧, ೧೦–೮೭೧); ಮುರಿದ (೯–೯೭); ಮಿರುಪ (೧೦–೧೫೦); ಅದರ (೧೦–೧೫೨).

(iii) ೞಕಾರ: ಗೋಳ್ಗರೆ (೩–೪೭); ನೆಗಳ್ದ (೫–೪೮); ಅಳಲ್ (೬–೧೪೬); ಉಗುಳ್ (೭–೯೨); ಗಳಪು (೭–೩೨); ಆದವಳೆಲ್ (೮–೬೯); ಕಳೆಲ್ಚಿ (೭–೧೭೯೧); ತಳೆಲ್ (೧೨–೮೩); ಕೊಳೆಯಂಬು (೧೪–೧೦೦).

CC-0. Jangamwadi Math Collection, Varanasi. An eGangotri Initiative

(iv) ಕುಳ: ಅಟ್ಟ್ಕ (೨–೫೧, ೧೦೨, ೫–೨೮೧, ೬–೮೪); ಕೋಟ್ಪಟ್ಟು (೨–೭೫); ಬಟ್ಟ್ಕ (೩–೮೭೧); ತಗುಟ್ (೩–೯೩೧); ಕೇಟ್ಟು (೩–೧೫೦); ಇಟಿ (೪–೬೧, ೭–೩೨೧); ಪೆಟಱು (೭–೧೦); ಮಸುಟ್ಟು (೮–೧೦೨); ತೊಡಟ್ (೭–೧೧೫); ಸುಗುಟ್ (೧೨–೧೪೧೧); ಮಿದುಟ್ (೬–೧೪೮); ತಟ್ಟು (೧೨–೧೯೨); ಉಟಿ (೧೨–೧೮೮); ಜೆಟ್ಟ್ಸೆ (೧೨–೧೯೨).

೨. **ಪಾಠಾಂತರಗಳು:** ಯಾವ ಪ್ರತಿಯ ಅಥವಾ ಪ್ರತಿಗಳ ಪಾಠ ಪರಿಗ್ರಾಹ್ಯವೆಂಬ ವಿಷಯದಲ್ಲಿ ಸಂಪಾದಕರು ಕೂಲಂಕಷವಾದ ವಿಚಾರವನ್ನು ಮಾಡಿ ಸಾಮಾನ್ಯವಾಗಿ ಉತ್ತಮ ಪಾಠಗಳನ್ನೇ ಉದ್ಧರಿಸಿಕೊಟ್ಟಿದ್ದರೂ ಅಲ್ಲಲ್ಲಿ ಅಡಿಟಿಪ್ಪಣಿಯಲ್ಲಿ ಕಾಣಿಸಿರುವ ಪಾಠಗಳು ಹೆಚ್ಚು ಸುಷ್ಠುವೆಂದು ಕೆಲವರಿಗೆ ಮನವರಿಕೆಯಾಗದಿರದು. ಇದಕ್ಕೆ ಕೆಲವು ನಿದರ್ಶನಗಳನ್ನು ಮುಂದೆ ಕೊಟ್ಟಿದೆ:

(i) 'ಬಾಳುಮ ಮತ್ತ ಪರಶುವಂ' (೭–೧೧೫೧, ೧೫೪೧) ಎಂದು ಸಂಪಾದಕರ ಪಾಠ. ಎರಡು ಕಡೆಗಳಲ್ಲಿಯೂ ಇದಕ್ಕೆ 'ಬಾಳುಮತ್ತಪರಮುಮಂ' ಎಂದು ಪಾಠಾಂತರ. ಇಲ್ಲಿರುವ 'ಅತ್ತಪರ'ಕ್ಕೆ ಅರ್ಥವಾಗದೆ 'ಅತ್ತಪರಶು' ಎಂಬ ತಿದ್ದುಪಡಿ ಪ್ರತಿಕಾರರಿಂದ ನಡೆದಿರಬೇಕು. 'ಪರಶು' ಎಂದರೆ ಕೊಡಲಿ ಅಥವಾ ಆಯುಧ ವಿಶೇಷವೆಂದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುವ ಸಂಗತಿ. ಆದರೆ 'ಅತ್ತಪರ'ವೆಂದರೆ 'ಕಾಳೆಗವಲಗೆ' ಅಥವಾ ಗುರಾಣಿ ಎಂದು ಕನ್ನಡದಲ್ಲಿ ಪ್ರಸಿದ್ಧಾರ್ಥ. ಹಿಂದೆ ಬಾಳನ್ನು (ಕತ್ತಿ) ಕವಿ ಹೇಳಿರುವುದರಿಂದ ಕತ್ತಿಯ ಕಾಳೆಗದಲ್ಲಿ ಉಪಯೋಗಿಸುವ ಗುರಾಣಿಯನ್ನು ಅದರ ಜೊತೆಯಲ್ಲಿಯೇ ಹೇಳುವುದು ಸಹಜ. 'ಪರಶು' ಎಂದು ಇಟ್ಟುಕೊಂಡರೆ ಇಲ್ಲಿ ಅರ್ಥ ಸರಿಯಾಗದು. ಅಲ್ಲದೆ 'ಅತ್ತಪರ' ಎಂಬ ಶಬ್ದ ಸಂಸ್ಕೃತದ ಹಸ್ತಫಲ (ಹಸ್ತಫಲಕ) = ಕೈಗುರಾಣಿ ಎಂಬುದರಿಂದ ಬಂದಿದೆಯೆಂದು ಕಾಣುತ್ತದೆ. ಆದ್ದರಿಂದ ಇಲ್ಲಿ **'ಬಾಳುಮತ್ತಪರಮುಮಂ'** ಎಂಬ ಪಾಠವೇ ಸಾಧುವೆಂದು ಹೇಳಬಹುದು.

(ii) ೧೦ನೆಯ ಆಶ್ವಾಸದ ೭೨ನೆಯ ಪದ್ಯ ಸಂಪಾದಕರ ಪಾಠದಂತೆ ಹೀಗಿದೆ:

ಅಂತಕಸುತ ಕರುಣಿಸಿ ಮ
ತ್ಕಾಂತನನೆಂತುಂ ತರಲ್ಕೆ ವೇಟ್ಟುದು ನೀಂ ನಿ
ನ್ನಂತರ ಪಗೆವರನೆತ್ತಿಱಿ
ದಂತಿರದಿರು ಕುರುಕುಳಕ್ಕೆ ಬನ್ನಂ ಬಕ್ಕುಂ

ಇದಕ್ಕೆ ಯಾವ ಪಾಠಾಂತರಗಳೂ ಸೂಚಿತವಾಗಿಲ್ಲ. ಆದರೆ ಖ.ಗ. ಪ್ರತಿಗಳಲ್ಲಿ. . . ನಿನ್ನಿಂ ನೋಂತರ. . . ಎಂಬ ಪಾಠಭೇದವಿದೆ; ಇದನ್ನು ವಿತಕ್ಕೆ ಸಂಪಾದಕರು

CC-0. Jangamwadi Math Collection, Varanasi. An eGangotri Initiative

ಕೈಬಿಟ್ಟರೊ! ಇದರ ಸಹಾಯದಿಂದ ಸರಿಯಾದ ಪಾಠವನ್ನು ಯೋಜಿಸಬಹುದು. ಅದು ನ್ಯಾಯವಾಗಿ. . . . ನೀನಿನ್ನೋಂತರ. . . . ಎಂದಿರಬೇಕು. ಈ ಸಂದರ್ಭದಲ್ಲಿ 'ಪಂಪಭಾರತ'ದ ಪದ್ಯವೊಂದನ್ನು (೭–೨೮) ಹೋಲಿಸಿ ನೋಡಬಹುದು. "ನೋಂತರ ಪಗೆವರನೆಟ್ಟಿಱಿದಂತೆ" ಎಂಬುದು ಒಂದು ನಾಣ್ನುಡಿ. ಕರ್ಣಪಾರ್ಯನು ಇಲ್ಲಿ ಪಂಪನನ್ನು ಅನುಕರಿಸಿರುವುದು ವಿಶದವಾಗಿದೆ.

(iii) ಒಬ್ಬ ವಣಿಕ್ಪತಿಯು ದ್ವಾರಾವತೀ ಪುರಕ್ಕೆ ಬಂದು ಅದರ ಸೊಗಸನ್ನು ಕಂಡು ಆಶ್ಚರ್ಯಪಟ್ಟು ಆ ನಗರಲಕ್ಷ್ಮಿಗೆ ತಲೆಮಣಿಯಂತಿದ್ದ ಅರಮನೆಯನ್ನು ನೋಡಿದನಂತೆ. ಅದನ್ನು ಕರ್ಣಪಾರ್ಯ ವರ್ಣಿಸುತ್ತ

ಇದು ಋತುವಿಮಾನಮೋ ಮೇ
ಣಿದಹೇಂದ್ರನ ರುಂದ್ರ ರಮ್ಯಹರ್ಮ್ಯಮೊ ಪೇೞ್. . . (೧೧–೪)

ಎಂದು ಉಸುರಿದ್ದಾನೆಂದು ಸಂಪಾದಕರ ಪಾಠದಂತೆ ಹೇಳಬೇಕಾಗಿದೆ. ಇಲ್ಲಿ 'ಋತು' ಎಂಬುದಕ್ಕೆ 'ರುತು', 'ರಿತು' ಎಂದೆರಡು ಪಾಠಭೇದಗಳಿವೆ; ಇವು ಯಾವ ಪ್ರತಿಯವೋ ತಿಳಿಸಿಲ್ಲ. ಆದರೂ ಇವುಗಳಲ್ಲಿ 'ರಿತು' ಎಂಬುದು ಖ. ದ ಪಾಠವಾಗಿದೆ. ಉಳಿದೆರಡು ಪ್ರತಿಗಳಲ್ಲಿ 'ಋತು' ಎಂದೇ ಪಾಠವಿರಬೇಕಲ್ಲವೆ? ಈ ವಿಷಯದಲ್ಲಿ ಸಂದೇಹಕ್ಕೆ ಕಾರಣವಿದೆ. ಸಾಧಾರಣವಾಗಿ ಋ ಎಂಬಕ್ಷರವನ್ನು ಹಳೆಯ ಹಸ್ತಪ್ರತಿಗಳಲ್ಲಿ ಬರೆಯುವುದು ಅಪರೂಪ; ಅದಕ್ಕೆ ಬದಲಾಗಿ ರು ಎಂದೋ ರಿ ಎಂದೋ ಬರೆಯುವುದು ವಾಡಿಕೆ. ಒಂದುವೇಳೆ ಇಲ್ಲಿ 'ಋತು' ಎಂದೇ ಬರೆದಿದೆಯೆಂದು ಇಟ್ಟುಕೊಂಡರೆ 'ಋತುವಿಮಾನ' ಎಂಬುದಕ್ಕೆ ಅರ್ಥವೇನು? ಇಂಥ ಪ್ರಯೋಗ ಬೇರೆಲ್ಲಿಯಾದರೂ ಇದೆಯೋ? ಅರ್ಥಗೊತ್ತಿಲ್ಲದ ಪದಗಳು ಎಷ್ಟೋ ಇವೆ. ಅವುಗಳಲ್ಲಿ ಇದೂ ಒಂದು ಎನ್ನಬಹುದೋ? ನಮಗಾದರೆ ಇಲ್ಲಿ ಪಾಠವೇ ತಪ್ಪಿರುವಂತೆ ಕಾಣುವುದೇ ಅಲ್ಲದೆ ಇಲ್ಲಿನ ಪಾಠಾಂತರಗಳಿಗೆ ಬೆಲೆಯಿದೆಯೆಂದೂ ಅನ್ನಿಸುತ್ತದೆ. ಇದಿರ್ ಎಂಬ ದಿಗ್ವಾಚಿ 'ಇದಿರಿತು' ಎಂಬ ತ್ವಂತವಾದ ಗುಣವಚನವಾಗಿರುವಂತೆ ತೋರುತ್ತದೆ. ಇದಕ್ಕೆ ಪಂಪನ ಪ್ರಯೋಗ:

ಇದುರಿತು ವಿಮಾನಮುಂ ತ
ನ್ನುದಗ್ರಚೂಳಿಕೆಯೊಳಾಂತುಕೊಂಡಿರೆ ಸಗ್ಗ
ಕ್ಕಿದು ನಿಚ್ಚಣಿಗೆಪ್ಪವೊಲಿ
ರ್ದುದಲ್ತೆ ಜಿನಸವನಜಳಪವಿತ್ರಿತ ಕಟಕಂ (ಆದಿಪುರಾಣ ೨-೩೧)

ಇಲ್ಲಿ ಕೂಡ ಪಾಠಾಂತರಗಳನ್ನು 'ಆದಿಪುರಾಣ'ದ ಸಂಪಾದಕರು ಸೂಚಿಸಿಲ್ಲ; ಆದರೆ ಅವರು ಉಪಯೋಗಿಸಿದ ಪ್ರತಿಗಳೆರಡರಲ್ಲಿ (ಮೈಸೂರು ಓರಿಯಂಟಲ್

CC-0. Jangamwadi Math Collection, Varanasi. An eGangotri Initiative

ಲೈಬ್ರೇರಿ KA 131, 27) ಇದುರಿತು ಎಂಬ ಪಾಠವೂ ಮತ್ತೊಂದರಲ್ಲಿ (KA 7) ಇದುರುತು ಎಂದೂ ಇವೆ. ಇಲ್ಲಿ, 'ಋತುವಿಮಾನ' ಎಂದು ಸಂಪಾದಕರು ತಿದ್ದಿಲ್ಲ. 'ಇದಿರಿತು ವಿಮಾನ' ಎಂಬ ಪಾಠ ಇಲ್ಲಿಯೂ ಮೇಲ್ಕಂಡ ಕರ್ಣಪಾರ್ಯನ ಪದ್ಯದಲ್ಲಿಯೂ ಇರಬೇಕು. ಅದಕ್ಕೆ ಅರ್ಥ ಎದುರಾಗಿರುವ ಎಂದರೆ ಕಣ್ಣಮುಂಗಡೆ ಯಿರುವ ವಿಮಾನ; ವಿಮಾನವೆಂದರೆ ಏಳು ಅಂತಸ್ತಿನ ಪ್ರಾಸಾದ. "ಎದುರಾಗಿರುವ ಏಳು ಅಂತಸ್ತಿನ ಪ್ರಾಸಾದವನ್ನು ತನ್ನ ನೆತ್ತಿಯಲ್ಲಿ ಹೊತ್ತ ಇದು—(ಮೇರು ಪರ್ವತ) ಸ್ವರ್ಗಕ್ಕೆ ನಿಚ್ಚಣಿಗೆಯನ್ನು ಹಾಕಿದಂತೆ ತೋರುತ್ತಿತ್ತು" ಎಂದು ಪಂಪನ ಪದ್ಯಕ್ಕೆ ನೇರವಾದ ಅರ್ಥ. ಕರ್ಣಪಾರ್ಯನ ಪದ್ಯದಲ್ಲಿ ಇದರ ಅನುಕರಣೆ ಯನ್ನು ಕಾಣಬಹುದು.

(iii) ಜಯದ್ರಥನನ್ನು ಕೊಲ್ಲಬೇಕೆಂದು ಅರ್ಜುನ ರಥಾರೂಢನಾಗಿ ಬಂದು ಅವನ ಸಮ್ಮುಖದಲ್ಲಿ ನಿಂತಾಗ 'ನೇಸಱುನೊಳದಂದೆನ್ನಂ ಸಾಸಿಸುವಂ ಸುರಪ ಸೂನು' (೧೨-೭೩) ಎಂದು ಅವನು ತನ್ನೊಳಗೇ ಅಂದುಕೊಂಡನಂತೆ. ಈ ಪಾಠದ ಪ್ರಕಾರ ಇದಕ್ಕೆ ಅರ್ಥವಾಗುವುದಿಲ್ಲ. 'ನೇಸರಿನೂಳದೆಸೆನ್ನಂ ಸಾಸಿ(ಧಿ)' ಎಂಬ ಖ.ದ ಪಾಠಕ್ಕೂ ಅರ್ಥವಿಲ್ಲ. ಉಳಿದ ಮೂರು ಪ್ರತಿಗಳಲ್ಲಿ ಸಂಪಾದಕರು ಗ್ರಹಿಸಿದ ಪಾಠವೇ ಇದೆಯೇನೊ ತಿಳಿಯದು. "ನೇಸಱುನೊಳಗಿಂದೆನ್ನಂ" . . . ಎಂದು ಸರಿಯಾದ ಪಾಠ. 'ಇಂದಿನ ನೇಸಱುಂದೊಳಗರಾತಿಯನಿಕ್ಕದೆ" ಎಂಬ ಪಂಪನ ಪದ್ಯಭಾಗವನ್ನು (ಪಂಪಭಾರತ ೧೩-೭೫) ಗಮನಿಸಬಹುದು.

(iv) ೧೪ ನೆಯ ಅಶ್ವಾಸದ ೧೦೪ ನೆಯ ಪದ್ಯದ ಪಾಠ ಹೀಗಿದೆ.—

ಎನ್ನನುಜನ್ಮನ ನವನೀ
ಸನ್ನುತನಂ ಚಕ್ರವರ್ತಿಯಂ ಪೆಣನೆಂದಿಂ
ತನ್ನೆಯಮಮಂ ನುಡಿ[10]ದಪ್ಪಿಱು
ದೆನ್ನ ಮಗಿನ್ನೀಸಾಯುವಿಂದು ನೆಱೆದಪುದಕ್ಕುಂ

ಇಲ್ಲಿ ಉತ್ತರಾರ್ಧದ ಪಾಠ ಕೆಟ್ಟಿದೆ. ಘ. ದ ಪಾಠಾಂತರ (10) 'ಏರ್ ಪಿರಿದೆನಿಮಗಿನಿಸೆ ಕರಂ ದಲಿಂದು' ಎಂದು; ಖ.ಗ. ಗಳ ಪಾಠಭೇದವನ್ನು ಕೊಟ್ಟಿಲ್ಲ. ಅವು ಕ್ರಮವಾಗಿ 'ದಪ್ಪರಿದೆಂ ನಿಸಗಿನಿಸೆಕವಿಂದು' ಮತ್ತು 'ದಪ್ಪರಿದೆಂನಿವಗಿನಿಸಾಯುವಿಂದು' ಎಂಬು ವಾಗಿವೆ. ಖ. ಘ. ಗಳ ಸಹಾಯದಿಂದ 'ದಪ್ಪಿರಿದೇನ್ನಿಮಗೆ ನಿಸೇಕವಿಂದು' ಎಂಬ ಕವಿಯ ಪಾಠವನ್ನು ಕಂಡುಹಿಡಿಯಲು ಸಾಧ್ಯ. ಇಲ್ಲಿರುವ 'ನಿಸೇಕ'ಕ್ಕೆ ಅರ್ಥ ತಿಳಿಯದೆ ಕ. ಗ. ಗಳ ಲೇಖಕರು ಮೇಲೆ ಪದ್ಯದಲ್ಲಿರುವಂತೆ ತಿದ್ದಿರಬೇಕೆಂದು ತೋರದೆ ಇರದು.



CC-0. Jangamwadi Math Collection, Varanasi. An eGangotri Initiative

ಹೀಗೆಯೇ ೧-೬೦ರಲ್ಲಿ ಪ್ರಕಾಶಂ ಎಂದೂ ೩-೬೩ ಗದ್ಯದಲ್ಲಿ ಮರಗೆರಸಿ ಎಂದೂ (ಪಂಪಭಾರತ ೨-೩೦ಗ) ೧೨-೧೨೬ರಲ್ಲಿ ದಡಸಿತಾಪವೊಲ್ ಎಂದೂ ೧೨-೧೮೫ರಲ್ಲಿ ಕೊಲ್ಲಂ ಎಂದೂ ೪೨೪ನೆಯ ಪುಟದ ಮೊದಲ ಪಂಕ್ತಿಯಲ್ಲಿ ಲೋಹಿತಂಬೊರೆದು ಎಂದೂ ಆಯಾ ಪಾಠಭೇದಗಳ ಪರಿಗ್ರಹಣದಿಂದ ಸರಿಯಾದ ಪಾಠಗಳನ್ನು ನಿರ್ಣಯಿಸಬಹುದಾಗಿದೆ.

೩. ಛಂದಸ್ಸು: ೧೦ನೆಯ ಆಶ್ವಾಸದ ೧೫೭ನೆಯ ಕಂದದ ಮೊದಲನೆಯ ಪಾದದಲ್ಲಿ ಛಂದೋಭಂಗವಿರುವುದರಿಂದ ಅದರ ಪಾಠ ಸರಿಯಾಗಿಲ್ಲವೆಂದು ಕಾಣು ತ್ತಿದೆ. ಖ.ಗ. ಗಳಲ್ಲಿ ದೊರೆಯುವ 'ತುಟಿಲಾಳ್ಗಳ್ಗಾಳ್ದರ ಬೆಸ' ಎಂಬ ಪಾಠ ವನ್ನು ಅಂಗೀಕರಿಸಿದರೆ ಯಾವ ಛಂದೋ ದೋಷವೂ ಇಲ್ಲದ ಒಳ್ಳೆಯ ಪಾಠ ದೊರೆಯುತ್ತದೆ.

ಶ್ರೀಮಾನ್ ಶೇಷಯ್ಯಂಗಾರ್ಯರು ತಮ್ಮ ಮುನ್ನುಡಿಯಲ್ಲಿ (xxxix) "ಆ ೧೨ ಪ. ೧೬೩ರಲ್ಲಿ 'ಓರೋರ್ವರೆಚ್ಚ' ಎಂಬ ದೀರ್ಘದ ಮುಂದಣ ರೇಫ ಪ್ರಾಸಿಸಲ್ಲಿ 'ದುರ್ವಂ ದೋರ್ಗರ್ವ' ಎಂದು ರೇಫವಕಾರ ಸಂಯುಕ್ತ ವರ್ಣವನ್ನು ಪ್ರಯೋಗಿಸಿರುವನು. ಪ್ರಾಯಶಃ ಇದು 'ಒರ್ವೊರ್ವರೆಚ್ಚ' ಎಂದು ಕವಿಯ ಪ್ರಯೋಗವಾಗಿದ್ದು ಲೇಖಕರ ಪ್ರಮಾದದಿಂದ ಪ್ರಕೃತ ಸ್ಥಿತಿಯಲ್ಲಿ ಮಾರ್ಪಟ್ಟಂತೆ ತೋರುವುದು. ಇದು ಕವಿಯ ಪ್ರಯೋಗವಾಗಿದ್ದರೆ ವ್ಯಾಕರಣ ಮರ್ಯಾದೆಯು ವಿಚಾರಾರ್ಹವಾದುದು" ಎಂದು ಬರೆದಿರುವರು. 'ಒರ್ವೊರ್ವರೆಚ್ಚ' ಎಂದೇ ಕವಿಯ ಪಾಠವೆಂಬುದರಲ್ಲಿ ಸಂದೇಹಪಡಬೇಕಾಗಿಲ್ಲ; ಏಕೆಂದರೆ ೧೨-೨೨ನೆಯ ಪದ್ಯ ದಲ್ಲಿಯೂ 'ಒರ್ವೊರ್ವರ' ಎಂದು ಪ್ರಾಸಸ್ಥಾನದಲ್ಲಿಯೇ ಪ್ರಯೋಗವಿದೆ. ಇಲ್ಲಿನ ವ್ಯಾಕರಣ ಮರ್ಯಾದೆ ನಿಜವಾಗಿಯೂ ಚಿಂತ್ಯವಾದುದು. ಇದೊಂದು ಅಪರೂಪ ವಾದ ಪ್ರಯೋಗ; 'ಓರೋರ್ವರ' ಎಂಬುದಕ್ಕೆ ಬದಲಾಗಿ 'ಒಂದೊರ್ವರ' ಎಂದು ಪಂಪ ಪ್ರಯೋಗಿಸಿಲ್ಲವೆ ಹಾಗೆ (ಪಂಪಭಾರತ ೧೧-೧೭). "ಆದರೆ ಱಱಕ್ಕೂ ರೇಫಕ್ಕೂ ಪ್ರಾಸವನ್ನು ಹೇಳಿರುವುದು ಎಲ್ಲಿಯೂ ದೊರಕುವುದಿಲ್ಲ. ಆ. ೧೨ ಪ. ೧೮೦ ಮತ್ತು ೧೪೫ರಲ್ಲಿ ರೇಫಕ್ಕೂ ಱಱಕ್ಕೂ ಹೇಳಿರುವ ಪ್ರಾಸ ಸಂದೇಹಾಸ್ಪದವಾಗಿದೆ" ಎಂಬುದಾಗಿರುವ ಸಂಪಾದಕರ ಮಾತು ವಿಚಾರಾರ್ಹ. ಈ ಎರಡು ಪದ್ಯಗಳಲ್ಲಿಯೂ ರೇಫಕ್ಕೂ ಶಕಟರೇಫಕ್ಕೂ ಪ್ರಾಸವಿಲ್ಲ; ಇಲ್ಲಿರುವುದು ರೇಫಪ್ರಾಸ. ೧೪೫ನೆಯ ಪದ್ಯದಲ್ಲಿ 'ಅರಿಯರ್' ಎಂದು ಸರಿಯಾಗಿಯೇ ಇದೆ; ೧೮೦ ರಲ್ಲಿರುವ ಅಱಿಯರ್ ಎಂಬುದಕ್ಕೆ ಬದಲಾಗಿ ಅರಿಯರ್ ಎಂದೇ ಇರಬೇಕು. ಅರಿದು + ಆರ್ > ಅರಿಯರ್ = ಅಸಾಧ್ಯರಾದವರು ಎಂದು ಅದರ ನಿಷ್ಪತ್ತಿ.

CC-0. Jangamwadi Math Collection, Varanasi. An eGangotri Initiative

ಇನ್ನೇನೂ ವಿಶೇಷ ಇಲ್ಲಿರುವಂತೆ ಕಾಣುವುದಿಲ್ಲ. ಇಂಥ ಪ್ರಯೋಗವನ್ನು 'ಪಂಪ ಭಾರತ'ದ ಪದ್ಯದಲ್ಲಿ (೧೨-೧೧೪) ನೋಡಬಹುದು.

ಮೇಲೆ ಹೇಳಿರುವ ನ್ಯೂನತೆಗಳು ಕೇವಲ ಅಲ್ಪವಾದವು. ಇಂಥ ಹಲವು ಸಮಸ್ಯೆಗಳನ್ನು ಈ ಗ್ರಂಥದಲ್ಲಿಯೇ ಬಿಡಿಸಿರುವ ಸಂಪಾದಕರು ಇವುಗಳನ್ನೂ ಕೊಂಚ ಗಮನಿಸಿ ನೋಡಿದ್ದರೆ ಸುಲಭವಾಗಿ ನೇರವಾದ ಪಾಠಗಳನ್ನು ಕೊಡಬಹುದಾಗಿತ್ತು; ಏಕೆಂದರೆ ಅವರ ಸಾಮರ್ಥ್ಯ ಒಳ್ಮೆಯಿಂದ ಕೂಡಿದ್ದು. ಅವರ ವಿದ್ವತ್ತಿಗೂ ಸ್ವೈಜವಾದ ಆಳವಾದ ನಿರಂತರವಾದ ಅಭ್ಯಾಸಕ್ಕೂ ಸಾಹಿತ್ಯ ಪ್ರೇಮಕ್ಕೂ ಪ್ರಕೃತಗ್ರಂಥದ ಈ ಪರಿಷ್ಕರಣ ಕೀರ್ತಿಸ್ತಂಭದಂತೆ ನಿಲ್ಲಬಲ್ಲುದು. ಕೈಕೊಂಡ ಕೆಲಸವನ್ನು ಶ್ರದ್ಧೆಯಿಂದಲೂ ದಕ್ಷತೆಯಿಂದಲೂ ನಿರ್ವಹಿಸಿರುವ ಶ್ರೀಮಾನ್ ಎಚ್. ಶೇಷಯ್ಯಂಗಾರ್ಯರಿಗೆ ಕನ್ನಡಿಗರ ಅಭಿನಂದನೆ ಧಾರಾಳವಾಗಿ ಸಲ್ಲುವುದು. ಯಾವ ಕೊಂಡಾಟಕ್ಕೂ ಬಾಯ್ಬಿಡದೆ ಯಾವ ತೆಗಳಿಕೆಗೂ ಮುಖ ಮುರುಕಿಸದೆ ಸಮತೆಯಿಂದ ಹಿಡಿದ ಕೆಲಸವನ್ನು, ಆತ್ಮವಂಚನೆಯಿಲ್ಲದೆ, ನೆರವೇರಿಸುವುದು ವಿದ್ವತ್ತಿನ ಲಕ್ಷಣವಲ್ಲವೆ? ಇದಕ್ಕೆ ಒಳ್ಳೆಯ ನಿದರ್ಶನ ಶ್ರೀಮಾನ್ ಎಚ್. ಶೇಷಯ್ಯಂಗಾರ್ಯರು. ಅವರ ಪರಿಷ್ಕರಣ ಕಲೆ ಕಾಂತಿಯುಕ್ತವಾಗಿ ಕಂಗೊಳಿಸುತ್ತಿದೆ.

ಡಿ. ಎಲ್. ಎನ್.

---

CC-0. Jangamwadi Math Collection, Varanasi. An eGangotri Initiative

# ಸಾದರ ಸ್ವೀಕಾರ

೧. ವೈಯ್ಯಾರಿ (ಹನ್ನೆರಡು ಕತೆಗಳು)—ಲೇಖಕರು: ಶ್ರೀಮಾನ್ ಗೊರೂರು ರಾಮ ಸ್ವಾಮಿ ಐಯಂಗಾರ್ (ಮನೋಹರ ಗ್ರಂಥಮಾಲೆಯ ೪೭–೪೮ನೆಯ ಕುಸುಮ). ಪ್ರಕಾಶಕರು: ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ; ಕ್ರೌನ್ ಅ. ೮ + ೨೮೫; ಬೆಲೆ, ೧೨ ಆಣೆ.

೨. ಟಪ್ಪಾಲ್ ಸಂಸ್ಥೆಯ ವಿವರ—ಲೇಖಕರು: ಶ್ರೀಮಾನ್ ಕೆ. ಲಕ್ಷ್ಮೀ ನರಸಿಂಹಯ್ಯ, ಬಿ.ಎ., ಎಲ್ಎಲ್.ಬಿ.; ಪ್ರಕಾಶಕರು: ಮೈಸೂರು ವಿಶ್ವವಿದ್ಯಾನಿಲಯ (ಸರ್ ಕೆ. ಪಿ. ಪುಟ್ಟಣ್ಣ ಚೆಟ್ಟರ ಪುದುವಟ್ಟಿನ ಪ್ರಕಟನ ಮಾಲೆ ೧). ಪು: ಸೋ. ೮೯ + ೨ ; ಬೆಲೆ, ೨ ಆಣೆ.

೩. ವಿಶ್ವವಿಸರಣ—ಲೇಖಕರು: ಶ್ರೀಮಾನ್ ಜಿ. ಎಸ್. ಪರಮಶಿವಯ್ಯ, ಎಂ.ಎಸ್ಸಿ., ಎ.ಐ.ಆರ್.ಇ.; ಪ್ರಕಾಶಕರು: ಮೈಸೂರು ವಿಶ್ವವಿದ್ಯಾನಿಲಯ (ಸರ್ ಕೆ. ಪಿ. ಪುಟ್ಟಣ್ಣ ಚೆಟ್ಟರ ಪುದುವಟ್ಟಿನ ಪ್ರಕಟನ ಮಾಲೆ ೨). ಪು. ಸೋ. ೬೮ ; ಬೆಲೆ, ೨ ಆಣೆ.

೪. ವಿಜಯ ವಿನಾಯಕ—ಲೇಖಕರು: "ಶ್ರೀ ಹೊಯಿಸಳ". ಕ್ರೌನ್ ಅ. ೧೦; ಬೆಲೆ ?

೫. ಪಾರ್ಲಿಮೆಂಟ್ (ಇಂಗ್ಲಿಷರ ನ್ಯಾಯವಿಧಾಯಕ ಸಭೆ)—ಲೇಖಕರು: ಶ್ರೀಮಾನ್ ಪಿ. ಜಿ. ಸತ್ಯಗಿರಿನಾಥನ್, ಎಂ.ಎ. 'ವಯಸ್ಕರ ಶಿಕ್ಷಣದ ಪುಸ್ತಕಮಾಲೆ', ನಂ. ೩. ಪ್ರಕಾಶಕರು; ಅಕ್ಷರಪ್ರಚಾರ ಸಮಿತಿ, ಮೈಸೂರು. ಬೆಲೆ, ಅರ್ಧಾಣೆ.

೬. ಭಾರತೀಯ ಕಥಾವಳಿ (ಪ್ರಾಂತೀಯ ಭಾಷೆಗಳ ಕಥಾ ಸಂಗ್ರಹ), ಸಂಪುಟ ೧—ಸಂಪಾದಕರು: ಶ್ರೀಮಾನ್ ಸಿದ್ಧವ್ವನಹಳ್ಳಿ ಕೃಷ್ಣ ಶರ್ಮ; ಪ್ರಕಾಶಕರು: ಸಾಧನ ಮುದ್ರಣಾಲಯ, ಧಾರವಾಡ; ಕ್ರೌನ್ ಅ. ೧೧೨ + ೯೨ + ೧೩೮ ; ಬೆಲೆ, ರೂ. ೨—೪—೦.

---

CC-0. Jangamwadi Math Collection, Varanasi. An eGangotri Initiative

# ವಸ್ತು ಕೋಶ

ಸರ್ ಎಂ. ವಿಶ್ವೇಶ್ವ ರಯ್ಯನವರ ೮೧ನೆಯ ಹುಟ್ಟಿದ ಹಬ್ಬ

ಮೈಸೂರಿನವರಾಗಿ ಹುಟ್ಟಿ, ಅಖಿಲ ಭರತಖಂಡದಲ್ಲಿ—ಅಷ್ಟೇ ಏಕೆ, ಅಖಿಲ ಭೂಮಂಡಲದಲ್ಲಿ—ವಿಖ್ಯಾತರಾಗಿ, ನಮ್ಮ ಸುದೈವದಿಂದ ಇಂದಿಗೂ ಲೋಕ ಕಲ್ಯಾಣಕ್ಕಾಗಿ ದುಡಿಯುತ್ತಿರುವ ಮಹಾವ್ಯಕ್ತಿ ಸರ್ ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರು. ಈ ಮಹನೀಯರ ೮೧ನೆಯ ಹುಟ್ಟಿದ ಹಬ್ಬದ ಆಚರಣೆ ಮೈಸೂರಿನ ಒಳಗೂ ಹೊರಗೂ ಅನೇಕ ಸ್ಥಳಗಳಲ್ಲಿ ಸಂಭ್ರಮದಿಂದ, ವಿಜೃಂಭಣೆಯಿಂದ, ನಡೆ ಯಿತು. ಶ್ರೀಮಾನ್ ವಿಶ್ವೇಶ್ವರಯ್ಯನವರು ಆಧುನಿಕ ಮೈಸೂರಿನ ನಿರ್ಮಾಪಕರು. ಅವರು ಈ ಸಂಸ್ಥಾನದ ಚೀಫ್ ಎಂಜಿನಿಯರಾಗಿ, ದಿವಾನರಾಗಿ, ಕೆಲಸಮಾಡಿದ ಕೆಲವೇ ವರ್ಷಗಳಲ್ಲಿ ಅವರು ಹುಟ್ಟಿಹಾಕಿದ ಸಂಸ್ಥೆಗಳೆಷ್ಟು, ಸಾಧನೆಮಾಡಿದ ಕಾರ್ಯ ವೆಷ್ಟು ! ಕೃಷ್ಣರಾಜಸಾಗರ, ಭದ್ರಾವತಿಯ ಕಾರ್ಖಾನೆ, ಮೈಸೂರು ಬ್ಯಾಂಕು, ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ಸಾಹಿತ್ಯ ಪರಿಷತ್ತು—ಇಷ್ಟೇ ಹೆಸರುಗಳು ಸಾಕು ; ಇವುಗಳಲ್ಲಿ ಒಂದೊಂದೂ ಅವರ ದೇಶಭಕ್ತಿಗೆ, ವಿಶಾಲಹೃದಯಕ್ಕೆ, ದೂರ ದೃಷ್ಟಿಗೆ, ಕಾರ್ಯದಕ್ಷತೆಗೆ ಸಾಕ್ಷಿಯಾಗಿ, ಅವರ ಕೀರ್ತಿಗೆ ಜ್ಞಾಪಕವಾಗಿ ನಿಲ್ಲ ತಕ್ಕದ್ದು. ಶ್ರೀಮಾನ್ ವಿಶ್ವೇಶ್ವರಯ್ಯನವರು ಜಗದ್ವಿಖ್ಯಾತರಾದ ಶಿಲ್ಪಪ್ರವೀಣರು, ದೊಡ್ಡ ವೈಜ್ಞಾನಿಕರು, ಅರ್ಥಶಾಸ್ತ್ರಕೋವಿದರು; ಇದೆಲ್ಲಕ್ಕೂ ಮಿಗಿಲಾಗಿ ಅವರೊಬ್ಬ ದೊಡ್ಡ ಕಣಸುಗಾರರು ; ಹಾಗೆ ಕಂಡ ಕಣಸನ್ನು ಕಲ್ಲುಗಾರೆಯಲ್ಲಿ, ಯಂತ್ರ ಸಲಕರಣೆಯಲ್ಲಿ, ಸಂಘಸಂಸ್ಥೆಯಲ್ಲಿ. ಹಿಡಿದು ಕಡೆದು ನಿಲ್ಲಿಸುವ ಕೆಲಸಗಾರರು. ಇದೇ ಅವರ ಮಹಿಮೆಯ ಗುಟ್ಟು. ಪರಿಸ್ಥಿತಿ ಸನ್ನಿವೇಶಗಳು ಎಷ್ಟೇ ವಿಷಮವಾಗಿದ್ದರೂ, ಸುತ್ತುಮುತ್ತಿನವರ ಮನಸ್ಸು ಎಷ್ಟೇ ಜಡವಾಗಿದ್ದರೂ, ಸಾಧನಸಂಪತ್ತು ಎಷ್ಟೇ ಅಲ್ಪವಾಗಿದ್ದರೂ ಅವರು ಪ್ರಗತಿಯಲ್ಲಿ ನಂಬಿಕೆಯನ್ನು ತೊರೆದವರಲ್ಲ, ಆ ಮಾರ್ಗದಲ್ಲಿ ಅಡಿಯಿಡಲು ಹಿಂಜರಿದವರಲ್ಲ. ವಿಘ್ನಗಳು ಮೇಲಿಂದ ಮೇಲೆ ಆಘಾತಮಾಡಿದರೂ ತಮ್ಮ ಆತ್ಮದ ಮೂಲಗುಣವಾದ ಉತ್ಸಾಹವನ್ನು ಉಡುಗಿಸಿಕೊಂಡವರಲ್ಲ. ಇಷ್ಟು ಹಿರಿಯ ವಯಸ್ಸಿನಲ್ಲೂ ಅವರು ಪಾದರಸದಂತೆ ಚುರುಕು. ತಮ್ಮ ಆಶಾವಾದದಿಂದ ಅವರು ತರುಣರನ್ನೂ ನಾಚಿಸುವರು; ಅನನ್ಯವಾದ ಕ್ರಿಯಾಶಕ್ತಿಯಿಂದ ಪ್ರತಿಪಕ್ಷ ದವರ ಗೌರವವನ್ನೂ ಗಳಿಸಿ, ಸಾಧ್ಯವಿದ್ದಲ್ಲೆಲ್ಲಾ ಅವರ ಮನಸ್ಸನ್ನು ತಮ್ಮ ಕಡೆಗೆ

CC-0. Jangamwadi Math Collection, Varanasi. An eGangotri Initiative

ತಿರುಗಿಸಿಕೊಳ್ಳುವರು. ಭಾರತೀಯರ ಜಡತನ ಹರಿಯುವುದು ಹೇಗೆ, ಅವರ ಬದುಕು ಉತ್ತಮವಾಗುವುದು ಹೇಗೆ, ಅವರ ಗೌರವ ಬೆಳಗುವುದು ಹೇಗೆ?—ಎಂಬುದೇ ಶ್ರೀಮಾನ್ ವಿಶ್ವೇಶ್ವರಯ್ಯನವರ ಧ್ಯಾನವಸ್ತು. ವಿದ್ಯೆ, ವಿಜ್ಞಾನ, ಕೈಗಾರಿಕೆ—ಇದೇ ಅವರು ದೇಶದ ಶ್ರೇಯಸ್ಸಿಗಾಗಿ ಉಪದೇಶಿಸುವ ಬೀಜಮಂತ್ರ.

ಈ ಮಹನೀಯರು ನೂರು ಕಾಲ ಬಾಳಲಿ, ತಾವು ನಟ್ಟ ವೃಕ್ಷಗಳೆಲ್ಲ ಚೆನ್ನಾಗಿ ಫಲಬಿಡುವುದನ್ನು ಕಾಣಲಿ, ತಾವು ಕಂಡ ಕನಸುಗಳೆಲ್ಲ ಕಾರ್ಯಗತವಾಗುವಂತೆ ಮಾಡಲು ದೇವರು ಅವರಿಗೆ ಶಕ್ತಿಸಾಧನಗಳನ್ನು ಕೊಡಲಿ.

ತೀ. ನಂ. ಶ್ರೀ.

***

**ರಾಜಸೇವಾಸಕ್ತ ಪ್ರೊ|| ಬಿ. ಎಂ. ಶ್ರೀಕಂಠಯ್ಯನವರಿಗೆ 'ಸಂಭಾವನೆ'**

ಇದೇ ಸೆಪ್ಟಂಬರ್ ೧೪ನೆಯ ತಾರೀಖು ಭಾನುವಾರ ಬೆಳಗ್ಗೆ ಬೆಂಗಳೂರಿನ ಪರಿಷನ್ಮಂದಿರದಲ್ಲಿ ಒಂದು ಅಪೂರ್ವಸಮಾರಂಭ ಏರ್ಪಟ್ಟಿದ್ದಿತು. ಅಂದು ರಾಜಸೇವಾಸಕ್ತ ಪ್ರೊ. ಬಿ. ಎಂ. ಶ್ರೀಕಂಠಯ್ಯನವರ ೫೭ನೆಯ ಹುಟ್ಟಿದ ಹಬ್ಬವನ್ನು ಅವರ ಶಿಷ್ಯರೂ ಮಿತ್ರರೂ ಅಭಿಮಾನಿಗಳೂ ಆಚರಿಸಿದರು. ಹೊಸಗನ್ನಡದ ಕುಲಪತಿಗಳೆಂಬ ಪ್ರಶಸ್ತಿಯನ್ನು ಗಳಿಸಿಕೊಂಡಿರುವ ಮಹನೀಯರ ವರ್ಷವರ್ಧಂತಿ ಅಂದು ಜರುಗಿತೆಂಬುದೊಂದೇ ಉತ್ಸವದ ವಿಶೇಷವಲ್ಲ. ಹಾಗೆ ನೋಡಿದರೆ ತಾರೀಖಿನ ಲೆಕ್ಕದಂತೆ ಅದು ೧೯೪೧ನೆಯ ಜನವರಿ ೩ನೆಯ ದಿನವೇ ನಡೆಯಬೇಕಾಗಿತ್ತು; ಉತ್ಸವದ ದಿನ ಮುಂದುವರಿದದ್ದಕ್ಕೆ ವಿಶೇಷ ಕಾರಣವುಂಟು. ಶ್ರೀಮಾನ್ ಶ್ರೀಕಂಠಯ್ಯನವರು ಕನ್ನಡ ನುಡಿಯ ಏಳಿಗೆಗಾಗಿ, ಕನ್ನಡ ಸಾಹಿತ್ಯದ ಸುಧಾರಣೆಗಾಗಿ, ಕನ್ನಡ ವಿದ್ವತ್ತಿನ ವಿಸ್ತರಣೆಗಾಗಿ ತನುಧನಮನಗಳನ್ನು ಮೀಸಲಾಗಿಟ್ಟು ಅವಿಶ್ರಾಂತವಾಗಿ ತಾವು ದುಡಿದಿರುವುದು ಮಾತ್ರವಲ್ಲದೆ, ಶಿಷ್ಯರನ್ನು ಹುರುಪುಗೊಳಿಸಿ, ನಾಡಿನವರನ್ನು ಪ್ರಚೋದಿಸಿ, ಸಂಘ ಸಂಸ್ಥೆಗಳನ್ನು ಕಟ್ಟಿ ಬೆಳೆಸಿ ನಡೆಸಿರುವ ಬಹುಮುಖವೂ ಅಸಾಧಾರಣವೂ ಆದ ಭಾಷಾಸೇವೆಯನ್ನು ಸನ್ಮಾನಿಸಲು ತಕ್ಕ ಕಾಣಿಕೆಯೊಂದನ್ನು ಅವರಿಗೆ ಅರ್ಪಿಸಬೇಕೆಂಬ ಇಚ್ಛೆ ಶ್ರೀಯುತರ ಮಿತ್ರವರ್ಗದವರಿಗೆ ಕೆಲವು ದಿನಗಳಿಂದಲೂ ಇದ್ದಿತು. ಶ್ರೀಮಾನ್ ಶ್ರೀಕಂಠಯ್ಯನವರ ಆಸಕ್ತಿಯ ವಿವಿಧ ವಿಷಯಗಳನ್ನು ಕುರಿತು ಅವರಿಂದ ಸ್ಫೂರ್ತಿ ಪಡೆದವರೂ ಅವರಲ್ಲಿ ಸ್ನೇಹ ಗೌರವಗಳನ್ನುಳ್ಳವರೂ ಆದ ಅನೇಕ ಮಂದಿ ಸಾಹಿತಿಗಳಿಂದ ಲೇಖನಗಳನ್ನು ಬರಸಿ ಕೂಡಿಸಿ ಅಚ್ಚುಮಾಡಿಸಿ ಆ ಪ್ರಬಂಧಸಂಪುಟವನ್ನು ಈ ಉತ್ಸವದ ಕಾಲದಲ್ಲಿ ಅರ್ಪಿಸಬೇಕೆಂದು ತೀರ್ಮಾನಮಾಡಿದ್ದರಿಂದ ಅದು ಕೈಗೂಡಲು ಸಹಜ

CC-0. Jangamwadi Math Collection, Varanasi. An eGangotri Initiative

ಈ ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಪದವೀದಾನೋತ್ಸವದಲ್ಲಿ ಮುಂದೆ ಹೇಳುವಂತೆ ೨೬ ಪದಕಗಳೂ ೧೯ ಬಹುಮಾನಗಳೂ ಕೊಡಲ್ಪಟ್ಟುವು.—

## ೧. ಪದಕಗಳು

### ಎಂ.ಎ.

| ಪದಕಗಳ ಹೆಸರುಗಳು : | ಪಡೆದವರ ಹೆಸರುಗಳು : |
|---|---|
| | ಶ್ರೀಗಳಾದ |
| ೧. ಸರ್ ಹ್ಯೂಡೇಲಿ ಮೆಮೋರಿಯಲ್ ಪದಕ.. | ಕೆ. ಸುಂದರರಾಜನ್. |
| ೨. ಸವೀಸಂ ರಾಮಾನುಜಾಚಾರ್ಯರ ಪದಕ.... | ಬಿ. ಎನ್. ನಂಜುಂಡಯ್ಯ. |
| ೩. ಕೇಣಿ ಸಿದ್ದಪ್ಪನವರ ಪದಕ .... | ಕೆ. ಸುಬ್ಬರಾವ್. |

### ಬಿ.ಎ. (ಆನರ್ಸ್)

| | |
|---|---|
| ೪. ಸವೀಸಂ ರಾಮಾನುಜಾಚಾರ್ಯರ ಪದಕ .... | ಬಿ. ಎಚ್. ಶ್ರೀಧರ. |
| ೫. ಮೊದಲನೆಯ ವೈಸ್‌ಛಾನ್ಸಲರ್ ಎಚ್. ವಿ. ನಂಜುಂಡಯ್ಯನವರ ಪದಕ .... | ಎಸ್. ಎನ್. ಚಂದ್ರಶೇಖರರಾವ್. |
| ೬. ಭಾಭಾ ಮೆಮೋರಿಯಲ್ ಪದಕ .... | ಎಸ್. ಮುನಿಸಾಮಿ. |
| ೭. ಪೂರ್ಣಕೃಷ್ಣರಾಯರ ಪದಕ (ಇಂಗ್ಲಿಷ್). | ಟಿ. ಸುಬ್ಬರಾವ್. |
| ೮. ಪೂರ್ಣಕೃಷ್ಣರಾಯರ ಪದಕ (ಸಂಸ್ಕೃತ). | ಬಿ. ಎಚ್. ಶ್ರೀಧರ. |
| ೯. ಕ್ಯಾಂಡಿ ಪದಕ .... | ಎಸ್. ರಂಗನಾಥರಾವ್. |
| ೧೦. ಪ್ರಧಾನಶಿರೋಮಣಿ ಆನಂದರಾವ್ ಸಿ.ಐ.ಇ. ಅವರ ಪದಕ .... | ಎಚ್. ವಿ. ಕೃಷ್ಣಸ್ವಾಮಿ ಅಯ್ಯಂಗಾರ್. |
| ೧೧. ಸರ್ ಎಂ. ಕಾಂತರಾಜ ಅರಸರವರ ಪದಕ. | ಎಸ್. ಎನ್. ಚಂದ್ರಶೇಖರರಾವ್. |
| ೧೨. ಎಂ. ಹಿರಿಯಣ್ಣನವರ ಪದಕ .... | ಎಸ್. ಮುನಿಸಾಮಿ. |
| ೧೩. ಶ್ರೀ ಬಾಲಾಮಣಿಯವರ ಪದಕ .... | ಜಿ. ಟಿ. ಹುಚ್ಚಪ್ಪ. |

### ಬಿ.ಎ.

| | |
|---|---|
| ೧೪. ಸರ್ ಪಿ. ಎನ್. ಕೃಷ್ಣಮೂರ್ತಿಯವರ ಪದಕ .... | ಬಿ. ಎಸ್. ವಿಶ್ವನಾಥರಾವ್. |
| ೧೫. ಅಲಮೇಲಮ್ಮಾಳ್ ಎಚ್. ರಾಮಾನುಜ ಯ್ಯಂಗಾರ್ ಅವರ ಪದಕ .... | ಎಸ್. ಕೃಷ್ಣಮೂರ್ತಿ. |

CC-0. Jangamwadi Math Collection, Varanasi. An eGangotri Initiative

೧೬. ಶ್ರೀ ಯುವರಾಜರ ಪದಕ .... ಎಂ. ಅಬ್ದುಲ್ ಸುಭಾನ್.
೧೭. ಸರ್. ಶೇಷಾದ್ರಿಯವರ ಪದಕ .... ಎಸ್. ಕೃಷ್ಣಮೂರ್ತಿ.
೧೮. ಏಯರ್ ಮೆಮೋರಿಯಲ್ ಪದಕ .... ಆರ್. ಶಾಂತ.
೧೯. ಷಾ ಜುರ್ಮುಕ್ಮಲ್ ದುಂಗಾಜಿ ಅವರ ಪದಕ .... ಎಸ್. ಕೃಷ್ಣಮೂರ್ತಿ.
೨೦. ಸಕಲೇಶಪುರದ ಷಾಪು ಸಿದ್ದೇಗೌಡರ ಪದಕ .... ಎಸ್. ಕೃಷ್ಣಮೂರ್ತಿ.
೨೧. ಶ್ರೀ ಲಕ್ಷ್ಮಮ್ಮನವರ ಪದಕ .... ಆರ್. ಶಾಂತ.

## ಎಂ. ಎಸ್ ಸಿ.

೨೨. ಪೂರ್ಣಕೃಷ್ಣರಾಯರ ಪದಕ .... ಆರ್. ಚಿನ್ನಪ್ಪ.
೨೩. ಪೂರ್ಣಕೃಷ್ಣರಾಯರ ಪದಕ .... ಎಸ್. ವಿ. ವೆಂಕಟಾಚಲ.

## ಬಿ. ಎಸ್ ಸಿ. (ಆನರ್ಸ್)

೨೪. ಹನುಮಪ್ಪನವರ ಪದಕ .... ಎಂ. ಎಸ್. ಸದಾಶಿವಯ್ಯ.
೨೫. ಧರ್ಮಪ್ರವರ್ತ ಅಂಬಿಲ್ ಎಸ್. ರಂಗಸ್ವಾಮಿ ಅಯ್ಯಂಗಾರ್ ಪದಕ .... ಎಂ. ಶಿವರಾಮಶಾಸ್ತ್ರಿ.
೨೬. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಪದಕ .... ಎಂ. ಶಿವರಾಮಶಾಸ್ತ್ರಿ.

## ಬಿ. ಎಸ್ ಸಿ.

೨೭. ಎಚ್. ರಾಮಾನುಜಯ್ಯಂಗಾರ್ ಅವರ ಪದಕ .... ಎಂ. ಅಬ್ದುಲ್ ವಾಜಿದ್.
೨೮. ಶ್ರೀ ಲಕ್ಷ್ಮೀದೇವಮ್ಮನವರ ಪದಕ .... ಎಂ. ಅಬ್ದುಲ್ ವಾಜಿದ್.
೨೯. ಬಿ. ಕೆ. ಶ್ರೀನಿವಾಸಯ್ಯಂಗಾರ್ ಮೆಮೋರಿಯಲ್ ಪದಕ .... ಸಿ. ಆರ್. ಕೇಶವರಾವ್.

## ಬಿ. ಇ.

೩೦. ಬಿ. ವಿ. ಕೃಷ್ಣಯ್ಯಂಗಾರ್ಯರ ಪದಕ .... ಎಚ್. ಸೀತಾರಾಮಯ್ಯ.
೩೧. ಬಿ. ಬಿ. ಗರುಡಾಚಾರ್ಯರ ಪದಕ .... ಎಚ್. ಸೀತಾರಾಮಯ್ಯ.

CC-0. Jangamwadi Math Collection, Varanasi. An eGangotri Initiative

## ಎಂ.ಬಿ.,ಬಿ.ಎಸ್.

೩೨. ಆರ್ಮುಗಂ ಪದಕ .... ಎಸ್. ವಿ. ಗೋವಿಂದಶೆಟ್ಟಿ.
೩೩. ಬೇಲಿ ವೆಂಕೋಬರಾಯರ ಪದಕ .... ಎಸ್. ವಿ. ಗೋವಿಂದಶೆಟ್ಟಿ.
೩೪. ಟಿ. ಆರ್. ಎ. ತಂಬೂಚೆಟ್ಟಿ ಪದಕ .... ಎಸ್. ವಿ. ಗೋವಿಂದಶೆಟ್ಟಿ.
೩೫. ಎ. ಆರ್. ಸೀತಮ್ಮನವರ ಪದಕ .... ಎಸ್. ಸಿಮೊಸು.

## ಕನ್ನಡ ಕವಿತೆ

೩೬. ರಜತಮಹೋತ್ಸವದ ಕನ್ನಡ ಪದಕ .... ಎಂ. ಗೋಪಾಲಕೃಷ್ಣ ಅಡಿಗ

## ೨. ಬಹುಮಾನಗಳು

### ಎಂ.ಎಸ್‌ಸಿ.

೧. ಎಂ. ಟಿ. ನಾರಣಯ್ಯಂಗಾರ್ಯರವರ ಬಹುಮಾನ .... ಕೆ. ರಾಮರಾವ್.

### ಬಿ.ಎ. (ಆನರ್ಸ್)

೨. ಎಚ್. ಎಸ್. ಸುಬ್ಬರಾಯರ ಬಹುಮಾನ .... ಎಸ್. ಎಚ್. ಚಂದ್ರಶೇಖರರಾವ್.

### ಬಿ.ಎ.

೩. ಅನ್ನಪೂರ್ಣಮ್ಮನವರ ಬಹುಮಾನ .... ಆರ್. ಶಾಂತ.
೪. ಶ್ರೀ ಕೃಷ್ಣರಾಜೇಂದ್ರ ಸಿಲ್ವರ್ ಜೂಬಿಲಿ ಬಹುಮಾನ .... ಕೆ. ರುಕ್ಮಿಣಿ.
೫. ಪಾಲಮಂಡ ಅಕ್ಕಯ್ಯಮ್ಮನವರ ಬಹುಮಾನ .... ಆರ್. ಶಾಂತ.
೬. ಸಂಜೀವಪ್ಪನವರ ಬಹುಮಾನ .... ಬಿ. ಎಚ್. ಚಂದ್ರಶೇಖರ್.

### ಬಿ.ಎಸ್‌ಸಿ. (ಆನರ್ಸ್)

೭. ವಾಟರ್ಸ್ ಮೆಮೋರಿಯಲ್ ಬಹುಮಾನ ... ಎಂ. ಎ. ಶ್ರೀರಂಗನಾರಾಯಣ.
೮. ಪ್ರೊಫೆಸರ್ ಎಂ. ಜಿ. ಶ್ರೀನಿವಾಸರಾಯರ ಆರ್ಗ್ಯಾನಿಕ್ ಕೆಮಿಸ್ಟ್ರಿ ಬಹುಮಾನ.... ಎಂ. ಶಿವರಾಮಶಾಸ್ತ್ರಿ.
೯. ಮೈಸೂರು ಸರ್ಕಾರದ ಭೌತಶಾಸ್ತ್ರ ಬಹುಮಾನ .... ಪಿ. ಜಗನ್ನಾಥ್.

CC-0. Jangamwadi Math Collection, Varanasi. An eGangotri Initiative

೧೦. ಮೈಸೂರು ಸರ್ಕಾರದ ರಸಾಯನ ಶಾಸ್ತ್ರ ಬಹುಮಾನ .... ಎಂ. ಶಿವರಾಮಶಾಸ್ತ್ರಿ.

## ಬಿ. ಎಸ್ ಸಿ.

೧೧. ಟೇಟ್ ಮೆಮೋರಿಯಲ್ ಫಂಡ್ ಬಹುಮಾನ .... (೧) ಎ. ವೆಂಕಟೇಶ್ವರರಾವ್. (೨) ಕೆ. ಎಂ. ಶ್ರೀಪಾದರಾವ್.

೧೨. ಸೆಂಟ್ರಲ್ ಕಾಲೇಜಿನ ವಜ್ರಮಹೋತ್ಸವದ ಬಹುಮಾನ .... ಎಂ. ಅಬ್ದುಲ್ ವಾಜಿದ್.

೧೩. ಭಾಭಾ ಅವರ ಇಂಗ್ಲಿಷ್ ಬಹುಮಾನ .... ಕೆ. ಪಾರ್ವತಿ.

## ಬಿ. ಟಿ.

೧೪. ಭಾಭಾ ಮೆಮೋರಿಯಲ್ ಬಹುಮಾನ .... ಐ. ಸಿ. ಡಿಸ್ಲೌಸ್ಲ.

೧೫. ಭಾಭಾ ಮೆಮೋರಿಯಲ್ ಹೆಚ್ಚಿನ ಬಹುಮಾನ .... ಐ. ಸಿ. ಡಿಸ್ಲೌಸ್ಲ.

## ಬಿ. ಇ.

೧೬. ವಿ. ರಂಗಸ್ವಾಮಿ ಅಯ್ಯಂಗಾರ್ಯರ ಬಹುಮಾನ .... ಇ. ವಿ. ಶೇಷಾದ್ರಿ.

## ಎಂ. ಬಿ., ಬಿ. ಎಸ್.

೧೭. ಮೈಸೂರು ಫ್ರೀಮೇಸನ್ಸ್ ಲಾಡ್ಜ ಸುವರ್ಣಮಹೋತ್ಸವ ಬಹುಮಾನ .... (೧) ಎಸ್. ವಿ. ಗೋವಿಂದಶೆಟ್ಟಿ. (೨) ಕೆ. ಎಸ್. ಷಡಕ್ಷರಪ್ಪ.

## ಪ್ರಬಂಧಗಳು

೧೮. ಹೊನ್ನಶೆಟ್ಟಿಯವರ ಬಹುಮಾನ (ಕನ್ನಡ).. ಬಿ. ಎಚ್. ಶ್ರೀಧರ.

೧೯. ರಾಜಸಭಾಭೂಷಣ ಎ.ಎಂ. ಟಬಾರ್ಡ್, ಎಂ.ಬಿ.ಇ. ಅವರ ಬಹುಮಾನ .... (ಇಂಗ್ಲಿಷ್) .... ಎಂ. ಶಾರದಮ್ಮ.

ಈ ಪದಕ ಬಹುಮಾನಗಳನ್ನು ಪಡೆದ ಮಿತ್ರರನ್ನು ನಾವು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇವೆ.

* * *

CC-0. Jangamwadi Math Collection, Varanasi. An eGangotri Initiative

ಶ್ರೀಮಾನ್ ಎ. ಆರ್. ವಾಡಿಯಾ ಅವರಿಗೆ ರಾಜ ಸನ್ಮಾನ

ಈ ವರ್ಷ ನಡೆದ ನವರಾತ್ರಿಯ ಉತ್ಸವದ ಸಂದರ್ಭದಲ್ಲಿ ಮಹಾರಾಜಾ ಕಾಲೇಜಿನ ತತ್ವಶಾಸ್ತ್ರ ಮುಖ್ಯಾಧ್ಯಾಪಕರಾದ ಶ್ರೀಮಾನ್ ಎ. ಆರ್. ವಾಡಿಯಾ, ಬಿ.ಎ., ಬಾರ್.-ಅಟ್-ಲಾ ಅವರಿಗೆ ಶ್ರೀಮನ್ಮಹಾರಾಜರವರು "ರಾಜಸೇವಾಸಕ್ತ" ಎಂಬ ಬಿರುದನ್ನು ದಯಪಾಲಿಸಿ ಗೌರವಿಸಿದರು. ಶ್ರೀಮಾನ್ ವಾಡಿಯಾ ಅವರು ಈಗ್ಗೆ ಸುಮಾರು ಇಪ್ಪತ್ತೈದು ವರ್ಷಗಳಿಂದ ಭಾರತೀಯ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರವನ್ನು ಪ್ರೌಢ ತರಗತಿಗಳಿಗೆ ಪಾಠ ಹೇಳಿರುವುದಲ್ಲದೆ ಮೈಸೂರಿನ ಪುರಪ್ರಮುಖರಲ್ಲೊಬ್ಬರಾಗಿ, ಇಲ್ಲಿಯ ಸಾರ್ವಜನಿಕ ಕಾರ್ಯಗಳಲ್ಲಿ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಕೆಲಸ ಮಾಡಿ ಹಲವು ವಿಧದಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಶ್ರೀರಾಮಕೃಷ್ಣ ಮಠ, ಅರಸು ಬೋರ್ಡಿಂಗ್ ಹೋಂ, ಡಿ. ಬನುಮಯ್ಯನವರ ಹೈಸ್ಕೂಲು ಮುಂತಾದ ಅನೇಕ ಧಾರ್ಮಿಕ ಸಾಮಾಜಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಮುಖವಾದ ಭಾಗವಹಿಸಿ ಅವುಗಳ ಕಾರ್ಯನೀತಿಗೆ ರೂಪು ಗೊಟ್ಟಿದ್ದಾರೆ. ಅವರನ್ನು ಒಂದಲ್ಲ ಒಂದು ಸಂದರ್ಭದಲ್ಲಿ ಕೋರದ ಸಂಸ್ಥೆಯಿಲ್ಲ, ಸಮಾಜವಿಲ್ಲ. ಅವರು ಒಳ್ಳೆಯ ವಾಗ್ಮಿಗಳು; ಪ್ರಜ್ಞಾವಂತರು; ವ್ಯಕ್ತಿತ್ವ ಸಂಪನ್ನರು; ಕರ್ತೃತ್ವಶಾಲಿಗಳು; ಉತ್ಸಾಹಿಗಳು. ಈ ಗೌರವವು ಮಹಾರಾಜಾ ಕಾಲೇಜಿಗೂ ಮೈಸೂರು ವಿಶ್ವವಿದ್ಯಾನಿಲಯಕ್ಕೂ ಬಂದದ್ದೆಂದು ನಾವು ಹೆಮ್ಮೆಗೊಂಡು ಶ್ರೀಮಾನ್ ವಾಡಿಯಾ ಅವರನ್ನು ಬಹು ಸಂತೋಷದಿಂದ ಅಭಿನಂದಿಸುತ್ತೇವೆ.

ಎ. ಆರ್. ಕೃ.

***

ಅಖಿಲ ಕರ್ನಾಟಕ ಆದಿಪಂಪ ಮಹಾಕವಿ ಸ್ಮಾರಕೋತ್ಸವ

ಅಖಿಲ ಕರ್ನಾಟಕ ಆದಿಪಂಪ ಮಹಾಕವಿ ಸ್ಮಾರಕೋತ್ಸವ ಮಂಡಲದ ಸ್ವಾಗತಸಮಿತಿಯ ಕಾರ್ಯಾಧ್ಯಕ್ಷರಾದ ಶ್ರೀಮಾನ್ ಬಶೆಟ್ಟೆಪ್ಪಾ ತಟ್ಟಿ ಅವರು ಲಕ್ಷ್ಮೀಶ್ವರದಿಂದ ಹೀಗೆ ಬರೆಯುತ್ತಾರೆ:—

ಇದೇ ಶಾ|| ಶಕ ೧೮೬೩ನೇ ಕಾರ್ತಿಕ ಶು|| ೫ಗೆ **ಆದಿಪಂಪ** ಮಹಾಕವಿಯು ತನ್ನ ಅಮರವಾದ ಮಹಾಕಾವ್ಯ **'ವಿಕ್ರಮಾರ್ಜುನವಿಜಯ'** (ಪಂಪಭಾರತ) ವನ್ನು ಬರೆದು ಮುಗಿಸಿ ಸಾವಿರ ವರ್ಷಗಳು ಸಂದವು. ಈ ನಿಮಿತ್ತದಿಂದ ಈ ವರ್ಷ ಎಂದರೆ ಕ್ರಿ. ಶಕೆ ೧೯೪೧ರಲ್ಲಿ ಕನ್ನಡ ಕವಿಕುಲ ತಿಲಕನಾದ **ಆದಿಪಂಪನ** ಗ್ರಂಥರಚನೆಯ ಸಹಸ್ರ ಸಾಂವತ್ಸರಿಕೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ಆ ಮಹಾಕವಿಯ ಪವಿತ್ರ ನಾಮಸ್ಮರಣೆಗೆ ಒಪ್ಪುವಂತೆ ಸಮಸ್ತ ಕನ್ನಡಿಗರು ಆಚರಿಸಬೇಕೆಂದು ಕಳೆದ

CC-0. Jangamwadi Math Collection, Varanasi. An eGangotri Initiative

ವರ್ಷದ ಸಾಹಿತ್ಯಸಮ್ಮೇಲನದಲ್ಲಿ ನಿರ್ಣಯವಾದ ಮೇರೆಗೆ, ಈಗಾಗಲೇ ನ್ಯಾಯಾಧೀಶ ಮ|| ರಾ|| ರಾ|| ಶ್ರೀ ತುಕೋಳರವರ ಅಧ್ಯಕ್ಷತೆಯಲ್ಲಿ ಸ್ಮಾರಕೋತ್ಸವ ಮಂಡಲವು ಏರ್ಪಟ್ಟು ಅದರ ಶಾಖೆಗಳು ಹುಬ್ಬಳ್ಳಿಯಲ್ಲಿಯೂ, ಲಕ್ಷ್ಮೇಶ್ವರದಲ್ಲಿಯೂ ಇದ್ದು ಕಾರ್ಯಕ್ಕೆ ಪ್ರಾರಂಭವಾದುದು ಪತ್ರಿಕೆಗಳ ಮುಖಾಂತರ ಕನ್ನಡಿಗರೆಲ್ಲರಿಗೂ ತಿಳಿದ ಮಾತಾಗಿದೆ.

ಉತ್ಸವವು **ಪಂಪ** ಮಹಾಕವಿಗೆ ಆಶ್ರಯವಿತ್ತ ಅರಿಕೇಸರಿ ಮಹಾರಾಜನ ನೆಲೆವೀಡಾದ **ಪುಲಿಗೆರೆ** ಎಂದರೆ ಲಕ್ಷ್ಮೇಶ್ವರದಲ್ಲಿ ಜರುಗಬೇಕಾಗಿ ಸ್ಮಾರಕೋತ್ಸವ ಮಂಡಲದವರು ನಿರ್ಣಯಿಸಿದ್ದಾರೆ. ಮೊನ್ನಿನ ನಾಡಹಬ್ಬ ಉತ್ಸವದಲ್ಲಿ ಹುಬ್ಬಳ್ಳಿ, ವಿಜಾಪುರ ಮೊದಲಾದ ನಗರಗಳ ಮಹಾಜನರು **ಪಂಪ** ದಿನವನ್ನಾಚರಿಸಿ ಲಕ್ಷ್ಮೇಶ್ವರದಲ್ಲಿ ನಡೆಯಲಿರುವ ಅಖಿಲ ಕರ್ನಾಟಕ **ಪಂಪೋತ್ಸವಕ್ಕೆ** ಬೆಂಬಲ ವನ್ನಿತ್ತಿದ್ದಾರೆ. ಕನ್ನಡನಾಡಿನ ಎಂಟೂ ದಿಕ್ಕುಗಳ ಬಾಂಧವರ ಹೃತ್ಪೂರ್ವಕ ಸಹಾಯದಿಂದ ಈ ಉತ್ಸವವನ್ನು ಅತ್ಯಂತ ಯಶಸ್ವಿಯಾಗಿ ನೆರವೇರಿಸುವದಕ್ಕೋಸ್ಕರ ಮೊನ್ನಿನ ವಿಜಯದಶಮಿಯ ಶುಭಮುಹೂರ್ತದಲ್ಲಿ ಲಕ್ಷ್ಮೇಶ್ವರದಲ್ಲಿ ಮ|| ರಾ|| ರಾ|| ಶ್ರೀ **ತಟ್ಟಿ ಬಸೆಟ್ಟೆಪ್ಪನವರ** ಕಾರ್ಯಾಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದು ಏರ್ಪಟ್ಟು ಉತ್ಸವದ ಸಿದ್ಧತೆಯ ಕಾರ್ಯವು ಉತ್ಸಾಹದಿಂದ ಸಾಗಿದೆ.

ಉತ್ಸವಕ್ಕೆ ಸಕಲ ರೀತಿಯಿಂದಲೂ ಸಹಕಾರ ನೀಡುವೆವೆಂದು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಸನ್ಮಾನ್ಯ **ಶ್ರೀ ಬಿ. ಎಂ. ಶ್ರೀಕಂಠಯ್ಯನವರೂ** ಕರ್ನಾಟಕ ಕುಲಪುರೋಹಿತರಾದ **ಶ್ರೀ ಆಲೂರ ವೆಂಕಟರಾಯರೂ** ಶುಭಾಶೀರ್ವಾದ ಮಾಡಿದ್ದಾರೆ. ಇಷ್ಟರಲ್ಲಿ ಉತ್ಸವಕ್ಕಾಗಿ ದ್ರವ್ಯಸಂಗ್ರಹದ ಕಾರ್ಯವನ್ನು ಸ್ವಾಗತ ಸಮಿತಿಯವರು ಪ್ರಾರಂಭಿಸಿದ್ದು ಕೆಲವು ದಿನಗಳಲ್ಲಿಯೇ ಆ ಸಮಿತಿಯ ಸದಸ್ಯರು ಅಖಿಲಕರ್ನಾಟಕ ಪ್ರವಾಸವನ್ನೂ ಕೈಕೊಳ್ಳುವವರಿದ್ದಾರೆ. ಆ ಕಾಲಕ್ಕೆ ಕನ್ನಡಿಗರೆಲ್ಲರೂ ಕೊಡುಗೈಯಿಂದ ನೆರವಾಗಬೇಕೆಂದು ಕಳಕಳಿಯ ಬೇಡಿಕೆ.

ಸ್ಮಾರಕೋತ್ಸವ ಮಂಡಲದವರು "**ಪಂಪಯುಗ**" ಎಂಬ ಗ್ರಂಥವನ್ನು ಆ ಮಹಾಕವಿಯ ಕಾವ್ಯಗಳ ರಸಾಸ್ವಾದನೆ ಹಾಗು **ಪಂಪ** ಕಾಲದ ಅಭ್ಯಾಸ ವಿಮರ್ಶೆಗಳಿಂದ ಕೂಡಿದುದಾಗಿ ಅಖಿಲ ಕರ್ನಾಟಕದ ವಿದ್ವಾಂಸರ ಪ್ರಾತಿನಿಧಿಕ ಶ್ರೇಷ್ಠ ಗ್ರಂಥವಾಗುವಂತೆ ಪ್ರಕಾಶನಗೊಳಿಸಬೇಕೆಂದೂ ನಿಶ್ಚಯಿಸಿದ್ದು ಹುಬ್ಬಳ್ಳಿಯ ಸ್ಮಾರಕ ಗ್ರಂಥಸಮಿತಿಯವರು ಆ ನಿಮಿತ್ತದಲ್ಲಿ ಲೇಖನಸಂಗ್ರಹದ ಕಾರ್ಯವನ್ನು ಈಗಾಗಲೇ ನಡೆಯಿಸಿದ್ದಾರೆ. ಸಾಧ್ಯವಾದರೆ ಉತ್ಸವದ ಕಾಲಕ್ಕೇನೇ ಆ ಗ್ರಂಥದ

CC-0. Jangamwadi Math Collection, Varanasi. An eGangotri Initiative

ಪ್ರಕಾಶನವಾಗಬಹುದು ; ಕನಿಷ್ಠಪಕ್ಷಕ್ಕೆ ಹಸ್ತಪ್ರತಿಯ ಪ್ರದರ್ಶನವಾದರೂ ಜರುಗಿ ಮುಂದೆ ಸ್ವಲ್ಪೇ ಅವಧಿಯಲ್ಲಿ ಅಚ್ಚಾಗಿ ಅದು ಹೊರಬೀಳುವದು.

ಉತ್ಸವವು ಡಿಸೆಂಬರ ತಿಂಗಳ ಕೊನೆಯವಾರದ ಪ್ರಾರಂಭದ ದಿನಗಳಲ್ಲಿ ನಡೆಯುವದು. ನಿಶ್ಚಿತದಿನಗಳನ್ನು ಸಕಾಲಕ್ಕೆ ಮುಂಚಿತವಾಗಿ ತಿಳಿಸಲಾಗುವದು. ಹೈದ್ರಾಬಾದಿನಲ್ಲಿ ನಡೆಯುವ ಈ ವರ್ಷದ ಸಾಹಿತ್ಯ ಸಮ್ಮೇಲನಕ್ಕೆ ಹೋಗುವ ಪ್ರತಿನಿಧಿಗಳೆಲ್ಲರೂ ಈ ಉತ್ಸವವನ್ನು ಪುಲಿಗೆರೆಯಲ್ಲಿ ಸಾಂಗಗೊಳಿಸಿ ಮುಂದೆ ಪ್ರಯಾಣ ಬೆಳಿಸುವಂತೆ ಅನುಕೂಲತೆಯನ್ನು ಮಾಡಲಾಗುವದು.

ಲಕ್ಷ್ಮೇಶ್ವರದಲ್ಲಿ ಜರಗುವ ಈ ಮಹೋತ್ಸವಕ್ಕೆ ಕನ್ನಡನಾಡಿನ ನಾನಾ ಭಾಗಗಳಿಂದಲೂ ಪ್ರತಿನಿಧಿಗಳು ಬರಬೇಕೆಂದು ಸಪ್ರೇಮ ಪ್ರಾರ್ಥನೆಯುಂಟು. ಬರಲಿರುವವರೆಲ್ಲರೂ ಮುಂಚಿತವಾಗಿ ಸ್ವಾಗತಸಮಿತಿಯ ಕಾರ್ಯಾಧ್ಯಕ್ಷರಿಗೆ ದಯ ವಿಟ್ಟು ತಿಳಿಸಬೇಕೆಂದು ಸವಿನಯ ವಿಜ್ಞಾಪನೆ; ಎಂದರೆ ಬಂದ ಎಲ್ಲ ಅತಿಥಿಗಳಿಗೂ ತಕ್ಕ ಆದರೋಪಚಾರಗಳನ್ನು ಮಾಡಲು ಸ್ವಾಗತ ಸಮಿತಿಯವರಿಗೆ ಅನುಕೂಲ ವಾಗುವದು.

ಕನ್ನಡಿಗರು ಅನೇಕ ರೀತಿಯಿಂದ ಈ ಉತ್ಸವಕ್ಕೆ ನೆರವಾಗಬಹುದು :—

೧. ಈ ಬಿನ್ನಹವನ್ನು ಲಾಲಿಸಿ ಪಂಪ ಪ್ರೇಮಿಗಳಾದ ಎಲ್ಲ ಬಾಂಧವರು ತಾವಿದ್ದಲ್ಲಿಂದಲೇ ಸಾಧ್ಯವಾದಷ್ಟು ಧನಸಹಾಯವನ್ನು ಕೆಳಗಿನ ವಿಳಾಸಕ್ಕೆ ದಯವಿಟ್ಟು ಕಳಿಸಬೇಕು.

೨. ಸ್ವಾಗತ ಸಮಿತಿಯವರು ಆಮಂತ್ರಣಕೊಡಲು ಆಯಾ ಊರುಗಳಿಗೆ ಬಂದಾಗ ಸಾಧ್ಯವಾದ ಎಲ್ಲಾ ರೀತಿಯಿಂದ ದಯವಿಟ್ಟು ನೆರವಾಗಬೇಕು.

೩. **“ಪಂಪ ಪ್ರಶಸ್ತಿ”** ಗ್ರಂಥಕ್ಕೆ ಒಪ್ಪುವ ಅಭ್ಯಾಸಪೂರ್ಣ ಲೇಖನ ಗಳನ್ನು ಬರೆದು **ಆದಿಪಂಪ ಸ್ಮಾರಕ ಗ್ರಂಥಸಮಿತಿ ಮಿತ್ರಮಂಡಲ, ಹುಬ್ಬಳ್ಳಿ ಅಥವಾ ಆದಿಪಂಪ ಮಹಾಕವಿ ಸ್ಮಾರಕೋತ್ಸವ ಮಂಡಲ, ಲಕ್ಷ್ಮೇಶ್ವರ** ಈ ವಿಳಾಸಕ್ಕೆ ಕಳಿಸಬೇಕು.

೪. ಉತ್ಸವಕ್ಕೆ ಇಷ್ಟಮಿತ್ರರೊಡನೆ ಸ್ವತಃ ಬಂದು ಭಾಗವಹಿಸಬೇಕು.

೫. ಕಾರ್ತಿಕ ಶು|| ೫ (ತಾ. ೨೫-೧೦-೧೯೪೧)ಕ್ಕೆ ಕನ್ನಡನಾಡಿನ ಎಲ್ಲ ಊರುಗಳಲ್ಲಿಯೂ **“ಪಂಪದಿನ”**ವೆಂದು ಆಚರಿಸಿ ಧನಸಂಗ್ರಹವನ್ನು ಮಾಡಿ **ಲಕ್ಷ್ಮೇಶ್ವರದ ಕೇಂದ್ರ ಸಂಸ್ಥೆಗೆ ಕಳಿಸಿ ಈ ಮಹೋತ್ಸವಕ್ಕೆ ಬೆಂಬಲವನ್ನೀಯಬೇಕು.**

ಪತ್ರವ್ಯವಹಾರವನ್ನು “ಕಾರ್ಯದರ್ಶಿಗಳು, ಆದಿಪಂಪ ಮಹಾಕವಿ ಸ್ಮಾರಕೋತ್ಸವ ಮಂಡಲ, ಲಕ್ಷ್ಮೇಶ್ವರ (ಜಿಲ್ಹಾ ಧಾರವಾಡ)” ಈ ವಿಳಾಸದೊಡನೆ

CC-0. Jangamwadi Math Collection, Varanasi. An eGangotri Initiative

ಹಾಗು ಹಣದ ವ್ಯವಹಾರವನ್ನು "ಕೋಶಾಧೀಶರು, ಆದಿಪಂಪ ಮಹಾಕವಿ ಸ್ಮಾರಕೋತ್ಸವ ಮಂಡಲ **ಲಕ್ಷ್ಮೇಶ್ವರ** (ಜಿಲ್ಲಾ ಧಾರವಾಡ)" ಈ ವಿಳಾಸದೊಡನೆ ಮಾಡಬೇಕೆಂದು ಕನ್ನಡಿಗರಲ್ಲಿ ಬಿನ್ನಹವಿದೆ.

**ಆದಿಪಂಪ** ಮಹಾಕವಿಯ ಈ ಸಹಸ್ರ ಸಾಂವತ್ಸರಿಕೋತ್ಸವವನ್ನು ಸಾಂಗಗೊಳಿಸುವದರಲ್ಲಿ ಕನ್ನಡನಾಡಿನ ಸಮಸ್ತ ಸಹೋದರ ಸಹೋದರಿಯರು ಉತ್ಸವ ಮಂಡಲದ ಸ್ವಾಗತ ಸಮಿತಿಗೆ ಸಕಲ ರೀತಿಯಿಂದಲೂ ಸಹಾಯ ನೀಡಬೇಕೆಂದು ಮತ್ತೊಮ್ಮೆ ಪ್ರಾರ್ಥಿಸುತ್ತೇವೆ.

---

CC-0. Jangamwadi Math Collection, Varanasi. An eGangotri Initiative

# ಪ್ರಾಚ್ಯಲೇಖನಾವಳಿ

**Annals of the Oriental Research.**—Vol. V, 1940-41, Part II.

1. 'Place name suffixes in Tamil'—By R. P. Sethu Pillai.

2. 'Dravidian Phonetics'—By K. Ramakrishnayya.

3. 'Turning Points of Kannada Literature'—By M. Mariyappa Bhat.

4. 'On Some Old Kannada Words'—By H. Sesha Iyengar.

   **ಸೂಂಯಾಣ** = ಸೂಚೀಯಾನ = ಸೂಚೀವಾನ = "ಒಂದು ಬಗೆಯ ಬಣ್ಣದ ಮಂದವಾದ ಬಟ್ಟೆಯ ಮೇಲೆ ಹೂವು, ಪ್ರಾಣಿಗಳು, ಗಿಡಮರ ಬಳ್ಳಿಗಳು, ಇವುಗಳ ಆಕಾರದಂತೆ ಬೇರೆಬೇರೆ ಬಣ್ಣದ (ಆಯಾ ವಸ್ತುಗಳಿಗೆ ಸಹಜವಾದ ಬಣ್ಣಗಳ) ಸೂಕ್ಷ್ಮವಾದ ಬಟ್ಟೆಗಳನ್ನು ಕತ್ತರಿಸಿಕೊಂಡು ಸೂಜಿಯ ಸಹಾಯದಿಂದ ಹೊಲಿದು ಮಾಡಿರುವ ಹಲವು ಬಣ್ಣದಿಂದ ಕೂಡಿ ಮನೋಹರವಾಗಿರುವ ಬಟ್ಟೆ."

   **ತೆಗಳಿಗೆ** = ಪದರ, ಪೊರೆ, ಚರ್ಮದ ಪೊರೆ (cf. ಚಕ್ಕಳಿಕೆ?).

   **ಲಟಹ**

5. 'Studies on Kalidasa'—By Dr. C. Kunhan Raja.

   [Some passages of doubtful authenticity in Kalidasa. 'The Original Epic (Raghuvamsa) must have stopped with the first eight cantos, and the entire Rāmāyana portion must have been the addition of a later hand.' Some passages of doubtful authenticity in the earlier portions.

   The mind of the poet was saturated with the story of the Kumara Sambhava when he was writing Raghuvamsa.]

6. 'Notes on Some Ancient South Indian Political-geographical names'—By Dr. V. Raghavan.

   [1. *Preharā*—(Talgunda inscription—*Epi. Ind.*, VIII) is a river, near Aparāntha. 2. *Asmaka*—This territory lay contiguous to or perhaps originally formed a part of the more well-known territory, the Vidarbhas. 3. *Pallava*—Also meant the country ruled over by Pallavas. 4. *Dramila*—'Those of the north, who knew the Pallavas as the northern most Tamil power, must have begun to refer to the near most part by the name of the whole.' 5. *Sibi*—Cola country; Colas had the name, Sembian.]



CC-0. Jangamwadi Math Collection, Varanasi. An eGangotri Initiative

**ಜೀವನ**—ಸೆಪ್ಟೆಂಬರ್, ೧೯೪೧.

ಹಂಪೆಯ ದೇವರಾಜ—ಹುಲ್ಲೂರು ಶ್ರೀನಿವಾಸ ಜೋಯಿಸರು.

[ರಾಘವಾಂಕನ ಕಾಲದಲ್ಲಿದ್ದ ದೇವರಾಜನು ಕಂಪಿಲ ದೇವರಾಯನೇ (ಸುಮಾರು ಕ್ರಿ.ಶ. ೧೨೮೪ರಿಂದ ಕ್ರಿ.ಶ. ೧೩೩೪) ಆಗಿರಬೇಕು. ರಾಘವಾಂಕನ ಮೊದಲನೆಯ ಕೃತಿಯಾದ ಹರಿಶ್ಚಂದ್ರಕಾವ್ಯವು ಸುಮಾರು ಕ್ರಿ ಶ. ೧೨೯೫ರಲ್ಲಿ ರಚಿತವಾಗಿರಬಹುದು.]

**ಶಿವಾನುಭವ**—ಮಾರ್ಚಿ, ೧೯೪೧.

೧. ಶಿವದೀಕ್ಷೆ ಅರ್ಥಾತ್ ಲಿಂಗಧಾರಣ—ಬಸವಪ್ಪ ಜೆನ್ನಪ್ಪ ಪಟ್ಟೇದ, ಪಂಟಮುರಿ. (ಮೇ–ಜೂನ್, ಜುಲೈ–ಆಗಸ್ಟ್ ಸಂಚಿಕೆಗಳನ್ನೂ ನೋಡಿ.)

೨. ವೀರಶೈವ ವಾಙ್ಮಯಸ್ವರೂಪ—ಬಿ. ಟಿ. ಗಚ್ಚಿನಮನಿ, ಎಂ.ಎ.ಬಿ.ಟಿ.

೩. ಬಸವೇಶ್ವರನಕಿಂತಲೂ ಮೊದಲಿನ ವೀರಶೈವಧರ್ಮ—ರಾವಬಹಾದ್ದೂರ ಪಿ. ಜಿ. ಹಳಕಟ್ಟಿ. (ಏಪ್ರಿಲ್, ಮೇ–ಜೂನ್ ಸಂಚಿಕೆಗಳನ್ನೂ ನೋಡಿ.)

೪. ವೈಯಾಕರಣಭೀಮ ಅಥವಾ ಭೀಮಸೇನ—ಪ್ರೊ. ಕೆ. ಜಿ. ಕುಂದಣಗಾರ, ಎಂ.ಎ. (ಧಾತುಪಾಠವನ್ನು ರಚಿಸಿದ್ದಾನೆ. ಕಾಲ ಕ್ರಿ.ಶ. ೬೦೦ಕ್ಕೆ ತುಸು ಹಿಂದೆ.)

೫. ರೆಮ್ಮವ್ವೆಯ ವಚನಗಳು.

೬. ಹರಿಹರನ ರಗಳೆಗಳು—ಭಾಗ ೮. (ಏಪ್ರಿಲ್, ಜುಲೈ–ಆಗಸ್ಟ್ ಸಂಚಿಕೆಗಳನ್ನೂ ನೋಡಿ.)

೭. ಶಿವಾನುಭವ ಶಬ್ದಕೋಶ—(ಏಪ್ರಿಲ್–ಆಗಸ್ಟ್ ಸಂಚಿಕೆಗಳನ್ನೂ ನೋಡಿ.)

**ಶಿವಾನುಭವ**—ಏಪ್ರಿಲ್, ೧೯೪೧.

೧. ಹರಳಯ್ಯನ ಚರಿತ್ರೆಯು—(ಮೇ–ಜೂನ್, ಜುಲೈ–ಆಗಸ್ಟ್ ಸಂಚಿಕೆಗಳನ್ನೂ ನೋಡಿ.)

೨. ಶಿವದೀಕ್ಷೆ ಅರ್ಥಾತ್ ಲಿಂಗಧಾರಣೆ—ಕಾನಕಾನಹಳ್ಳಿ ಬಸಪ್ಪ.

೩. ಲಿಂಗಧಾರಣ ಮತ್ತು ಶಿವದೀಕ್ಷೆ—ಓರ್ವ ವೀರಶೈವ.

**ಶಿವಾನುಭವ**—ಮೇ–ಜೂನ್, ೧೯೪೧.

೧. ದೀಕ್ಷಾವಾದ—ಮಾ. ಸಂ. ಸಂಜಪ್ಪ.

೨. ಶಿವದೀಕ್ಷೆ ಅರ್ಥಾತ್ ಲಿಂಗಧಾರಣ ಎಂಬ ಒಗೆ—ಎನ್. ರಾಜೋಟಯ್ಯ. (ಸೆಪ್ಟೆಂಬರ್ ಸಂಚಿಕೆಯನ್ನೂ ನೋಡಿ.)

೩. ಸಂಕೀರ್ಣ ವಚನಗಳು—ಭಾಗ ೩, ಏಲೇಶ ಕೇತಯ್ಯನ ವಚನಗಳು.

CC-0. Jangamwadi Math Collection, Varanasi. An eGangotri Initiative

ಶಿವಾನುಭವ—ಜುಲೈ—ಆಗಸ್ಟ್, ೧೯೪೧.

೧. ಸ್ವರವಚನ ಮತ್ತು ಮಂತ್ರಗೋಪ್ಯ—ಹಡಪದಪ್ಪಣ್ಣ.
೨. ಬಸವೇಶ್ವರನ ಚರಿತ್ರೆ ೧—ರಾವ್‌ಬಹಾದ್ದೂರ ಪಿ. ಜಿ. ಹಳಕಟ್ಟಿ.
೩. ಅನಪೂತ ಗೀತೆ—ಗುರುಬಸವ ಕವಿ. (ಸೆಪ್ಟಂಬರ್ ಸಂಚಿಕೆಯನ್ನೂ ನೋಡಿ.)
೪. ಸಟೀಕ ಏಕೋತ್ತರ ಶತಸ್ಥಲ—(ಸೆಪ್ಟಂಬರ್ ಸಂಚಿಕೆಯನ್ನೂ ನೋಡಿ.)
೫. ಸಂಕೀರ್ಣ ವಚನಗಳು—ಭಾಗ ೩, ಸೊಡ್ಡಳ ಬಾಚರಸನ ವಚನಗಳು.

ಶಿವಾನುಭವ—ಸೆಪ್ಟೆಂಬರ್, ೧೯೪೧.

೧. ಶಿವದೀಕ್ಷೆ ಅರ್ಥಾತ್ ಲಿಂಗಧಾರಣ—ಜೀರಗೆ ಕ. ಬಸವಪ್ಪ.
೨. ಬಸವೇಶ್ವರ ಚರಿತ್ರೆ ೨—ರಾವ್‌ಬಹಾದ್ದೂರ ಪಿ. ಜಿ. ಹಳಕಟ್ಟಿ.

ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ—ಜೂನ್, ೧೯೪೧.

೧. ವಡ್ಡಾರಾಧನೆ (೬ನೆಯ ಕತೆ)—ಡಿ. ಎಲ್. ನರಸಿಂಹಾಚಾರ್.
೨. ಚಾವುಂಡರಾಯ ಪುರಾಣ (ಉತ್ತರಭಾಗ)—ಎನ್. ಅನಂತರಂಗಾಚಾರ್.
೩. ಕರ್ಣಾಟಕಕ್ಕೆ ಜೈನರ ಆಗಮನ—ಗೋವಿಂದ ಪೈ.
೪. ಕನ್ನಡ ಸಾಹಿತ್ಯದಲ್ಲಿ ಸಣ್ಣ ಕತೆಯ ಸ್ಥಾನ—ವರದರಾಜ ಹುಯಿಲಗೋಳ.
೫. ನಮ್ಮ ರತ್ನತ್ರಯದ ವಿಷಯ—ಜಿ. ಪಿ. ರಾಜರತ್ನಂ.
೬. ಶಬ್ದಮಣಿದರ್ಪಣದ ವೃತ್ತಿ ಕೇಶಿರಾಜನದಲ್ಲ—ಎ. ರಾಮಶರ್ಮಾ.
೭. ನಿಯೋಗಾರ್ಥದ 'ವಳ್ಳ' (ವಳ) ಪ್ರತ್ಯಯವು—ಶಂ. ಬಾ. ಜೋಶಿ.
೮. ಕುಮಾರ ರಾಮನ ಸಾಂಗತ್ಯಗಳು—ಹುಲ್ಲೂರು ಶ್ರೀನಿವಾಸ ಜೋಯಿಸ್.
೯. ಚಂಪುವಿನ ಮೂಲ—ರಂ. ಶ್ರೀ. ಮುಗಳಿ.
೧೦. ಸಾವಾಸಿಗರು ಕಾಶ್ಮೀರ ದೇಶದ ಬ್ರಾಹ್ಮಣರು—ಕಪಟರಾಳ ಕೃಷ್ಣರಾವ್.
೧೧. ಜಯತೀರ್ಥರ ಜನ್ಮಸ್ಥಳ—ದೇಸಾಯಿ ಪಾಂಡುರಂಗರಾಯರು. (ಪಂಡರಪುರದ ಬಳಿಯ ಮಂಗಳವೇಢೆ.)

---

CC-0. Jangamwadi Math Collection, Varanasi. An eGangotri Initiative

# ಪ್ರೊ॥ ಟಿ. ಎಸ್. ವೆಂಕಣ್ಣಯ್ಯನವರ ಸ್ಮಾರಕನಿಧಿ

ಪಟ್ಟಿ ೬

| | | |
|---|---|---|
| ೧—೩—೧೯೪೧ ರ ವರೆಗೆ ಈ ನಿಧಿಗೆ ಪಾವತಿ ಬಂದು ಮೈಸೂರು ಬ್ಯಾಂಕಿನಲ್ಲಿ ಇಟ್ಟಿದ್ದ ಹಣ (ಪ್ರಬುದ್ಧ ಕರ್ಣಾಟಕ ಸಂಪುಟ ೨೨, ಸಂಚಿಕೆ ೪, ಪುಟ ೧೬೧ನ್ನು ನೋಡಿ.) | ರೂ. | ೨,೮೮೧—೧೧—೦ |
| ಈಚೆಗೆ ಬಂದ ಹಣ | ,, | ೩೯೬— ೦—೦ |
| ಬಡ್ಡಿ (೧—೧—೧೯೪೧ರಿಂದ ೩೦—೬—೧೯೪೧ರ ವರೆಗೆ) | ,, | ೩೦— ೯—೦ |
| | | ೩,೩೦೮— ೪—೦ |
| ಇದುವರೆಗೆ ಆಗಿರುವ ವೆಚ್ಚ | ರೂ. | ೩೨— ೫—೯ |
| ವೆಚ್ಚ ಕಳೆದು ಉಳಿದಿರುವುದು | ,, | ೩,೨೭೫—೧೪—೩ |

ಇದರಲ್ಲಿ ರೂ. ೩,೨೫೮—೪—೦ ಮೈಸೂರು ಬ್ಯಾಂಕಿನಲ್ಲೂ ರೂ. ೧೭—೧೦—೩ ಕೋಶಾಧ್ಯಕ್ಷರ ಕೈಯಲ್ಲೂ ಇದೆ.

ಈ ಸ್ಮಾರಕನಿಧಿಯ ಸಮಿತಿಯು ೨೮—೯—೧೯೪೧ರಲ್ಲಿ ಮೈಸೂರಿನಲ್ಲಿ ಸೇರಿ, ವಾಗ್ದಾನವಾಗಿದ್ದ ಹಣದಲ್ಲಿ ಬಹುಭಾಗ ಬಂದಿರುವುದರಿಂದ ಈ ಲೆಕ್ಕವನ್ನು ಮುಗಿಸಬಹುದೆಂದೂ ಶೇಖರವಾಗಿರುವ ಹಣವನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪುದುವಟ್ಟಾಗಿ ಒಪ್ಪಿಸಿ ಮಹಾರಾಜಾ ಕಾಲೇಜಿನಲ್ಲಿ ಕನ್ನಡ ಎಂ.ಎ. ಪರೀಕ್ಷೆಗೆ ವ್ಯಾಸಂಗಮಾಡುವ ಉತ್ತಮ ವಿದ್ಯಾರ್ಥಿಯೊಬ್ಬನಿಗೆ ಅದರ ಬಡ್ಡಿಯಿಂದ ವಿದ್ಯಾರ್ಥಿ ವೇತನವನ್ನು ಕೊಡುವಂತೆಯೂ, ಎಂ.ಎ. ತರಗತಿಯಲ್ಲಿ ವಿದ್ಯಾರ್ಥಿಯಿಲ್ಲದಿದ್ದರೆ ಕನ್ನಡ ಆನರ್ಸ್ ತರಗತಿಗಳಲ್ಲಿ ಓದುವ ಇಬ್ಬರು ವಿದ್ಯಾರ್ಥಿಗಳಿಗೆ ಅದನ್ನು ಹಂಚಿ ಎರಡು ವೇತನಗಳನ್ನಾಗಿ ಕೊಡುವಂತೆಯೂ ಪ್ರಾರ್ಥಿಸಬೇಕೆಂದೂ ತೀರ್ಮಾನ ಮಾಡಿತು. ಈ ಸಂಬಂಧವಾದ ಒಂದು ಸಂಗ್ರಹ ವರದಿಯನ್ನೂ ಚಂದಾದಾರರ ಪಟ್ಟಿಯನ್ನೂ ಆದಷ್ಟುಬೇಗ ಅಚ್ಚುಮಾಡಿಸಿ ಅದನ್ನು ಚಂದಾದಾರರೆಲ್ಲರಿಗೂ ಕಳುಹಿಸಿಕೊಡಲಾಗುತ್ತದೆ.

ಸಮಿತಿಯ ಪರವಾಗಿ,

೧೭—೧೦—೧೯೪೧, ಮೈಸೂರು

ಎ. ಆರ್. ಕೃಷ್ಣಶಾಸ್ತ್ರೀ,
ಕೋಶಾಧ್ಯಕ್ಷ.

CC-0. Jangamwadi Math Collection, Varanasi. An eGangotri Initiative

ಶ್ರೀ

ಭರ್ತೃಹರಿ ವಿರಚಿತವಾದ

# ವೈರಾಗ್ಯಶತಕ

## ಪದ್ಯಾನುವಾದ

ಸರ್ಪಭೂಷಣ ಜಟಾಪೀಠದಲಿ ಕವಲೊಡೆದ
ಕೂರ್ಪಿನಿಂ ಚಂದ್ರಕಳೆ ದಳ್ಳಿಸಲ್, ಚಪಲ ಕಂ
ದರ್ಪನೆಂಬ ಶಲಭಂ ಸುಲಭದಿಂ ಸುಟ್ಟಿರಲ್, ಜಗದೊಳ್ಪು ಬೆಳಬೆಳಗಲು|
ದರ್ಪದಿಂದುಬ್ಬಿದ್ದು ಚಿತ್ತವಸು ಕತ್ತಲಿಪ
ಕಪ್ಪನೆಯ ಮೋಹ ಕಾಲ್ಗೆಟ್ಟಿರಲ್, ಪಟ್ಟಿರಲ್,
ನೇರ್ಪಾದ ಯೋಗಿಹೃನ್ನಿಲಯದಲಿ ಹರನೆಂಬ ವರದೀಪ ಬೆಳಗುತಿಹುದು. ||೧||

ತಿಳಿದವಗೆ ಹೊಟ್ಟೆಯುರಿ, ದೊರೆಗಳಿಗೆ ಮದದಿಂದ ಕುರುಡು
ಉಳಿದವರು ಬಲುಪೆದ್ದು, ಕರಗಿತೀ ದೇಹದೊಳೆ ಸೂಕ್ತಿ ||೨||

ಹುಗಿದ ನಿಧಿ ಕೈಸೇರ್ವುದೆನ್ನುತ
ಲಗೆದೆ ನೆಲವನು; ಕಲ್ಲ ಕುದಿಸಿದೆ;
ಅಗಲವಾಗಿಹ ಕಡಲ ದಾಟಿದೆ; ನೃಪರನೊಲಿಸಿದೆನು|
ದಿಗಿಲುಳಿದು ಮಸಣದಲಿ ಯಕ್ಷಾ
ದಿಗಳನಾರಾಧಿಸಿದೆನಾದರು
ಸಿಗದು ಕಷ್ಟಕೆ ಕುರುಡುಕವಡೆಯು; ತೃಷ್ಣೆ ತೆರಳೆನ್ನು. ||೩||

ಹಲವು ದೇಶವ, ಹಲವು ದುರ್ಗವ
ತೊಳಲಿದೆನು, ಫಲವಿಲ್ಲ. ಜಾತಿಯ,
ಕುಲದ ಮಾನವ ತೊರೆದೆ, ನೀಚರನೆರೆದೆ ಫಲವಿಲ್ಲ|
ಉಳಿದು ಗೌರವಗಳನು ಹೆದರಿಕೆ
ತಳೆದು ತಿಂದೆನು ಕಾಗೆಯೊಲು ಪರ
ನಿಳಯದಲಿ, ಫಲವಿಲ್ಲ. ತಣಿಯದು ಪಾಪಿ ತೃಷ್ಣೆಯುದು ||೪||

CC-0. Jangamwadi Math Collection, Varanasi. An eGangotri Initiative

ಖರ ಕೀಳ್ನುಡಿಗಳನು ಸಹಿಸುತ
ಹಲವು ದುಡಿತವ ಗೈದೆಸವರಿಗೆ ;
ಇಳಿವ ಕಂಬನಿ ಮೆಟ್ಟಿ ಪೊಳ್ನಗೆ ನಕ್ಕೆ ಮೆಚ್ಚಿಸಲು |
ಅಳಲ ನುಂಗಿದೆ; ಹಿಗ್ಗ ಬರಿಸಿದೆ;
ತಳೆದೆನಂಜಲಿಪುಟವ ಶಠರಿಗೆ
ನಲಿವಿರದ ನಾಟ್ಯವನು ಕಲಿತೆನು : ತೃಷ್ಣೆ ನಿನ್ನಿಂದ || ೫ ||

ಕಮಲಪತ್ರದ ಮೇಲೆ ತೂಗುವ
ಹನಿಗೆ ಸಮವಿದು ಜೀವವು.
ಸ್ಥಿರತೆಯಿಲ್ಲದ ಬಾಳ ಹೊರೆಯಲು
ಮನದೊಳೇನನು ತಾರೆವು ?
ಅಮಿತಧನಮದಮತ್ತಮನುಜರ
ಮುಂದೆ ನಾಚಿಕೆಯಿಲ್ಲದೆ
ತೆರೆದ ಬಾಯಲಿ ಪಾಪಗೈವೆವು
ಸ್ವಗುಣಕಥನದ ಪರಿಯಲಿ || ೬ ||

ಕ್ಷಮೆಯ ತಾಳಿಹೆವು, ಶಮದಿಂದಲ್ಲ; ಮನೆಯೀವ
ಸಮುಚಿತದ ಹಿತಗಳನು ಬಿಟ್ಟಿಹೆವು, ಸಂತೋಷ
ವಿಮಲತ್ವದಿಂದಲ್ಲ; ಚಳಿಬಿಸಿಲ ತಾಳ್ಮೆಯಿದು ತಪದಿಂದ ಬಂದುದಲ್ಲ; |
ದಮಿಸಿದಾಶ್ವಾಸದಿಂ ಹಗಲಿರುಳು ಚಿಂತಿಪೆವು
ಕಮನೀಯ ಕಾಂಚನವ, ಹರಚರಣಗಳನಲ್ಲ ;
ನಮಗೆ ಸಾದೃಶ್ಯವಿದೆ ಯೋಗಿಗಳ ಚರ್ಯೆಯಲಿ, ಮೇಣವರ
ಫಲದೊಳಿಲ್ಲ. || ೭ ||

ಭೋಗಗಳನು ಸವಿಯಲಿಲ್ಲ; ಕಾಲ ಸವಿದುದೆಮ್ಮನು.
ತಪವನೊಂದ ಚರಿಸಲಿಲ್ಲ; ಬಾಳು ಬೆಂದಿತೆಮ್ಮದು.
ಜೀವದವಧಿ ಮುಗಿಯಲಿಲ್ಲ; ಮುಗಿಯಿತೆಮ್ಮ ಜೀವಿತ.
ಹರಿಯಲಿಲ್ಲ ಮನದ ಬಯಕೆ; ಹರಿದುಹೋಯ್ತು ಬಾಳಿಕೆ. || ೮ ||

ಮೊಗ ಸುಕ್ಕಿದೆ; ತಲೆ ನರೆತಿದೆ; ಮೈ ಸಡಿಲಿದೆ; ಬಾಗುತಿದೆ.
ಬಿಗೆ ಮುದಿತನ ಮೈಯಿಗೆ; ಬಯಕೆಗೆ ಹರೆಯದ ಹೊಸಹುರುಪು || ೯ ||

CC-0. Jangamwadi Math Collection, Varanasi. An eGangotri Initiative

ತೊಂಡು ಬಯಕೆ ಕುಗ್ಗಿದೆ.
ಗಂಡುಗರ್ವ ತಗ್ಗಿದೆ.
ಪ್ರಾಣಸಮದ ಗೆಳೆಯರೆಲ್ಲ ಗತಿಸಿಹೋದರು.
ಕಾಣದಿರುವ ಕಣ್ಗೆ ಕೋಲು ಗೆಳೆಯನಾದುದು.
ಅಯ್ಯೊ ಪಾಳು ಮೈಯಿದು !
ಸಾವಿಗಂಜುತಿರುವುದು. ||೧೦||

ಆಸೆಯೆ ಹೊಳೆ ; ನೆನೆವುದೆ ನೀರ್ ; ಅಲೆ ಬಯಕೆ.
ಒಲುಮೆಯೆ ಮೊಸಳೆಯು ; ಸಂಶಯ ಹಕ್ಕಿಗಳು.
ಮಮತೆಯೆ ಸುಳಿ ; ಚಿಂತೆಯೆ ದಡ ; ಬಲು ಕಡಿದು.
ದಾಟಿದರಮಲರು ಕಷ್ಟದ ನದಿಯಿದನು. ||೧೧||

ಜೀವನವ ಪರಿಶೀಲಿಸುತ ಕುಶ
ಲಾವಳಿಯ ಕಾಣೆವಿದರಲಿ. ಭಯ
ಏವುದೆಮ್ಮಯ ಮನಕೆ ಸುಕೃತಪ್ರಯದ ಭಾವನೆಯು. |
ಆವ ಹೆಚ್ಚಿನ ಸುಖವು ಸುಕೃತಗ
ಳಾ ವಿಪಾಕದಿ ನಮಗೆ ಸಂಪ್ರತಿ
ಗೋವಿ ಬಂದುವೊ, ಹೆಚ್ಚು ದುಃಖವನವುವೆ ತರಲಿಹವು. ||೧೨||

ಎಷ್ಟುದಿನವಿದ್ದರೂ ವಿಷಯಕ್ಕೆ ನಿಲುವಿಲ್ಲ,
ಅಗಲಬೇಕೊಂದುದಿನದಿ.
ಇಷ್ಟಪೂರ್ವಕವಾಗಿ ನಾವೇಕೆ ಕೊಡದಿಹೆವು—
ಅಗಲಿಕೆಯೊಳೇನು ಭೇದ ?
ಕಷ್ಟವಲ್ಲವೆ ಮನಕೆ ? ತಾನಾಗಿಯೇ ಹೊರಡೆ
ನಮ್ಮ ಹಂಗುಳಿದು ಧನವು.
ಇಷ್ಟಪೂರ್ವಕವಾಗಿ ಸಂತ್ಯಜಿಸಲೀವುದದು
ಶಾಶ್ವತದ ಶಾಂತಿಸುಖವ. ||೧೩||

ಬ್ರಹ್ಮಜ್ಞಾನವಿವೇಕವುಳ್ಳ ಸುಜನರ್ ತಾವೆಷ್ಟು ನೋವಾಂತರೋ,
ಭೋಗಪ್ರಾಪ್ತಿಯನೀವ ಕೋಟಿಧನಮಂ ಬಿಟ್ಟೆಂತು ತಾವಿರ್ದರೋ,
ಮುನ್ನುಂ ಕಂಡಿರದೀಗಳುಂ ಪಡೆಯದಾ ಮುಂದಕ್ಕೆ ಕೈಸೇರದಾ,
ಇಚ್ಛಾಮಾತ್ರದ ಭೋಗ್ಯಸಂಗ್ರಹಗಳಂ ನೀಗಲ್ ಮನಂತಾರೆವೋ ! ||೧೪||

CC-0. Jangamwadi Math Collection, Varanasi. An eGangotri Initiative

ಗಿರಿಗುಹಾವಾಸವನು ಮಾಡುತಿಹ ಧನ್ಯಮುನಿ
ವರರ ಕಡೆಗಣ್ಣಿಂದಲೊಗುತಿರ್ಪ ಸೌಖ್ಯಜಲ
ದೊರತೆಯನು ದಿಗಿಲುಳಿದ ಪಕ್ಷಿತತಿ ಕುಡಿಕುಡಿದು ಮಡಿಲೊಳಗೆ ಮಲಗುತಿಹವು. |
ವಿರಚಿತ ಮನೋರಥಪ್ರಾಸಾದಸನ್ನಿಹಿತ
ಸರಸೀತಟದ ಕಾನನದ ಕೇಳಿಯಲಿ ಚಿತ್ತ
ಮೆರೆಯುತ್ತ ಕೌತುಕವ ತಳೆದಿರಲು ಕಳೆಯುವುದು ನಮ್ಮ ಜೀವಿತವು ನಿಶ್ಶೇಷವಾಗಿ.
|| ೧೫ ||

ತಿರಿದ ಕೂಳು; ಅದುವೆ ಒರಿಯು ಬರಕಲು.
ತಿರೆಯೆ ಮಂಚ; ಭೃತ್ಯ ದೇಹಮಾತ್ರವು.
ಹೊದೆವ ಬಟ್ಟೆ ನೂರು ಕಂಡಿಯುಳ್ಳುದು.
ಒದೆಯದಲ್ಲ ಜೀವವಿನ್ನು ರತಿಯನು. || ೧೬ ||

ಸ್ತನಗಳು ಮಾಂಸದ ಮುದ್ದೆಯು; ಕವಿಯದ ಕನಕದ ಕಲಶಕೆ ಹೋಲಿಪನು.
ಮುಖವೋ ಶ್ಲೇಷ್ಮದ ಚಿಲುಮೆಯು; ಅದುವೇ ಪೂರ್ಣ ಶಶಾಂಕಗೆ ಸಮವಹುದು.
ಸ್ರವಿಸುವ ಮೂತ್ರದ ಮಲಿನದ ತೊಡೆಗಳು; ಕರಿವರ ಕುಂಭಕೆ ಸರಿಯಹವು.
ಅಹಹಾ! ಕಡು ಹೊಲಸಿನ ರೂಪವ ಕವಿಜನ ವಿಧವಿಧದಲಿ ಹೊಗಳುವರು. || ೧೭ ||

ರಾಗವಂತರ ನಡುವೆ ಶಿವನದೆ
ರಾಗ ಮೆಚ್ಚಿಕೆಯಹುದು. ಮೈಯಲಿ
ಭಾಗವಿತ್ತಿಹನುಮೆಗೆ. ಲಲನಾ
ತ್ಯಾಗಿಗಳ ಹೊಗಳುವರೆ ಸಮವಿನ್ನಾರು ಶಿವಯತಿಗೆ. |
ಹೂಗಣೆಯ ಹಾವಗಿದಿರಲು, ಸೊ
ಪ್ಪಾಗಿ ನೆರೆ ಬೆಪ್ಪಾಗಿ ಹಲವರು
ನೀಗಲಾರರು ನೆರೆಯಲಾರರು
ಭೋಗವನು; ಕಾಮದ ವಿಡಂಬನೆ ಕುಣಿಪುದೀ ಜನರ. || ೧೮ ||

ಕಿಚ್ಚಿನ ಚುರುಕನು ಕಾಣದ ಮಿಡತೆಯು
ಮೆಚ್ಚಲಿ ದೀಪದ ಹೊಮ್ಮೊನೆಯ.
ಕಚ್ಚಲಿ ಗಾಳಕೆ ಚುಚ್ಚಿದ ಮಾಂಸವ
ಆಳದ ನೀರಿನ ಮರಿಮೀನು.

CC-0. Jangamwadi Math Collection, Varanasi. An eGangotri Initiative

ಅಚ್ಚರಿಯಿದು ನಾವರಿದರಿದೊಲಿವುದು
ತೊಡಕಿನ ಜಡೆಯಾ ಕಾಮವನು.
ನೆಚ್ಚಿಹೆವಲ್ಲಾ! ಬಿಡದಿಹೆವಲ್ಲಾ!
ಮೋಹದ ಮಹಿಮೆಯ ಹರ ಬಲ್ಲ. || ೧೯ ||

ದಾಹದಲಿ ಬಾಯೊಣಗೆ ತಣ್ಣನೆಯ ನೀರ್ ಸವಿವರು.
ಆ ಹಸಿವು ಪೀಡಿಸಲು ಶಾಲ್ಯನ್ನವನು ತಿಂಬರು.
ರಾಗಾಗ್ನಿಯುಜ್ಜ್ವಲಿಸೆ ಕಾಮಿನಿಯನೊಡಗೊಂಬರು
ರೋಗದ ಚಿಕಿತ್ಸೆಯನು ಸುಖವೆಂದು ಜನ ಬಗೆವರು || ೨೦ ||

ಎತ್ತರದ ಮನೆಯುಂಟು ಹೆಸರಾದ ಮಗನುಂಟು
ಕಲ್ಯಾಣಗುಣವಂತೆ ಗೃಹಿಣಿಯುಂಟು.
ಉತ್ತಮಸುವರ್ಣಚಯ ತನ್ನ ಕೋಶದಲುಂಟು
ತನಗೆ ಸೊಗಸಾದ ಯೌವನವದುಂಟು.
ನಿತ್ಯತ್ವ ಜಗಕುಂಟು, ಬಾಳು ಬಲು ಹಸನುಂಟು—
ಇಂತೆಂಬ ಮೋಹದಲಿ ಮರೆತು ಜನರು,
ತೆತ್ತಿಹರು ಚಿತ್ತವನು ಸಂಸಾರಬಂಧನಕೆ,
ಧನ್ಯನಿದ ಸಂನ್ಯಸಿಸಿ ರಮಿಸುತಿಹನು. || ೨೧ ||

ಸೊರಗಿರುವಳಾಗಿ, ಹರಿದುಡೆಯನುಟ್ಟವಳಾಗಿ,
ಸೊರಗಿರುವ ಮೊಗದ ಮಕ್ಕಳ ತಂಡವಳಲಾಗಿ,
ಬರಿಮನೆಯ ಮಡದಿ ತನಗೇನು ಕೊಡಲಾಗದಿಹ ಕಾರಣದೊಳಲ್ಲದಿರಲು|
ಸಿರಿಯುಳ್ಳವರ ಬಾಗಿಲಲಿ ಭಂಗವಹುದೆಂಬ
ಹಿರಿದಾದ ಶಂಕೆಯಲಿ ಕೊರಳು ಕಟ್ಟಿರಲಾವ
ನೂರೆವನ್ಯೈ ತನ್ನುದರಪೋಷಣೆಗೆ 'ದೇಹಿ' ಎಂಬೊಂದು ಬಲುಕಠಿಣಪದವ || ೨೨ ||

ಅಭಿಮಾನದ ಕಗ್ಗಂಟನು ಕತ್ತರಿಸುವ ಬಲ್ಗೊಡಲಿ;
ಶುಭಶೀಲದ ಹೊಂದಾವರೆಗಾವರಿಸಿದ ಬೆಳ್ದಿಂಗಳ್;
ಸಲವಾಂತಿಹ ಕಡುನಾಚಿಕೆಯೆಳಬಳ್ಳಿಗೆ ಕತ್ತಿಮೊನೆ;
ಬಲುಹಾಸ್ಯವನೆಸಗುತ್ತಿದೆ ಉದರಪಿಲವು ತುಂಬದೆಯೆ. || ೨೩ ||

CC-0. Jangamwadi Math Collection, Varanasi. An eGangotri Initiative

ಹೊಸಬಟ್ಟೆಮುಸುಕಿನಾ ಬವನಾಸಿಯನು ಕೊಂಡು,
ಮಿಸುಪ ಹಳ್ಳಿಯಲೊ ಹಳುವದಲೊ ಸಂಚರಿಸುತಾ,
ಬಸಿರ ವೇದದ ವಿಪ್ರರರ್ಚನೆಗೆ ಹೊಗೆಯೊಗೆವ ಹುತವಹನ ಹೊಗೆಯ ಬಳಿಯ |
ಎಸೆವ ಗುಡಿಸಿಲಿನ ಬಾಗಿಲಿನ ಬಳಿಸೇರಿ, ಭಿ
ಕ್ಷಿಸಿ ಪಡೆದ ಕವಳವೇ ಜಠರಪಿಠರಕೆ ಸಾಕು :
ಸ್ವಸಮಾನಕುಲದವರ ಮುಂದೆ ದೈನ್ಯವ ತಳೆವುದಸದಳವು ಮಾನಧನಗೆ. || ೨೪ ||

ಗಂಗೆಯ ತೆರೆಗಳ ಹೊಡೆತದಿ ಚಿಮ್ಮಿದ
ಜಲಕಣ ಹೊಮ್ಮಿದ ಹಿಮಗಿರಿಶಿಲೆಗಳು,—
ವಿದ್ಯಾಧರಸೇವಿತ
ಹೃದ್ಯಮಹಾಶಿಲೆಗಳು,
ಪ್ರಳಯಂಗೊಂಡವೆ ! ರುಚಿಸುವರಯ್ಯೋ !
ಕಲೆತವಮಾನದ ಪರಪಿಂಡವನು ! || ೨೫ ||

ಗೆಡ್ಡೆಗೆಣಸುಗಳು ಕಾಡಿನಲಿ ಹುಟ್ಟದಿಹವೇ ?
ದೊಡ್ಡಜೆಟ್ಟಿಗಳ ನೀರ್ವೊನಲು ಬತ್ತಿರ್ಪುದೇ ?
ಒಡ್ಡಿರವೆ ತನಿವಣ್ಣು ಮರಗಳಲಿ, ನಾರೇನು ಗಿಡಗಳಲಿ ದೊರಕದಿಹುದೇ ? |
ಅಡ್ಡಾಡಿ ನೋಡುತಿಹರೇಕೆ ಹಿರಿದಾಯಸದ
ಬಡ್ಡಿಬಡಿತದಿ ಪಡೆದು, ಪುಡಿಗಾಸ ಮಡಗಿರ್ದ
ಗೊಡ್ಡುಹೆಮ್ಮೆಯ ಬಲದಿ ಕುಣಿಕುಣಿವ ಹುಬ್ಬುಳ್ಳ ನರರ ಮುಖವ || ೨೬ ||

ಪಾವನವೆನಿಪ ಕಂದಮೂಲದಿಂದೆಲೆ ಗೆಳೆಯ
ಜೀವನವ ನಡೆಸು : ನೆಲಹಾಸು ನಾರುಡೆಗಳಿಂ
ಸ್ವಾವಲಂಬನೆಯ ಮಾರ್ಗವನು ಹಾರೈಸು : ಬಾರೈಯ ನನ್ನೊಡನೆ ವನಕೆ : |
ಆ ವಿಚಾರನಿರಸ್ತ ವಿತ್ತರೋಗಗ್ರಸ್ತ
ಭೂವರರ, ಕರ್ಣಕರ್ಕಶವಚೋವ್ಯಾಕರಣ
ಕೋವಿದರ ನುಡಿಯನಲ್ಲಾದರೂ ಕೇಳದೆಯೆ ಸುಖದಿಂದ ಬಾಳಬಹುದು. || ೨೭ ||

ಹಣ್ಣು ದೊರೆವುದು ಸುಲಭಯತ್ನದಿ
ವನ್ಯವೃಕ್ಷದ ಕೈಯಲಿ.
ತಣ್ಣನೆಯ ಸವಿನೀರು ತುಂಬಿದೆ
ಪುಣ್ಯನದಿಗಳ ಮಡಿಲಲಿ |

CC-0. Jangamwadi Math Collection, Varanasi. An eGangotri Initiative

ಸಣ್ಣನೆಯ ಮೆಲ್ವಾಸು ಲತೆಗಳ
ಪರ್ಣದಿಂದನುವಪ್ಪುದು.
ಬನ್ನಗೊಳುವರದೇಕೆ ಜನಗಳು
ಹೊನ್ನ ಪಡೆದವರಡಿಯಲಿ ? || ೨೮ ||

ಧನಿಕನಲಿ ಬೇಡುವ ದರಿದ್ರನ
ದಿನವು ಲಂಬಿಸುತಿಹುದು ; ಮತ್ತಾ
ದಿನವೆ ಸಂಕುಚಿಸುವುದು ತನ್ನಯ
ಧನದ ಲೋಲಾಪ್ತಿಯಲಿ ಕಾಲವ ಮೆಲುಕುತಿರುವವಗೆ |
ಘನಗಿರಿಯ ಗುಹೆಯೊಂದರ ಶಿಲಾ
ಸನದ ಶಂಭುಧ್ಯಾನ ವಿಶ್ರಾಂ
ತಿನಿಮಿಷದೊಳೀ ಲೋಕಚರ್ಯೆಯ
ನೆನಪು ತರುವುದು ನಮ್ಮ ಚಿತ್ತಕೆ ಕರುಣ ಹಾಸವನು. || ೨೯ ||

ನಿತ್ಯತೃಪ್ತರ ಶಮದ ಸುಖವನು
ಕೆತ್ತಿಕೆಡಿಸದು. ಮತ್ತೆ ಹೊನ್ನಿನ
ಕುತ್ತದಲಿ ಬಳಲುವರ ಬಾಯಾರಿಕೆಯನಿಂಗಿಸದು. |
ಮತ್ತದಾರ ಸುಖಕ್ಕೆ ವಿಧಿಯಿದ
ನಿತ್ತನೋ ಮೇರುವನು ? ತನ್ನೊಳೆ
ನತ್ತ ಚಿನ್ನದ ಹಿರಿಮೆ ಕೊಳ್ಳದು ನಮ್ಮ ಹೊಗಳಿಕೆಯ. || ೩೦ ||

ತಿರಿಪೆಯಲಿ ಪಡೆದನ್ನ ತರಿಸುವುದು ಶಾಂತಿಯನು,
ಹರಿಸುವುದು ಪಾಪವನು, ಮಥಿಸುವುದು ಹೆಮ್ಮೆಯನು,
ಬರಿಸುವುದು ತೃಪ್ತಿಯನು, ಕರಗಿಸುವುದೆಲ್ಲ ಭಯ ರೋಗದುಃಖಾದಿಗಳನು. |
ದೊರಕುವುದು ತಾನೆಲ್ಲಿಯುಮದಾವಗಂ ತಿರಿಪೆ.
ಹರನಿಟ್ಟ ಘನಸತ್ರವಿಂತಿದುವೆ. ಕೊಂಡಾಡು
ವರು ಭಿಕ್ಷುಗಳು ತಮಗೆ ಸಂದಕ್ಷಯದ ಪಾತ್ರೆ ಪಾವನದ ಭಿಕ್ಷೆಯೆಂದು || ೩೧ ||

ಭೋಗದಲಿ ರೋಗಭಯ ಕುಲದಲ್ಲಿ ಪತನಭಯ
ಧನವಿರಲು ನೃಪರಿಂದಲಹುದು ಭಯವು.
ಮಾನದಲಿ ದೈನ್ಯಭಯ ಬಲದಲ್ಲಿ ಶತ್ರುಭಯ
ರೂಪಕ್ಕೆ ಮುಪ್ಪಿನಾ ಮಿಗಿಲು ಭಯವು.

CC-0. Jangamwadi Math Collection, Varanasi. An eGangotri Initiative

ಓದಿರಲು ವಾದಿಭಯ. ಗುಣಕೆ ಮತ್ಸರಿಭಯವು.
ದೇಹಕ್ಕೆ ಮರಣದಾ ಪ್ರಬಲಭಯವು.
ಈ ಜಗದೊಳೆಲ್ಲವೂ ಭಯಮಯವು ನೋಡಲ್ಕೆ,
ವೈರಾಗ್ಯ ತಾನೊಂದು ಅಭಯವಹುದು. || ೩೨ ||

ಹುಟ್ಟುವಿಕೆ ಜಿಗಿದಿಹುದು ಸಾವೆನಿಪ ಕಟ್ಟಿನಲಿ
ಮುಟ್ಟಿಹುದು ಯೌವನವ ಮುಪ್ಪಿನಾರ್ಭಟವು ;
ಮೆಟ್ಟಿಹುದು ಧನದಾಸೆ ಸಂತೋಷ ಸೌಖ್ಯವನು ;
ಪ್ರೌಢನಾರಿಯ ಬಿಂಕ ಹಾರಿಪುದು ಶಮವ ;
ಹೊಟ್ಟೆಗಿಚ್ಚಿನ ಜನರು ಸುಗುಣವನು ಹಳಿಯುವರು ;
ಅಡವಿಯಲಿ ವನ್ಯಮೃಗ ; ನಗರದಲಿ ನೃಪರು ;
ಗಟ್ಟಿತನವಿಲ್ಲದಿರೆ ಧನವೆಲ್ಲ ಜಾರುವುದು.
ಯಾವುದಿದೆ ಲೋಕದಲಿ ಕೇಡು ತಟ್ಟದುದು? || ೩೩ ||

ಮಾನಸಿಕ ಕಾಯಕ ಕ್ಲೇಶಸಂತತಿಯಿಂದ
ಆರೋಗ್ಯತರುಮೂಲ ಕಡಿಯುತಿಹುದು.
ಲಕ್ಷ್ಮೀನಿವಾಸಕ್ಕೆ ತೆರೆದ ಬಾಗಿಲಿನಂತೆ
ವಿಪದಗಳು ಸಾಲಿಟ್ಟು ಬರುತಲಿಹವು.
ಜನ್ಮಿಸಿದ ಜನ್ಮಿಸಿದ ಜೀವಿಯನು ಯಮರಾಜ
ಸೆರೆಹಿಡಿದು ತನ್ನ ವಶಮಾಡುತಿಹನು.
ಆ ನಿರಂಕುಶವಿಧಿಯು ಕೆಡದಿರ್ಪ ವಸ್ತುವನು
ತಾನೇನ ರಚಿಸಿಹನೊ ಕಾಣೆ ನಾನು. || ೩೪ ||

ತಡಿಗೆ ಒಡಿಯುತ ಮುರಿವ ತೆರೆಯಂತೆ ಭೋಗಗಳು ;
ಉಸಿರಾಟದಾಟ ಕಸುವಿರುವತನಕ.
ಪಡೆದ ಹರೆಯದ ಹಬ್ಬ, ತಬ್ಬದಿಹುದೇ ಕೊರಗ ?
ಬಿಸೆದ ನಲ್ಲೆಯರೊಸಗೆ ಕಂಡಿ ಬಿಡದೇ ?
ಒಡೆದು ನೋಡಲ್ಕಿದನು ಹುರುಳಿಲ್ಲ ಬಾಳಿನಲಿ—
ಎಸೆವ ಬೋಧವ ಪಡೆದು ಜ್ಞಾನಜನರು—
ಹಿಡಿದ ಸಾಧನಪಥದಿ ವಿರಚಿಸುವುದೀ ಜಗಕೆ
ಅಸಮಾನಮಂಗಳದ ಸನ್ಮತಿಯನು. || ೩೫ ||

CC-0. Jangamwadi Math Collection, Varanasi. An eGangotri Initiative

ಮುಗಿಲ ನಡುವಣ ಮಿಂಚಿನಂದದಿ ಹೊಳೆಯುತಳಿವುದು ಭೋಗವು;
ಮಿಗಿಲುಗಾಳಿಗೆ ಕಳಚಿ ಬೀಳುವ ಮುಗಿಲೊಡಲ ಹನಿ ಬಾಳಿಕೆ;
ಸೊಗದ ಹರೆಯದ ಹಿತದ ಹಬ್ಬಿಗೆ ಕಳಲುವುದು ಕೆಲಗಳಿಗೆಗೆ;
ಬಗೆದು ಭಾವಿಸಿ ಭವದ ಪರಿಯನು ಯೋಗಮಾರ್ಗವ ಹಿಡಿಯಿರಿ. || ೩೬ ||

ಆಯು ಕಡಲಿನ ತೆರೆಯು ತಳಮಳವ ಹೋಲುವುದು.
ಹರೆಯದಿರುವಿಕೆ ನಾಲ್ಕು ಹಗಲಿನಿರವು.
ಹಣದ ನಿಲುವಿಕೆ ಮನದ ನೆನಹಿನೊಲು ಮುಗುಚುವುದು.
ಕರಿಮುಗಿಲ ಕುಡಿಮಿಂಚು ಸೊಗದ ಸೊಂಪು.
ಒಲಿದ ನಲ್ಲೆಯು ಬಿಗಿದ ನಳಿತೋಳ ನವಿಬಿಗಿತ
ತಾನೆನಿತು ಕಿರುಹೊತ್ತು ನೆನೆದು ನೋಡು!
ಆದರಿಂದಲೀಗಲೇ ಬೊಮ್ಮದಲಿ ಮನವಿರಿಸಿ
ಭವವೆಂಬ ಹೆಗ್ಗಡಲ ದಾಟು ಗೆಳೆಯ. || ೩೭ ||

ಮಲಮೂತ್ರದೊಡನಿರವು ಶೈಶವದಿ ಗರ್ಭದಲಿ.
ಬಳಲಿಕೆಯು ವಿರಹಾಗ್ನಿತಾಪದಿಂ ಯೌವನದಲಿ.
ಲಲನೆಯರ ಪರಿಹಾಸ್ಯದವಮಾನ ಮುಪ್ಪಿನಲಿ.
ಎಲೊ ಮನುಜ, ಬಾಳಿನಲಿ ಸೊಗವಿನಿಸು ಕಾಣಲಿಹುದೇ || ೩೮ ||

ಬಾಯನು ತೆರೆದಿಹ ಹುಲಿಯಂತೆ
ಕಾಯುತ ಕುಳಿತಿದೆ ಜರೆ ಮುಂದೆ.
ಹಗೆಗಳು ಬಿಡದೆಯೆ ತರಿವವೊಲು
ಹಗರಣಗೊಳಿಪುವು ರೋಗಗಳು.
ಒಡೆದಿಹ ಮಡಕೆಯ ನೀರಿನೊಲು
ಕಡಿಯುವುದಾಯುವು ನಿತ್ಯದೊಳು
ಅಹಹಾ ಜನರಿದ ಕಾಣರಲಾ!
ಅಹಿತವ ಬಿಡದೆಯೆ ನಡೆಸರಲಾ! || ೩೯ ||

ನಮ್ಮ ಮಾತಿನಲಿ ನಂಬಿಕೆಯಿದ್ದರಿದ ಕೇಳಿರಯ್ಯ!
ಎಲೊ ಮಾನವರೆ, ಭೋಗಗಳು ಮೋಸಗಳು, ಕಟ್ಟಲಿಹವು.
ಆರಿಗೋಸ್ಕರ ನೀವು ಕರ್ಮಗಳನೆಸಗುವಿರಿ ಭರದಿ?
ನೂರುಕಡೆ ಜಾರುತಿಹ ಮನವ ಮೆಲ್ಲನೆ ಶಾಂತಿಗೊಳಿಸಿ.

CC-0. Jangamwadi Math Collection, Varanasi. An eGangotri Initiative

ಕಾಮಪಾಶವ ಹರಿದು ಹರಿದು,
ಕಾಮವೈರಿಯ ಸಿವೊಳ್ಮೊಳರಿದು,
ಆತ್ಮರತಿಯೊಂದನೇ ಪಡೆದು,
ಆತ್ಮವಾಸವ ಮಾಡಿ ಸಲಿದು. || ೪೦ ||

ಬ್ರಹ್ಮೇಂದ್ರಾದಿ ಸಮಸ್ತದೇವಗಣಮುಂ ತಾವೆಲ್ಲಿ ಕೀಳಪ್ಪುವೋ,
ತ್ರೈಲೋಕ್ಯಪ್ರಭುತಾಽಶೇಷರಸಮುಂ ಮತ್ತೆಲ್ಲಿ ಜೀಳಪ್ಪುದೋ,
ತಾನೊಂದಿರ್ದುಮಪೂರ್ವಸೌಖ್ಯಯುತಮೊ, ನಿತ್ಯಪ್ರಕಾಶಾಖ್ಯಮೊ,
ಆತ್ಮಾನಂದದೊಳಲ್ಲಿ ಚಿತ್ತವಿರಿಸೈ : ಬೇರೇನ ನೀಂ ಕೋರುವೈ ! || ೪೧ ||

ಆ ರಮ್ಯ ನಗರಿಯೋ ! ಆ ಹಿರಿಯ ರಾಜನೋ !
ಸಾಮಂತಭೂಪರೊಡ್ಡೋಲಗಗಳೋ !
ಈರೆಡೆಯ ವಿದ್ವಾಂಸಜನರ ಗಾಂಭೀರ್ಯವೋ !
ಸಾಮಿಪ್ಯದಾ ಚಂದ್ರಬಿಂಬಾಸನೆಯರೋ !
ವೀರ್ಯಗರ್ವಿತರಾದ ರಾಜಪುತ್ರರ ಜಿಡಗೊ !
ಆ ಮಾಗಧರೊ, ವಂದಿಗಳೊ, ಆ ಕಥೆಗಳೋ !
ಆರ ಮಹಿಮೆಯೊಳೆಲ್ಲ ಸ್ಮೃತಿಪಥವನೈದಿದವೊ
ಆ ಮಹಾ ಕಾಲನಿಗೆ ವಂದಿಸುವೆವು. || ೪೨ ||

ಒಂದು ಮನೆಯಲಿ ಹಲವು ಕಾಯಿರ
ಲೊಂದೆ ಮಿಗುವುದು. ಮಗುಳೆ ಮಗುಳಿ
ನ್ನೊಂದುಮನೆಯೊಳಗೊಂದೆ ಕಾಯಿರಲಲ್ಲಿ ಕೂಡುವುವು. |
ಇಂದುಸೂರ್ಯರೆ ದಾಳವಾಗಿರ
ಲಿಂದುಧರಕಾಳಿಯರು ಪಗಡೆಯ
ಚಂದಗೊಳುವರು, ಹಾಸು ನೆಲವೆಸೆ, ಕಾಯಿ ಜೀವಿಗಳು. || ೪೩ ||

ಹೊತ್ತು ಮೂಡುತ ಮುಳುಗಿ
ಬತ್ತುವುದು ಬಾಳ್ಬೊಸಲು,
ಅರಿಯದಿದೆ ಲೋಕವಿದನು.
ಹೊತ್ತ ಕಾರ್ಯದ ಹೊರೆಗೆ
ತೆತ್ತ ಮನದಲಿ ಜಗವು
ಮರೆತಿಹುದು ಕಾಲಗತಿಯ. |

CC-0. Jangamwadi Math Collection, Varanasi. An eGangotri Initiative

ಹುಟ್ಟುಗಳ, ಸಾವುಗಳ,
ಅಟ್ಟಿಬಹ ಮುಪ್ಪುಗಳ
ಕಂಡರೂ ಹೆದರದಿಹುದು.
ಕೆಟ್ಟ ಮೋಹದ ಸಂಜು
ಪಟ್ಟುಹಿಡಿದಿದೆ ಜಗವ :
ಅದರಿಂದ ಕಣ್ತೆರೆಯದು. || ೪೪ ||

ಇರುಳಾಗೆ ಹಗಲಾಗೆ ಸಾಮಾನ್ಯರೀತಿಯಲಿ
ಪರಿಗಣಿಸಿ ಮೂರ್ಖಜನರೋಡುವರು, ತೊಡಗುವರು
ಭರದಿಂದ ಮುನ್ನಿನಾ ಕಾರ್ಯದಲೆ, ಮುನ್ನಿನಾ ಪರಿಗಳಲೆ, ಮತ್ತೆ ಮತ್ತೆ.।
ಪರಿಚಿತದ ಪುನರುಕ್ತಭುಕ್ತಗಳೆನಿಪ ವಿಷಯ
ಪರಿಕರವ ಪಡೆಯಲ್ಕೆ ಹವಣಿಸರು, ಸಂಸಾರ
ದುರುತರದ ಸೋಲುಗಳ ಕಷ್ಟಗಳ ಮರೆತು, ನಾಚಿಕೆ ತೊರೆದು, ಮೋಹದಿಂದ. ||೪೫||

ನೆನೆಯಲಿಲ್ಲ ವಿಹಿತದಿಂದ ಮೃಡನ ಚರಣವ
ಭವದ ವನವ ದಹಿಪ ಚರಣವ.
ಅಮರಮಾರ್ಗದೆಡರ ತೊಡೆದು ದಾರಿ ಬಿಡಿಸುವ
ಧರ್ಮವನ್ನು ಚರಿಸದಾದೆನು.
ರಮಣಿಯುರುವ ಕನಕಕಲಶಯುಗಳವ
ಕನಸಿನೊಳಗು ಕಾಣೆನೊಮ್ಮೆಯು.
ಜನನಿಯೊಂದು ಹರೆಯವೆಂಬ ವನವ ಕಡಿಯಲು
ಬರುವ ಕೊಡಲಿಯಂತೆ ಬಂದೆವು. || ೪೬ ||

ಗಳಿಸಲಿಲ್ಲ ಸಭ್ಯರೊಲಿವ ಸಾರವಿದ್ಯೆಯ.
ತೂರಲಿಲ್ಲ ಬರಡುವಾದಿಯ.
ಸೆಳೆದ ಕತ್ತಿ ಹರಿಯಲಿಲ್ಲ ಕರಿಯ ಕುಂಭವ;
ಏರಲಿಲ್ಲ ಕೀರ್ತಿ, ಸಗ್ಗವ.
ತಳಿರ ಕೆಂಪ ತಳೆದ ಚೆಲುವುತುಟಿಯ ಕುರುಕದೆ
ಬೀಳುಕೊಂಡಿತೆಸೆವ ಚಂದ್ರಿಕೆ.
ಫಲವ ಕೊಡದೆ ಜಾರಿತಯ್ಯೋ! ಸನಿಯ ಹರೆಯವು,
ಪಾಳುಮನೆಯ ಬೆಳಕಿನಂತೆಯೆ. || ೪೭ ||

CC-0. Jangamwadi Math Collection, Varanasi. An eGangotri Initiative

ಗಳಿಸಲಿಲ್ಲ ಕೊಳೆಯು ನಿಲದ ಚೆಲುವ ವಿದ್ಯೆಯ
ಗಳಿಸಲಿಲ್ಲ ಹಣವನಾದರೂ.
ಸಲಿಸಲಿಲ್ಲ ಕೂರ್ಮೆಯಿಂದ ಚರಣಸೇವೆಯ
ಒಲಿವ ಹಿರಿಯ ತಂದೆತಾಯಿಗೆ.
ಚಲಿಪ ಬೊಗಸೆಗಣ್ಣಿನವಳನೊಮ್ಮೆಯಾದರೂ
ಬಿಗಿದು ಹಿಡಿಯಲಿಲ್ಲ ಕನಸೊಳೂ.
ಕಳೆಯಿತಯ್ಯೊ ಪಿಂಡಯತ್ನದೊಂದೆ ಕೆಲಸದ
ಕಾಗೆಯಂಥ ಹರುಕು ಬಾಳಿದು. || ೪೮ ||

ಎತ್ತಿ ಸಲಹಿದ ತಂದೆ ತಾಯ್ಗಳು ಗತಿಸಿಹೋದರು ಮೊದಲೊಳೆ.
ಪ್ರೀತಿಸುವ ಸಹಜಾತರೆಲ್ಲರ್ಗು ನೆನಪಿನೊಳಗುಳಿದಿರ್ಪರು.
ಈಗ ನಮಗಾಗಿಹುದು ಬೀಳುವ ದಿನವ ಲೆಕ್ಕಿಪ ಕೆಲಸವು.
ಹೊಳೆಯ ಹೊಡೆತದ ಮಳಲ ದಿಬ್ಬದ ಮರವ ಹೋಲುತಲಿರ್ಪೆವು. || ೪೯ ||

ನೂರು ವರ್ಷದ ಮಿತಿಯ ನರನ ಪರಮಾಯುಷ್ಯ
ಜಾರುವುದು ರಾತ್ರಿಯೊಳಗರ್ಧಭಾಗ.
ಹಾರುವುದು ಬಾಲ್ಯದಲಿ ಕರಗುವುದು ಮುಪ್ಪಿನಲಿ
ಮಿಕ್ಕರ್ಧಭಾಗದೊಳಗರ್ಧಭಾಗ.
ಆ ರುಜೆಗೆ ದುಃಖಕ್ಕೆ ವಿರಹಕ್ಕೆ ದಾಸ್ಯಕ್ಕೆ
ಸೇರಿರ್ಪುದುಳಿದುದರ ಬಹಳ ಭಾಗ.
ವಾರಿಯ ತರಂಗದೊಲು ಚಂಚಲದ ಜೀವಿತದಿ
ಜೀವಿಗಳಿಗೆಲ್ಲಪ್ಪ, ಸೌಖ್ಯಭಾಗ ? || ೫೦ ||

ನಿಮಿಷ ಬಾಲನು, ನಿಮಿಷ ತರುಣನು—
ನವವಿಲಾಸದ ಲೋಲನು.
ನಿಮಿಷ ದೀನನು, ನಿಮಿಷ ಧನಿಕನು-
ಅಮಿತರತ್ನವಿಶಾಲನು |
ನಿಮಿಷ ವೃದ್ಧನು, ಗಳಿತವಿಭವನು,
ನರನು ಸಂಸ್ಕೃತಿರಂಗದಿ
ಯಮನ ಯವನಿಕೆ ಬೀಳಲಂತ್ಯದಿ
ನಟನು ನೋಟಕೆ ನಿಲುಕನು || ೫೧ ||

CC-0. Jangamwadi Math Collection, Varanasi. An eGangotri Initiative

ಅರ್ಥಪತಿ ನೀನಾಗಿರಲು ಶ
ಬ್ದಾರ್ಥಪತಿಗಳು ನಾವು : ಧನಿಕರು
ನಿತ್ಯದಲಿ ಸೇವಿಪರು ನಿನ್ನನು :
ಚಿತ್ತದೋಷವ ಕಳೆಯೆ ಸುಜನರು ನಮ್ಮ ಬಳಿಯಿರುವರು. |
ಶತ್ರುಗಳು ನಿನಗಳುಕುವರು ದಿಟ :
ತತ್ತರಿಸುವರು ವಾದಿಗಳೆಮಗೆ.
ಚಿತ್ತವಿಸು ಧರಣೀಶ, ನಿನಗಾ
ಸಕ್ತಿ ನಮ್ಮೊಳಗಿಲ್ಲವಾದರೆ ನಮಗೆ ಬೇಡವದು. || ೫೨ ||

ನೀನು ರಾಜನು : ನಾವು ಗುರುಸೇ
ವಾನಿರತತೆಯೊಳಾಂತ ವಿದ್ಯೆಯ
ಮಾನವಂತರು. ನೀನಧಿಕಧನಿ : ನಾವು ಕವಿನುತರು |
ಏನ ಹೇಳುವೆ ಭೇದವನು, ರಿಪು
ಮಾನಹರಣನೆ ? ವಿಮುಖನಾದೊಡೆ
ನೀನು, ಕುಂದಕವೇನು ನಿಸ್ಪೃಹ ರಾಜ್ಯಭೂಪರಿಗೆ ? || ೫೩ ||

ನರಿಗೆ ರೇಶ್ಮೆಯಿಂದ ನೀವು
ಹರುಕು ಬಟ್ಟೆಯಿಂದ ನಾವು
ಮೋದಗೊಂಡೆವು.
ತೃಪ್ತಿಯೆಂಬುದೆಮಗೆ ನಮವು
ಭೇದ ಕಾಣದು.
ಮಿಗಿಲು ತೃಷ್ಣೆಯಿರಲು ಬಡವ;
ಸೊಗಸೆ ತೃಪ್ತಿ ಮನದೊಳಾಗ
ಬಡವನಾವನು ?
ಒಡೆಯನಾವನು ? || ೫೪ ||

ತಿನ್ನಲು ಫಲ, ಕುಡಿಯಲು ಜಲ, ಸಾಕು.
ಮಲಗಲು ನೆಲ, ಹೊದೆಯಲು ವಲ್ಕಲವು.
ಹೊಸ ಮಧುಪಾನದಿ ತಲೆ ತಿರುಗಿ
ಮಸಗುವ, ಹೆಮ್ಮೆಯ ಜನಕೆರಗಿ,
ಅವರಾ ಕೆಡುಕಿನ ನಡೆಮೆಚ್ಚಿ,
ಅವಿನಯಕೊಪ್ಪೆನು ನುಡಿಕಚ್ಚಿ. || ೫೫ ||

CC-0. Jangamwadi Math Collection, Varanasi. An eGangotri Initiative

ತಿರಿಪೆಯನು ತಿನ್ನುವೆವು ಬಿತ್ತಲೆಯೊಳಿಹೆವು.
ಧರಣಿಯಲಿ ಮಲಗುವೆವು ಧಣಿಗಳೇಕೆಮಗೆ ? ॥ ೫೬ ॥

ನಟರಲ್ಲ ವಿಟರಲ್ಲ ಗಾಯಕರದಲ್ಲ.
ಕುಟಿಲದಲಿ ಪರಧನವ ದೋಚುವವರಲ್ಲ.
ಘಟಕುಚದ ಭಾರದಾ ಗಣಿಕೆಯರು ಅಲ್ಲ.
ಅರಮನೆಯ ಬಾಗಿಲಲಿ ನಮಗೇನು ಕೆಲಸ ? ॥ ೫೭ ॥

ಪಡೆದರು ಹಿಂದಿನ ಕಾಲದಿ ಕೆಲವರು
ಹಿರಿಯರು ಮಹಿಯನ್ನೆ.
ಹಿಡಿದಾಳಿದರನ್ಯರದನ್ಯರು ಗೆ
ದ್ದಿತ್ತರು ಹುಲ್ಲಿನೊಲು.
ಗಡಣದ ಹದಿನಾಲ್ಜಗವನು ಪಾಲಿಪ
ಮಾನ್ಯರು ಬದುಕಿಹರು.
ಪಡೆದಿಹ ನಾಲ್ಕೈದೂರಿಗೆ ಮುದದಲಿ
ಸುಡುತಿಹರಿವರೇಕೆ ? ॥ ೫೮ ॥

ಎಡಬಿಡದಾವಳ ಕೂಡಿಯೆ ರಾಜರು ಭುಜಿಸಿಹರೋ
ಮಡದಿಯದಾವಳೊ ತಾಸೀಗಲು ನೃಪಸಂತತಿಗೆ
ಪಡೆದಾಕೆಯೊಳೊಂದಂಶಪತಿತ್ವವ ಜನರು
ಪೊಡವಿಗೆ ಹಿಗ್ಗುವರಹಹಾ ! ದುಃಖಿಸದಿಹರಲ್ಲಾ ! ॥ ೫೯ ॥

ಮಣ್ಣಿನುಂಡೆಗೆ ನೀರ ಗೆರೆಯಿದೆ ;
ಸಣ್ಣದೀ ನೆಲ ನೋಡಲು.
ಕಣ್ಣು ಕಾಣದೆ ಹಲವು ದೊರೆಗಳು
ಹಣ್ಣಿ ಹಣಿವರು ಭೂಮಿಗೆ !
ಸಣ್ಣ ಜನಗಳು ನೃಪರು ಕೊಡುವರೆ ?
ಮುನ್ನ ಕೊಟ್ಟರೆ ಹಣವನು ?
ಹೊನ್ನಿನಾಸೆಗೆ ನೃಪರ ಸೇವಿಪ
ಕುನ್ನಿ ಜನಗಳು ಕೆಟ್ಟರು. ॥ ೬೦ ॥

CC-0. Jangamwadi Math Collection, Varanasi. An eGangotri Initiative

ಆವನೊಬ್ಬನ ತಲೆಯ ಚಿಪ್ಪನು
ದೇವದೇವನು ಬಯಸಿ ವರವಮಾ
ಲಾವಿಭೂಷಣವೆನಲು ತಳೆದನೊ ಧನ್ಯನಾನರನು|
ಜೀವನಭರಣಕಾತರಜನರು
ಸೇವಿಸಲು, ಗರ್ವಿಸುವನೇತಕೊ?
ಕಾವವನು ಹರನಲ್ಲ ತಾನೆಂದೆಂಬ ದುಡ್ಡಿಗನು ||೬೧||

ನೊಂದೆಯಕಟಾ! ನನ್ನ ಹೃದಯವೆ,
ಪರರನೊಲಿಸುವ ಯತ್ನದಿ.
ಕುಂದಲೊಳಗಿನ ಶಾಂತಿ ಪರರನು
ವರಿಸುವಂದವು ಸುಲಭವೆ?
ಕಂದುಗೊಳಿಸುವ ವಿಷಯತೃಷ್ಣೆಯ
ನೆಸಹ ಮನದಿಂದೊದೆಯಲು,
ತಂದುಕೊಡದೇ ಚಿತ್ತಚಿಂತಾ
ಮಣಿಯು ನಿರವಧಿಸೌಖ್ಯವ? ||೬೨||

ಅಲೆವುದೇತಕೆ ಮನವೆ, ಸುಮ್ಮನೆ—
ಎಲ್ಲಿಯಾದರು ನಿಂತುಕೊ.
ಸಲುವುದೆಲ್ಲವು ಸಲ್ವ ಪರಿಯಲೆ
ಸಲ್ಲದಲ್ಲದೆ ಮಾಣದು.|
ಕಳೆದುದೆಣಿಸದೆ ಬಹುದ ಗುಣಿಸದೆ,
ಎಳ್ಳನಿತು ತವಕಗೊಳದೆ,
ಅಳೆದು ಸುರಿಯದೆ ಆಗುಹೋಗನು,
ಕೊಳ್ಳು ಬಂದಿಹ ಭೋಗವ. ||೬೩||

ನಿಲ್ಲು ನಿಲ್ಲೆಲೊ ಕರಣ ಚರಿಸುವ
ಕೊಂಕುಹಾದಿಯೊಳಲೆಯದೆ;
ಒಳ್ಳೆದಾರಿಯ ಮೆಟ್ಟು, ಕೇಡಿನ
ಮುಳ್ಳು ಮುರಿಯದ ಸುಪಥವ.|
ಹೊಳ್ಳಿರದ ಶಾಂತಿಯನು ಹಿಡಿ. ಬಿಡು
ಗಸಣೆಗೊಳಿಸುವ ನಡೆಯನು.

CC-0. Jangamwadi Math Collection, Varanasi. An eGangotri Initiative

ಜೆಲ್ಲಿಹೋಗುವ ಸುಖಕೆ ಹಾರದೆ,
ಶಮವ ಹೊಂದೆಲೊ ಚಿತ್ತವೆ. || ೬೪ ||

ಮೋಹವ ತೊರೆ, ಸಲ್ಮೆಯ ಪೊರೆ, ಕಳೆವೆತ್ತರೆವೆರೆಮಣಿಯನು ಮುಡಿದನೊಳು.
ಸ್ನೇಹವ ಬಲಿ, ಕಾಲವ ಸಲಿ, ದೇವನದೀತಟಘಟಿತ ಕುಟೀರದೊಳು.
ವಾಹಿನಿಗಳ ತರಳತರಂಗದಿ, ಕುಡಿಮಿಂಚಿನ ಬಳಗದಿ, ಹಾವಿನಲಿ,
ದಾಹಕದುರಿನಾಲಗೆಯಲಿ, ಹೆಣ್ಣಲಿ, ನೆಚ್ಚಿಕೆಯೇನಿದೆ ಸೋದರನೆ? || ೬೫ ||

ಸಾಪೇಕ್ಷೆಯ ನೆನಹನು ಬಿಡು ಲಕ್ಷ್ಮಿಯ ತರಳಕಟಾಕ್ಷದಿ ಮನ್ಮನವೆ
ಭೂಪಾಲರ ಕುಡಿಹುಬ್ಬಿನ ಕೊನೆಯಲಿ ಕುಣಿಯುತ್ತಿಹ ಬೆಲೆವೆಣ್ಣಿನಲಿ.
ಹರಿದರಿವೆಯ ನೆರೆ ಧರಿಸುತ ತೃಪ್ತಿಯನೊಡಬಡು ವಾರಾಣಸಿಪುರದಿ,
ಕರಸಂಪುಟದಲಿ ಮನೆಬಾಗಿಲ ಬಳಿ ದೊರೆಕೊಂಡಿಹ ವರಭಿಕ್ಷದಲಿ. || ೬೬ ||

ಮುಂಬಳಿಯ ಮೃದುಗೀತ, ಎಡಬಲದ ರಸಗೀತ
ದಾಕ್ಷಿಣಾತ್ಯಕವಿಪುಂಗವರ ಸೊಗಸು.
ಹಿಂಬಳಿಯಲೊಪ್ಪುತಿಹ ಚಾಮರದ ಚೆಲುವೆಯರ
ಹೊಂಬಳೆಯ ತುದಿಗೈಯ ಕುಲುಕಿನುಲುಹು.
ಇಂಬಾಗಲೀಪರಿಯ ಸಂಸಾರಸಂಪದವು
ಭವರಸದ ಸಂಗದಲಿ ಮನವಮಾಡು.
ತುಂಬದಿರಲಿಂತಿದುವೆ, ಹೇ ಮನವೆ, ನೀ ಮುಳುಗು
ನಿರ್ವಿಕಲ್ಪದ ಗಾಢಸಂಪದದಲಿ || ೬೭ ||

ಮಿಗಿಲು ಭಾಗ್ಯವ ಗಳಿಸಿಯಾಯಿತು.
ಆಯಿತೇ ಪುರುಷಾರ್ಥವು?
ಹಗೆಯ ತಲೆಯನು ತುಳಿದುದಾಯಿತು.
ಸಂದಿತಲ್ಲವೆ ಬಯಕೆಯು?
ಬಗೆಯ ತಣಿಸಿತು ಮಿತ್ರವರ್ಗಕೆ.
ಮುಗಿಯಿತೇ ಕರ್ತವ್ಯವು?
ಯುಗವ ಬದುಕುವ ವರವು ದೊರಕಿತು.
ಸಂದುದೇ ಸಕಲಾರ್ಥವು? || ೬೮ ||

ಶಿವನ ಪಾದದಿ ಭಕ್ತಿ ಮೂಡಿತು.
ಭವದ ಭೀತಿಯು ಮೂಡಿತು.

CC-0. Jangamwadi Math Collection, Varanasi. An eGangotri Initiative

ಸವಿಯ ನೆಂಟಿನ ಬೆಸುಗೆ ಕಳಚಿತು.
ತವಿದುದಂಗಜಬಾಧೆಯು.
ಕವಿವ ದೋಷದ ಸಂಗಕೆಟುಕದ
ಗವಿಗಳೆಮ್ಮವು, ವನಗಳು.
ಹವಣಿಸಿರ್ಪುದು ವಿರತಿ ಮನದಲಿ.
ಭುವಿಯೊಳೇನೆಮಗರ್ಥ್ಯವು ? ||೬೯||

ಕೊನೆಯಿರದ, ಮುಪ್ಪಿರದ, ವಿಸ್ತೃತ
ವೆನಿಪ, ಸರ್ವೋತ್ತಮವೆನಿಸುವಾ
ಘನಪರಬ್ರಹ್ಮವನು ನೆನೆ: ಚಿಂತಿಸದಿರನ್ಯವನು. |
ನೆನೆಯಲಾ ಘನಪದದ ಪರಿವಿಡಿ
ಯನನುಸರಿಸಿ ಸಮಸ್ತಸುಖಗಳು
ಜನಿಸುವುವು. ಮತ್ತಾ ಸುಖವೆ ಲೌಕಿಕರ ಕನವರಿಕೆ ||೭೦||

ಪಾತಾಳಕೆ ಮುಳುಗುವೆ, ನಭಕೇರುವೆ,
ವಿಶ್ವವನಲೆಯುವೆ, ಎಲೆ ಮನವೇ !
ಎಂತೈ, ಮರೆತುದು ನೀಂ ಪ್ರಿಯಸಖನನು,
ವಿಶ್ವೇಶ್ವರನನು, ವಿಮಲನನು? ||೭೧||

ವೇದದಲಿ ನೆಲೆಯಿಲ್ಲ ಶಾಸ್ತ್ರದಲಿ ಶಮವಿಲ್ಲ
ಪ್ರಾಚೀನ ಕಥೆಗಳಲಿ ಮುಕ್ತಿಯಿಲ್ಲ.
ವೇದೋಕ್ತಕರ್ಮದಲಿ ಸಿಗಲಿರುವ ಫಲವೇನು?—
ಸಗ್ಗಹಳ್ಳಿಯೊಳೊಂದು ಗುಡಿಲ ವಾಸ.
ಈ ದುಃಖಬಂಧನವ ಪರಿಹರಿಸಲೊಂದಿಹುದು
ಕಾಲಾಗ್ನಿಗೆಣೆಯಾದ ಪರಮಬಲವು.
ಮೋದವನು ಕಾಣುವುದು ತನ್ನೊಳಗೆ ತನ್ನಿಂದ
ಅದನುಳಿದುದಿನ್ನೆಲ್ಲ ಕೊರಚಾಟವು ||೭೨||

ಕಾಲಾಗ್ನಿದಾಹದಲಿ ಧಗೆ ಹೊಡೆದು ಬೀಳುವುದು
ಮೇಲಾದ ಹೆಸರಾಂತ ಮೇರುಗಿರಿಯು.
ಮೀನುಗಳು ಮೊಸಳೆಗಳು ಘನತಿಮಿಂಗಿಲಸಹಿತ
ಬತ್ತುವುದು ಜಲರಾಶಿ ಹೆಸರಿಲ್ಲದೆ.



CC-0. Jangamwadi Math Collection, Varanasi. An eGangotri Initiative

ಈ ನಿಖಿಲಭೂವಲಯ ಭೂಮಿಧರಗಳ ಕೂಡೆ
ಹಾಸಿಗೊಳ್ಳುವುದು ಲಯದ ಭಯಸಮಯದಿ.
ಹೇಳಲೇನಿಹುದಿನ್ನು ದೇಹದ ವಿಚಾರದಲಿ
ಮರಿಯಾನೆಕಿವಿದುದಿಯ ಕದಲಿಕೆಯಲಿ || ೭೩ ||

ಕಣ್ ಕಾಣದು, ಕಿವಿ ಕೇಳದು, ನಡೆ ತಪ್ಪಿದೆ, ನುಡಿ ತೊದಲಿಹುದು.
ನೆಂಟರು ನುಡಿಸರು, ಹೆಂಡತಿ ದುಡಿಯಳು, ಮಗನೂ ಹಗೆಯಹನು. || ೭೪ ||

ತಲೆ ನರೆಯಲು ಮೈ ಸಡಿಲಲು ಮುಪ್ಪಡಸಲು ನೋಡಿ,
ಹೊಲೆಯರ ಬಾವಿಯ ತೊರೆವಂದದಿ ಹೆಣ್ಗಳು ಬರರು. || ೭೫ ||

ಶಕ್ತಿಯಿರುವನಿತರಲೆ, ರೋಗವು
ಮುತ್ತದಿರುವನಿತರಲೆ, ಕಡುಮು
ಪ್ಪೊತ್ತದಿರುವನಿತರಲೆ, ಕರಣದ
ಸತ್ತ್ವವಿರುವನಿತರಲೆ, ಬದುಕಿದ್ದನಿತರಲೆ ತಾವು |
ಆತ್ಮದೊಳ್ಪಿಗೆ ಬುಧರು ತಗುವಾ
ಯತ್ನಗಳ ಮಾಡುವುದು ತಕ್ಕುದು.
ಹೊತ್ತಿ ಭುಗಿಲೆಂದುರಿವ ಮನೆಯೊಳ
ಗೆತ್ತಲೋಡುವುದಣ್ಣ ! ಬಾವಿಯ ತೆಗೆವ ಸಡಗರದಿ ! || ೭೬ ||

ಗಂಗೆಯ ತೀರದಿ ತಪವಂ ಗೈವೆವೊ,
ಮಂಗಳಾಂಗಿಯಹ ಭಾರ್ಯೆಯನೊಲಿಪೆವೊ,
ಸಂಗಿಸುವೆವೊ ಕಾವ್ಯಂಗಳ, ಮೇಣ್ ವ್ಯಾ
ಸಂಗಿಸುವೆವೊ ಶಾಸ್ತ್ರಂಗಳ—ತಿಳಿಯೆವು
ಏಂಗೈವುದೊ ಕೆಲಗಳಿಗೆಯ ಬಾಳಿನಲಿ ! || ೭೭ ||

ಕುದುರೆಯಂತೆ ಚಲಿಪ ಚಿತ್ತ ನೃಪರದು.
ಅವರನೊಲಿಸಲಾರೆವು.
ಹುದಿದ ಭಾವವೆಮಗೆ ದೊಡ್ಡ ಪದವಿಗೆ.
ಆದರದುವೆ ಸಲ್ಲದು. |
ಕದಿಯುತಿಹುದು ಮುಪ್ಪು ಮೈಯಿನಂದವ.
ಸವಿಯು ಜೀವ ಸಾವಿಗೆ.

CC-0. Jangamwadi Math Collection, Varanasi. An eGangotri Initiative

ಒದವಿದಿಂಥ ಗತಿಗೆ ಕೇಳು ಗೆಳೆಯನೆ,
ಒಳ್ಪು ತಪವದೊಂದೆಯೆ. || ೭೮ ||

ಮಾನಗೌರವವೆಲ್ಲ ಕತ್ತರಿಸಿ ಹೋಗಿರಲು,
ಬಾಗಿಲಿನ ಯಾಚಕನು ವಿಫಲನಾಗಿರಲು,
ಹಾನಿಗೊಳೆ ಬಂಧುಗಳು, ಪರಿಜನರು ತೆರಳಿರಲು,
ಹೋಗುತಿರೆ ಯೌವನವು ಮೆಲುಮೆಲನೆ ಜಾರಿ,
ಜಾಹ್ನವಿಯ ಪಾವನದ ತೆರೆಯೋಳಿ ತೊಳೆದಿರುವ
ಹಾಸುಗಲ್ಲನು ಸೇರಿ ಹಿಮಗಿರಿಯ ಕೆಲದಿ,
ಕಾನನದ ಹೊದರುಗಳ ಸೀಳ್ದನಿಯನಾಲಿಸುತ,
ವಾಸವನು ರುಚಿಸುವುದು ಮತಿವಂತಜನರು. || ೭೯ ||

ತಂಪಿನ ತಿಂಗಳ ತೊಳಗುವ ಹಾಲ್ಸಿರಿ ಬಲ್ಸೊಗಸು,
ಪಚ್ಚೆಯ ಗರಿಕೆಯ ನೆಲ ಸೊಗಸು.
ಇಂಪಿನ ನುಡಿಗಳು ಸುಜನರ ಕೆಳೆಯಲಿ ಕಡುಸೊಗಸು.
ಮೆಚ್ಚಿನ ಕಬ್ಬದ ಕತೆ ಸೊಗಸು.
ಕಂಪಿಸಿ ಕಣ್ಣೀರ್‌ತುಳುಕುವ ಚೆನ್ನೆಯ ಕಣ್ ಸೊಗಸು,
ಬೆಚ್ಚನೆ ಮುನಿವಾ ಮೊಗ ಸೊಗಸು.
ಸೊಂಪೋ, ಸೊಗಸೋ ಭಾವಿಸಿ ನೋಡಲು—
ಅವು ಸೊಗಸವು ನಿತ್ಯತೆಯಿರದೆ! || ೮೦ ||

ರಂಜಿಸುವ ಹರ್ಮ್ಯತಲ ವಾಸಕ್ಕೆ ರುಚಿಸದೇ?
ಮಂಜುಲಸ್ವರಗೀತವಿಂಬಾಗದೇ ಕಿವಿಗೆ?
ಕಂಜನೇತ್ರೆಯ ಲತಾಕೋಮಲಭುಜದ್ವಯದ ಮೃದುಬಂಧ ಬಂಧವಹುದೇ?|
ಸಂಜೆಗಾಳಿಯೊಳದುರಿ ಕುಡಿದೀಪವಾಡುತಿರೆ
ಸಂಜಾತಕೌತುಕದಿ ಭೃಂಗವೈದಿರಲಲ್ಲಿ,
ರಂಜಿಸುವದರ ನೆಳಲಿಗೆಣೆಮಾಡಿ ಸೊಗಗಳನು ಧೀರರೈದಿಹರು ವನವ || ೮೧ ||

ಮೂರು ಲೋಕವನು ಸಲೆ ತಡಕಿದರು ನಮಗೆ ಸಂ
ಸಾರದಲಿ ಕಣ್ಗೆ ಬಾರದಿಹನ್ನೈ, ಕಿವಿಯೆಡೆಗೆ
ಸಾರದಿಹನ್ನೆಯ, ಗುಣದಿಂದಲೀಪರಿಯ ಕೌಶಲವ ಪಡೆದಿರುವ ನರನು:|

CC-0. Jangamwadi Math Collection, Varanasi. An eGangotri Initiative

ತೋರಿಬರುತಿಹ ವಿಷಯಕರಿಣಿಯಲಿ ಬಗೆಸೋತು
ಏರಿದಭಿಮಾನವನು ತಳೆದು ಗುಟ್ಟಿನಲಿ ಬಳಿ
ಸಾರುವಂತಃಕರಣಮದಕರಿಯ ಸುಲಭದಲಿ ನೆಲೆಗಟ್ಟಿ ಕಟ್ಟಿದವನು || ೮೨ ||

ಸ್ವವಶವೆನಿಪ ಸುಖವು, ದೈನ್ಯವಿಲ್ಲದನ್ನವು,
ಅವನಿಸುರರ ಸಂಗ, ಶಮವ ಕೊಡುವ ಪಾಠವು,
ಅವಿಷಯಚರಶಾಂತಮನವು—ದೊರೆಯಲಾವುದು
ಭುವನಪೂಜ್ಯವೆನಿಪ ತಪವೊ ತಿಳಿಯಲಾರೆನು ! || ೮೩ ||

ಬಯಕೆ ಮೊಳಕೆಯಲ್ಲೆ ಮುರಿದು ವಯಸು ಏರಿದೆ.
ನಯನವಂತರಿರದೆ ನಯದ ಗುಣವು ಕುರುಟಿದೆ.
ದಯಕೆ ಕುರುಡಯಮನು ಬರುವನೇನುಗ್ರೆಯಲಿ ?
ಆಹ ತಿಳಿದೆ ! ಚರಣಭಜನ ಮದನವೈರಿಯ. || ೮೪ ||

ಜಗವನಾಳುವ ಶಿವನೊ, ಜೀವಿಗಳ ಪರಮಾತ್ಮ
ನೆನಿಸುವಾ ಕೇಶವನೊ ಸಮವಿವರು ನನಗೆ.
ವಸ್ತುಭೇದವ ಕಾಣೆನಿಂತಿವರೊಳಾದರೂ
ತರುಣೇಂದುಶೇಖರನೊಳೆನಗೇಕೊ ಮಮತೆ ! || ೮೫ ||

ಹೊಳೆವ ಬೆಳುದಿಂಗಳಿನ ಜೆಳ್ಪನು
ತಳೆದ ಭಾಗೀರಥಿಯ ತೀರದ
ಮಳಲ ಹರಹನು ಸೇರಿ, ಸೌಖ್ಯದಿ
ಕುಳಿತು, ಸದ್ದುಗಳಡಗಿ ಮೌನದೊಳಿರುವ ರಾತ್ರಿಯಲಿ;
ಕಲಿಮಲದ ಸಂಸಾರಜಂಜಡ-
ಕಲಸಿ, ಶಿವಶಿವಯೆಂದು ಕೊರಳಿನ
ಬಲದಿ ಕೂಗುತಲೆಂದು ತಳೆವೆನೊ,
ಲಲಿತ ಹರ್ಷಾಶ್ರುಗಳು ತುಳುಕುತ್ತಿರುವ ಕಂಗಳನು ! || ೮೬ ||

ಇತ್ತು ದಾನದೊಳಖಿಳಧನವನು,
ಚಿತ್ತದಲಿ ದಯೆ ತುಂಬಿ, ಪರಿಣತಿ
ವೆತ್ತ ಗುಣವೇ ವಿಧಿಯ ಗತಿಯಲಿ
ಸುತ್ತಿ ವಿಗುಣವದಾಗಿ ಮಾರ್ಪಡುವುದನು ಪರಿಗಣಿಸಿ ;

CC-0. Jangamwadi Math Collection, Varanasi. An eGangotri Initiative

ಬಿತ್ತರದ ವನಗಳಲಿ, ಚಂದ್ರಿಕೆ
ಚಿತ್ರಿಸಿದ ರಾತ್ರಿಯಲಿ, ಪರಮ ಪ
ವಿತ್ರವೆನಿಸುವ ರಮ್ಯತೀರ್ಥ
ಕ್ಷೇತ್ರದಲಿ ಹರಚರಣ-ಶರಣತೆಯಿಂದ ರಮಿಸುವೆವು. ||೮೭||

ಚಾಂದೊರೆಯ ಬೆಳ್ತೆರೆಯ ನೀರ್ಪನಿಯ ತಂಪಿನಿಂ
ಸೊಗಸಾದ ಕಾಶಿಯಾ ದಡದಿ ಕುಳಿತು;
ಚಂದದಲಿ ಕೈಬೊಗಸೆ ಹೊಂದಿರಲು ಹಣೆಯೊಳಗೆ
ಲಂಗೋಟಿಯೊಂದನೇ ಮೈಗೆ ಧರಿಸಿ;
ಇಂದುಧರ, ಶಂಭುವೇ, ಮುಕ್ಕಣ್ಣ, ಮೂಜಗದ
ಪಾಪಗಳ ಹರಿದವನೆ, ಶರಣು, ಶರಣು,
ಚಂದದಲಿ ದಯೆಗೈಯೊ, ಎಂದೆನುತ ಹಗಲುಗಳ
ನಿಮಿಷದಲಿ ಕಳೆವೊಂದು ಪುಣ್ಯವೆಂದೋ? ||೮೮||

ವಿಮಲಗಂಗಾಸ್ನಾನವನು ಮಾಡಿ, ಸುಮಗಳಿಂ
ಸುಮಧುರ ಫಲಂಗಳಿಂ ವಿಭುವಿಗರ್ಚನೆ ಮಾಡಿ
ರಮಣೀಯಗಿರಿಗುಹಾಶಿಲೆಯ ಪರ್ಯಂಕದಲಿ ಭಕ್ತಿಭಾವದಲಿ ಕುಳಿತು,
ರಮಿಸುತ್ತಲಾತ್ಮದಾನಂದದಿಂ, ಗುರುವಚನ
ಸಮಯವನು ಪಾಲಿಸುತ, ತತ್ಪದದಿ ರತಿಯಾಂತು,
ಸಮುಹಸ್ತಸಮುಪಾದದನ್ಯಸಂ ಸೇವಿಸುವ ದುಃಖಮಂ ನೀಗಿಸುವೆನೇ? ||೮೯||

ಒಂಟಿಯಲಿ ಜೀವಿಸುತ ನಿಷ್ಕಾಮಿಯೆನಿಸಿ,
ಕೈಬೊಗಸೆ ತನ್ನೊಳಿಹ ಪಾತ್ರೆಯೊಂದೆನಿಸಿ,
ಎಂಟುದೆಸೆ ಹೊದಿಕೆಯಾಗಿರೆ ಶಾಂತನೆನಿಸಿ,
ಕರ್ಮಗಳ ಬೇರ ಕಿತ್ತೊಗೆವುದೆಂದು? ||೯೦||

ಕರವೆ ತನಗೆ ಪಾತ್ರೆಯೆನಿಸೆ,
ತಿರಿಪೆಯನ್ನ ಮನಕೆ ಸೊಗಸೆ,
ನೆಲೆಸಿದೆಡೆಯೆ ಮನೆಯ ಕಂಡು,
ನೆಲದೊಳೆಲ್ಲ ತೃಣವ ಕಂಡು,

CC-0. Jangamwadi Math Collection, Varanasi. An eGangotri Initiative

ದೇಹ ಬೀಳದಿರುವ ಮುನ್ನ
ಮೋಹವಳಿದ ಬೋಧಜನ್ಯ
ಪರಮಸುಖವ ಪಡೆದ ಯೋಗಿ,
ಮೃಡನನುಗ್ರಹಕ್ಕೆ ಬಾಗಿ,
ನಡೆವ ಮಾರ್ಗ ಚಿತ್ರವು. ||೯೧||

ಕೌಪೀನಧರನಾಗಿ, ಜೀರ್ಣಪಟವೃತನಾಗಿ,
ತಾಪಶೀತಗಳೆಣಿಕೆ ಮನಕೆ ಬರದೆ,
ನಿಶ್ಚಿಂತ ನಿರಪೇಕ್ಷ ಭಿಕ್ಷಾನ್ನರತನೆನಿಸಿ
ಘೋರಶ್ಮಶಾನದಲಿ ನಿದ್ದೆಗೈದು,
ಆಪ್ತಶತ್ರುಗಳೆಂಬ ಭೇದಭಾವನೆಯಳಿದು
ಬ್ರಹ್ಮಚಿಂತನೆಗೈದು ಶೂನ್ಯಮತದಿ,
ಧ್ವಂಸಿಸಿದ ಮೋಹಗಳ, ನಷ್ಟವಾಗಿಹ ಮದದ,
ಭೂಪನಂದದಿ ಯೋಗಿ ಮೆರೆಯುತಿಹನು. ||೯೨||

ಮಿಗೆ ಮನಸ್ವಿಯ ಸೋಲಿಸದು ವಿಶ್ವದೀಹುರುಳು ;
ನೆಗೆಯೆ ರೆಕ್ಕೆಯು ಮೀನ್ಗೆ ಕದಲಿಕೆಯೆ ಕಡಲ ಜಲಕೆ. ||೯೩||

ತಾಯೆ ಲಕ್ಷ್ಮಿ, ಕೈಬಿಡಮ್ಮ, ಬೇರೆ ಜನರ ಮೆಚ್ಚಿಸು.
ಬಾಯಬಿಡುವರಲ್ಲ ನಾವು ವಿಷಯಭೋಗಕೆಂದಿಗೂ.
ಹೊಸ ಪಲಾಶಪರ್ಣವೆಮಗೆ ಕಿಲುಬದಿರುವ ಪಾತ್ರೆಯು,
ಹಸಿದ ಹೊಟ್ಟೆಗಿಟ್ಟ ತಿರುಪೆಹಿಟ್ಟೆ ಸುಧೆಗೆ ಸದೃಶವು. ||೯೪||

ಧರೆಯು ಹಂಸದ ಗರಿಯ ಹಾಸಿಗೆ,
ಶಿರಕೆ ಭುಜಗಳೆ ದಿಂಬುಗಳು, ವಿ
ಸ್ತರದ ಗಗನವೆ ಹೊದಿಕೆ, ತಂಗಾಳಿಯದು ಬೀಸಣಿಗೆ, |
ಸ್ಫುರಿಪ ಚಂದ್ರನೆ ದೀಪವಾಗಿರೆ,
ವಿರತಿವನಿತಾಸಂಗಮುದಿತನು
ಧರಣಿಪಾಲನ ತೆರದಿ ಸೌಖ್ಯದಿ ಮಲಗಿ ನಿದ್ರಿಪನು. ||೯೫||

ಭಿಕ್ಷದಲಿ ತಣಿವಾಂತು, ಲೋಕಸಂಗದಲಿ ನಿರ
ಪೇಕ್ಷತೆಯನಾಂತು, ಚರ್ಯೆಯಲಿ ತನ್ನಿಚ್ಛೆಯನೆ
ರಕ್ಷಿಪಾ ಸ್ವಾತಂತ್ರ್ಯವಾಂತು, ದಾನಪ್ರತಿಗ್ರಹಗಳಲಿ ವಿರತಿಯಾಂತು |

CC-0. Jangamwadi Math Collection, Varanasi. An eGangotri Initiative

ಕಕ್ಷದಲಿ ಚಿಂದಿಬೊಂತೆಯುನಾಂತು, ಭಾವದಲು
ಪೇಕ್ಷೆಯನು ಮಿತ್ರಾರಿಸಮರೆಂಬರೊಳಗಾಂತು,
ವಿಕ್ಷೇಪಕೆಡೆಗೊಡದ ನಿರಹಂಕೃತಿಯ ಯೋಗಿ ಶಮಸುಖದ ಭೋಗಿಯವನು. || ೯೬ ||

ಹೊಲೆಯನೇನಿವನು ? ವಿಪ್ರನಹುದೋ ? ಶೂದ್ರನೇ ?
ಅಲೆವಿವನು ತಾಪಸನೊ ? ತತ್ವಸುವಿವೇಕಪೇ
ಶಲತೆಯಾಂತಿರ್ಪ ಯೋಗೀಶ್ವರನೊ ? ಆರಿವನು ತಮಗೆ ತಿಳಿವಾಗದೆನುತ |
ಗಳಹುತಿಹ ಪರಿಪರಿಯ ಬೀದಿಗರ ಮಾತು
ಗಳನಾಲಿಸುತ, ಮನದೊಳೊಂದಿನಿಸು ಕೋಪಿಸದೆ
ನಲವನೊಂದದೆ, ತನ್ನೊಳಗೆ ತಾನೆ ಸಂತುಷ್ಟನಾಗಿಹನು ಯೋಗಿವರನು. || ೯೭ ||

ಹಿಂಸೆಯಿನಿತಿಲ್ಲದಿಹ ಗಾಳಿತಿನಿಸನು ಕೊಟ್ಟು
ಹಾವುಗಳ ಸಲಹುವನು, ಪರಮೇಶನು.
ಹಸುಗಳಿಗೆ ಹಸಿರಾದ ಮೇವುಗಳನಿತ್ತಿಹನು
ತಾವುಗಳ ಕೊಟ್ಟಿಹನು ಮಲಗುವುದಕೆ.
ಸಂಸಾರಸಾಗರವ ದಾಟಲೆಳಸುವ ಜನಕೆ
ಇಂಥ ಮಾರ್ಗವನೊಂದ ರಚಿಸಿರುವನು.
ಕೊಸರಿಕೆಯ ಜನರಯ್ಯೊ ! ಗುಣವ ಪಾಳ್ಗಳೆಯುವರು
ಅಂಥ ವೃತ್ತಿಯ ಕಾಣದಳಲಿ ಬಳಲಿ. || ೯೮ ||

ಗಂಗೆಯ ದಡದಲಿ ಹಿಮಗಿರಿಯೆಡೆಯಲಿ
ಪದ್ಮಾಸನದಲಿ ಕುಳಿತಿರಲು.
ಹೊಂಗಿದ ಪರಮಾನಂದಸುಷುಪ್ತಿಗೆ
ಬಾಹ್ಯಜ್ಞಾನವು ಮರೆತಿರಲು,
ಮೈಯಿಗೆ ಮೈಯನು ಜೋಡಿಸಿ ತೀಡುತ
ಮುದಿವೆಣ್ಜಿಂಕೆಯು ಹದುಳಗೊಳೆ
ಭಂಗವ ಕಾಣದ ಗಾಢಸಮಾಧಿಯ
ನೀಡುವ ಸುದಿವಸ ನನಗೆಂದು ? || ೯೯ ||

ಬೊಗಸೆ ಪಾತ್ರೆಯು, ಭಿಕ್ಷೆಯಲಿ ದೊರೆತುದಾಹಾರ,
ಆಗಲಡೆಣ್ದೆಸೆಗಳೇ ನಿರ್ಮಲಸುವಸ್ತ್ರಗಳು,
ಜಗವೆಲ್ಲ ಬಲು ಕಿರಿಯದೆಂಬ ಬಗೆ, ದೈನ್ಯಮೊಗದೋರದಿಹ ದಿಟ್ಟತನವು |

CC-0. Jangamwadi Math Collection, Varanasi. An eGangotri Initiative

ಬಗೆಯ ಬೆಸೆಯುವ ನೆಂಟಿನೊಲ್ಮೆಗಳನೆಲ್ಲ ತೆಗೆ
ದೊಗೆದ ನಿಸ್ಸಂಗತೆಯ ಕಡುಬಲ್ಮೆ, ತನ್ನೊಳಗೆ
ಮಿಗಲೊಗುವ ತೃಪ್ತಿಸುಖ, ಇಂತಾಗೆ ಕರ್ಮವನು ಬೇರ್ವರಿಸಿ ಕಿತ್ತೊಗೆವರು.
|| ೧೦೦ ||

ಅಮ್ಮ ಅಪ್ಪ ಗೆಳೆಯ ನೆಂಟ
ಎಲ್ಲ ನೀವೆ ಆದಿರಿ.
ಎಲರೆ ಜಲವೆ ನೆಲವೆ ನಿಮಗೆ
ಇದುವೆ ಕಡೆಯ ವಂದನೆ.
ನಿಮ್ಮ ಪುಣ್ಯಸಂಗವಶದಿ
ಮತಿಯು ಮಲವ ಕಳೆದುದು.
ಅಳಿಸಿ ಹೋದುದೀಗ ಮೋಹ;
ಬ್ರಹ್ಮದಲ್ಲಿ ಬೆರೆವೆನು. || ೧೦೧ ||

---

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamwadi Math, VARANASI.
Acc. No 4887

PRINTED IN INDIA AT THE WESLEY PRESS AND PUBLISHING HOUSE, MYSORE CITY

CC-0. Jangamwadi Math Collection, Varanasi. An eGangotri Initiative

# ಪ್ರಬುದ್ಧ ಕರ್ಣಾಟಕಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

## ಇಂಗ್ಲಿಷ್ ಪತ್ರಿಕೆಗಳು

*Annals of the Oriental Research Institute*, University, Madras; *Bramhavidya*, Adyar, Madras; *Bulletin of the School of Oriental Studies*, London; *Journal of the Andhra Historical Research Society*, Rajahmundry; *Journal of the Karnataka Historical Research Society*, Dharwar; *Quarterly Journal of the Mythic Society*, Bangalore; *United Karnataka*, Dharwar; *Annals of the Venkateswara Oriental Institute*, Tirupathi; *The Jaina Siddhantha Bhaskara and the Jaina Gazette*, Arrah; *Bulletin of the Deccan College Research Institute*, Poona; *Publication of the Kannada Research Office*, Dharwar; *Fergusson College Magazine*, Poona; *Karnataka College Miscellany*, Dharwar; *The Journal of the Literary Committee of the L.E. Association*, Dharwar.

## ವಾರಪತ್ರಿಕೆಗಳು

'ಒಕ್ಕಲಿಗರ ಪತ್ರಿಕೆ', ಬೆಂಗಳೂರು; 'ಕನ್ನಡ ನುಡಿ', ಬೆಂಗಳೂರು; 'ಕಂಠೀರವ', ಮಂಗಳೂರು; 'ತರುಣಕರ್ನಾಟಕ', ಹುಬ್ಬಳ್ಳಿ; 'ತಾಯಿನಾಡು', ಬೆಂಗಳೂರು; 'ನವಸಂದೇಶ', ಬಳ್ಳಾರಿ; 'ರಾಷ್ಟ್ರಬಂಧು', ಮಂಗಳೂರು; 'ವಿಶ್ವಕರ್ಣಾಟಕ', ಬೆಂಗಳೂರು; 'ಸ್ವದೇಶಾಭಿಮಾನಿ', ಮಂಗಳೂರು.

## ಮಾಸಪತ್ರಿಕೆಗಳು

'ಅಧ್ಯಾತ್ಮ ಪ್ರಕಾಶ', ಹೊಳೇನರಸೀಪುರ; 'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ' (ತೆಲುಗು),
ಕಾಕನಾಡ; 'ಕತೆಗಾರ', ಬೆಂಗಳೂರು; 'ಕನ್ನಡ ಸಹಕಾರಿ', ಮಂಗಳೂರು; 'ಜಯಕರ್ನಾಟಕ',
ಧಾರವಾಡ; 'ಜಯಂತಿ', ಧಾರವಾಡ; 'ಭಾರತಿ' (ತೆಲುಗು), ಮದರಾಸು; 'ಮೈಸೂರು
ವ್ಯವಸಾಯ ಶೋಧಕ ಸಂಘದ ಪತ್ರಿಕೆ', ಬೆಂಗಳೂರು; 'ಮಕ್ಕಳ ಪುಸ್ತಕ', ಬೆಂಗಳೂರು;
'ಮೈಸೂರು ಸಹಕಾರ ಪತ್ರಿಕೆ', ಬೆಂಗಳೂರು; 'ವಿಚಾರವಾಹಿನಿ', ತೀರ್ಥಹಳ್ಳಿ; 'ವಿದ್ಯಾ
ದಾಯಿನಿ', ಮೈಸೂರು; 'ವಿಮಾ ವಾಣಿಜ್ಯ', ಬೆಂಗಳೂರು; 'ವಿವೇಕಾಭ್ಯುದಯ', ಮೈಸೂರು;
'ಶರಣಸಾಹಿತ್ಯ', ಬೆಂಗಳೂರು; 'ಶಿವಾನುಭವ', ಬಿಜಾಪುರ; 'ಸದ್ಬೋಧಚಂದ್ರಿಕೆ', ಅಗಡಿ;
'ಸರಸ್ವತಿ', ಬೆಂಗಳೂರು; 'ಸುದರ್ಶನ', ಮೈಸೂರು; 'ಸುಬೋಧ', ಬೆಂಗಳೂರು;
'ಜೀವನ', ಧಾರವಾಡ; 'ಕಥಾಂಜಲಿ', ಬೆಂಗಳೂರು; 'ವಿಭೂತಿ' (ತೆಲುಗು), ಸಿಕಿಂದ್ರಾ
ಬಾದು; 'ಕಥಾವಳಿ', ಬೆಂಗಳೂರು.

## ತ್ರೈಮಾಸಿಕ ಪತ್ರಿಕೆಗಳು

'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು; 'ಗರಿಕೆ', ಮೈಸೂರು; 'ದೇಶೀಯ
ವಿದ್ಯಾಶಾಲಾ ಪತ್ರಿಕೆ', ಬೆಂಗಳೂರು; 'ಭಾರತ ಇತಿಹಾಸ ಸಂಶೋಧನ ಮಂಡಲದ ಪತ್ರಿಕೆ'
(ಮರಾಠಿ), ಪೂನಾ; 'ಶ್ರೀಮನ್ ಮಹಾರಾಜ ಸಂಸ್ಕೃತ ಮಹಾಪಾಠಶಾಲಾ ಪತ್ರಿಕಾ',
ಮೈಸೂರು.

## ಗ್ರಂಥಮಾಲೆ

'ಮನೋಹರ ಗ್ರಂಥಮಾಲೆ', ಧಾರವಾಡ; 'ಮಿಂಚಿನಬಳ್ಳಿ', ಧಾರವಾಡ.

CC-0. Jangamwadi Math Collection, Varanasi. An eGangotri Initiative

ಬೆಂಗಳೂರು ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ
ಪ್ರಕಟನೆಗಳು

ಇಂಗ್ಲಿಷ್ ಗೀತಗಳು—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ. ಬೆಂಡು ಕಾಗದದ ಪ್ರತಿ, ಬೆಲೆ ರೂ. ೧-೮-೦.

ಉಮರನ ಒಸಗೆ—ಡಿ. ವಿ. ಗುಂಡಪ್ಪನವರಿಂದ. ಬೆಲೆ ರೂ. ೧-೦-೦.

ಮುದ್ದಣ—ಸಂದಳಿಕೆ ಲಕ್ಷ್ಮೀನಾರಣಪ್ಪನವರ ಜೀವನಚರಿತ್ರೆ ಮತ್ತು ಗ್ರಂಥಗಳ ವಿಮರ್ಶೆ. (ಪ್ರತಿಗಳು ಮುಗಿದುಹೋಗಿವೆ) ಬೆಲೆ ರೂ. ೨-೦-೦.

ಗದಾಯುದ್ಧ ನಾಟಕಂ (ದ್ವಿತೀಯ ಮುದ್ರಣ)—ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್. ಅವರಿಂದ ಸಂಪಾದಿತವಾದದ್ದು. ಬೆಲೆ ೦-೮-೦.

ಭಕ್ತಿಭಾಂಡಾರಿ ಬಸವಣ್ಣನವರು (ದ್ವಿತೀಯ ಮುದ್ರಣ)—ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ. ಅವರಿಂದ. ಬೆಲೆ ರೂ. ೧-೦-೦.

ತಾವರೆ—ಎಂ. ವೆಂಕಟೇಶ ಐಯಂಗಾರ್, ಎಂ.ಎ. ಅವರಿಂದ ರಚಿತವಾದ ಪದ್ಯ ಕಾವ್ಯ (ಸಚಿತ್ರ). ಬೆಲೆ ೦-೧೨-೦.

ಸೋಕ್ರಟೀಸನ ಮರಣ—ಎಸ್. ಜಿ. ಶಾಸ್ತ್ರಿ, ಬಿ.ಎ., ಎಂ.ಎಸ್‌ಸಿ. ಅವರಿಂದ. ಡಿ. ವಿ. ಗುಂಡಪ್ಪನವರ ಅವತರಣಿಕೆಯೊಡನೆ. ಬೆಲೆ ರೂ. ೧-೦-೦.

ಚೀನಾದೇಶದ ಬೌದ್ಧ ಯಾತ್ರಿಕರು—ಜಿ. ಪಿ. ರಾಜರತ್ನಂ, ಎಂ.ಎ. ಅವರಿಂದ. ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್. ಅವರ ಮುನ್ನುಡಿಯೊಡನೆ. ರೂ. ೧.

ಭಾಸನ ಏಕಾಂಕ ನಾಟಕಗಳು—ಎಲ್. ಗುಂಡಪ್ಪ, ಎಂ.ಎ. ಅವರಿಂದ. ಸಾದಾ ಪ್ರತಿ, ಬೆಲೆ ರೂ. ೧-೦-೦ ; ಕ್ಯಾಲಿಕೋ ಪ್ರತಿ, ಬೆಲೆ ರೂ. ೧-೮-೦.

ಷೇಕ್ಸ್‌ಪಿಯರ್ ನಾಟಕ ಕಥೆಗಳು (ನಾಲ್ಕು)—ಲಕ್ಷ್ಮೀನರಸಿಂಹಶಾಸ್ತ್ರಿಗಳಿಂದ. ಎಸ್. ವಿ. ರಂಗಣ್ಣ, ಎಂ.ಎ. ಅವರ ಅವತರಣಿಕೆಯೊಡನೆ. ಬೆಲೆ ೦-೧೨-೦.

ಮಲೆನಾಡಿನ ಚಿತ್ರಗಳು (ಸಚಿತ್ರ)—ಕೆ. ವಿ. ಪುಟ್ಟಪ್ಪ, ಎಂ.ಎ. ಅವರಿಂದ. ಬೆಲೆ ರೂ. ೧-೦-೦.

ಭಾಸಕವಿ—ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ಅವರಿಂದ. ಬೆಲೆ ರೂ. ೧-೪-೦.

ವಿಗಡ ವಿಕ್ರಮರಾಯ—ಸಂಸ ವಿರಚಿತ (ಎ. ಡಿ. ಎ. ಅವರಿಂದ ಪ್ರಕಾಶಿತವಾದ ದ್ವಿತೀಯ ಮುದ್ರಣ). ಬೆಲೆ ೦-೧೨-೦.

ಮೈಸೂರು ದೇಶದ ವಾಸ್ತುಶಿಲ್ಪ (ಸಚಿತ್ರ), ಭಾಗ ೧—ಬಿ. ವೆಂಕೋಬರಾವ್, ಬಿ.ಎ. ಅವರಿಂದ. ಬೆಲೆ ರೂ. ೫-೦-೦.

ಭಾಸಕವಿಯ ಚಾರುದತ್ತ—ಎಲ್. ಗುಂಡಪ್ಪ, ಎಂ.ಎ. ಅವರಿಂದ. ಬೆಲೆ ೦-೮-೦.

ಕುಮಾರವ್ಯಾಸ ಪ್ರಶಸ್ತಿ—(ಮಹಾರಾಜಾ ಕಾಲೇಜಿನ ಕರ್ಣಾಟಕ ಸಂಘದಿಂದ ಪ್ರಕಾಶಿತವಾದದ್ದು) ಕ್ಯಾಲಿಕೊ ಪ್ರತಿ ರೂ. ೨-೮- ; ಸಾದಾ ರೂ. ೨.

PRINTED IN INDIA AT THE WESLEY PRESS AND PUBLISHING HOUSE, MYSORE CITY

CC-0. Jangamwadi Math Collection, Varanasi. An eGangotri Initiative